ಪ್ರಜಾವಾಣಿ ಭಾನುವಾರ • ನವೆಂಬರ್ 17, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪೌರಕಾರ್ಮಿಕರ ಅಂತಿಮ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ಬಿಬಿಎಂಪಿಗೆ 12,692 ಪೌರಕಾರ್ಮಿಕರನ್ನು ಅಂತಿಮವಾಗಿ ಆಯ್ಕೆ ಮಾಡಿ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ ಎಂದು ಆಡಳಿತ ವಿಭಾಗದ ವಿಶೇಷ ಆಯುಕ್ತ ಅವಿನಾಶ್ ಮೆನನ್ ರಾಜೇಂದ್ರನ್ ತಿಳಿಸಿದರು.

ಪೌರಕಾರ್ಮಿಕ ಹುದ್ದೆಗಳಿಗೆ ಆಯ್ಕೆಯಾಗಿರುವ ಪೌರಕಾರ್ಮಿಕರ ಕರಡು ಆಯ್ಕೆ ಪಟ್ಟಿಯನ್ನು ಅ.9ರಂದು ಪ್ರಕಟಿಸಲಾಗಿತ್ತು. ವೆಬ್‌ಸೈಟ್ ಹಾಗೂ ಆಯಾ ವಲಯ ಜಂಟಿ ಆಯುಕ್ತರ ಕಚೇರಿ, ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕಚೇರಿಯಲ್ಲೂ ಪ್ರಕಟಿಸಿ, ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ವಲಯವಾರು ಸ್ವೀಕರಿಸಲಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ಕ್ರಮವಹಿಸಿ ಅಂತಿಮವಾಗಿ 12,692 ಪೌರ ಕಾರ್ಮಿಕರನ್ನು ಆಯ್ಕೆ ಮಾಡಲಾಗಿದೆ. ಪೌರಕಾರ್ಮಿಕರ ಹುದ್ದೆಗೆ ಆಯ್ಕೆಯಾಗಿರುವವರು ಯಾವುದೇ ಆಮಿಷಗಳಿಗೆ ಒಳಗಾಗಬಾರದು. ಮಧ್ಯವರ್ತಿಗಳ ಮಾತುಗಳನ್ನು ಕೇಳಿ ವಂಚನೆಗಳಿಗೆ ಒಳಗಾಗಬಾರದು. ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕಚೇರಿಗೆ ಭೇಟಿ ನೀಡಿ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

ಸರ್ಕಾರದಿಂದ ಮಾನ್ಯತೆ ಪಡೆದ ಜಾತಿ ಮೀಸಲಾತಿ ಪ್ರಮಾಣ ಪತ್ರ, ಕನ್ನಡ ಮಾಧ್ಯಮದ ಪ್ರಮಾಣ ಪತ್ರ, ಗ್ರಾಮೀಣ ಪ್ರಮಾಣ ಪತ್ರ, ಅಂಗವಿಕಲ ಪ್ರಮಾಣ ಪತ್ರ, ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ, ಮಾಜಿ ಸೈನಿಕ ಪ್ರಮಾಣ ಪತ್ರ, ಕಲ್ಯಾಣ ಕರ್ನಾಟಕ ಪ್ರಮಾಣ ಪತ್ರ, ಲಿಂಗತ್ವ ಅಲ್ಪಸಂಖ್ಯಾತರು ಪ್ರಮಾಣ ಪತ್ರಗಳಲ್ಲಿ ಆಯ್ಕೆಯಾದವರು ಅವರಿಗೆ ಅನ್ವಯವಾಗುವ ದಾಖಲೆಗಳನ್ನು ಸಲ್ಲಿಸಬೇಕು. ವಲಯ ಮಟ್ಟದಲ್ಲಿ ರಚಿಸಲಾಗಿರುವ ದಾಖಲಾತಿ ಪರಿಶೀಲನಾ ತಂಡಗಳು ನ.25ರಿಂದ 30ರವರೆಗೆ ದಾಖಲೆಗಳನ್ನು ಖುದ್ದು ಹಾಜರುಪಡಿಸಬೇಕು ಎಂದು ಹೇಳಿದ್ದಾರೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂಖ್ಯೆ: ಬಿಐಎಎಪಿಎ/ಟಿಪಿ/ಭೂಉನಿ/14/2024–25/1926 ದಿನಾಂಕ: 15–11–2024

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 157 ಬಿಎಂಆರ್ 2005 ದಿನಾಂಕ: 27–01–2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29–01–2009 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಭೂಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1	M/s Esteem Xen Build Projects Pvt. Ltd., ರವರ ಪರವಾಗಿ ನಿರ್ದೇಶಕರು Mr. Gaurav Ahuja S/o Naraindas Bodaram	ಯಲಹಂಕ	ಜಾಲ	ಮುತ್ತಗದಹಳ್ಳಿ	36/2	1–10 ಪೈಕಿ 0–12	ಸಾರ್ವಜನಿಕ/ ಅರೆಸಾರ್ವಜನಿಕ	ವಸತಿ

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾ.ಪ್ರ/3264/ಅಡ್ವಟೋರ್/2024–25

‘ಹುಟ್ಟಿನಿಂದ ಈವರೆಗೂ ಅಲೆಮಾರಿ’

ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮ: ತಿಂಗಳ ಅತಿಥಿ ನಟಿ ಉಮಾಶ್ರೀ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನ ಜೀವನ ತೆರೆದ ಪುಸ್ತಕವಾಗಿದೆ. ಹುಟ್ಟಿನಿಂದ ಈವರೆಗೂ ನಾನೊಬ್ಬ ಅಲೆಮಾರಿಯಾಗಿದ್ದು, ಬದುಕಿನ ಹಾಗೂ ವೃತ್ತಿಯ ಪಯಣ ಒಂದೊಂದು ಕಡೆ ಸಾಗುತ್ತಿದೆ’ ಎಂದು ನಟಿ ಉಮಾಶ್ರೀ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಶನಿವಾರ ಹಮ್ಮಿಕೊಂಡ ‘ಮನೆಯಂಗಳದಲ್ಲಿ ಮಾತುಕತೆ’ ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿದ ಅವರು, ಮನದಾಳವನ್ನು ಹಂಚಿಕೊಂಡರು. ‘ಏನೂ ಅಲ್ಲದ ನಾನು, ಏನೆಲ್ಲ ಆಗಿಹೋದೆ. ಇದು ನನಗೆ ವಿಸ್ಮಯ. ಉಮಾದೇವಿ ಆಗಿದ್ದ ನಾನು, ರಂಗಭೂಮಿ ಪ್ರವೇಶಿಸಿದ ಬಳಿಕ ಉಮಾಶ್ರೀಯಾದೆ. ಇದು ಬದುಕಿಗೆ ತಿರುವು ನೀಡಿತು. ಮನೆ ಎಂಬುದು ಹೆಸರಿಗೆ ಮಾತ್ರವಿದ್ದು, ಅಲ್ಲಿ ಇದ್ದದ್ದು ಬಹಳ ಕಡಿಮೆ. ಬದುಕು ಕಟ್ಟಿಕೊಟ್ಟ ಕಲಾ ಜಗತ್ತೇ ನನ್ನ ಮನೆಯಾಗಿದೆ’ ಎಂದರು.

‘ಆಕಸ್ಮಿಕ ಹಾಗೂ ಅನಿವಾರ್ಯದಿಂದ ನಟಿಯಾದೆ. ಹಲವು ಬಾರಿ ಜೀವನವನ್ನು ಮುಗಿಸಬೇಕು ಎಂದೂ ಅನಿಸಿದ್ದಿದೆ. ಆಗಿನ ಸಂದರ್ಭ, ಪರಿಸ್ಥಿತಿಯೇ ಆ ರೀತಿಯ ಆಲೋಚನೆಗೆ ಕಾರಣ. 1980–81ರ ಅವಧಿಯಲ್ಲಿ ಕುಡಿತವನ್ನೂ ಕಲಿತೆ. ಅಂದುಕೊಂಡ ಜೀವನ ಸಿಗಲಿಲ್ಲ, ಮುಂದೆ ದಾರಿಯಿಲ್ಲ ಎಂದು ಕುಡಿತ ಪ್ರಾರಂಭಿಸಿದೆ. ಆ ಅವಧಿಯಲ್ಲಿ ಮಗಳು ಕೇಳಿದ ಪ್ರಶ್ನೆಗಳಿಂದಾಗಿ ಬದುಕನ್ನು ಜಯಸಿಬೇಕು ಅನಿಸಿ, ಕುಡಿತ ಬಿಟ್ಟೆ. ರಂಗಭೂಮಿಗೆ ಬರುವ ಮೊದಲು ಕೂಲಿ ಕೆಲಸ, ಕೋಡುಬಳೆ ಮಾರಾಟ ಮಾಡಿದ್ದೆ. ಜೀವನ ನಿರ್ವಹಣೆ ಕಷ್ಟಸಾಧ್ಯವಾದ ಸಂದರ್ಭದಲ್ಲಿ ರಂಗ ಭೂಮಿ ಕೈ ಹಿಡಿಯಿತು’ ಎಂದರು.

ಅಭಿನಯ ಮತ್ತು ರಾಜಕೀಯದಲ್ಲಿ ಯಾವುದು ಇಷ್ಟ ಎಂಬ ಸಭಿಕರ ಪ್ರಶ್ನೆಗೆ ಉತ್ತರಿಸಿದ ಅವರು, ‘ಜನರಿಗಾಗಿ ನಟನೆ ಮಾಡಿ ಮನೋರಂಜನೆ ನೀಡಿದರೆ, ರಾಜಕೀಯದಲ್ಲಿ ಜನರಿಗಾಗಿ ಕೆಲಸ ಮಾಡುತ್ತಿದ್ದೇನೆ. ಹಾಗಾಗಿ, ಎರಡೂ ಕ್ಷೇತ್ರ ಇಷ್ಟ’ ಎಂದು ಹೇಳಿದರು. ಈ ನಡುವೆ ತಮ್ಮ ಜೀವನದ ಕೆಲ ಘಟನೆಗಳನ್ನು ವಿವರಿಸುವಾಗ ಅವರು ಭಾವುಕರಾದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣೀದೇವಿ ಮಾಲಗತ್ತಿ ಉಪಸ್ಥಿತರಿದ್ದರು.

ಉಮಾಶ್ರೀ ಮನದ ಮಾತು

- ಆಕಸ್ಮಿಕ ಹಾಗೂ ಅನಿವಾರ್ಯದಿಂದ ನಟಿಯಾದೆ
- ಜೀವನ ನಿರ್ವಹಣೆ ಕಷ್ಟವೆನಿಸಿದಾಗ ರಂಗಭೂಮಿ ಕೈ ಹಿಡಿಯಿತು
- ಮಗಳ ಮಾತುಗಳಿಂದಾಗಿ ಬದುಕಿನ ಅರಿವಾಯಿತು

ಕಾರ್ಯಕ್ರಮದಲ್ಲಿ ಉಮಾಶ್ರೀ ಅವರನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣೀದೇವಿ ಮಾಲಗತ್ತಿ ಹಾಗೂ ಜಂಟಿ ನಿರ್ದೇಶಕಿ ಬನಶಂಕರಿ ಅಂಗಡಿ ಸನ್ಮಾನಿಸಿದರು ಪ್ರಜಾವಾಣಿ ಚಿತ್ರ

‘ಎಲ್ಲ ಇಲಾಖೆಗೂ ಸಮರ್ಥರು’

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆಯನ್ನು ಮಹಿಳೆಯರಿಗೇ ಏಕೆ ನೀಡುತ್ತಾರೆ ಎಂಬ ಸಭಿಕರ ಪ್ರಶ್ನೆಗೆ ಉತ್ತರಿಸಿದ ಉಮಾಶ್ರೀ, ‘ಮಹಿಳೆಯರು ಎಲ್ಲ ಖಾತೆಗಳನ್ನು ನಿಭಾಯಿಸಲು ಸಮರ್ಥರಿದ್ದಾರೆ. ಸ್ತ್ರೀಯರು ಈ ಖಾತೆಯನ್ನು ನಿಭಾಯಿಸಿದರೆ ಇಲಾಖೆಗೆ ಹೆಚ್ಚು ಶಕ್ತಿ ಬರುತ್ತದೆ ಎಂಬ ಕಾರಣಕ್ಕೆ ಮಹಿಳೆಯರಿಗೆ ನೀಡಲಾಗುತ್ತದೆ’ ಎಂದರು.

ಅನ್ಯ ಭಾಷೆಗಳ ಚಿತ್ರರಂಗದಲ್ಲಿ ಅವಕಾಶಗಳ ಬಗೆಗಿನ ಪ್ರಶ್ನೆಗೆ, ‘ಅನ್ಯ ಭಾಷೆಗಳಲ್ಲಿ ಅವಕಾಶಗಳು ಮೊದಲು ಅಷ್ಟಾಗಿ ಬರಲಿಲ್ಲ. ಆಮೇಲೆ ಬಂದರೂ ಕನ್ನಡ ನನಗೆ ಏನನ್ನು ಕಡಿಮೆ ಮಾಡಿಲ್ಲ ಎಂದು ಆಸಕ್ತಿ ತೋರಿಸಲಿಲ್ಲ’ ಎಂದು ವಿವರಿಸಿದರು.

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562123
ದೂರವಾಣಿ ಸಂಖ್ಯೆ: 080–23718487
ಇ–ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ಆ.ಶಾ/ಸಿ.ಆರ್/154/2024–25 ದಿನಾಂಕ: 16.11.2024

NOTIFICATION REGARDING DECLARATION OF OPEN DEFECATION FREE PLUS (+)City

ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯ ಎಲ್ಲಾ 1 ರಿಂದ 31 ವಾರ್ಡ್‌ಗಳಲ್ಲಿರುವ ವಾಸದ ಮನೆ, ವಾಣಿಜ್ಯ ಕಟ್ಟಡ ಹಾಗೂ ಶಾಲಾ ಕಾಲೇಜುಗಳು ಶೌಚಾಲಯಗಳನ್ನು ಹೊಂದಿದ್ದು, ಯಾರು ಸಹ ಬಯಲು ಶೌಚ ಮಾಡದಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಸರ್ಕಾರದಿಂದ ಈಗಾಗಲೇ ಬಯಲು ಶೌಚ ಮುಕ್ತ ODF TOWN ಎಂದು ಘೋಷಣೆಯಾಗಿದ್ದು, ಪ್ರಸಕ್ತ ಪಟ್ಟಣದಲ್ಲಿ ಸಾರ್ವಜನಿಕ ಶೌಚಾಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ಪಟ್ಟಣ ವ್ಯಾಪ್ತಿಯಲ್ಲಿ ಯಾರು ಸಹ ಬಯಲು ಶೌಚ ಮಾಡದಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಹಾಗೂ ಸ್ವಚ್ಛ ಭಾರತ್ ಮಿಷನ್‌ನ ಬಯಲು ಶೌಚ ಮುಕ್ತ ಪ್ರದೇಶದ ಮಾರ್ಗ ಸೂಚಿಯನ್ನು ಕ್ರಮಬದ್ಧವಾಗಿ ಅನುಷ್ಠಾನಗೊಳಿಸಲಾಗಿದ್ದು, ಸದರಿ ವಿಚಾರವನ್ನು ಮುಂದಿನ ಆಡಳಿತಾಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ಪಟ್ಟಣವನ್ನು ಬಯಲು ಶೌಚ ಮುಕ್ತ ಪ್ಲಸ್ (+) ಪ್ರದೇಶವೆಂದು (DECLARATION OF OPEN DEFECATION FREE PLUS (+) City) ತೀರ್ಮಾನಿಸುವಂತೆ, ಈ ಮೂಲಕ ಪಟ್ಟಣವನ್ನು ಬಯಲು ಶೌಚ ಮುಕ್ತ ಪ್ಲಾಸ್ ಪ್ರದೇಶವೆಂದು ಘೋಷಣೆ ಮಾಡಲಾಗಿದೆ.

ಸಹಿ/– ಆಡಳಿತಾಧಿಕಾರಿಗಳು/ಜಿಲ್ಲಾಧಿಕಾರಿಗಳು, ನಗರಸಭೆ ಮಾದನಾಯಕನಹಳ್ಳಿ
ಸಹಿ/– ಪೌರಾಯುಕ್ತರು, ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/3273/2024–25

ವ್ಯಾಪಾರಿಗೆ ₹80 ಲಕ್ಷ ವಂಚನೆ

ರಾಮನಗರ: ಆನ್‌ಲೈನ್ ವಂಚಕರ ಬಲೆಗೆ ಸಿಲುಕಿದ ನಗರದ ವ್ಯಾಪಾರಿಯೊಬ್ಬರು ಬರೋಬ್ಬರಿ ₹80 ಲಕ್ಷ ಕಳೆದುಕೊಂಡಿದ್ದಾರೆ. ಈ ಕುರಿತು ನಗರದ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನಗರದ ಕೂರಂ ಪಾಷಾ ಹಣ ಕಳೆದುಕೊಂಡ ವ್ಯಾಪಾರಿ. ವಂಚಕರು ವ್ಯಾಪಾರಿಯನ್ನು ವಾಟ್ಸ್ ಆಪ್ ಗ್ರೂಪ್‌ಗೆ ಸೇರಿಸಿದ್ದರು. ಅದರಲ್ಲಿ ಜೆರೋದಾ (zerodha) ಓಟಿಸಿ ಅಕೌಂಟ್ ಮಾಡಿಸಿದರು. ಅದರಲ್ಲಿ ಬಂದ ಸೂಚನೆ ಅನುಸರಿಸಿದ ವ್ಯಾಪಾರಿಯು ಟ್ರೇಡಿಂಗ್‌ಗಾಗಿ ವಂಚಕರು ತಿಳಿಸಿದ ವಿವಿಧ ಬ್ಯಾಂಕ್ ಅಕೌಂಟ್ ನಂಬರ್‌ಗಳಿಗೆ ಹಂತಹಂತವಾಗಿ ₹80,34,563 ಹಣ ಹಾಕಿದ್ದಾರೆ.

ಕೊನೆಗೆ ಮೋಸ ಹೋಗಿರುವುದು ಗೊತ್ತಾಗಿ ವಂಚಕರ ವಿರುದ್ಧ ಶುಕ್ರವಾರ ದೂರು ದಾಖಲಿಸಿದ್ದಾರೆ.

ನಗರಸಭೆ ಚಿಂತಾಮಣಿ

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕೆಜಿ ಮತ್ತು ಕೆಡಬ್ಲ್ಯೂ ದಸ್ತಾವೇಜಿನಲ್ಲಿ ಟೆಂಡರ್ ಅಧಿಸೂಚನೆ ಸಂಖ್ಯೆ: ನಸಚಿ/ತಾಶಾ/ಸಿಆರ್/101/ 2024–25, ದಿನಾಂಕ: 30.10.2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು, ನಗರಸಭೆ ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ ಇವರು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕೆಟಿಪಿಪಿ 2000 ಅಡಿಯಲ್ಲಿ ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನಲ್ಲಿ ಭಾಗವಹಿಸಲು ಷರತ್ತುಗಳಿಗೆ ಒಳಪಟ್ಟು ಆಹ್ವಾನಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು. ಕ್ರ.ಸಂ. 01ರಿಂದ 02 ರವರೆಗೆ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **19.11.2024ರಂದು ಸಂಜೆ 17.00 ಗಂಟೆಯವರೆಗೆ.** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20.11.2024ರಂದು ಸಂಜೆ 17.05 ಗಂಟೆಗೆ.** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: **22.11.2024ರಂದು ಸಂಜೆ 17.05 ಗಂಟೆಗೆ.** ಕ್ರ.ಸಂ. 3ರ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **25.11.2024ರಂದು ಸಂಜೆ 17.00 ಗಂಟೆಯವರೆಗೆ.** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **26.11.2024ರಂದು ಸಂಜೆ 17.05 ಗಂಟೆಗೆ.** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: **27.11.2024 ರಂದು ಸಂಜೆ 17.05 ಗಂಟೆಗೆ.** ಕ್ರ.ಸಂ. 4 ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **02.12.2024ರಂದು ಸಂಜೆ 17.00 ಗಂಟೆಯವರೆಗೆ.** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **03.12.2024ರಂದು ಸಂಜೆ 17.05 ಗಂಟೆಗೆ.** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ: **06.12.2024 ರಂದು ಸಂಜೆ 17.05 ಗಂಟೆಗೆ.**

Sl. No.	Indent
1	DMA-2024-25/RD/WORK_INDENT31573
2	DMA-2024-25/RD/WORK_INDENT31575
3	DMA-2024-25/OW/WORK_INDENT30230
4	DMA-2024-25/OW/WORK_INDENT30311 CALL-3

ಸಹಿ/- ಪೌರಾಯುಕ್ತರು, ನಗರಸಭೆ, ಚಿಂತಾಮಣಿ

ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 276/ಎಂಸಿಎ/2024–25

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: CAO/CN/BNC/32/2024
ದಿನಾಂಕ: 12.11.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಗದಗ – ಹೊಟಗಿ ದ್ವಿಪಥೀಕರಣ ಯೋಜನೆ: ಬಾಗಲಕೋಟೆ – ವಂದಾಲ ವಿಭಾಗದ ನಡುವೆ ಲೆವೆಲ್ ಕ್ರಾಸಿಂಗ್ ಗೇಟ್ ಸಂ. 46, 51ಎ, 52, 54, 58 & 59 ರಲ್ಲಿ ರಬ್ಬರೈಜ್ಡ್ ರಸ್ತೆಯ ಮೇಲ್ಮೈನ ತಯಾರಿಕೆ, ಪೂರೈಕೆ ಮತ್ತು ಅಳವಡಿಕೆ ಕಾಮಗಾರಿಗಳು. (ಟೆಂಡರು ಉಲ್ಲೇಖ ಸಂ. HIGA-100)	ರೂ. 1,35,24,953/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04.12.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯ/ ಬೆಂಗಳೂರು ದಂಡು

PUB/574/AAD360/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: CAO/CN/BNC/31/2024
ದಿನಾಂಕ: 12.11.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿ – ಬಳ್ಳಾರಿ ವಿಭಾಗ: (1) ಕೊಪ್ಪಳ ಮತ್ತು ಗಿಣಿಗೇರಾ ನಿಲ್ದಾಣಗಳ ನಡುವೆ ಕಿಮೀ. 117/600–700 ರಲ್ಲಿ ಎಲ್‌ಸಿ ನಂ. 66ಕ್ಕೆ ಬದಲಾಗಿ, ಕಿಮೀ. 117/000–100 ರಲ್ಲಿ ಸಬ್‌ವೇಯ ನಿರ್ಮಾಣ ಕಾರ್ಯ (ಬಾಕಿ ಇರುವ ಕಾಮಗಾರಿ). (2) ಕೊಪ್ಪಳ ಮತ್ತು ಗಿಣಿಗೇರಾ ನಿಲ್ದಾಣಗಳ ನಡುವೆ ಕಿಮೀ. 116/100–200 ರಲ್ಲಿ ಎಲ್‌ಸಿ ನಂ. 62ಕ್ಕೆ ಬದಲಾಗಿ ಸಬ್‌ವೇಯ ನಿರ್ಮಾಣ ಕಾರ್ಯ (ಬಾಕಿ ಇರುವ ಕಾಮಗಾರಿ). (ಟೆಂಡರು ಉಲ್ಲೇಖ ಸಂ. KBL-LC-66-62-BAL)	ರೂ. 8,69,73,023/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.12.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯ/ ಬೆಂಗಳೂರು ದಂಡು

PUB/573/AAD360/PRB/SWR/2024-25

South Western Railway - SWR | SWRRLY | SWRRLY

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-200/1966/2024–25 ದಿನಾಂಕ: 14.11.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ರಾಜಶೇಖರ್ ರೆಡ್ಡಿ & ವೆಗೆಸ್ನ ಸುಬ್ಬರಾಜು ರವರುಗಳು, ನಂ. 60, ಸಿಂಗನಾಯಕನಹಳ್ಳಿ ಗ್ರಾಮ, ಯಲಹಂಕ ತಾಲ್ಲೂಕು, ಬೆಂಗಳೂರು–560 064	ಯಲಹಂಕ	ಹೆಸರಘಟ್ಟ	ಇಟ್ಟಗಲ್‌ಪುರ	19/1	0ಎ–20ಗುಂ	ವ್ಯವಸಾಯ ವಲಯ	ವಸತಿ ಉಪಯೋಗ
					19/4	1ಎ–03ಗುಂ		
					ಒಟ್ಟು	1ಎ–23ಗುಂ (04ಗುಂ ಖರಾಬು ಹೊರತು ಪಡಿಸಿ)		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಾಸದ ಉಪಯೋಗಕ್ಕಾಗಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು, ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಮತ್ತು ಸರ್ಕಾರಕ್ಕೆ ತೆರಿಗೆಗಳು ಸಂಗ್ರಹವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ‘ವ್ಯವಸಾಯ ವಲಯ’ ದಿಂದ ‘ವಸತಿ ಉಪಯೋಗಕ್ಕೆ’ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ವಿದೇಶಿ ಸ್ವತ್ತುಗಳನ್ನು/ವಿದೇಶಿ ಆದಾಯವನ್ನು ಹೊಂದಿರುವ ತೆರಿಗೆದಾತರೆ ಗಮನಿಸಿರಿ!

ದಯವಿಟ್ಟು ನಿಮ್ಮ

ವಿದೇಶಿ ಸ್ವತ್ತು/ವಿದೇಶಿ ಮೂಲದ ಆದಾಯ ಷೆಡ್ಯೂಲ್‌ನ್ನು

ನಿಮ್ಮ ಐಟಿಆರ್‌ನಲ್ಲಿ ಭರ್ತಿ ಮಾಡಿರಿ



ಹ.ವ. 2024–25ನೇ ಸಾಲಿನ ವಿಳಂಬ ಮತ್ತು ಪರಿಷ್ಕೃತ ಐಟಿಆರ್ ಸಲ್ಲಿಸಲು ಕೊನೆಯ ದಿನಾಂಕ **31ನೇ ಡಿಸೆಂಬರ್, 2024**

ಒಂದು ವೇಳೆ ನೀವು

ಹಿಂದಿನ ವರ್ಷದಲ್ಲಿ ಭಾರತದ ತೆರಿಗೆ ರಹವಾಸಿ ಆಗಿದ್ದರೆ, ಮತ್ತು / ವಿದೇಶಿ ಸ್ವತ್ತುಗಳನ್ನು (ಎಫ್‌ಎ) ಹೊಂದಿದ್ದರೆ ಅಥವಾ / ಹಿಂದಿನ ವರ್ಷದ ಅವಧಿಯಲ್ಲಿ ವಿದೇಶಿ ಆದಾಯ ಗಳಿಸಿದ್ದರೆ

ವಿದೇಶಿ ಸ್ವತ್ತು (ಎಫ್‌ಎ) ಎಂದರೆ

- ವಿದೇಶಿ ಬ್ಯಾಂಕ್ ಖಾತೆಗಳು
- ವಿದೇಶಿ ನಗದು ಮೌಲ್ಯದ ವಿಮಾ ಒಪ್ಪಂದ ಅಥವಾ ಆನ್ಯುಯಿಟಿ ಒಪ್ಪಂದ
- ಯಾವುದೇ ಸಂಸ್ಥೆ/ವ್ಯವಹಾರದಲ್ಲಿ ಆರ್ಥಿಕ ಹಿತಾಸಕ್ತಿ
- ಸ್ಥಿರಾಸ್ತಿ
- ವಿದೇಶಿ ಕಸ್ಟೋಡಿಯಲ್ ಖಾತೆ
- ವಿದೇಶಿ ಇಕ್ವಿಟಿ ಮತ್ತು ಡೆಟ್ ಇಂಟರೆಸ್ಟ್
- ನೀವು ಟ್ರಸ್ಟೀ, ಫಲಾನುಭವಿ ಅಥವಾ ಸೆಟ್ಲರ್ ಆಗಿರುವ ಭಾರತದ ಹೊರಗಿನ, ಟ್ರಸ್ಟ್
- ನೀವು ಸೈನಿಂಗ್ ಅಥಾರಿಟಿ ಹೊಂದಿರುವ ಖಾತೆಗಳು
- ಇನ್ಯಾವುದೇ ಕ್ಯಾಪಿಟಲ್ ಸ್ವತ್ತು
- ಷೆಡ್ಯೂಲ್ ಎಫ್‌ಎ'ದಲ್ಲಿ ಉಲ್ಲೇಖಿಸಿರುವಂತೆ ಹೊಂದಿರುವ ಇನ್ಯಾವುದೇ ವಿದೇಶಿ ಸ್ವತ್ತುಗಳು

ಗಮನವಿರಲಿ

ಕಾಲೆಂಡರ್ ವರ್ಷ 2023ರ ಯಾವುದೇ ಅವಧಿಯಲ್ಲಿ ವಿದೇಶಿ ಸ್ವತ್ತುಗಳನ್ನು/ಆದಾಯವನ್ನು ಹೊಂದಿರುವ ಭಾರತದ ರಹವಾಸಿ ವ್ಯಕ್ತಿಯು ಕಡ್ಡಾಯವಾಗಿ ಎಫ್‌ಎ/ಎಫ್‌ಎಸ್‌ಐ ಷೆಡ್ಯೂಲ್ ಅನ್ನು ಭರ್ತಿ ಮಾಡತಕ್ಕದ್ದು.

ಆದಾಯವು ತೆರಿಗೆ ಮಿತಿಗೆ ಒಳಪಡದಿದ್ದರೂ ಭರ್ತಿ ಮಾಡಬೇಕು

ಘೋಷಿತ ಮೂಲಗಳಿಂದ ಸ್ವಾಧೀನಕ್ಕೆ ಒಳಗಾಗಿರುವ ವಿದೇಶಿ ಸ್ವತ್ತು ಆಗಿದ್ದರೂ ಭರ್ತಿ ಮಾಡಬೇಕು

ದಯವಿಟ್ಟು ಸರಿಯಾದ ಐಟಿಆರ್ ನಮೂನೆ ಆಯ್ದುಕೊಳ್ಳಿ (ಐಟಿಆರ್–1 & ಐಟಿಆರ್–4 ಹೊರತುಪಡಿಸಿ)

CBC 15401/13/0008/2425

ದಯವಿಟ್ಟು ಗಮನಿಸಿ: ಐಟಿಆರ್'ನಲ್ಲಿ ನಿಮ್ಮ ವಿದೇಶಿ ಸ್ವತ್ತು/ಆದಾಯ ಕುರಿತಂತೆ ಉಲ್ಲೇಖ ಮಾಡದಿದ್ದಲ್ಲಿ, ಕಪ್ಪು ಹಣ (ಘೋಷಣೆಯಾಗದ ವಿದೇಶಿ ಆದಾಯ ಮತ್ತು ಸ್ವತ್ತುಗಳು) ಮತ್ತು ತೆರಿಗೆ ಹೇರಿಕೆ ಕಾಯ್ದೆ, 2015ರ ಅಡಿಯಲ್ಲಿ ರೂ. 10 ಲಕ್ಷ ಜುಲ್ಮಾನೆ ಎದುರಿಸಬೇಕಾಗುತ್ತದೆ.

ಹೆಚ್ಚಿನ ನೆರವಿಗಾಗಿ ಸಂದರ್ಶಿಸಿ www.incometax.gov.in

ಹೆಚ್ಚಿನ ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

INCOME TAX DEPARTMENT

ಆದಾಯ ತೆರಿಗೆ ಇಲಾಖೆ
ಕೇಂದ್ರ ನೇರ ತೆರಿಗೆಗಳ ಮಂಡಳಿ

@IncomeTaxIndia | @IncomeTaxIndia.Official | @IncomeTaxIndiaOfficial | @IncomeTaxIndiaOfficial | IncomeTaxIndia.gov.in

ಯೋಗೇಶ್ವರ್ ಸತ್ಯ ಮಾತಾಡಿಬಿಟ್ಟ: ಸಚಿವ ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚನ್ನಪಟ್ಟಣದ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಸತ್ಯ ಮಾತಾಡಿದ್ದಾನೆ. ಅವನು ರೈಲು ಹೋದ ಮೇಲೆ ಟಿಕೆಟ್ ತಗೊಂಡಿದ್ದ' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ಸುದ್ದಿಗಾರರ ಜೊತೆಗೆ ಶನಿವಾರ ಮಾತನಾಡಿ, 'ಯೋಗೇಶ್ವರ್ ನನಗೆ ಭಾರಿ ಬೇಕಾದವನು. ಪ್ರತಿ ಬಾರಿ ತನ್ನ ಜೇಬಿನಿಂದ ಖರ್ಚು ಮಾಡದೇ ಚುನಾವಣೆ ನಡೆಸುತ್ತಿದ್ದ. ಈ ಬಾರಿ ಎಡವಟ್ಟು ಮಾಡ್ಕೊಂಡಿದ್ದಾನೆ' ಎಂದು ಹೇಳಿದರು.

'ಚನ್ನಪಟ್ಟಣ, ಶಿಗ್ಗಾವಿಯಲ್ಲಿ ನಾವು ಗೆದ್ದಾಗಿದೆ. ಸಂಡೂರು ತೀವ್ರ ಸ್ಪರ್ಧೆ ಇದ್ದರೂ ನಾವೇ ಗೆಲ್ಲುತ್ತೇವೆ. ಇದು ಕಾಂಗ್ರೆಸ್‌ಗೆ ಎಚ್ಚರಿಕೆಯ ಗಂಟೆ. ಆಡಳಿತ ನಡೆಸುವುದು ಬಿಟ್ಟು ಚುನಾವಣೆಯಲ್ಲಿ ಈ ಸರ್ಕಾರ ಮುಳುಗಿತ್ತು. ಜನರ ಸಂಕಷ್ಟಕ್ಕೆ ಸ್ಪಂದಿಸುವುದು ಬಿಟ್ಟು ಹಗರಣಗಳಲ್ಲಿ ಭಾಗಿಯಾಗಿದೆ' ಎಂದು ಟೀಕಿಸಿದರು.

ಚಿತ್ರಮಂದಿರದ ಮೇಲೆ ಪೆಟ್ರೋಲ್ ಬಾಂಬ್

ತಿರುನೆಲ್ವೇಲಿ (ತಮಿಳುನಾಡು), (ಪಿಟಿಐ): ಮೇಜರ್ ಮುಕುಂದ್ ವರದರಾಜನ್ ಅವರ ಜೀವನಚರಿತ್ರೆ ಆಧಾರಿತ, ನಟ ಶಿವಕಾರ್ತಿಕೇಯನ್ ಅಭಿನಯದ 'ಅಮರನ್' ಸಿನಿಮಾ ಪ್ರದರ್ಶಿಸುತ್ತಿದ್ದ ಚಿತ್ರಮಂದಿರದ ಮೇಲೆ ದುಷ್ಕರ್ಮಿಗಳು ಶನಿವಾರ ಪೆಟ್ರೋಲ್ ಬಾಂಬ್ ಎಸೆದಿದ್ದಾರೆ.

ಕಾಣೆಯಾಗಿದ್ದಾರೆ

ಆರ್. ಪಿಯುಸ್

80 ವರ್ಷ, 5.4 ಅಡಿ ಎತ್ತರ, 45 ಕೆಜಿ ತೂಕ.

ಇವರು ದಿನಾಂಕ: 5.11.2024 ರಂದು ಸಂಜೆ ರಾಮಕೃಷ್ಣ ಮಠ ರೋಡ್, ಅಲಸೂರ್, ಬೆಂಗಳೂರಿಂದ ಕಾಣೆಯಾಗಿರುತ್ತಾರೆ. ಇವರು ಗಂಟಲು ಕ್ಯಾನ್ಸರ್ ಇಂದ ನರಳುತ್ತಿದ್ದಾರೆ ಮತ್ತು ಸರಿಯಾಗಿ ಮಾತನಾಡಲು ಸಾಧ್ಯವಾಗುತ್ತಿಲ್ಲ. ನೆನಪಿನ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಇವರಿಗೆ ಅರ್ಜೆಂಟಾಗಿ ಚಿಕಿತ್ಸೆ ಯ ಅವಶ್ಯಕತೆ ಇದೆ.

ಇವರು ಕೊನೆಯದಾಗಿ ತಿಪ್ಪಸಂದ್ರ ಮುಖ್ಯರಸ್ತೆಯಲ್ಲಿ ಕಂಡುಬಂದಿರುತ್ತಾರೆ. ಹೆಚ್ಚಿನ ಸುಳಿವು ಸಿಕ್ಕಲ್ಲಿ ದಯವಿಟ್ಟು ಸಂಪರ್ಕಿಸಿ: 9739581417, 7829679179, ಅಥವಾ 112 ಪೊಲೀಸ್ ಕಂಟ್ರೋಲ್ ಗೆ ತಿಳಿಸಲು ವಿನಂತಿಸುತ್ತೇವೆ.



ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080-45557160/ 162/ 163/ 164/ 9845114560 / 9731810277/ 9886213331

B.B.U.L. Jain Vidyalaya

Affiliated to CBSE, Delhi

Managed by: Shree Mahaveer Jain Shikshan Sangh

Admissions Open for

Nursery (3 Years) | LKG (4 Years) | UKG (5 Years)

DISTINCTIVE FEATURES

- NEP Based Curriculum
- Conducive Environment
- Nursery activity lab
- Assured Quality Education
- Transport facility available
- Colourful class rooms
- State-of-the-Art infrastructure
- Smart Boards to Enhance Learning
- Focus on Holistic and all round development
- Audio visual and play-way method of teaching
- Qualified, dedicated and inspiring faculty
- Sports facilities, cultural events and field trips
- Secured campus with CCTV Survelliance

100% Results in AISSE

Application forms will be issued from 15.11.2024

080 2242 2936 / 080 4155 4379, Mob: +91 77954 82 145

E-Mail: admission.bbuljv@gmail.com | enquiry.bbuljv@gmail.com

Website: bbuljainvidyalaya.org

For further details contact the School Office:

#84, K.R. Road, Shankarapuram, Bangalore – 560 004

Timings: Mon – Fri - 9.00AM to 4.00PM; Sat: 9.00AM to 12.00Noon

AMRUTH DEVELOPERS & PROMOTERS

PRE-LAUNCHING | RESIDENTIAL LAYOUT

ಸಂಭಾವ್ಯ ಬೆಂಗಳೂರು ಎರಡನೇ ವಿಮಾನ ನಿಲ್ದಾಣದ ಹತ್ತಿರ

ವಸತಿ ನಿವೇಶನಗಳು

ನೆಲಮಂಗಲ

ಬೂದಿಹಾಳ್ ಗ್ರಾಮದಲ್ಲಿ NH-4 ಸಮೀಪ

Upcoming Metro Station, BMTC Bus Stand 400 Mtrs.

ಬ್ಯಾಂಕ್‌ನಿಂದ ಸಾಲ ಸೌಲಭ್ಯ ಲಭ್ಯ

ಆದಾಯ ಪುರಾವೆ ಅವಶ್ಯಕತೆಯಿಲ್ಲದೆ 10 ವರ್ಷಗಳ ಅವಧಿವರೆಗೆ

BMRDA Approval

'A' Khata SITES

HBC Enclave Residential layout

Site Dimension 30×40, 30×50, 40×60

For More Information Contact:

96630 19364

www.amruthdevelopers.com

RENTAL PROPERTIES

Accommodation Available

Commercial

COMMERCIAL PREMISES for RENT Site No.7, 8 (Portion), 18 and 19 (Portion). Ground, 1st, 2nd, 3rd & 4th Floor 24,000 Sqft Lift. Chunchaghatta Main Road, Just 5 Min from Yelchenahalli Metro Station, Suitable for Pickle/ IceCream Factory/ Teachers Institute/ Tuition Centres/ Garments. Contact: 88848-55475/ 96111-83868 Email: sheela.acc1 @gmail.com

NANDIDURGA Road, Jayamahal Extension TO-LET Ground floor 2000,1625, 3625sft fully furnished office premises. 9844168567/ 9900092042

AVAILABLE ON RENT 900 Sqft. Space for Office/Godown near Dhobhi Ghat, Rajajinagar, Bengaluru. Contact: 9449853323, 9845922704.

RENT OFFICE Space 1800sft 1st and 2nd Malleshwarm and Sale 10000sqft Land Near Ganga School, Andrahalli Main Road. 9731115176/ 9845513822

OFFICE SPACE FOR Rent 2000 SqFt Jayanagar 5th Block Next To RV Metro Station 9008030008/ 9844133389

FURNISHED OFFICE space for rent 550 Sqft first floor located in Basaveswar nagar, Bangalore- 560079. Contact: 9880644976

SHOP/OFFICE FOR RENT KR PURAM 10K 200SFT NEAR SJES COLLEGE. Contact -9845683671

Flats

KALYAN NAGAR, near Moodalapalya off Nagarabhavi Main Road, 1 BHK, semi-furnished, west facing, at 4th floor flat for rent, only 2 wheeler Parking. Rent + Maintenance Rs. 17000/- (Not Negotiable) Call: 6363549534 Brokers Excuse.

Industrial And Factory

AVAILABLE OF Industrial Shed of 95000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

CORRUGATED CARTON Industry Available Lease or Rent Industrial area Pandavapura Mandya district. Contact : 8050137570, 8310720536

Godown

HALEHALLI, KITHAGANUR Road, Warehouse for Rent about 5450 sqft close to Garden City College in K.R. Puram. Contact: 9845036011

Accommodation Wanted

Commercial

COMMERCIAL SPACE wanted 800-1000 sq ft in Gandhinagar, Bangalore 560009. Contact: +91 9900001740.

JOB OPPORTUNITIES

Engg/ Production Technical

REQUIRED ASSISTANT AC Technician &Experienced AC Technician for Swastik Airconditioner Location Jayanagar Contact: 7892831686

Wanted

Existing HYDRO POWER PLANT IN KARNATAKA needs Engineers for Expansion in SOLAR Energy Sector, in Karnataka & Maharashtra

WANTED

PROJECT MANAGER

Identifying & Execution the Solar project locations initially 5 MW and Expansion on completion one by one. Having good knowledge of Govt. Policies and liason.

DIPLOMA ENGINEERS - MECHANICAL & ELECTRICALS

As trainees / fresher's Apply with detailed Bio data.

Box No. JA381 within 10 days

Accounts & Finance

REQUIRED ACCOUNTANTS 2-4 years experience knowledge of Tally, Invoicing.Good Salary, Preferred in & around Yelahanka,Mail Your CV to: camrhegde@gmail.com, Contact: 9448243618

ACCOUNTANT WITH 3years and above experience required at white field Bangalore contact 9845079762 mail anandk122@outlook.com

Hospital & Medical Jobs

WANTED EXPERIENCED FEMALE For`BILLING and FEMALE HELPER for Store Medicine Packing`in Medical Distribution Company. Near Sunkadakatte`& Surrounding Areas. Call: 9900543702

Job Opportunities at Silverline Diagnostics

A reputed Diagnostics Centre is seeking qualified, experienced, & talented candidates for the following positions:

- Sr. Staff Nurse MRI/CT – Female
- Sr. Lab Technician – Male or Female
- Medical Transcriptionist – Male or Female
- Billing, Customer Service/PR – Female
- Accounts & HR executives – Male or Female
- Marketing Executive - Male

Candidates with relevant experience in the respective field/industry can attend a walk-in interview. Preference will be given to candidates who can join immediately. Attractive salary Commensurate with experience. Salary will be in line with industry standards.

CMR Main Road, HRBR Layout 3rd Block, Kalyan Nagar, Bengaluru, Karnataka 560043

Interested Candidates can apply to

hr@silverlinediagnostics.com

+91 77956 37576

General

A Leading Real Estate developer is looking for an Independent / dedicated/100% well experienced / Rtd. Revenue candidate to undertake all Liaisoning work for their Layout Projects.

Mail detailed resume to developers10@gmail.com

SUPERVISORS WITH 5 + Years experience & Computer Knowledge required for a Manufacturing firm in Chamarajpet. Contact: 080- 26603729. E-mail : admin@mahendraperfumery.com

EARN MORE than Rs 50,000/- per month, Part/ Full time, Age above 30 Years, 9343616020

Marketing & Sales

RAJSHEKAR DEVELOPERS hiring Tele-Callers and Field SalesExecutive with good communication in Kannada and English (Read, Write and Speak)Should have experience in real estate field with deal closing skills. LocationRajarajeshwari nagar Bangalore. Call 8951920083

EXPERIENCED SALES EXECUTIVE Required for Marketing of Submersible Flat Cables & Winding wires. Apply Email: mysotechcables@gmail.com Mobile: 98440-28180

Multiple Vacancy

WANTED

Job Opening for the FEMALE candidates for various profile like Accountants, CRM, HR, Data Entry Operator, Office Assistance, Graphic Designers, Housekeeping.

MARUDHAR ARTS

85 M. G. Road, Bengaluru-1

Jobs@MarudharArts.com

Mobile No: 734 898 2732

Teachers/ Professors

Karnataka Reddyjana Sangha

Koramangala, Bengaluru

REQUIRES

VEMANA INSTITUTE OF TECHNOLOGY

PROFESSORS: CSE -1, ECE- 2, AI&ML-1, Civil -1, CSE- Dsc - 1.

ASSOCIATE PROFESSOR: Civil - 2.

ASST. PROFESSOR : ECE - 4, Civil -1, AI&ML -2, Chemistry - 2, ME - 2, Dsc - 6, CSE -3, ISE - 4, Maths - 1, Physics -1.

System Analyst - CSE -1

Lab Instructor - CSE-1, ISE-1, ECE-1, D.Sc -1, Chemistry-1.

PA to Principal - 1.,

Asst. Librarian - 2,

Library Asst -1.

RJS INSTITUTE OF MANAGEMENT STUDIES

Associate Professor -1, Assistant Professor - 2 Commerce Department.

RJS FIRST GRADE COLLEGE

English Lecturer - 1

RJS PU COLLEGE

Principal - 1, English Lecturer - 1

RJS EVENING COLLEGE

Principal - 1

KRJS HEAD OFFICE

Admin Officer-1, Accounts Manager-1, Civil Engineer-2, Kannada & English Steno/ Typists-2, Placement and Training officer-1, Plumber-1

Non-Teaching Staff should be below 60 years

E-Mail : krjsest1925@gmail.com

Call: 080- 25534194, 9945450345

www.reddyjanasangha.org.

WANTED LADY Teachers with good English fluency and interested in Teaching English/ EVS/ Computer for Primary classes for a school with 58 years standing in Srirampuram. Contact: 9353382686 (B/W 9.00 am to 6.00 pm)

WANTED EXPERIENCED Teachers for Hindi (Primary) and PE. Vijayanagar, Bangalore. Contact: 8431812577/ 080-23306496.

SRI_ANNAPURNA VIDYAANIKETAN, Opp.PES University, Veerabhadra-nagar, BSK 3rd Stage, Bangalore. REQUIRED-Social, Hindi & English TEACHERS for Primary & High School. Contact-9449834541.

Security & Detectives

GDA SECURITY PVT LTD., (A DIVISION OF GLOBE DETECTIVE AGENCY PVT LTD.,)

WANTED

1. SAFETY & SECURITY SUPERVISOR
2. SAFETY & SECURITY OFFICER

For Software MNC at Sarjapur Road, Bangalore. Male Candidates. CTC Rs. 51,000/- (Supervisor) & Rs. 34,000/- (Officer). Minimum 4 - 5 Years experience as Security Supervisor / Security Guard in IT Sector. Age around 30. Graduate with Computer Knowledge & fluency in English Language. Local language preferred.

Contact: Mr. SANJAY **9148932103**

Receptionist/ Secretary

FEMALE RECEPTIONIST Wanted-for Apartment Marketing Office in Lottegollahalli, Bangalore- 560094. Candidates must be fluent in Kannada, English and Hindi. Post resume to prashy.r7779@gmail.com

SOCIAL SERVICES

Others

REQUIRED EXPERIENCED Dedicated persons in the Field of Social Work of Charitable Trusts Foundations: 9341273990

EDUCATIONAL

Admission

SSLC PUC Diploma ITI NTT Bcom BCA B.Sc Paramedical, BBA B.Tech AMIIE MBA P.hd 9341273990

General

EARN WHILE You Earn: MBA & Secretary to Executives. For details contact: 9880228272, 8296799338

MATRIMONIAL

Grooms Wanted

Muslim

SUNNI MUSLIM Beautiful Girl | 1999 Born B.E. in Computer Science, working in IT sector. Looking for a suitable match. (080-69103101)

SC/ ST

WANTED GROOM

Looking bridegroom for a girl, 30 years, MSC Biotech. Madiga (sc).

9148833532 / 8050519100

Brides Wanted

Brahmin

WANTED A brahmin girl for a 51 year old smartha boy, having consultation business and own house. No dependents. Divorcee/Widow fine. Phone 9845038481.

WANTED A brahmin girl for a 51 year old smartha boy, having consultation business and own house. No dependents. Divorcee/Widow fine. Phone 9845038481.

Divorcee

I AM a 60-year-old Tamil divorcee looking for a compatible life partner want to marry. Who is also divorced and does not have children. If you or someone you know might be interested, please reach out 8838744120

Muslim

SUNNI MUSLIM Boy | 1992 Born From Bangalore, MS in Engineering, currently working in the UK with a top MNC, earning a handsome package. Seeking a suitable match. (080-69103101)

SUNNI MUSLIM | 1994 Born From an affluent Bangalore family, currently working in Dubai with a high salary package. Seeking a suitable match. (080-69072074)

SUNNI MUSLIM | Divorcee | 1989 Born MBBS/MS Doctor from Bangalore seeking a suitable match. Serious inquiries only (080-69072074)

SC/ ST

ವಧು ಬೇಕಾಗಿದೆ

ಕೇಂದ್ರ ಸರ್ಕಾರದ ಸಂಸ್ಥೆಯಲ್ಲಿ ಕೆಲಸ ಮಾಡುವ 28 ವರ್ಷದ MBA ಪದವೀಧರ ವರನಿಗೆ ಸೂಕ್ತವಾದ ವಧು ಬೇಕಾಗಿದೆ.

SC (ಮಾದಿಗ)

Contact: 9449326514

BUSINESS

Business to Business

Business

SITES- SALES, Tatguni, Kanakapura Road, 2 acres fully gated community, Roads/ Water, Rate 2500/ Sft. Vamshadhara Project Services. 9342247637.

PINEWOOD REAPERS Kd-Kiln Dried Good Quality Available@ Reasonable/Cheap Rates 9632912101 9986495950 @Bidadi Industrial Area

OPEN TRADING Account with Cash or Gold Draw income Everday. Males/ Females any contact:- 8792645301

Services

SEEKING EQUITY funds for`25 years old NGO. Entering into Profitable Social Venture. Contact: 7619278091. utkarshequity22@ gmail.com

PUBLIC NOTICE

KARNATAKA REDDYJANA SANGHA

No.1, Mahayogi Vemana Road, 3rd Block, Koramangala, Bangalore-34.

TENDER NOTICE

Quotations are invited for Supply of Sports Equipments to Karnataka Reddyjana Sangha Group of Institutions.

Sealed quotations are to be submit within 7 days of this publication.

For more details, visit: www.reddyjanasangha.org

Contact : 080-25534194 98454 50345

General Secretary

PERSONAL

Change of Name

CHANGE OF NAME

I, SUNITHA UNNIKRISHNAN W/o. K.V. Unnikrishnan, R/a #304, 3rd Floor, AVS Paradise, 3rd Main, Samvruddhi Layout, Subramanyapura Post, Bengaluru-560061 declared that **SUNITHA V** and **SUNITHA UNNIKRISHNAN** both Names pertain to one and the same person, i.e. myself only. Henceforth, I will be known as **SUNITHA UNNIKRISHNAN** for all my future purpose. Vide affidavit dated 4.10.2024 before Notary H.G. Padmanabha Rao, Bangalore

‘ಸಾಮಾನ್ಯನಿಗೆ ಪತ್ರಿಕೆಗಳೇ ದನಿ’

ರಾಷ್ಟ್ರೀಯ ಪತ್ರಿಕಾ ದಿನಾಚರಣೆ: ಮಾಧ್ಯಮಗಳ ಬದಲಾವಣೆ ಕುರಿತು ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಅತ್ಯಂತ ಪ್ರಭಾವಿ ಹುದ್ದೆಯಲ್ಲಿರುವ ರಾಜಕಾರಣಿಯು ಪತ್ರಿಕಾಗೋಷ್ಠಿ ನಡೆಸುವ ಅಗತ್ಯವೇ ಇಲ್ಲ. ಸುದ್ದಿ ಪತ್ರಿಕೆಗಳ ಅಗತ್ಯವೇ ಇಲ್ಲ ಎಂಬ ಅಭಿಪ್ರಾಯ ರೂಪಿಸಿದ್ದಾರೆ. ಇದು ತಪ್ಪು. ಹಿಂದೆಂದಿಗಿಂತ ಸುದ್ದಿಪತ್ರಿಕೆಗಳ ಅಗತ್ಯ ಇಂದು ತೀವ್ರವಾಗಿದೆ’ ಎಂದು ಪ್ರಾಧ್ಯಾಪಕ ಎ.ನಾರಾಯಣ ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಮತ್ತು ವಾರ್ತಾ ಇಲಾಖೆ ಸಹಯೋಗದಲ್ಲಿ ನಗರದಲ್ಲಿ ಶನಿವಾರ ಆಯೋಜಿಸಲಾಗಿದ್ದ ರಾಷ್ಟ್ರೀಯ ಪತ್ರಿಕಾ ದಿನಾಚರಣೆಯಲ್ಲಿ, ‘ಬದಲಾಗುತ್ತಿರುವ ಪತ್ರಿಕಾ ಮಾಧ್ಯಮದ ಸ್ವರೂಪ’ ಕುರಿತು ಅವರು ಮಾತನಾಡಿದರು.

‘ಹತ್ತಾರು ವರ್ಷಗಳಿಂದ ಒಂದೂ ಪತ್ರಿಕಾಗೋಷ್ಠಿ ನಡೆಸದ ಆ ರಾಜಕಾರಣಿ, ಸಾಮಾಜಿಕ ಜಾಲತಾಣಗಳ ಮೂಲಕವೇ ಜನರನ್ನು ತಲುಪುತ್ತೇನೆ ಎಂಬುದನ್ನು ಬಿಂಬಿಸುತ್ತಿದ್ದಾರೆ. ಯಾರೋ ಜನಸಾಮಾನ್ಯ ಮಾಡುವ ಟ್ವೀಟ್ ಅಥವಾ ಫೇಸ್‌ಬುಕ್ ಪೋಸ್ಟ್‌ಗಳಿಗೆ ತಕ್ಷಣ ಪ್ರತಿಕ್ರಿಯಿಸಿ, ಸರ್ಕಾರ ಮತ್ತು ಸಾಮಾನ್ಯನ ಮಧ್ಯೆ ಅಂತರ ಇಳಿಕೆಯಾಗಿದೆ ಎಂದು ತೋರಿಸಲಾಗುತ್ತಿದೆ. ಆದರೆ ಅದು ನಿಜವಲ್ಲ’ ಎಂದರು.

‘ರಾಷ್ಟ್ರೀಯ ಪತ್ರಿಕಾ ದಿನಾಚರಣೆ’ಯಲ್ಲಿ (ಎಡದಿಂದ) ವಾರ್ತಾ ಇಲಾಖೆಯ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ಅವರು ಕಾಂಗ್ರೆಸ್ ನಾಯಕ ಎಂ.ವೀರಪ್ಪ ಮೊಯಿಲಿ ಅವರ ಜೊತೆ ಚರ್ಚಿಸಿದರು. ಪ್ರಾಧ್ಯಾಪಕ ಎ.ನಾರಾಯಣ ಮತ್ತು ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಶಾ ಖಾನಂ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

‘ಸಾಮಾನ್ಯನ ಪೋಸ್ಟ್‌ಗಳಿಗೆ ಅಂತಹ ಪ್ರತಿಕ್ರಿಯೆ ಸಿಕ್ಕಿದ್ದು ಬೆರಳೆಣಿಕೆಯಷ್ಟು ಪ್ರಕರಣಗಳಲ್ಲಿ ಮಾತ್ರ. ಇಂದಿಗೂ ಜನಸಾಮಾನ್ಯನ ಸಮಸ್ಯೆಗಳಿಗೆ, ಅಸಹಾಯಕತೆಗೆ ದನಿ ಆಗುತ್ತಿರುವುದು ಪತ್ರಿಕೆಗಳು ಮಾತ್ರ. ಪತ್ರಿಕೆಗಳಲ್ಲಿ ಬಂದಾಗ ಅದು ಬೀರುವ ಪರಿಣಾಮ ಗಣನೀಯವಾದದ್ದು. ಹೀಗಾಗಿ ಪತ್ರಿಕೆಗಳು ಇಂದು ಹೆಚ್ಚು ಪ್ರಸ್ತುತವಾಗಿವೆ’ ಎಂದರು.

ವಾರ್ತಾ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ಮಾತನಾಡಿ, ‘200 ವರ್ಷಗಳ ಪತ್ರಿಕಾರಂಗ ಮತ್ತು 20 ವರ್ಷಗಳ ಡಿಜಿಟಲ್ ಮಾಧ್ಯಮಗಳು ಅಸ್ತಿತ್ವದಲ್ಲಿರುವ ಸಂಘರ್ಷಪೀಡಿತ ಸಂಧಿಕಾಲದಲ್ಲಿ ನಾವಿದ್ದೇವೆ. ಇಂತಹ ಸಂದಿಗ್ಧ ಸ್ಥಿತಿ ಕರಗುತ್ತದೆ. ಈಗ ಎಲ್ಲವೂ ಬದಲಾಗುತ್ತಿದೆ. ಜನ ಸಾಮಾನ್ಯನಿಗೆ ಶಕ್ತಿ ನೀಡಲೆಂದೇ ಮಾಹಿತಿ ಹಕ್ಕು ಕಾಯ್ದೆ ತರಲಾಗಿತ್ತು. ಆದರೆ ಈಗ ಅದನ್ನು ಸಂಪೂರ್ಣ ದುರ್ಬಲಗೊಳಿಸಲಾಗಿದೆ’ ಎಂದರು.

‘ಲೋಕಪಾಲ ಕಡೆಗಣನೆ’

‘ಭ್ರಷ್ಟಾಚಾರವನ್ನು ಪತ್ರಿಕೆಗಳು ಪ್ರಶ್ನಿಸಬೇಕು. ಭ್ರಷ್ಟಾಚಾರದ ವಿರುದ್ಧ ಹೋರಾಡಲು ಲೋಕಪಾಲ ತರಲು ನಮ್ಮ ಸರ್ಕಾರದಲ್ಲಿ ಕ್ರಮ ತೆಗೆದುಕೊಂಡಿದ್ದೆವು. ಲೋಕಪಾಲದ ಹೆಸರಿನಲ್ಲೇ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಪಕ್ಷ, ಅದನ್ನು ಜಾರಿಗೆ ತರುವ ಬಗ್ಗೆ ಯೋಚಿಸುತ್ತಲೇ ಇಲ್ಲ. ಪತ್ರಿಕೆಗಳು ಇದನ್ನು ಪ್ರಶ್ನಿಸಬೇಕಿತ್ತು. ಆದರೆ ಪ್ರಶ್ನಿಸುತ್ತಿಲ್ಲ’ ಎಂದು ಕಾಂಗ್ರೆಸ್ ನಾಯಕ ವೀರಪ್ಪ ಮೊಯಿಲಿ ಹೇಳಿದರು.

‘ಪ್ರಜಾಪ್ರಭುತ್ವ ಮತ್ತು ದೇಶದ ನಿಜವಾದ ಕಾವಲುಗಾರ ಸುಪ್ರೀಂ ಕೋರ್ಟ್ ಅಲ್ಲ. ಬದಲಿಗೆ ಪತ್ರಿಕೆ ಮತ್ತು ಪತ್ರಕರ್ತ. ಆದರೆ ಪತ್ರಿಕೆಗಳ ಮತ್ತು ಪತ್ರಕರ್ತರ ಹತ್ಯೆ ನಡೆಯುತ್ತಿದೆ’ ಎಂದು ಅವರು ಕಳವಳ ವ್ಯಕ್ತಪಡಿಸಿದರು.

2026ಕ್ಕೆ ನವೀಕೃತ ರೈಲು ನಿಲ್ದಾಣಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ ಮತ್ತು ಕಂಟೋನ್ಮೆಂಟ್ ರೈಲು ನಿಲ್ದಾಣಗಳು ₹ 900 ಕೋಟಿ ವೆಚ್ಚದಲ್ಲಿ ನವೀಕರಣಗೊಳ್ಳುತ್ತಿದ್ದು, 2026ರ ಜನವರಿಯಲ್ಲಿ ಲೋಕಾರ್ಪಣೆಗೊಳ್ಳಲಿವೆ. ಈ ನಿಲ್ದಾಣಗಳಲ್ಲಿ ವಿಶ್ವದರ್ಜೆಯ ಸೌಕರ್ಯಗಳು ಪ್ರಯಾಣಿಕರಿಗೆ ಲಭ್ಯವಾಗಲಿದೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಮತ್ತು ಕೆಂಗೇರಿ ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಎಸ್ಕಲೇಟರ್‌ಗಳನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ನಗರದ ಸುತ್ತಮುತ್ತಲಿನ ಪ್ರಮುಖ ಪಟ್ಟಣಗಳನ್ನು ಸಂಪರ್ಕಿಸುವ ದೇಶದ ಅತಿದೊಡ್ಡ ವೃತ್ತರೈಲು ಸಂಪರ್ಕಜಾಲವನ್ನು (ಸರ್ಕ್ಯುಲರ್ ರೈಲ್ವೆ) ನಿರ್ಮಿಸುವ ಯೋಜನೆ ರೂಪಿಸಲಾಗುತ್ತಿದ್ದು, ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕೆಎಸ್‌ಆರ್ ಬೆಂಗಳೂರು ನಿಲ್ದಾಣವನ್ನು ಅಭಿವೃದ್ಧಿ ಮಾಡಲಾಗುವುದು. ವಿಮಾನ ನಿಲ್ದಾಣದಲ್ಲಿ ಸಿಗುವ ಸೌಲಭ್ಯಗಳು ಇಲ್ಲಿಯೂ ಪ್ರಯಾಣಿಕರಿಗೆ ಕಲ್ಪಿಸುವ ಯೋಜನೆ ಇದೆ. ಅಮೃತ್ ಭಾರತ್ ನಿಲ್ದಾಣ ಅಭಿವೃದ್ಧಿ ಯೋಜನೆಯಡಿ ಕೆಂಗೇರಿ ರೈಲು ನಿಲ್ದಾಣವನ್ನು ₹29 ಕೋಟಿ ವೆಚ್ಚದಲ್ಲಿ ನವೀಕರಿಸಲಾಗುತ್ತಿದೆ ಎಂದು ವಿವರಿಸಿದರು.

ಕೆಂಗೇರಿ ರೈಲು ನಿಲ್ದಾಣದಲ್ಲಿ ಶನಿವಾರ ಉದ್ಘಾಟನೆಗೊಂಡ ಎಸ್ಕಲೇಟರ್‌ನಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಸಂಚರಿಸಿದರು — ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ‘ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಬಂದ ಮೇಲೆ ರೈಲ್ವೆಯಲ್ಲಿ ಭಾರಿ ಪ್ರಮಾಣದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ’ ಎಂದು ಹೇಳಿದರು.

ಕೆಎಸ್‌ಆರ್ ಬೆಂಗಳೂರು ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್ 1ರಲ್ಲಿ ₹2.8 ಕೋಟಿ ವೆಚ್ಚದಲ್ಲಿ ಮೇಲ್ಮುಖವಾಗಿ ಚಲಿಸಲು ಒಂದು ಮತ್ತು ಕೆಳಮುಖವಾಗಿ ಚಲಿಸಲು ಒಂದು ಎಸ್ಕಲೇಟರ್‌ಗಳನ್ನು ಒದಗಿಸಲಾಗಿದೆ. ಇದು ನಿಲ್ದಾಣದ ಎಲ್ಲ 10 ಪ್ಲಾಟ್‌ಫಾರ್ಮ್‌ಗಳನ್ನು ಸಂಪರ್ಕಿಸುತ್ತದೆ. ಕೆಂಗೇರಿ ರೈಲು ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್ 1ರಲ್ಲಿ ₹ 1.06 ಕೋಟಿ ವೆಚ್ಚದಲ್ಲಿ ಒಂದು ಎಸ್ಕಲೇಟರ್ ಅಳವಡಿಸಲಾಗಿದೆ. ಎಲ್ಲ ನಾಲ್ಕು ಪ್ಲಾಟ್‌ಫಾರ್ಮ್‌ಗಳನ್ನು ಪಾದಚಾರಿ ಮೇಲ್ಸೇತುವೆ ಮೂಲಕ ಸಂಪರ್ಕಿಸುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ವಿಧಾನ ಪರಿಷತ್ ಸದಸ್ಯ ಎಚ್.ಎಸ್. ಗೋಪಿನಾಥ್ ರೆಡ್ಡಿ, ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಯೋಗೇಶ್ ಮೋಹನ್, ಮುಖ್ಯ ವಾಣಿಜ್ಯ ವ್ಯವಸ್ಥಾಪಕ (ಪ್ರಯಾಣಿಕರ ಸೇವೆ) ಅನೂಪ್ ದಯಾನಂದ ಸಾಧು, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಅಶುತೋಷ್ ಮಾಥುರ್, ಪರೀಕ್ಷಿತ್ ಮೋಹನ್ ಪುರಿಯಾ ಉಪಸ್ಥಿತರಿದ್ದರು.

ಕೆಐಎಡಿಬಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಒಂದು ಅಧೀನ ಸಂಸ್ಥೆ)

ವಸತಿ ನಿವೇಶನಗಳ ಇ-ಹರಾಜು

ಸ್ಥಳ : ಕೆಐಡಿಬಿ ವಸತಿ ಬಡಾವಣೆ ಪ್ರದೇಶ ವಸಂತನರಸಾಪುರ ಕೈಗಾರಿಕಾ ಪ್ರದೇಶ, ತುಮಕೂರು

ಕ್ರಮ ಸಂಖ್ಯೆ	ನಿವೇಶನಗಳ ವಿವರಗಳು	ನಿವೇಶನಗಳ ಸಂಖ್ಯೆ	ನಿವೇಶನದ ಅಳತೆ ಮೀಟರ್ ಗಳಲ್ಲಿ
1	EWS	55	6.10x9.14
2	LIG	220	9.14x12.19
3	MIG	81	9.14x15.24
4	HIG	15	12.19x18.29
5	ODD	6	15.60x15.70
	ಒಟ್ಟು	377	—

ನೊಂದಾಯಿಸುವ ಪ್ರಕ್ರಿಯೆ 20ನೇ ನವೆಂಬರ್ ರಿಂದ 05ನೇ ಡಿಸೆಂಬರ್ 2024 ವರೆಗೆ

“ಭಾಗವಹಿಸಿ”

ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ : https://kppp.karnataka.gov.inಗೆ ಭೇಟಿ ನೀಡಿ

- ವಸತಿ ಬಡಾವಣೆಯು ಪ್ರಮುಖ ಕೈಗಾರಿಕಾ ಬೆಳವಣಿಗೆಯ ಕೇಂದ್ರವಾದ ರಾಷ್ಟ್ರೀಯ ಹೆದ್ದಾರಿ 48 ರ ಸಮೀಪದಲ್ಲಿದೆ.
- ವ್ಯಾಜ್ಯ ಮುಕ್ತ ಮತ್ತು ಸ್ಪಷ್ಟ ಹಕ್ಕುಪತ್ರಗಳ ಜೊತೆಗೆ 24/7 ವಿದ್ಯುತ್ ಮತ್ತು ನೀರಿನ ಲಭ್ಯತೆ.
- ಅಭಿವೃದ್ಧಿ ಹೊಂದಿದ ಕೈಗಾರಿಕಾ ಪ್ರದೇಶದ ಪಕ್ಕದಲ್ಲಿದೆ.

ಲೈವ್ ಹರಾಜು ದಿನಾಂಕ : ಡಿಸೆಂಬರ್, 07 ಮತ್ತು 08, 2024 ರಂದು

ಇ-ಹರಾಜಿಗಾಗಿ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳಿಗಾಗಿ, ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ:
ವೆಬ್‌ಸೈಟ್ : www.kiadb.in
ಹರಾಜಿನಲ್ಲಿ ನೋಂದಾಯಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ : https://kppp.karnataka.gov.inಗೆ ಭೇಟಿ ನೀಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಕಾರ್ಯಪಾಲಕ ಇಂಜಿನಿಯರ್ ಕೆಐಎಡಿಬಿ, ವಲಯ ಕಚೇರಿ, ತುಮಕೂರು, ಮಾರುತಿ ಗ್ರೂಪ್ಸ್ ಕಟ್ಟಡ, 2ನೇ ಮಹಡಿ, ಎಸ್.ಐ.ಟಿ. ಕಾಲೇಜು ಹತ್ತಿರ, ಮುಖ್ಯ ಗೇಟ್, ಬಿ.ಹೆಚ್. ರಸ್ತೆ, ತುಮಕೂರು - 572103.
ಇಮೇಲ್ : dotumakuru@kiadb.in **ವೆಬ್‌ಸೈಟ್:** www.kiadb.in
ಸಂಪರ್ಕದ ವಿವರಗಳು: 9902933944 / 9538746961 / 9449626995

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಬಾಗಲಕೋಟೆ ಹಾಗೂ ರಾಜ್ಯದ ಎಲ್ಲಾ ರೀತಿಯ ಸಹಕಾರ ಸಂಘಗಳು ಹಾಗೂ ಸಹಕಾರ ಇಲಾಖೆ ಇವರುಗಳ ಸಹಯೋಗದಲ್ಲಿ

71ನೇ ಅಖಿಲ ಭಾರತ ಸಹಕಾರ ಸಪ್ತಾಹ ಹಾಗೂ ಸಹಕಾರ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ

ಸಪ್ತಾಹದ ಧ್ಯೇಯ : “ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ”
ದಿನದ ವಿಷಯ : ಸಹಕಾರಿ ಉದ್ಯಮಗಳಲ್ಲಿ ಪರಿವರ್ತನೆ

ದಿನಾಂಕ : 17.11.2024, ಭಾನುವಾರ **ಸಮಯ:** ಬೆಳಿಗ್ಗೆ 11.00 ಗಂಟೆಗೆ
ಸ್ಥಳ : ಹುಬ್ಬಳ್ಳಿ ಬೈಪಾಸ್ ರಸ್ತೆ, ತೋಟಗಾರಿಕಾ ವಿಶ್ವವಿದ್ಯಾಲಯ ಪಕ್ಕದ ಮೈದಾನ, ನವನಗರ, ಬಾಗಲಕೋಟೆ

ಉದ್ಘಾಟನೆ ಮತ್ತು “ಸಹಕಾರ ರತ್ನ” ಪ್ರಶಸ್ತಿ ಪ್ರದಾನ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯ ಮಂತ್ರಿಗಳು

:-ಎಸ್.ಎಸ್ ಪಾಟೀಲ ಹಾಗೂ ಮಹಾತ್ಮಗಾಂಧಿ, ಜವಾಹರಲಾಲ್ ನೆಹರು ರವರ ಭಾವಚಿತ್ರಗಳಿಗೆ ಪುಷ್ಪನಮನ:-
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಜಲಸಂಪನ್ಮೂಲ ಮತ್ತು ಬೆಂಗಳೂರು ನಗರಾಭಿವೃದ್ಧಿ ಸಚಿವರು

:-ಸಹಕಾರ ವಾರಪತ್ರಿಕೆ ವಿಶೇಷ ಸಂಚಿಕೆ ಬಿಡುಗಡೆ:-
ಶ್ರೀ ಆರ್. ಬಿ. ತಿಮ್ಮಾಪೂರ
ಮಾನ್ಯ ಅಬಕಾರಿ ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರು

:-ಸಹಕಾರ ಧ್ವಜಾರೋಹಣ:-
ಶ್ರೀ ಕೆ. ಎನ್. ರಾಜಣ್ಣ
ಮಾನ್ಯ ಸಹಕಾರ ಸಚಿವರು

:-ಅಧ್ಯಕ್ಷತೆ:-
ಶ್ರೀ ಹೆಚ್. ವೈ. ಮೇಟಿ
ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ

-: ವಿವಿಧ ಇಲಾಖೆಗಳ ಹಾಗೂ ಸಹಕಾರ ಸಂಸ್ಥೆಗಳ ಮಳಿಗೆಗಳ ಉದ್ಘಾಟನೆ :-
ಶ್ರೀ ಎಂ. ಬಿ. ಪಾಟೀಲ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು

-: ರೈತರಿಗೆ ಕೃಷಿ ಸಾಲ ವಿತರಣೆ :-
ಶ್ರೀ ಶಿವಾನಂದ ಎಸ್. ಪಾಟೀಲ
ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಸಚಿವರು

-: ಪ್ರಾಸ್ತಾವಿಕ ನುಡಿ :-
ಶ್ರೀ ಜಿ. ಟಿ. ದೇವೇಗೌಡ
ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,

ಸಹಕಾರ ಇಲಾಖೆಯ ಗುರಿ ಮತ್ತು ಸಾಧನೆಗಳು - 2024

- **ಕೃಷಿ ಸಾಲ:** 2024-25 ನೇ ಸಾಲಿನಲ್ಲಿ 36 ಲಕ್ಷಕ್ಕಿಂತ ಹೆಚ್ಚಿನ ರೈತರಿಗೆ ರೂ.27,000 ಕೋಟಿಗಳ ಕೃಷಿ ಸಾಲ ವಿತರಿಸಲು ಗುರಿ, ಅಕ್ಟೋಬರ್ 2024 ರ ಅಂತ್ಯಕ್ಕೆ 15.40 ಲಕ್ಷ ರೈತರಿಗೆ ರೂ.13412.61 ಕೋಟಿ ಕೃಷಿ ಸಾಲ ವಿತರಿಸಲಾಗಿದೆ.
- ಪ್ರಸಕ್ತ ಸಾಲಿನಲ್ಲಿ ಬೆಳೆ ಸಾಲ ಬಡ್ಡಿ ಸಹಾಯಧನ ಯೋಜನೆಗೆ ರಾಜ್ಯ ಸರ್ಕಾರ 1451.02 ಕೋಟಿ ರೂ.ಗಳ ಆಯವ್ಯಯ ಅವಕಾಶ ಕಲ್ಪಿಸಿದ್ದು, ಇದುವರೆಗೆ 16.11 ಲಕ್ಷ ರೈತರಿಗೆ ಸಂಬಂಧಿಸಿದ ರೂ.700.80 ಕೋಟಿಗಳ ಅನುದಾನವನ್ನು ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲಾಗಿದೆ.
- **ಮಹಿಳಾ ಸಬಲೀಕರಣ :** 2.5 ಲಕ್ಷ ಸ್ವಸಹಾಯ ಗುಂಪುಗಳು ರಚನೆಯಾಗಿದ್ದು, ಪ್ರಸಕ್ತ ಸಾಲಿನಲ್ಲಿ ಸೆಪ್ಟೆಂಬರ್ ಅಂತ್ಯಕ್ಕೆ 8,427 ಗುಂಪುಗಳಿಗೆ ರೂ. 374 ಕೋಟಿಗಳ ಸಾಲ ವಿತರಿಸಲಾಗಿದೆ. ಸ್ವಸಹಾಯ ಗುಂಪುಗಳ ಸಾಲದ ಬಡ್ಡಿ ಸಹಾಯಧನ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ಸರ್ಕಾರ 124.80 ಕೋಟಿ ರೂ. ಗಳ ಆಯವ್ಯಯ ಅವಕಾಶವನ್ನು ನೀಡಿದೆ.
- **ಯಶಸ್ವಿನಿ ಸಹಕಾರ ಸದಸ್ಯರ ಆರೋಗ್ಯ ರಕ್ಷಣಾ ಯೋಜನೆ** ಅಡಿಯಲ್ಲಿ 2023-24 ನೇ ಸಾಲಿಗೆ ಒಟ್ಟು 41.50 ಲಕ್ಷ ಸದಸ್ಯರು ನೊಂದಾಯಿಸಿಕೊಂಡಿರುತ್ತಾರೆ. ಇದುವರೆಗೆ ಒಟ್ಟು 39,000 ಸದಸ್ಯರು ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದು ಇದರ ಮೊತ್ತ ರೂ.69 ಕೋಟಿಯಾಗಿರುತ್ತದೆ.
- 2017-18 ನೇ ಸಾಲಿನ ರೂ.50,000 ಗಳ ಸಾಲಮನ್ನಾ ಯೋಜನೆಯಡಿ ಬಾಕಿ ಇದ್ದ, ರೂ.131.26 ಕೋಟಿಗಳ ಅನುದಾನವನ್ನು ದಿನಾಂಕ : 27-03-2024 ರಂದು ಡಿಸಿಸಿ ಬ್ಯಾಂಕುಗಳಿಗೆ ಬಿಡುಗಡೆ ಮಾಡಲಾಗಿದೆ.
- ಡಿಸಿಸಿ ಮತ್ತು ಪಿಕಾರ್ಡ್ ಬ್ಯಾಂಕುಗಳ ಮಧ್ಯಮಾವಧಿ ಮತ್ತು ದೀರ್ಘಾವಧಿ ಸುಸ್ತಿ ಸಾಲಗಳ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಮಾರ್ಚ್ 2024 ರ ವರೆಗೆ 36,146 ರೈತರಿಂದ ರೂ.287.98 ಕೋಟಿ ವಸೂಲಾಗಿದ್ದು, ರೂ.239.26 ಕೋಟಿ ಬಡ್ಡಿ ಮನ್ನಾ ಸೌಲಭ್ಯ ದೊರೆತಂತಾಗಿದೆ.
- ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ವಿಲೀನಗೊಂಡಿದ್ದ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯನ್ನು ಸಹಕಾರ ಇಲಾಖೆಯಲ್ಲಿಯೇ ಮುಂದುವರೆಸಲಾಗಿದೆ.

ಉಪಸ್ಥಿತ ಗಣ್ಯರು : ಸಂಸದರು, ಸಚಿವರು, ಜಿಲ್ಲೆಯ ಎಲ್ಲಾ ಶಾಸಕರುಗಳು, ವಿಧಾನ ಪರಿಷತ್ತಿನ ಸದಸ್ಯರುಗಳು, ಮಹಾಮಂಡಳಗಳ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು, ನಿರ್ದೇಶಕರುಗಳು, ಸ್ಥಳೀಯ ಸಹಕಾರ ಸಂಸ್ಥೆಗಳ ಅಧ್ಯಕ್ಷರುಗಳು, ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳು

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಆಡಳಿತ ಮಂಡಳಿ

ಸರ್ವರಿಗೂ ಆದರದ ಸ್ವಾಗತ

ಪ್ರಕಟಣೆ: ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

ಕೃಷಿ ಮೇಳಕ್ಕೆ ತಂದಿರುವ ನಾರಿಸ್ವರ್ಣ ತಳಿಯ ಕುರಿ

ಕೃಷಿಮೇಳದಲ್ಲಿ ಗಮನ ಸೆಳೆದ ಉದ್ದ ಕಿವಿ ಮೇಕೆಗಳು

ಕೃಷಿ ಮೇಳ: ಚಿಣ್ಣರಿಂದ ಆಲಂಕಾರಿಕ ಮೀನು ಖರೀದಿ • ಮೂರನೇ ದಿನವೂ ಉತ್ತಮ ಸ್ಪಂದನೆ

ಪ್ರಾಣಿಗಳ ಪ್ರಪಂಚಕ್ಕೆ ಲಗ್ಗೆ ಇಟ್ಟ ಜನ

• ಖಲೀಲಅಹ್ಮದ ಶೇಖ

ಬೆಂಗಳೂರು: ಒಂದೇ ಸೂರಿನಡಿ ಆಲಂಕಾರಿಕ ಮೀನುಗಳ ಪ್ರದರ್ಶನ ಮತ್ತು ಮಾರಾಟ, 21 ತಳಿಗಳ ಹಸು, ದನ, ಕುರಿ, ಮೇಕೆ ಹಾಗೂ ಕೋಳಿಗಳನ್ನು ನೋಡಲು ಶಾಲಾ–ಕಾಲೇಜಿನ ಮಕ್ಕಳು ಸೇರಿದಂತೆ ಸಾರ್ವಜನಿಕರು ಮುಗಿಬಿದ್ದಿದ್ದರು...

ಇದು ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಮೂರನೇ ದಿನ ಕಂಡು ಬಂದ ದೃಶ್ಯಗಳು.

ಬೆಳಿಗ್ಗಿನಿಂದಲೇ ತಂಡೋಪ ತಂಡವಾಗಿ ಬಂದ ಜನ ವೇದಿಕೆಗಿಂತ ಪ್ರದರ್ಶನ ತಾಕುಗಳು, ಮಳಿಗೆಗಳು, ಪ್ರಾಣಿಪ್ರಪಂಚದ ಮಳಿಗೆಗಳ ಹತ್ತಿರಕ್ಕೆ ಧಾವಿಸಿ, ವೈವಿಧ್ಯಮಯ ತಳಿಗಳ ಕೋಳಿ, ಕುರಿ, ಮೀನು ಪ್ರಪಂಚವನ್ನು ಕಣ್ತುಂಬಿಕೊಂಡರು. ಗೋಲ್ಡ್ ಫಿಶ್ ಸೇರಿದಂತೆ ವೈವಿಧ್ಯಮಯ ಆಲಂಕಾರಿಕ ಮೀನುಗಳನ್ನು ಚಿಣ್ಣರು ಹಾಗೂ ಮಹಿಳೆಯರು ಹೆಚ್ಚು ಖರೀದಿಸುತ್ತಿದ್ದರು.

'ರೈತರ ಪಾಲಿಗೆ ಕುರಿಗಳು ನಡೆದಾಡುವ ಬ್ಯಾಂಕ್‌ಗಳು...' ಎಂದೇ ಕರೆಯಲಾಗುತ್ತಿದ್ದು ಮೇಳದಲ್ಲಿ ಎಲ್ಲರ ಚಿತ್ತ ಇವುಗಳತ್ತ ಹರಿದಿದೆ.

ಗಮನ ಸೆಳೆದ ₹1.40 ಲಕ್ಷದ ಕುರಿ!: ಕತ್ತಿನಲ್ಲಿದ್ದ 'ಗಂಟೆ'ಯನ್ನು ಅತ್ತಿತ್ತ ಅಲ್ಲಾಡಿಸುತ್ತಾ, ಹುಲ್ಲು ತಿಂದು ಬಾಯಿ ಚಪ್ಪರಿಸುತ್ತಿದ್ದ ನಾರಿಸ್ವರ್ಣ ತಳಿಯ ಕುರಿಗಳ ಚೆಂದವನ್ನು ಮಾತಿನಲ್ಲಿ ವರ್ಣಿಸುವುದು ಕಷ್ಟ. ಉದ್ದ ಶರೀರ, ಎತ್ತರದ ಕಾಲುಗಳು, ದೊಡ್ಡ ತಲೆಯ ಕೊಬ್ಬಿದ ದೇಹದ ಆ ಕುರಿಗಳ ಅಂದವನ್ನು ಕಣ್ತುಂಬಿಕೊಳ್ಳಲು ಜನರ ದಂಡೇ ಕೃಷಿಮೇಳದಲ್ಲಿ ನೆರೆದಿತ್ತು.

'ಶ್ವೇತ ವರ್ಣದ ಈ ಕುರಿಗಳ ಆಕರ್ಷಣೆಗೆ ಮನಸೋತವರು, ಅದರ ಸಮೀಪಕ್ಕೆ ತೆರಳಿ ವಿಚಾರಿಸಿದವರು ಮಾತ್ರ ಹುಬ್ಬೇರಿಸದೇ ಇರಲಿಲ್ಲ. 100 ಕೆ.ಜಿ. ತೂಗುವ ಒಂದೊಂದು ಕುರಿಗಳ ಬೆಲೆ ಬರೋಬರಿ ₹1.40 ಲಕ್ಷ! ಇದರ ಒಂದು ಕೆ.ಜಿ ಮಾಂಸಕ್ಕೆ ₹2 ಸಾವಿರ ದರವಿದೆ. ಈ ಕುರಿ ಒಮ್ಮೆ ಮೂರು ಕುರಿ ಮರಿಗಳಿಗೆ ಜನ್ಮ ನೀಡುತ್ತದೆ' ಎಂದು ಕೋಲಾರ ಜಿಲ್ಲೆಯ ಶಬ್ಬೀರ್ ಮಾಹಿತಿ ನೀಡಿದರು.

ಆಲಂಕಾರಿಕ ಮೀನುಗಳನ್ನು ಖರೀದಿಸುವಲ್ಲಿ ನಿರತರಾಗಿದ್ದ ಜನ ಪ್ರಜಾವಾಣಿ ಚಿತ್ರ

10.25 ಲಕ್ಷ — ಕೃಷಿ ಮೇಳಕ್ಕೆ ಭೇಟಿ ನೀಡಿದ ಜನರು

15,500 — ರಿಯಾಯಿತಿ ದರದ ಭೋಜನ ಸವಿದವರು

₹1.75 ಕೋಟಿ — ಕೃಷಿ ಮೇಳದಲ್ಲಿ ನಡೆದಿರುವ ಮೂರನೇ ದಿನದ ವಹಿವಾಟು

ಉದ್ದ ಕಿವಿಯ ಹೋತ ₹2 ಲಕ್ಷ!: '20 ಇಂಚು ಉದ್ದ ಹಾಗೂ 9 ಇಂಚು ಅಗಲದ ಕಿವಿಯಿರುವ ಈ ಹೋತ(ಗಂಡು ಮೇಕೆ) ನೋಡುಗರನ್ನು ಸೆಳೆಯಿತು. ಇದರ ಬೆಲೆ ₹2 ಲಕ್ಷ! ಇದರ ಬೆಲೆಯನ್ನು ಕಿವಿಗಳ ಉದ್ದ ಮತ್ತು ಅಗಲದ ಆಧಾರದ ಮೇಲೆ ನಿಗದಿಪಡಿಸಲಾಗುತ್ತದೆ. ಒಂದು ಹೋತ 60 ಕೆ.ಜಿಯಿಂದ 80 ಕೆ.ಜಿವರೆಗೆ ತೂಕವಿದ್ದರೆ, ಹೆಣ್ಣು ಮೇಕೆ 55 ಕೆ.ಜಿಯಿಂದ 75 ಕೆ.ಜಿವರೆಗೂ ತೂಗುತ್ತದೆ. ಮೂರು ತಿಂಗಳ ಮರಿಗೆ ₹30 ಸಾವಿರ ಬೆಲೆ ಇದೆ. ಇವುಗಳನ್ನು ಫ್ಯಾನ್ಸಿ ಶೋಗಳಲ್ಲಿ, ಶೋಕಿಗಾಗಿ ಸಾಕಾಣಿಕೆ ಮಾಡಲಾಗುತ್ತದೆ' ಎಂದು ಬೆಂಗಳೂರು ಉದ್ದ ಕಿವಿ ಮೇಕೆ ತಳಿಗಾರರ ಸಂಘದ ಅಧ್ಯಕ್ಷ ಸಿದ್ದಿಕ್ ತಿಳಿಸಿದರು.

ಬೀ ವ್ಯಾಕ್ಸ್ ಕ್ರಿಮ್ ಆಕರ್ಷಣೆ

'ಹೆಜ್ಜೇನಿನ ರಾಡೆಯನ್ನು ಸಂಸ್ಕರಿಸಿ ಅದರ ಮೇಣ ಹಾಗೂ ಕೊಬ್ಬರಿ ಎಣ್ಣೆ ಮಿಶ್ರಣದಿಂದ ಬೀ ವ್ಯಾಕ್ಸ್ ಕ್ರಿಮ್ ಅನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜೇನು ಕೃಷಿ ವಿಭಾಗದ ವಿಜ್ಞಾನಿಗಳು ತಯಾರಿಸಿದ್ದಾರೆ.

'ಇದನ್ನು ಬಿರುಕುಬಿಟ್ಟ ತುಟಿಗಳಿಗೆ, ಕಾಲಿನ ಹಿಂಬಡಿಗಳಿಗೆ ಹಚ್ಚಿಕೊಳ್ಳ ಬಹುದು' ಎಂದು ಜೇನು ಕೃಷಿ ವಿಭಾಗದ ವಿಜ್ಞಾನಿ ಕೆ.ಟಿ. ವಿಜಯ್‌ಕುಮಾರ್ ತಿಳಿಸಿದರು.

ಬಳ್ಳಿ ಬೀನ್ಸ್ ಕೆ.ಜಿ.ಗೆ ₹100: ಕೃಷಿ ಮೇಳ ಹಲವು ರೀತಿಯ ವೈವಿಧ್ಯಕ್ಕೆ ಸಾಕ್ಷಿಯಾಯಿತು. ತೋಟಗಾರಿಕಾ ಬೆಳೆ ವಿಭಾಗದಲ್ಲಿ ಬಳ್ಳಿ ಬೀನ್ಸ್ ಹಾಗೂ ಸೌತೆಕಾಯಿಯನ್ನು ಬಳ್ಳಿಯಿಂದ ಕಿತ್ತು ಮಾರಾಟ ಮಾಡಲಾಯಿತು.

ಒಂದು ಕೆ.ಜಿ. ಬೀನ್ಸ್‌ಗೆ ₹100ರಂತೆ ಮಾರಾಟ ಮಾಡಿದರೆ, ಒಂದು ಕೆ.ಜಿ ಸೌತೆಕಾಯಿಯನ್ನು ₹50 ರಂತೆ ಮಾರಾಟ ಮಾಡಲಾಯಿತು.

ನೆಲಗಡಲೆ ಬಿತ್ತನೆಗೆ 'ಕೃಷಿಬಾಟ್' ಸಹಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲಗಡಲೆ ಬಿತ್ತನೆ ಮಾಡುವ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಅನುಕೂಲವಾಗುವ ಉದ್ದೇಶದಿಂದ 'ಟೆರ್ರಾಕ್ರಾಫ್ಟ್' ಎಂಬ ಸಂಸ್ಥೆಯು ವಿದ್ಯುತ್ ಚಾಲಿತ 'ಕೃಷಿಬಾಟ್' ಎಂಬ ರಿಮೋಟ್ ನಿಯಂತ್ರಿತ ಯಂತ್ರವನ್ನು ಅಭಿವೃದ್ಧಿಪಡಿಸಿದೆ.

ಇಲ್ಲಿನ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದ ಪ್ರದರ್ಶನದಲ್ಲಿ ಈ ಯಂತ್ರದ ಗಮನ ಸೆಳೆಯಿತು.

ನೆಲಗಡಲೆಯನ್ನು ಸುಲಭವಾಗಿ ಬಿತ್ತನೆ ಮಾಡಲು ಅನುಕೂಲವಾಗುವಂತೆ 'ಕೃಷಿಬಾಟ್' ಯಂತ್ರವನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಕೂಲಿಕಾರರ ಅಗತ್ಯ ಮತ್ತು ಶ್ರಮವಿಲ್ಲದೆ ಬೀಜ ಬಿತ್ತನೆ ಮಾಡುವುದರ ಜೊತೆಗೆ ರಸಗೊಬ್ಬರವನ್ನು ಕೂಡ ಸಮನಾಗಿ ಹರಡುತ್ತದೆ.

'ಕೃಷಿಬಾಟ್ ಸುಧಾರಿತ ಬಿತ್ತನೆ ತಂತ್ರಜ್ಞಾನ ಹೊಂದಿದ್ದು, ಪ್ರತಿ ಬೀಜವನ್ನು ಗರಿಷ್ಠ ಆಳ ಮತ್ತು ಗರಿಷ್ಠ ಇಳುವರಿಗಾಗಿ ಸಮಾನಾಂತರದಲ್ಲಿ ಬಿತ್ತನೆ ಮಾಡುತ್ತದೆ. ಇದರಿಂದ ಸಮಯವೂ ಉಳಿಯುತ್ತದೆ. ಕಾರ್ಮಿಕರು ಬೀಜಗಳನ್ನು ಒಂದು ಅಂದಾಜಿನ ಮೇಲೆ ಕೈನಲ್ಲೇ ಹಾಕುತ್ತಿದ್ದರು. ಆಗ ಕೆಲವು ಮಣ್ಣಿನ ಮೇಲೆಯೇ ಇದ್ದರೆ, ಇನ್ನೂ ಕೆಲವು ಹೆಚ್ಚು ಆಳಕ್ಕೆ ಹೋಗುತ್ತಿದ್ದವು. ಕೃಷಿಬಾಟ್ ಬಳಕೆಯಿಂದ ಬೀಜಗಳು ವ್ಯರ್ಥವಾಗುವುದನ್ನು ತಡೆಯುವುದರ ಜತೆಗೆ ಇಡೀ ಜಮೀನಿನಲ್ಲಿ ಏಕರೀತಿಯಲ್ಲಿ ಬಿತ್ತನೆ ಮಾಡಲು ಸಹಕಾರಿ ಆಗಿದೆ. ಈ ಯಂತ್ರವನ್ನು ಬೀಜ ಬಿತ್ತುವುದಕ್ಕಷ್ಟೇ ಅಲ್ಲದೆ, ಗೊಬ್ಬರ ಹಾಕಲೂ ಬಳಸಬಹುದು. ಬಿತ್ತನೆ ಪ್ರಕ್ರಿಯೆಯನ್ನು ರಿಮೋಟ್ ಮೂಲಕ ನಿಯಂತ್ರಿಸಬಹುದು' ಎಂದು ಸಂಸ್ಥೆಯ ವೈಭವ್ ಮಾಹಿತಿ ನೀಡಿದರು.

'ಈ ಯಂತ್ರವನ್ನು ಒಮ್ಮೆ ಚಾರ್ಜ್ ಮಾಡಿದರೆ ಆರು ಗಂಟೆಯವರೆಗೆ ಕಾರ್ಯನಿರ್ವಹಿಸುತ್ತದೆ. ಈ ಸಾಧನದಲ್ಲಿ ಬ್ಯಾಟರಿಗಳನ್ನು ಬದಲಿಸುವ ವ್ಯವಸ್ಥೆಯೂ ಇದೆ. ಸದ್ಯ 'ಕೃಷಿಬಾಟ್' ಯಂತ್ರ ಬಾಡಿಗೆಗೆ ನೀಡಲಾಗುತ್ತದೆ. ಒಂದು ಗಂಟೆಗೆ ₹1,200 ದರ ನಿಗದಿಪಡಿಸಲಾಗಿದೆ' ಎಂದು ವಿವರಿಸಿದರು.

ವಿಜ್ಞಾನಿಗಳಿಂದ ನೂತನ ತಳಿಗಳ ಕುರಿತು ಮಾಹಿತಿ ಕಲೆಹಾಕಿದ ರೈತರು

ಮೇಳದಲ್ಲಿ ವಿಶ್ವವಿದ್ಯಾಲಯದ ಸಂಶೋಧಕರು ಅಭಿವೃದ್ಧಿಪಡಿಸಿರುವ, ನಾಲ್ಕು ಹೊಸ ತಳಿಗಳಾದ ಮುಸುಕಿನಜೋಳ ಸಂಕರಣ (ಎಂಎಎಚ್ 15–85), ಅಲಸಂದೆ (ಕೆಬಿಸಿ–12), ಸೂರ್ಯಕಾಂತಿ ಸಂಕರಣ (ಕೆಬಿಎಸ್‌ಎಚ್–90), ಎಂಬ ತಳಿಗಳು ಬಿಡುಗಡೆಯಾಗಿದ್ದು, ಇದರ ತಾಕುಗಳಿಗೆ ಭೇಟಿ ನೀಡಿದ್ದು ರೈತರು ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು.

ಅಲಸಂದೆ (ಕೆಬಿಸಿ12) ತಳಿಯು ಒಂದು ಎಕರೆ ಜಮೀನಿನಲ್ಲಿ 5 ರಿಂದ 6 ಕ್ವಿಂಟಲ್ ಇಳುವರಿ ಬರುತ್ತದೆ. ಇದು ದೇಶದ ಎಲ್ಲ ಪ್ರದೇಶಗಳಲ್ಲಿ ಬೆಳೆಯಬಹುದು. ಇದು 80–85 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಈ ತಳಿಯು ಅಂಗಮಾರಿ ರೋಗ ಹಾಗೂ ನಂಜಾಣು ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಬೇಳೆಕಾಳು ವಿಭಾಗದ ಮುಖ್ಯಸ್ಥರು ಹಾಗೂ ಪ್ರಧಾನ ವಿಜ್ಞಾನಿ ಲೋಹಿತಾಶ್ವ ಎಚ್.ಸಿ. ಮಾಹಿತಿ ನೀಡಿದರು.

ಮೆಕ್ಕೆಜೋಳ (ಎಂಎಎಚ್ 15–84) ಸಂಕರಣ ತಳಿಯು ದೇಶ ಯಾವುದೇ ಪ್ರದೇಶದಲ್ಲಿ ಬೆಳೆಯಬಹುದು. ಇದು 120 ರಿಂದ125 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಒಂದು ಎಕರೆಗೆ 38 ಕ್ವಿಂಟಲ್‌ನಿಂದ 40 ಕ್ವಿಂಟಲ್‌ವರೆಗೆ ಇಳುವರಿ ಬರಲಿದೆ ಎಂದು ಅವರು ತಿಳಿಸಿದರು.

ಸೂರ್ಯಕಾಂತಿ ಸಂಕರಣ (ಕೆಬಿಎಸ್‌ಎಚ್–90) ತಳಿಯು 80 ರಿಂದ 82 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಇದು ಹೆಚ್ಚು ಎಣ್ಣೆ ಅಂಶದಿಂದ ಕೂಡಿರುತ್ತದೆ. ಒಂದು ಎಕರೆ ಖುಷ್ಕಿ ಜಮೀನಿನಲ್ಲಿ 7–8 ಕ್ವಿಂಟಲ್ ಇಳುವರಿ ಬಂದರೆ, ನೀರಾವರಿಯಲ್ಲಿ 10–12 ಕ್ವಿಂಟಲ್‌ವರೆಗೂ ಇಳುವರಿ ಬರುತ್ತದೆ ಎಂದು ವಿಜ್ಞಾನಿ ಎಸ್.ಡಿ. ನೆಹರೂ ತಿಳಿಸಿದರು.

ಕೃಷಿಮೇಳದಲ್ಲಿರುವ ಕೃಷಿಬಾಟ್ ಯಂತ್ರದ ಬ್ಯಾಟರಿಗಳನ್ನು ಪ್ರದರ್ಶಿಸಿದ ಸಂಸ್ಥೆಯ ಪ್ರತಿನಿಧಿಗಳು

'ಸಂರಕ್ಷಿತ ಹುಲ್ಲುಗಾವಲು' ಘೋಷಣೆ: ವಿರೋಧ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: 'ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು ಸಂರಕ್ಷಿತ ಮೀಸಲು ಪ್ರದೇಶವಾಗಿ ಘೋಷಣೆ ಮಾಡಿರುವುದು ರೈತ ವಿರೋಧಿ ಧೋರಣೆ. ಇದರಿಂದ ಸುತ್ತಮುತ್ತಲಿನ 50 ಹಳ್ಳಿಗಳ ಜನರಿಗೆ ತೊಂದರೆ ಉಂಟಾಗುತ್ತದೆ' ಎಂದು ಬಿಜೆಪಿ ರೈತ ಮೋರ್ಚ ರಾಜ್ಯ ಕಾರ್ಯದರ್ಶಿ ಸತೀಶ್ ಕಡತನ ಮಲೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹೋಬಳಿ ವ್ಯಾಪ್ತಿಯ ಐದು ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರು, ರೈತ ಸಂಘಗಳು ಸರ್ಕಾರದ ಈ ನಿರ್ಧಾರವನ್ನು ಖಂಡಿಸಿವೆ. ಘೋಷಣಾ ನಿರ್ಧಾರವನ್ನು ಹಿಂಪಡೆಯದಿದ್ದಲ್ಲಿ ಹೋರಾಟ ಮಾಡಲಾಗುವುದು' ಎಂದು ಎಚ್ಚರಿಸಿದರು.

'ಈ ಭಾಗದಲ್ಲಿ ಬಹುತೇಕ ರೈತರು ಕೃಷಿ, ಮೀನುಗಾರಿಕೆ, ಹೈನುಗಾರಿಕೆಯನ್ನು ಅವಲಂಬಿಸಿದ್ದಾರೆ. ಹುಲ್ಲುಗಾವಲನ್ನು ಸಂರಕ್ಷಿತ ಮೀಸಲು ಪ್ರದೇಶವಾಗಿ ಘೋಷಣೆ ಮಾಡುವುದರಿಂದ ಮುಂದೆ ರೈತರಿಗೆ ಜಾನುವಾರು ಮೇಯಿಸಲು ಬಿಡುವುದಿಲ್ಲ. ಹುಲ್ಲುಗಾವಲು ಹಾದು ಹೋಗುವ ರಸ್ತೆಗಳನ್ನು ಮುಚ್ಚಲಾಗುತ್ತದೆ. ಈ ವ್ಯಾಪ್ತಿಯ ಕೆರೆಗಳಲ್ಲಿ ಮೀನುಗಾರಿಕೆ ಮಾಡುವಂತಿಲ್ಲ ಎಂಬ ನಿರ್ಬಂಧಗಳನ್ನು ಹೇರಲಾಗುತ್ತದೆ. ಮೀನುಗಾರಿಕೆಯನ್ನೇ ಅವಲಂಬಿಸಿರುವ ಕುಟುಂಬಗಳು ಇದರಿಂದ ಬೀದಿಗೆ ಬರುವಂತಾಗಲಿದೆ' ಎಂದು ಹೇಳಿದರು.

ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು ಸಮರ್ಪಕವಾಗಿ ಸಮೀಕ್ಷೆ ನಡೆಸದೆ, ಸ್ಥಳೀಯರ ಅಭಿಪ್ರಾಯವನ್ನು ಸಂಗ್ರಹಿಸದೆ ಸರ್ಕಾರವು ಏಕಾಏಕಿ ಗ್ರೇಟರ್ ಹೆಸರಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು ಪ್ರದೇಶ ಎಂದು ಘೋಷಣೆ ಮಾಡಿದೆ ಎಂದು ಆಕ್ಷೇಪಿಸಿದರು.

ಬಿಜೆಪಿ ಹಿರಿಯ ಮುಖಂಡ ಎಸ್.ಎನ್. ರಾಜಣ್ಣ, ದಿಬ್ಬೂರು ಜಯಣ್ಣ, ವಿವಿಧ ಗ್ರಾಮ ಪಂಚಾಯಿತಿಗಳ ಹಾಲಿ ಮತ್ತು ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಮುಖಂಡರು ಭಾಗವಹಿಸಿದ್ದರು.

ಹೆಸರಘಟ್ಟ: ಶಾಸಕರ ವಿರೋಧಕ್ಕೆ ಖಂಡನೆ

ಹೆಸರಘಟ್ಟ: ರಾಜ್ಯ ಸರ್ಕಾರ ಮತ್ತು ರಾಜ್ಯ ವನ್ಯಜೀವಿ ಮಂಡಳಿಯು ಹೆಸರಘಟ್ಟ ಹುಲ್ಲುಗಾವಲನ್ನು ಸಂರಕ್ಷಿತ ಮೀಸಲು ಪ್ರದೇಶವಾಗಿ ಘೋಷಿಸಿರುವುದು ಈ ಭಾಗದ ರೈತರಿಗೆ ಸಂತಸ ತಂದಿದೆ. ಆದರೆ ಶಾಸಕ ಎಸ್.ಆರ್. ವಿಶ್ವನಾಥ್, ಈ ಘೋಷಣೆಯನ್ನು ವಿರೋಧಿಸಿ ಹೇಳಿಕೆ ನೀಡುತ್ತಿರುವುದು ಖಂಡನೀಯ ಎಂದು ಯಲಹಂಕ ಕಾಂಗ್ರೆಸ್ ಮುಖಂಡ ಕೇಶವರಾಜಣ್ಣ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹೆಸರಘಟ್ಟ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಅದ್ದೆ ಮಾತನಾಡಿ, 'ಸಂರಕ್ಷಿತ ಹುಲ್ಲುಗಾವಲು ಎಂದು ಘೋಷಿಸಬೇಕೆಂಬುದು ಬಹುದಿನಗಳ ಬೇಡಿಕೆಯಾಗಿತ್ತು. ಅನೇಕ ರೈತ ಸಂಘಟನೆಗಳ ಹೋರಾಟದ ಫಲವಾಗಿ ಸರ್ಕಾರ ಮತ್ತು ವನ್ಯಜೀವಿ ಮಂಡಳಿ ಮಹತ್ವದ ತೀರ್ಮಾನ ಕೈಗೊಂಡಿರುವುದು ಸ್ವಾಗತಾರ್ಹ' ಎಂದರು.

'ಹೆಸರಘಟ್ಟ ಹುಲ್ಲುಗಾವಲು ವ್ಯಾಪ್ತಿಯಲ್ಲಿ ನಾಲ್ಕು ಕೆರೆಗಳಿವೆ. ದೇಶ ವಿದೇಶಗಳಿಂದ ಸಂತಾನೋತ್ಪತ್ತಿಗಾಗಿ ಪಕ್ಷಿಗಳು, ಕೊಕ್ಕರೆಗಳು ಈ ಪ್ರದೇಶಕ್ಕೆ ವಲಸೆ ಬರುತ್ತವೆ. ಇಂತಹ ಪ್ರದೇಶವನ್ನು ಪಕ್ಷಾತೀತವಾಗಿ ಸಂರಕ್ಷಣೆ ಮಾಡಬೇಕು' ಎಂದು ಬಮುಲ್ ನಿರ್ದೇಶಕ ಕೇಶವಮೂರ್ತಿ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಯಲಹಂಕ ಗ್ರಾಮಾಂತರ ಬ್ಲಾಕ್ ಅಧ್ಯಕ್ಷ ಶ್ರೀನಿವಾಸ್, ದಾಸನಪುರ ಬ್ಲಾಕ್ ಅಧ್ಯಕ್ಷ ಎಚ್.ಮೂರ್ತಿ, ಯಲಹಂಕ ಗ್ಯಾರಂಟಿ ಯೋಜನೆಗಳ ಅಧ್ಯಕ್ಷೆ ಪ್ರೇಮಲತಾ, ಕೆಪಿಸಿಸಿ ಸದಸ್ಯ ವೆಂಕಟೇಶ್ ಭಾಗವಹಿಸಿದ್ದರು.

ರಾಜ್ಯದಲ್ಲಿ ವಿದೇಶಿ ಕೃಷಿ ವಿ.ವಿ ಸಹಯೋಗಕ್ಕೆ ಸಚಿವರ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟ್ರೇಲಿಯದ ವೆಸ್ಟ್ ಸಿಡ್ನಿ ವಿಶ್ವವಿದ್ಯಾಲಯವು ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾಲಯ ಆರಂಭಿಸುವ ಇಂಗಿತ ವ್ಯಕ್ತಪಡಿಸಿದೆ. ಇಲ್ಲಿನ ಕೃಷಿ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಯೋಜನೆ ರೂಪಿಸಿ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಸಲಹೆ ನೀಡಿದರು.

ವೆಸ್ಟ್ ಸಿಡ್ನಿ ವಿಶ್ವವಿದ್ಯಾಲಯದ ಕುಲಪತಿ ಜಾರ್ಜ್ ವಿಲಿಯಮ್ಸ್ ಮತ್ತು ಭಾರತದಲ್ಲಿನ ಆಸ್ಟ್ರೇಲಿಯ ಕಾನ್ಸುಲೇಟ್ ಮೆಕ್‌ಗೀಚೀ ಅವರ ನಿಯೋಗವು ಶುಕ್ರವಾರ ಉನ್ನತ ಶಿಕ್ಷಣ ಸಚಿವ ಸುಧಾಕರ್ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸಿತು.

'ಸಿಡ್ನಿ ವಿಶ್ವವಿದ್ಯಾಲಯವು ಕೃಷಿ ನೀರಾವರಿಯಲ್ಲಿ ತಾಂತ್ರಿಕತೆ ಅಳವಡಿಕೆ, ಆಹಾರ ಸಂಸ್ಕರಣೆ, ಕೃಷಿ ಉತ್ಪನ್ನಗಳ ಮೌಲ್ಯವೃದ್ಧಿಯಲ್ಲಿ ಪರಿಣತಿ ಹೊಂದಿದೆ. ಬೆಂಗಳೂರಿನಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸುವ ಆಸಕ್ತಿ ಹೊಂದಿದೆ. ಸ್ವತಂತ್ರವಾಗಿ ಅಥವಾ ಸ್ಥಳೀಯ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಕಾರ್ಯನಿರ್ವಹಿಸಲು ಎದುರು ನೋಡುತ್ತಿದ್ದೇವೆ' ಎಂದು ನಿಯೋಗವು ತಿಳಿಸಿತು.

ಆಸ್ಟ್ರೇಲಿಯದ ವೆಸ್ಟ್ ಸಿಡ್ನಿ ವಿಶ್ವವಿದ್ಯಾಲಯದ ನಿಯೋಗವು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರನ್ನು ಶುಕ್ರವಾರ ಭೇಟಿ ಮಾಡಿತು

ಸಚಿವ ಸುಧಾಕರ್, 'ನಮ್ಮ ಕೃಷಿ ವಿಶ್ವವಿದ್ಯಾಲಯಗಳ ಮೂಲಭೂತ ಸೌಕರ್ಯಗಳನ್ನು ಬಳಸಿಕೊಂಡು ಹೊಸ ಆವಿಷ್ಕಾರದ ಕೋರ್ಸ್‌ಗಳನ್ನು ಆರಂಭಿಸಿದರೆ, ನಮ್ಮ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರ ವಿನಿಮಯದ ಮೂಲಕ ಕಲಿಕೆಯನ್ನು ವಿಸ್ತರಿಸಬಹುದು' ಎಂದು ಸಲಹೆ ನೀಡಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, 'ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಆಹಾರ ಸಂಸ್ಕರಣೆ, ಕೃಷಿ–ಉದ್ಯಮ ತಾಂತ್ರೀಕರಣಕ್ಕೆ ಪ್ರಯೋಗಾಲಯಗಳ ಸ್ಥಾಪನೆಯನ್ನು ಪರಿಶೀಲಿಸಬಹುದು. ರಾಜ್ಯದ ಇತರ ಭಾಗಗಳಲ್ಲಿ ವಿಶ್ವವಿದ್ಯಾಲಯ ಸ್ಥಾಪನೆ ಮತ್ತು ಸ್ಥಳೀಯ ವಿದ್ಯಾರ್ಥಿಗಳಿಗೆ ಶೇ 50ರಷ್ಟು ಅವಕಾಶ ನೀಡುವ ಬಗ್ಗೆ ಗಮನ ನೀಡಬೇಕು' ಎಂದು ನಿಯೋಗಕ್ಕೆ ತಿಳಿಸಿದರು.

ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಂ.ಎಸ್.ಶ್ರೀಕರ್, ಇಲಾಖೆ ಅಧಿಕಾರಿಗಳು, ವೆಸ್ಟ್ ಸಿಡ್ನಿ ವಿಶ್ವವಿದ್ಯಾಲಯದ ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

'ದಲಿತ ಚಳವಳಿ, ಕಮ್ಯುನಿಸ್ಟ್ ಚಳವಳಿಯ ಸೇತುವೆ ಮೋರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತ ಚಳವಳಿ ಮತ್ತು ಕಮ್ಯುನಿಸ್ಟ್ ಚಳವಳಿಗಳ ನಡುವಿನ ಸೇತುವೆಯಂತೆ ಆರ್.ಬಿ. ಮೋರೆ ಇದ್ದರು' ಎಂದು ಅಖಿಲ ಭಾರತ ಕಿಸಾನ್ ಸಭಾ ಅಧ್ಯಕ್ಷ ಅಶೋಕ ಧವಳೆ ತಿಳಿಸಿದರು.

'ಆರ್.ಬಿ. ಮೋರೆ: ಮೊದಲ ದಲಿತ ಕಮ್ಯುನಿಸ್ಟ್' ಅವರ ಸ್ವ–ಚರಿತ್ರೆ ಮತ್ತು ಜೀವನ ಚರಿತ್ರೆಯ ಕನ್ನಡ ಅನುವಾದ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ 'ಅಂಬೇಡ್ಕರ್, ಮೋರೆ ಮತ್ತು ಇಂದಿನ ಸಮರಶೀಲ ಚಳವಳಿ: ಸವಾಲುಗಳು, ಸಾಧ್ಯತೆಗಳು' ವಿಚಾರ ಸಂಕಿರಣದಲ್ಲಿ ಶನಿವಾರ ಅವರು ಮಾತನಾಡಿದರು.

'ಅಂಬೇಡ್ಕರ್ ಅಭಿಮಾನಿ ಆಗಿದ್ದ ಮೋರೆ ಅವರು ಅಂಬೇಡ್ಕರ್ ನಡೆಸಿದ ಮಹಾಡ್ ಕೆರೆ ಚಳವಳಿಯ ರೂವಾರಿ ಆಗಿದ್ದರು. ಅಂಬೇಡ್ಕರ್ ಮನುಸ್ಮೃತಿಯನ್ನು ಸಾರ್ವಜನಿಕವಾಗಿ ಸುಟ್ಟಾಗ, ಕಾಳಾರಾಂ ದೇವಸ್ಥಾನ ಪ್ರವೇಶ ಆಂದೋಲನ ನಡೆಸಿದಾಗ ಅವರ ಬಲಗೈಯಂತೆ ಮೋರೆ ಕೆಲಸ ಮಾಡಿದ್ದರು. ಮೋರೆಗೆ ಜಾತಿ ಸಮಸ್ಯೆಯ ಬಗೆಗಿನ ಪ್ರಜ್ಞೆ ಇದ್ದಷ್ಟೇ ವರ್ಗ ಪ್ರಜ್ಞೆಯೂ ಇತ್ತು' ಎಂದು ನೆನಪು ಮಾಡಿಕೊಂಡರು.

ಹೃದಯದಲ್ಲಿ ಅಂಬೇಡ್ಕರ್ ಸಿದ್ಧಾಂತ ಇರುವವರು ಬಿಜೆಪಿ, ಆರ್‌ಎಸ್‌ಎಸ್‌ಗೆ ಸೇರುವುದು ಬಿಡಿ, ಅವರ ಹತ್ತಿರವೂ ಕುಳಿತುಕೊಳ್ಳುವುದಿಲ್ಲ. ಆದರೆ, ಇಂದು ಬಾಯಲ್ಲಿ ಅಂಬೇಡ್ಕರ್ ಮಾತನಾಡುತ್ತಾ ಬಿಜೆಪಿಯೊಂದಿಗೆ ಕೈಜೋಡಿಸುವವರು ಹೆಚ್ಚಾಗಿದ್ದಾರೆ ಎಂದರು.

'ಆರ್.ಬಿ. ಮೋರೆ: ಮೊದಲ ದಲಿತ ಕಮ್ಯುನಿಸ್ಟ್' ಕೃತಿಯ ಕನ್ನಡ ಅನುವಾದ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಕ್ರಿಯಾ ಮಾಧ್ಯಮದ ಕೆ.ಎಸ್. ವಿಮಲಾ ಅವರು ಅಖಿಲ ಭಾರತ ಕಿಸಾನ್ ಸಭಾ ಅಧ್ಯಕ್ಷ ಅಶೋಕ್ ಧವಳೆ ಅವರಿಗೆ ಪುಸ್ತಕವನ್ನು ನೀಡಿದರು. ಆರ್.ಮೋಹನ್ ರಾಜ್, ಇಂದಿರಾ ಕೃಷ್ಣಪ್ಪ, ಲೇಖಕ ಬಂಜಗೆರೆ ಜಯಪ್ರಕಾಶ್ ಮತ್ತು ಅನುವಾದಕ ಅಬ್ದುಲ್ ರೆಹಮಾನ್ ಪಾಷಾ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಬರಹಗಾರ ಬಂಜಗೆರೆ ಜಯಪ್ರಕಾಶ್ ಮಾತನಾಡಿ, 'ಸಮಗ್ರ ಕ್ರಾಂತಿಯ ಹೊರತಾಗಿ ಜಾತಿ ರಹಿತ ಸಮಾಜ ಸೃಷ್ಟಿಸಲು ಸಾಧ್ಯವಿಲ್ಲ ಎಂದು ದಲಿತರಿಗೆ ಹೇಳುತ್ತಿದ್ದ ಮೋರೆಯವರು, ಜಾತಿಯನ್ನು ಅರ್ಥ ಮಾಡಿಕೊಂಡು ಕಾರ್ಯಕ್ರಮ ರೂಪಿಸದೇ ಇದ್ದರೆ ಪಕ್ಷ ಬೆಳೆಯಲು ಸಾಧ್ಯವಿಲ್ಲ ಎಂದು ಕಮ್ಯುನಿಸ್ಟರಿಗೂ ಹೇಳುತ್ತಿದ್ದರು. ದಲಿತರಿಗೂ ಕಮ್ಯುನಿಸ್ಟರಿಗೂ ಕನ್ನಡಿ ಹಿಡಿದಂತಿರುವ ಈ ಪುಸ್ತಕವನ್ನು ಎರಡೂ ಕಡೆಯವರು ಓದಬೇಕು' ಎಂದರು.

'ಒಟ್ಟಿಗೆ ಸಾಗಬೇಕಿದ್ದ ದಲಿತ ಮತ್ತು ಕಮ್ಯುನಿಸ್ಟ್ ಚಳವಳಿಗಳು ಪರಸ್ಪರ ಅಪನಂಬಿಕೆಯಿಂದ ವಿರೋಧಿಸಿಕೊಂಡೇ ಬಹಳ ಸಮಯದ ಬಂದಿದ್ದರಿಂದ ಅತ್ತ ಜಾತಿ ವಿಮೋಚನೆಯೂ ಆಗಲಿಲ್ಲ, ಇತ್ತ ಸಮಗ್ರ ಕ್ರಾಂತಿಯೂ ಆಗಲಿಲ್ಲ' ಎಂದು ಹೇಳಿದರು.

ಅನುವಾದಕ ಅಬ್ದುಲ್ ರೆಹಮಾನ್ ಪಾಷಾ, ಹೋರಾಟಗಾರರಾದ ಇಂದಿರಾ ಕೃಷ್ಣಪ್ಪ, ಗೋಪಾಲಕೃಷ್ಣ ಹರಳಹಳ್ಳಿ, ಆರ್. ಮೋಹನ್‌ರಾಜ್, ಸುಬ್ಬು ಹೊಲೆಯಾರ್, ಎನ್. ನಾಗರಾಜ್, ಕ್ರಿಯಾ ಮಾಧ್ಯಮದ ಕೆ.ಎಸ್. ವಿಮಲಾ ಭಾಗವಹಿಸಿದ್ದರು.

ಮೃತದೇಹವನ್ನು ರಸ್ತೆ ಬದಿ ಇಟ್ಟು ಹೋದರು

ಪುತ್ತೂರು (ದಕ್ಷಿಣ ಕನ್ನಡ): ಸಿಮೆಂಟ್ ಸಾರಣೆ ಕೆಲಸದ ಸಹಾಯಕರಾಗಿದ್ದ ಕಾರ್ಮಿಕರೊಬ್ಬರು ಕೆಲಸದ ವೇಳೆ ಮೃತಪಟ್ಟಿದ್ದು, ಅವರ ಮೃತದೇಹವನ್ನು ಪಿಕಪ್ ವಾಹನದಲ್ಲಿ ತಂದು ಅವರ ಮನೆಯ ಸಮೀಪದ ರಸ್ತೆ ಬದಿಯಲ್ಲಿ ಇಟ್ಟುಹೋದ ಘಟನೆ ಪುತ್ತೂರು ನಗರದ ಹೊರವಲಯದ ಚಿಕ್ಕಮುಡ್ನೂರು ಗ್ರಾಮದ ಸಾಲ್ಮರ ಎಂಬಲ್ಲಿ ಶನಿವಾರ ನಡೆದಿದೆ.

ಮೇಸ್ತ್ರಿಯೊಂದಿಗೆ ಕೆಲಸ ಮಾಡುತ್ತಿದ್ದ ಶಿವಪ್ಪ (70) ಮೃತಪಟ್ಟವರು.



ಶಿವಪ್ಪ

'ಸಾರಣೆ ಕೆಲಸಕ್ಕೆಂದು ಕರೆದುಕೊಂಡು ಹೋದವರು ಪಿಕಪ್ ವಾಹನದಲ್ಲಿ ತಂದು ಮನೆಯ ಸಮೀಪದ ರಸ್ತೆಯಲ್ಲಿ ಶವ ಇಟ್ಟು ಹೋಗಿದ್ದಾರೆ. ನಾವು ನೋಡುವಾಗ ಮೃತಪಟ್ಟಿರುವುದು ಗೊತ್ತಾಗಿದೆ. ಅನಾರೋಗ್ಯಕ್ಕೊಳಗಾಗಿದ್ದರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಬೇಕಾಗಿತ್ತು. ಮೃತಪಟ್ಟಿದ್ದರೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕಿತ್ತು. ಈ ರೀತಿ ಮಾಡಿರುವುದು ಎಷ್ಟು ಸರಿ' ಎಂದು ಶಿವಪ್ಪ ಅವರ ಕುಟುಂಬದವರು ಆಕ್ರೋಶ ವ್ಯಕ್ತಪಡಿಸಿದರು.

ಕಾಮಗಾರಿ ನಡೆಸುತ್ತಿದ್ದ ಮಾಲೀಕನ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಎಂದು ಮೃತನ ಕುಟುಂಬದವರು ಹಾಗೂ ಸ್ಥಳೀಯರು ಆಗ್ರಹಿಸಿದ್ದಾರೆ.

ಸ್ಥಳಕ್ಕೆ ಪುತ್ತೂರು ನಗರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹೈದರಾಬಾದ್ ರೇಸ್

ಮಲಾಲ ಗೆಲ್ಲುವ ನಿರೀಕ್ಷೆ

ಹೆಚ್.ಪಿ ಮಿಸ್ತ್ರಿ ಮೆಮೋರಿಯಲ್ ಕಪ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಲಾಲ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12:50ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಶ್ಯಾಡೊ ಬೇಬಿ 2, ಮಾರ್ನಿಂಗ್ ಮಿಸ್ಟ್ 6, ವೊಸೆಸ್ಟರ್ 1
2ನೇ ರೇಸ್: ಬ್ರಿಲಿಯಂಟ್ ಲಾಡ್ 1, ಸ್ಟೇಟ್ ಮ್ಯಾನ್ 2, ಡೋಂಟ್‌ಬ್ಲ್ಯಾಕ್‌ಮೈವೇ
3,3ನೇ ರೇಸ್: ಕ್ಲಾರ 4, ಜಾಲಿ ಜಸ್ಟರ್ 2, ಎನ್.ಆರ್.ಐ ಧೀರ 3
4ನೇ ರೇಸ್: ಗಟಮ್ಯಾನ್ 2, ಕಲ್ಕಿ 6, ಸ್ಟಾರ್ ಫಾರೆವರ್ 3
5ನೇ ರೇಸ್: ಎನೆಮಾಯ್ 3, ಕ್ವೀನ್ ಎಂಪ್ರೆಸ್ 1, ಪ್ಲಾನೆಟ್ ಸೂಪರ್ 2
6ನೇ ರೇಸ್: ಕೋಡ್ ಬ್ಲೂ 1, ಸೀ ಮೈ ಆಟಿಟ್ಯೂಡ್ 4, ವಾಂಡ್ರಿಂಗ್ ವಾರಿಯರ್ 8
7ನೇ ರೇಸ್: ಮಲಾಲ 1, ಅಲೆಕ್ಸಿನ 2, ಲಾಸ್ಟ್ ವಿಶ್ 3
8ನೇ ರೇಸ್: ಫ್ಲಾಶಿಂಗ್ ಮೆಮೋರೀಸ್ 4, ಡಾರ್ಲಿಂಗ್ ಬಾಯ್ 3, ಸಿಲ್ವರ್ ಲೈನಿಂಗ್ 6

ಉತ್ತಮ ಬೆಟ್: ಶ್ಯಾಡೊ ಬೇಬಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

'ಶ್ರೀಮಂತಿಕೆ ಅಭಿವೃದ್ಧಿಯ ಮೌಲ್ಯವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರೀಮಂತಿಕೆಯನ್ನು ಅಭಿವೃದ್ಧಿಯ ಮೌಲ್ಯವಾಗಿ ಪ್ರದರ್ಶನ ಮಾಡಲಾಗುತ್ತಿದೆ. ಇದು ಹೆಚ್ಚು ದಿನ ಮುಂದುವರಿಯಲು ಸಾಧ್ಯವಿಲ್ಲ' ಎಂದು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ಅಶೋಕ್ ಧವಳೆ ಅಭಿಪ್ರಾಯಪಟ್ಟರು.

ದಕ್ಷಿಣ ಮಧ್ಯ ವಲಯ ವಿಮಾ ನೌಕರರ ಒಕ್ಕೂಟದ 13ನೇ ಮಹಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

'ಶ್ರೀಮಂತರು ಹಾಗೂ ಬಡವರ ನಡುವಿನ ಅಂತರ ಹೆಚ್ಚುತ್ತಿದೆ. ಬಡವರು ಕಳೆದುಕೊಳ್ಳುವ ಸಂಪತ್ತು ಶ್ರೀಮಂತರ ಪಾಲಾಗುತ್ತಿದೆ. ಇದೆಲ್ಲ, ಒಂದಲ್ಲ ಒಂದು ದಿನ ಬದಲಾವಣೆಯಾಗಲೇಬೇಕು. ಶ್ರೀಲಂಕಾದಲ್ಲಿ ದುಡಿಯುವ ಜನರ ಪರವಿರುವ ಮಾರ್ಕ್ಸ್‌ವಾದ ಒಪ್ಪಿಕೊಂಡಿರುವ ಪಕ್ಷ ಆಡಳಿತಕ್ಕೆ ಬಂದಿದೆ. ಇಂತಹ ಬದಲಾವಣೆ ಭಾರತದಲ್ಲಿ ಏಕೆ ಆಗಬಾರದು' ಎಂದು ಪ್ರಶ್ನಿಸಿದರು.

'ಕಾರ್ಲ್ ಮಾರ್ಕ್ಸ್ ಸಮಾನತೆಯ ಆಶಯದಿಂದ ಪ್ರತಿಪಾದಿಸಿರುವ ಸಿದ್ಧಾಂತ ಇಂದಿಗೂ ಬಹುತೇಕ ಜನರ ಮನಸ್ಸಿಗೆ ಹತ್ತಿರವಾಗಿದೆ. ಆ ಸಿದ್ಧಾಂತ ಒಪ್ಪಿಕೊಂಡವರು, ಬದಲಾವಣೆಗಾಗಿ ರೂಪಾಂತರವಾಗಲು ಈ ಸಮ್ಮೇಳನ ಸಾಧನವಾಗಲಿ' ಎಂದು ಆಶಿಸಿದರು.

ದಕ್ಷಿಣ ಮಧ್ಯ ವಲಯ ವಿಮಾ ನೌಕರರ ಒಕ್ಕೂಟದ 13ನೇ ಸಮ್ಮೇಳನದಲ್ಲಿ ಎಐಐಇಎ ಮಾಜಿ ಅಧ್ಯಕ್ಷ ಅಮಾನುಲ್ಲಾ ಖಾನ್, ಅಖಿಲ ಭಾರತ ಕಿಸಾನ್ ಸಭಾ ಅಧ್ಯಕ್ಷ ಅಶೋಕ್ ಧವಳೆ, ಸಿಐಟಿಯು ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮತ್ತು ದಕ್ಷಿಣ ಮಧ್ಯ ವಲಯ ವಿಮಾ ನೌಕರರ ಒಕ್ಕೂಟದ ಅಧ್ಯಕ್ಷ ಪಿ. ಸತೀಶ್ ಅವರು ಸಿಪಿಎಂ ಮುಖಂಡ ಸೀತಾರಾಂ ಯೆಚೂರಿ ಅವರ ಭಾವಚಿತ್ರದ ಮುಂದೆ ಘೋಷಣೆ ಕೂಗಿ ಕಾರ್ಯಕ್ರಮ ಉದ್ಘಾಟಿಸಿದರು ಪ್ರಜಾವಾಣಿ ಚಿತ್ರ

'ದೇಶದಲ್ಲಿ ಇಂದು ದುಡಿಯುವ ಜನರ ಬದಲಿಗೆ ಸಂಪತ್ತಿನ ಕ್ರೋಡೀಕರಣವನ್ನೇ ಮೌಲ್ಯ ಎಂದು ತೋರಿಸಲಾಗುತ್ತಿದೆ. ಬಂಡವಾಳ ಆಕರ್ಷಣೆ ಹಾಗೂ ಸ್ಥಳೀಯ ಜನರ ನಡುವಿನ ಆಯ್ಕೆಯಲ್ಲಿ ಲಾಭವೇ ಪ್ರಧಾನ ಆಗುತ್ತಿದೆ. ಇದೇ ಸ್ಥಿತಿ ಮುಂದುವರಿದರೆ ದೇಶದಲ್ಲಿ ಸಾಮಾನ್ಯರ ಬದುಕು ಇನ್ನಷ್ಟು ಬರ್ಬರವಾಗುತ್ತದೆ' ಎಂದು ಸಿಐಟಿಯು ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಹೇಳಿದರು.

‘5 ವರ್ಷದ ಮಕ್ಕಳಿಗೆ ನ್ಯುಮೋಕಾಕ್ಕಲ್ ಕಾಂಜುಗೇಟ್ ಲಸಿಕೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ವರ್ಷದೊಳಗಿನ ಮಕ್ಕಳಿಗೆ ನ್ಯುಮೋಕಾಕ್ಕಲ್ ಕಾಂಜುಗೇಟ್ ಲಸಿಕೆಯನ್ನು (ಪಿಸಿವಿ) ಕಡ್ಡಾಯವಾಗಿ ಹಾಕಿಸಬೇಕು ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರು ನಾಗರಿಕರಲ್ಲಿ ಮನವಿ ಮಾಡಿಕೊಂಡರು.

ನ್ಯುಮೋನಿಯಾ ಲಸಿಕೆಗೆ ಸಂಬಂಧಿಸಿದಂತೆ ಆರೋಗ್ಯ ಅಧಿಕಾರಿಗಳ ಜೊತೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಸಾರ್ವತ್ರಿಕ ಲಸಿಕಾ ಕಾರ್ಯ ಕ್ರಮದ ಅಡಿಯಲ್ಲಿ ಮಕ್ಕಳಿಗೆ ನ್ಯುಮೋನಿಯಾ ಹರಡದಂತೆ ಪಾಲಿಕೆ ಆರೋಗ್ಯ ಇಲಾಖೆಯ ವತಿಯಿಂದ ನ್ಯುಮೋಕಾಕ್ಕಲ್ ಕಾಂಜುಗೇಟ್ ಲಸಿಕೆಯನ್ನು 5 ವರ್ಷದೊಳಗಿನ ಮಕ್ಕಳಿಗೆ ಉಚಿತವಾಗಿ ನೀಡಲಾಗುತ್ತಿದೆ ಎಂದರು.

ಸೋಂಕು: ನ್ಯುಮೋನಿಯಾ ಶ್ವಾಸಕೋಶದ ಸೋಂಕು. ಶ್ವಾಸಕೋಶದಲ್ಲಿನ ಗಾಳಿಯ ಚೀಲಗಳಿಗೆ ಹರಡಿ ಸೋಂಕಿನ ದ್ರವದಿಂದ ಶ್ವಾಸಕೋಶವನ್ನು ಬಲಹೀನ ಗೊಳಿಸುತ್ತದೆ. ನ್ಯುಮೋನಿಯಾ ಸೋಂಕು ಎರಡೂ ಶ್ವಾಸಕೋಶಗಳಿಗೂ ಹರಡಬಹುದು. ಸರಿಯಾದ ಸಮಯಕ್ಕೆ ಸರಿಯಾದ ಆರೈಕೆಯಿಂದ ಸೋಂಕು ತಗುಲಿದ ಮಗುವನ್ನು ರಕ್ಷಿಸಬಹುದು ಎಂದರು.

ಕೆಮ್ಮು ಮತ್ತು ನೆಗಡಿ, ತೀವ್ರ ಜ್ವರ, ಉಸಿರಾಟದ ತೊಂದರೆ, ಎದೆಯ ಸೆಳೆತ, ಹಸಿವು ಇಲ್ಲದಿರುವುದು, ಸುಸ್ತು, ಅಪಸ್ಮಾರ, ಕೆಮ್ಮು ಮತ್ತು ಹಳದಿ / ರಕ್ತದ ಕಫ ಬರುವುದು ಸೋಂಕಿನ ಲಕ್ಷಣಗಳು ಎಂದು ವಿವರಿಸಿದರು.

ಮಗುವಿಗೆ ಮೊದಲ 6 ತಿಂಗಳು ಸಂಪೂರ್ಣವಾಗಿ ಎದೆಹಾಲು ನೀಡುವುದು. 2 ವರ್ಷದೊಳಗಿನ ಮಕ್ಕಳಿಗೆ ಉತ್ತಮ ಪೋಷಣೆ ನೀಡುವುದು. ಸುರಕ್ಷಿತ ಕುಡಿಯುವ ನೀರು ಮತ್ತು ಉತ್ತಮ ನೈರ್ಮಲ್ಯ. ಸಾಬೂನು ಬಳಸಿ ಕೈಗಳನ್ನು ಶುಚಿಗೊಳಿಸುವುದು. ಮಗುವಿಗೆ ಸಮಯಕ್ಕೆ ಸರಿಯಾಗಿ ಚುಚ್ಚುಮದ್ದು ಹಾಕಿಸುವುದು. ಮನೆಯೊಳಗೆ ಉತ್ತಮ ಗಾಳಿ, ಬೆಳಕಿನ ವ್ಯವಸ್ಥೆ ಹಾಗೂ ಐದು ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ನ್ಯುಮೋಕಾಕ್ಕಲ್ ಕಾಂಜುಗೇಟ್ ಲಸಿಕೆ ಹಾಕಿಸಿ ರೋಗವನ್ನು ತಡೆಗಟ್ಟಬಹುದು ಎಂದು ಮಾಹಿತಿ ನೀಡಿದರು.

‘ಲೈನ್‌ಮನ್ ಹುದ್ದೆಗೆ ಐಟಿಐ ವಿದ್ಯಾರ್ಹತೆ ನಿಗದಿಪಡಿಸಿ’

ಬೆಂಗಳೂರು: ಲೈನ್‌ಮನ್ ಮತ್ತು ಸ್ಟೇಷನ್ ಅಟೆಂಡರ್ ಹುದ್ದೆಗಳ ಭರ್ತಿಗೆ ಕನಿಷ್ಠ ವಿದ್ಯಾರ್ಹತೆಯನ್ನು ಎಸ್‌ಎಸ್‌ಎಲ್‌ಸಿ ಬದಲಿಗೆ ಐಟಿಐ ಶಿಕ್ಷಣವನ್ನು ಪರಿಗಣಿಸಬೇಕು ಎಂದು ಕರ್ನಾಟಕ ರಾಜ್ಯ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಂಘ ಒತ್ತಾಯಿಸಿದೆ.

ಸಂಘದ ರಾಜ್ಯಾಧ್ಯಕ್ಷ ಎಸ್.ಎಂ. ನೆರಬೆಂಚಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಇದೀಗ ಕೆಪಿಟಿಸಿಎಲ್‌ನಿಂದ 2,975 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ನಿಗದಿ ಮಾಡಿರುವುದು ಸರಿಯಲ್ಲ’ ಎಂದು ಹೇಳಿದರು.

ವಿದ್ಯುತ್ ನಿಗಮಗಳಲ್ಲಿನ ಕೆಲಸ ಅಪಾಯಕಾರಿಯಾಗಿದ್ದು, ಐಟಿಐ ಅಭ್ಯರ್ಥಿಗಳಿಗೆ ಈ ಬಗ್ಗೆ ತರಬೇತಿ ನೀಡಲಾಗಿರುತ್ತದೆ. ಆದರೆ, ಎಸ್‌ಎಸ್‌ಎಲ್‌ಸಿ ಮಾಡಿದವರಿಗೆ ಈ ಬಗ್ಗೆ ಯಾವುದೇ ತರಬೇತಿ ಇರುವುದಿಲ್ಲ. 2016ರಿಂದಲೂ ಎಸ್‌ಎಸ್‌ಎಲ್‌ಸಿಯನ್ನೇ ಮಾನದಂಡವನ್ನಾಗಿಸಿಕೊಂಡು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ವಿದ್ಯುತ್ ಅವಘಡಕ್ಕೆ ಸಿಲುಕಿ ಜೀವ ಕಳೆದುಕೊಂಡವರ, ಅಂಗವಿಕಲರ ಸಂಖ್ಯೆ ಹೆಚ್ಚಾಗಲು ಇದು ಕಾರಣ ಎಂದರು.

ವಿದ್ಯುತ್ ಆಧಾರಿತ ಕೆಲಸಗಳ ಬಗ್ಗೆ ಜ್ಞಾನ ಹಾಗೂ ಕೌಶಲ ಹೊಂದಿರುವ ಐಟಿಐ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಬೇಕು. ಸರ್ಕಾರ ಹೊರಡಿಸಿರುವ ಅಧಿಸೂಚನೆ ಹಿಂಪಡೆಯಬೇಕು. ಇಲ್ಲದೇ ಇದ್ದರೆ ನ್ಯಾಯಾಲಯದ ಮೊರೆ ಹೋಗಲಾಗುವುದು ಎಂದು ಎಚ್ಚರಿಸಿದರು.

ಸಂಘದ ಪದಾಧಿಕಾರಿ ಗಳಾದ ಎ.ಎ. ಪಾಟೀಲ್, ಋಶ್ಯಶೃಂಗ, ಅನಿಲ್ ಕುಮಾರ್, ಐಟಿಐ ಅಭ್ಯರ್ಥಿಗಳಾದ ಸುನೀಲ್, ಯಮನೂರಿ ಮಾದರ, ಉಮೇಶ್ ಸಿ.ಪಿ., ಅನಿಲ್ ಕುಮಾರ್ ಡಿ., ಎಚ್.ಯು.ಅಶೋಕ್ ಉಪಸ್ಥಿತರಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರುರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-560002.

ನಂ. ಬಿಬಿಎಂಪಿ/ಸಿ/ಪಿಆರ್/2350/2024-25 ದಿನಾಂಕ: 13.11.2024

ಅಧಿಸೂಚನೆ

ಈ ಕೆಳಗಿನ ರಸ್ತೆಗಳನ್ನು ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳು ಎಂದು ಸೂಚಿಸುವುದು:

ಕ್ರ ಸಂ	ರಸ್ತೆಯ ಹೆಸರು	ಇಲ್ಲಿಂದ	ಇಲ್ಲಿಯವರೆಗೆ	ಉದ್ದ ಕಿ.ಮೀ ಗಳಲ್ಲಿ	ರಸ್ತೆ ಅಗಲ ಮೀಟರ್ ಗಳಲ್ಲಿ
	RI-EAST				
1	Contonment Railway Station	Miller Road	Chalukya Circle	1.25	10.00
2	ORR	Sanjay Nagar Main road	Sankey Main road	3.25	9.00
3	Sulthanpalya Main road	Vishwanath Nagenhalli	Hebbala Flyover	2.00	11.00
4	Suranjandas Road	Jeevanbhimanagara Main Road	80ft indrianagr main road	1.50	15.00
5	MV Jayaram Road	Palace Cross Road	Sankey Main road @ BDA Flyover	0.75	12.00
6	Channasandra Main road	Kasturinagar 2nd Main Road	ORR	1.50	15.00
7	ORR	Banswadi 100ft main road	Vemana Circle	1.50	20.00
8	Cunnigham road via Infantry road	Ali Askar Road/Ali Askar Cross Road	Miller road	0.75	10.00
9	Richmond road	Magrath Road	Commissionarate Road	0.80	12.00
10	Jayamahal road	Jayamahal 1st main road	Nandhidurga main road	0.80	10.00
11	Queens road	Jasmadevi road-Vasanthnagar 8th main	Palace road via Miller Road	1.30	10.00
12	BESCOM Office @ ORR	Kempegowda road	Hennur Agara junction	2.25	20.00
13	MG Road via Kamaraj road	Dickenson road	Cubbon road	2.00	15.00
14	Bhaskaran road	Ulsoor road	Dickenson road	1.50	10.00
15	1st main HBR (Veeranpalya main road)	BDA 5th Cross road	Vinayaka temple road	1.00	12.00
16	R.T Nagar Main Road	C.B.I Road	Bellary Road	0.90	15.00
17	14th Cross Road	BDA Road(Taralabalu)	R.T nagar main Road	0.50	18.00
18	Jumma Masjid Road	Commercial street	Kamaraj Road	0.50	5.50
19	Brigade Road	Church street	St.Marks Road	0.70	5.50
20	ORR	Hennur Main road 80ft	Chandrika Soap Factory @ Hennu road	1.75	15.00
21	1st Main Govindapura road	HBR 5th Cross Road	ORR @ Nagavara Flyover Upramp	1.00	15.00
22	100ft Road	HBR 80ft road	7th main @ Mukutamma temple	0.65	15.00
23	Pottery road	Lazar Road	Hennur Road	0.50	10.00
	Komala hotel Junction @ Wheeler Road		Pottery road	0.96	10.00
24	Bellary Road	Anandnagara Road	RT Nagar main Road	1.40	8.00
25	NGV	L.R .Nagara Main road	Hosur Road	1.40	5.50
26	Neatherland High Commissioner office road from Four Season to Taralabalu road	Ballary Road	Taralabalu road	1.00	6.50
27	R T Nagara Public School	RT Nagara Main Road	Dinnur Road	1.80	9.00
28	R T Nagara Traffic police station to SBI Bank	Bellary Road	R T Nagara Main road	1.50	7.00
29	RBI Colony Main Road	TVS Showroom	Punjab National Bank	1.50	6.00
30	3rd Cross Road	BDA Office	Vishweshwaraiah Park	1.75	6.80
31	Taralabalu Building Back Side	Pattels inn	R T Nagara Main Road	1.80	7.00
32	CIL layout Main Road	R T Nagara Main Road	Jaymahal Road	1.30	6.00
33	Guddadhahalli Main Road	Guddadahalli Circle	Cholnayakanahalli Circle	1.70	7.00
34	2nd main road RT Nagara	Bata Showroom	V Care	1.50	6.00
35	KEB Layout Main Road (80Feet Road)	Veternary Compound	80 Feet road	1.60	7.00
36	9th Main Road Banaswadi (Petrol Bunk)	ORR Service Road	Banaswadi Main road	1.20	10.00
37	3rd Cross HRBR layout	7th main	100 ft road	1.25	11.00
38	Mukutamma Temple Road	Banaswadi Road	100ft Road	1.20	8.00
39	9th Main Road (5th Cross)	Hennur Road	Hennur Village	1.30	9.00
40	5th Main Road HBR Layout	ORR Service Road	Agara Road	1.50	10.00
41	Philomena Hospital Road	ORR Service Road	Nagavara main road	1.00	12.00
42	Comprehensive Development of Indra Canteen (Veeranapaly Indira Canteen Road)	Veeranapalya	ORR	1.00	12.00
43	Sounders Road	St. Johns church Road	Coles road	0.60	10.00
44	Moor Road	Coles Road	Railway Track Road	0.75	10.00
45	L.R Bande Road (1st Main road)	Govindapura Railway Crossing	Shampura Village Railway Track	0.80	9.00
46	Robertson Road	Netaji Road	Wheelers Road	0.80	9.00
			Total	**59.26**	
	RI-WEST				
1	Chandra layout main road	Nagarabhavi circle	Water tank	1.05	12.00
2	12th Cross Road Mahalakshmi layout	Chord Road	6th main road Nagpura	0.60	10.50
3	8th main road Basaveshwara nagar	Basaveshwara nagar 1st main road	veerabadreshwara Theater	0.58	10.00
4	15th main road Basaveshwara nagar	Shri Guru sagar hotel	Ambedkar Bhavan	0.62	10.00
5	5th Main 2nd stage Basaweshwara Nagar, nagpura	Modi Eye Hospital	11th cross road, basaweshwara nagara	0.36	8.00
6	Veeresh Theater main road	Magadi Road	Chord Road	0.45	10.00
7	Mahalakshmi layout Entrance road	West of Chord road Metro station	Mahalakshmi layout bus stand	1.00	10.50
8	Shankar Nag Road	Rehman khan Road Junction	Lorry stand Junction	0.60	10.00
9	Kamalammanagundi Road (4th Main Mahalakshmi layout road)	West of chord road bus stand	Mahalakshmi layout	3.00	10.50
10	11th Cross Road, Mahalakshmi Layout (Shanimahatma temple road Rajajinagar)	West of chord road	14th Main Road	0.90	8.50
11	SriRam Mandir Main road	Vatal Nagaraj Road	ESI Hospital Main Road	0.75	10.50
12	50th cross, Rajajinagar	12th main Rajajinagar	10th main rajajinagar	0.45	9.00
13	2nd Main road Chamarajpet	S.V Narayanaswamy Road	9th Cross, Chamarajpete	1.00	12.00
14	4th Main road Chamarajpet	Pampa Mahakavi road	9th Cross, Chamarajpete	1.38	12.00
15	1st Cross, Chamarajpet	A V Road	5th Main road Chamarajpete	0.37	9.50
16	2nd Cross, Chamarajpet	1st Main road Chamarajpet	6th Main road Chamarajpete	0.36	9.00
17	4th Cross, Chamarajpet	1st Main road Chamarajpet	8th Main road Chamarajpet	0.36	7.50
18	5th Cross, Chamarajpet	Mysuru road Chamarajpet	9th Main road Chamarajpete	0.56	8.50
19	6th Cross, Chamarajpet	Mysuru road Chamarajpet	10th Main road Chamarajpete	0.53	9.50
20	7th Cross, Chamarajpet	Mysuru road Chamarajpet	11th Main road Chamarajpete	0.50	9.50
21	8th Cross, Chamarajpet	Mysuru road Chamarajpet	12th Main road Chamarajpete	0.56	8.00
22	Sirsi road, Chamarajpet	Mysuru circle	4th Cross, Chamarajpete	0.65	12.00
23	15th Cross,Malleswaram	Sampige Road	11th main Malleswaram	1.00	8.00
24	13th Cross,Malleswaram	Margosa road	11th main Malleswaram	0.75	8.00
25	8th Cross Malleswaram	Malleswaram, Link road	Sampige Road	0.70	7.00
26	4th Main Malleswaram	MKK road	18 th cross	1.45	7.00
27	9th Main Sadashivanagara	9th cross	bellary road	0.80	10.00
28	10th Main Road Sadashivangar	jeevaraj alva road	bellary road	0.90	8.00
29	Sarswathipuram main road	Panchamukhi Ganesha temple	Lorry stand	1.5	10.00
30	8th main road	Panchamukhi Ganesha temple	Mahalakshmi layout bus stand	0.45	10.00
31	6th main road	Geleyarabalaga circle	Nagapura main road (11th cross)	0.80	10.00
32	14th main road	Shankarmutt circle	Saraswathipura main road	1.25	10.00
33	OTC road	Avenue road	Balepete circle	1.8	6.00
34	Police station road	BVK Iyengar road	Belimata road	0.80	6.00
35	Gopalpura main road	Magadi main road	6th block Rajajinagara	0.60	6.00
36	3rd cross Basaveshwaranagar	1st main Basaveshwaranagara	Nethaji park	0.70	10.00
37	10th A main road Rajajinagara	Vatal Nagaraj road	Dr.Rajkumar road (Via 67th cross road)	0.60	6.00
38	6th main road Rajajinagara	Vatal Nagaraj road	Sadbhavana circle	0.50	9.00
39	Chord road	Chord road	Varrier bakery	1.50	6.00
40	17th main road Rajajinagara	Deepak sahakari bank	Police station	1.00	6.00
41	3rd main road Rajajinagara	3rd main road Prakashnagara	TVS showroom till 88 bus stop	1.00	6.00
			Total	**34.73**	
	RI-SOUTH				
1	6th Main Road Jayanagara	Marenahalli	30th cross Road	2.00	8.00
2	10th Main Road	Marenahalli	33rd Cross Road	1.50	12.50
3	27th cross Road (Padmanabhanagara)	30th cross Road	9th Main	1.00	12.50
4	30th Cross Road	30th Main	22nd Main	1.50	16.50
5	Mahila Vidyalaya Road	Vanivilas Road	Public Square Road	0.50	7.50
6	16th Main Road	Marenahalli	29th Main Road	2.00	16.50
7	St. jonhs Cross Road	Hosur Road	Tavarekere Road	0.60	12.50
8	Nala road	JC Road	K H Road	2.00	8.00
9	DVG Road	Subram Chetty Road	Vanivilas Road	2.00	8.00
10	6th Main Road Jayanagara	Marenahalli	30th cross Road	2.00	7.50
11	10th Main Road	Marenahalli	33rd Cross Road	1.50	15.00
12	27th cross Road (Padmanabhanagara)	30th cross Road	9th Main	1.00	12.00
13	30th Cross Road	30th Main	22nd Main	1.50	12.00
14	Mahila Vidyalaya Road	Vanivilas Road	Public Square Road	0.50	7.00
15	16th Main Road	Marenahalli	29th Main Road	2.00	8.00
16	St. jonhs Cross Road	Hosur Road	Tavarekere Road	0.60	10.00
17	Nala road	JC Road	K H Road	2.00	4.00
18	DVG Road	Subram Chetty Road	Vanivilas Road	2.00	6.00
			Total	**26.20**	
	RI-RAJARAJESHWARINAGARA				
1	Komaghatta Road	Kengeri ORR	Double Road	5.00	10.00
2	Bangalore University Road	Old ORR	Mysore Road	2.50	20.00
3	Andarahalli main road	Magadi road	Ganga International school	8.50	13.00
4	Peenya Police station Road (Press road)	Tumkur Road	Inner Ring Road	2.00	10.00
5	ORR	Nayandanahalli junction	Hoskerehalli Junction	1.50	9.00
6	Modern bread factory road	ORR	Tumkur road	2.00	12.00
7	ESI road	Inner ring road	Tumkur road	1.50	14.00
8	Sonal Garments Road	ORR	Sonal Garments	2.00	15.00
9	BEL Road	ORR	Gangamma circle	2.00	13.00
10	Peenya Andrahalli Main Road	Andrahalli Main Road	Upto Dasarahalli Limit	3.00	13.00
11	Ullal RTO Road	Muddinapalya Main road	BDA Road	2.00	8.00
12	Javaregowdana doddi road	Kenchenahalli main road	Kerekodi road	2.50	11.00
13	Kengeri 6th main road	ORR	Belaku Hospital Junction	2.50	10.00
14	Amma Ashrama Road	ORR	Ullal Bedarahalli Road	1.50	10.00
15	Tunganagara main road	Magadi main road	Andrahalli main road	1.30	14.00
16	Ullal -Lake Club road	Muddinapalya Main road	Ullal Lake Double Road	1.00	15.00
17	Ullal Upanagara main road	Ullal Lake Double road	Nice road	1.00	8.00
18	Shivanapalya main road	NPS Circle	Old ORR	1.00	8.00
19	Hosahalli main road	Kempegowda circle D group layout	Magadi road	1.50	10.00
20	Doddabele road	Mysore road	Doddabele road	1.00	8.00
			Total	**45.30**	
	RI-KR PURAM				
1	Elu,s Road(Puravankara Palm Beach road)	Doddagubbi main road	SWD near PNR Farms	1.10	24.00
2	Kristu Jayanthi College Road	Hennur-Bagalur Main Road	Hanumanthe Gowda Circle K Narayanpura Main Road	1.70	15.00
3	Kalkere NP School road	Old Flour mill road junction	Hormavu Main road	0.60	24.00
4	Diesel Shed Road	Old Madras Road (NH-4)	Diesel loco shed	0.60	12.00
5	Kamadhenu layout main road	ITPL main Road	ORR Service Road	0.62	15.00
6	Fire Station Road (MLR Convention)	ITPL main Road	MLR Convention	0.60	18.00
7	Kempegowda underpass road to FCI Godown via FCI underpass	Kempegowda underpass road 3rd cross junction	Platform road junction, Vijinapura	1.50	15.00
8	Jyothipura Main road	Old Madras Road (NH-4)	FCI Underpass	1.50	15.00
9	NRI Layout main road	T.C.Palya main Road	Mandakini Street	1.40	18.00
10	HT line Road (Mahadevapura)	ORR Service Road	Gurukul High school (DRDO)	0.50	18.00
			Total	**10.12**	
	RI-DASARAHALLI				
1	Lakshmipura Main road	Subratho Mukherjee	Abbigere lake	3.50	12.00
2	AGB Layout Main Road	Hesaraghatta Main Road	R.R College and 10th cross	1.20	14.00
3	MEI Layout Main Road	Hesaraghatta Main Road	Sidedahalli	1.00	13.00
4	Medarahalli Main Road	Medarahalli	Chikkabanavara	3.10	10.00
5	HMT Layout Main Road	Nelagadaranahalli Main Road	Nagasandra Main road	1.30	12.00
6	Nagasandra Main Road	Nelagadaranahalli Main Road	Nagasandra Rockline Studio	1.00	10.50
7	Tigalarapalya Main road	Brudavana bus stop (Lake road)	Scott's Garments Ward boundary	2.20	13.00
			Total	**13.30**	
	RI-MAHADEVAPURA				
1	Sadaramangala Main Road	Kodigehalli Main Road	Sadaramangala Village	1.00	24.00
2	24 Mtr CDP Road	Panattur Balagere Road	Sarajapura Road Via Chikkabellandur	5.50	24.00
3	30 Mtr CDP Road	Gear School Road	Krupanidi College Via Chikkabellandur	4.00	30.00
4	30 Mtr RMP road (BWSSB Treatment Plant Road)	Old Airport Road (Kundalahalli Gate)	Sarjapura Road Via Gunjur Palya, Chikkabellandur)	6.60	30.00
5	PNC College Road	Belthur Main Road	Kumbena Agrahara (Mahaveer Willet Apartment)	1.10	18.00
6	30 Mtr RMP road	Panathur-Balagere Road (Panathur)	PRR at Gattahalli Via Bhoganahalli, Doddakannalli, Chikkakannahalli,	8.50	30.00
7	24 Mtr RMP road	Hoodi Sadaramanagala Road (Railway Parallel Road)	Medahalli Via Kurudusonnenahalli	2.50	24.00
8	Varanasi Main Road	T C Palya Main Road, Anneppa Circle	Maragondanahalli main road	2.00	18.00
9	Garudacharpalya Link Road	Graphite India Main Road	Garudacharpalya	0.85	18.00
10	Hennur Byrathi Main Road	Gubbi Circle	Byrathi Bilishivale Road	0.85	18.00
11	Blessing Garden Road	Hennuru Bagaluru Road	Byrathi Bilishivale Road	1.10	24.00
12	Parijatha Road	Siddapura Nallurahalli Road	Graphite India Road via BEML Layout. (Kundalahalli)	1.80	18.00
13	RMP 45 mtr Road via Bhoganahalli, Panathur, Gunjur,	ORR Kadubisnahalli (Gear School Road)	PRR	5.50	45.00
14	Yamaluru Village Road	Yamaluru Road	Kempapura Road	0.55	9.00
15	Bhoganahalli Main Road	Gear School Road	Panathur Road	2.00	10.00
16	RMZ Road	ORR	Choulukere Road	1.30	9.00
17	Devarabeeasanalli Village Road	ORR	Gear School Road	1.35	10.00
18	New Temple Road	Brigade IRV	Siddapura Nallurahalli Road	0.95	9.00
19	Balagere Main Road	Panathur Balagere Road	Gunjur Palya Road (Eshavara temple Junction)	2.20	18.00
20	Vibgyor School Road	Old Airport Road	BWSSB CDP Road	2.30	24.00
21	KC Valley Road	FCI Back Side Road (Railway Track)	Kaithota Road	2.80	9.00
22	Madhuranagara Road	Varthur Gunjur Main Road	BBMP Limit	2.10	10.00
23	Janatha Colony	Gear School Road	Caramelram Road ROB	0.90	18.00
24	Gunjur Club Road	Gunjur Palya	Carmelaram Road	0.40	18.00
			Total	**58.15**	
	RI YELAHANKA				
1	Vidyaranyapura main Road	Nanjappa Circle	Major Sandeep Unni Krishnan Road at Devi circle via Vidyaranyapura last bus stop	3.00	15.00
2	Ananthapura main road	doddaballapura road @ Ramanashree california	BBMP Limit at Nagarjuna Degree College	1.85	18.00
3	Attur main road	Sandeep unnikrishnan road @ shanimahatma temple	Ananthapura main road @ Ooty convent school	2.02	9.14
4	Hesaragatta Main Road	Muhammed Sahib Palya Circle	BBMP limits @ SWD (Nayara petrol bunk) via sambram college	2.20	18.00
5	Bagalur Double road	KIA @ Bagalur Gate	BBMP Limit	3.20	24.00
6	Dasarahalli Main Road	KIA Road @ Godrej Apartment	JNC Circle via Bhuvaneshwarinagar, dasarahalli circle	3.30	12.00
7	Amruthahalli Main road	KIA Road @ Byatarayanapura Signal	JNC Circle via Sobha Wind Fall Appartement	2.20	14.00
8	Amruthanagar main road	Dasarahalli main road	Amruthahalli main road	1.20	10.00
9	Bhadrappa-Tatanagar	ORR @ Bhadrappa layout	kodigehalli circle @ Ganesha temple	1.52	15.00
10	Thindlu 8th main road	GKVK ROAD @ Thindlu PHC	Vidyaranyapura lake via Vidyaranyapura post office	1.53	9.14
11	Rajiv Gandhi Nagar Railway parallel road	Railway under bridge	Virupakshapura Main Road via Kodigehalli Railway station	1.45	12.00
12	Arkavati layout Railway Parllel Road	Railway level crossing @ Shivaramakarantha RUB	Thanisandra main road @ Gundu Muneshwara Temple	1.85	12.00
13	Kogilu Kattigenahalli main road	Kogilu village @ GO Gas station	Palanahalli-Kattigenahalli main road via Kogilu Lake	2.00	9.14
14	Ambabhavani temple road	Hesaragatte Main Road @Sambram college arch	BBMP limit @ shashank apartement	1.50	9.14
15	Major Akshay Girish Kumar Road(13th A Main road)	2nd Cross road @ Ganesha Theatre	Allalsandra Village @ Janapriya Appartement	1.80	24.00
16	Yelahanka railway station Road	NES Junction @ Mini Vidhana Soudha	Kempegowda Circle via Old Town BMTC Bus stop & Govt Hospital	0.85	14.00
17	407 SFS 1st Main Road	sandeep unnikrishnan road @ veer savarkar flyover	Doddaballapura road @ Pavani Appartement	1.30	14.00
18	Hindhu Samaja Road	Sandeep Unnikrishnan road @ Purva Venezia Appartement	407 Main Road @ Vishal Mart via Neha Prakash Hospital & shiva mandira	1.90	14.00
19	15th A Cross Road of Yelahanka New town	Chikkabommasandra circle @ kanti sweets	BWSSB Treatment Plant @ Major Akshay Girish Kumar Road (13th main road)	0.85	14.00
20	Attur layout road	Attur main road @ OM Shakthi Temple	BBMP limit @ Veerasagara lake	0.90	9.14
21	Doddabettahalli-Veerasagara main road	Sandeep Unnikrishnan road @ tawheed masjid	BBMP limit @ Gandhi layout	1.30	12.00
22	Devi Ngar Main Road	Vyasa school @ railway gate	ORR via RMV clusters Apartment	1.60	10.00
23	Railway Parallel Road Via Sriramapura RUB	Jakkur Village	Thanisandra main road	3.60	12.00
24	IECHS and Gurudarshana layout Main Road	8th main road (Post office road)	Vidyaranyapura Main road at Sri Dwaraka convention Hall	0.75	10.00
25	BEL layout 2nd cross road	GKVK Main road	Sri Durga parameshwari Temple.	0.65	18.00
26	Nagawar Sub Register Office Road	Nagavara main road	Outer ring road	0.80	11.00
27	Amco layout 60 feet main road	Bhadrappa layout main road	Military farm compound at Ganesha Temple	0.65	18.00
28	Canar Bank lyt Connecting Road	Sahakaranagara RUB	Canarabank layout	1.00	12.00
29	Yogesh nagar main road	Outer ring road at Venkatam café	Kempapura main road	0.65	12.00
30	Thirumenahalli main road	Thanisandra Main Road at K.N.S college	Agrahara village	1.75	10.00
31	Mariyannanpalya main road	Mariyannanpalya main road	Dasaralli main road via Coffee board layout park	1.20	10.00
			Total	**50.37**	
	RI BOMMANAHALLI				
1	Arekere Double Road (BDA 80ft Road)	Bannerghatta Main Road	Ring Road (Sir. M. Vishweshwaraiah Road)	1.50	18.00
2	Sarjapur Road	Jakkasandra junction	Agara junction	1.00	14.00
3	Hulimavu Road	Bannerghatta Road	Ring Road (Sir. M. Vishweshwaraiah Road)	1.00	10.00
4	7th Cross Road HSR layout	Outer ring road service road	31st main Road	1.30	12.00
5	19th Main Road HSR layout	Outer ring road service road	Mangammanapalya Road	2.00	12.00
6	22nd Road HSR Layout	14th Main Road	27th main Road	1.50	12.00
7	15th cross Road HSR layout	14th Main Road	19th Main Road	0.70	12.00
8	15th cross Road HSR layout	5th Main Road	13th Cross Road	1.00	12.00
9	Virat Nagar Main Road	Madivala Lake Road	Begur Road	1.30	8.00
10	Madivala Lake Road	BTM lake road	Outer Service Road	0.40	10.00
11	Ranka Colony Road	Bannerghatta Road	29th Main Road	1.00	15.00
12	6th Cross Road	Bannerghatta Road	29th Main Road	0.25	8.00
13	7th Cross Road	Bannerghatta Road	29th Main Road	0.25	8.00
14	60ft Road Singasandra	Kalanikethan School Road	Singasandra road	0.80	12.00
15	Doddanagamangala Road	Kempegowda Statue	Ward Boundary (Bren Trillium)	1.10	12.00
16	ParappanaAgrahara Road	Hosa Road	Kudlu Village	2.20	8.00
17	Gubbalala Village Road	Kanakapura Road	Gubbalala village (Anjaneya temple)	1.00	8.00
18	BWSSB Pipeline Road	Gubbalala Village Road	Vasanthpura Main Road	1.50	8.00
19	BDA 60 ft Road	Kanakapura Road A2B Junction	Tippu Circle	2.30	18.00
20	Paduka mandir road	Uttrahalli main road	Gubbalala Main Road (Subramanya lake)	2.70	8.00
21	BDA 80ft Road	Kothnur Main Road (RV College)	Kembathahalli Main Road	2.20	14.00
22	Doddakammanahalli Road	Bannerghatta Road	Doddakammanahalli Anjaneya Temple	2.00	10.00
23	Happy valley Road	Uttrahalli main road (Anaga Grand)	Paduka Mandir Road	1.50	12.00
24	Singasandra road	Hosur Service road	Parappana Agrahara Main Road	0.80	8.00
25	Hulimavu Fire Station Road	Doddakammanahalli Road	Hulimavu Lake Road	0.63	14.00
26	Ayyappa Temple Road	IIMB Main Road	Bilekhahalli Main Road	0.60	12.00
27	Tippasandra Road	Kanakapura Road	BDA 60ft Road	1.30	8.00
28	Basapura Road	Hosur Road	Ward Boundary	2.50	9.00
29	24th Main Road JP Nagar	Puttenahalli Under Pass	Puttenahalli Lake Road	1.80	12.00
30	AECS B BLOCK 60ft Road	Aralimara Junction	Hosur Service Road	1.80	12.00
			Total	**39.93**	
			Grand Total	**337.36**	

ಈ ಅಧಿಸೂಚನೆಯನ್ನು ಮಾನ್ಯ ಆಡಳಿತಾಧಿಕಾರಿಗಳು, ಬಿಬಿಎಂಪಿ ರ ನಿರ್ಣಯದ ಸಂಖ್ಯೆ. 174/2024-25, ದಿನಾಂಕ: 30.10.2024 ರ ಅನುಮೋದನೆಯ ಮೇರೆಗೆ ಹೊರಡಿಸಲಾಗಿದೆ.

ಸಹಿ/-
ಮುಖ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬಸವನಗುಡಿಯಲ್ಲಿ ಇದೇ 25, 26ರಂದು ಆಯೋಜನೆ • ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ಸಭೆ

ಕಡಲೆಕಾಯಿ ಪರಿಷೆ: ವ್ಯಾಪಾರಿಗಳಿಗೆ ಸುಂಕ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿಯ ಸುಂಕೇನಹಳ್ಳಿಯಲ್ಲಿ ಇದೇ ತಿಂಗಳ ಕೊನೆಯವಾರ ಸೋಮವಾರ ಮತ್ತು ಮಂಗಳವಾರ ನಡೆಯುವ ಐತಿಹಾಸಿಕ ಕಡಲೆಕಾಯಿ ಪರಿಷೆಯಲ್ಲಿ ವ್ಯಾಪಾರಿಗಳಿಗೆ ಸುಂಕ ಹಾಗೂ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.

ಇದೇ ಮೊದಲ ಬಾರಿಗೆ ಸುಂಕ ವಸೂಲಿಗೆ ಟೆಂಡರ್ ಇಲ್ಲದೆ ಹಾಗೂ ವ್ಯಾಪಾರಿಗಳಿಗೆ ಸುಂಕವಿಲ್ಲದೆ ಕಡಲೆಕಾಯಿ ಪರಿಷೆ ನಡೆಯಲಿದೆ.

ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಧಾರ್ಮಿಕ ದತ್ತಿ ಪರಿಷತ್ ಸದಸ್ಯರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಕಡಲೆಕಾಯಿ ಪರಿಷೆ ಸಂದರ್ಭದಲ್ಲಿ ಬಸವನಗುಡಿ ರಸ್ತೆ ಬದಿಯಲ್ಲಿ ವ್ಯಾಪಾರ ಮಾಡಲು ಸುಂಕ ವಸೂಲಿ ಮಾಡಲಾಗುತ್ತಿತ್ತು. ಇದಕ್ಕಾಗಿ ಟೆಂಡರ್ ಕರೆದು ಅನುಮತಿ ನೀಡಲಾಗುತ್ತಿತ್ತು. ಟೆಂಡರ್ ಪಡೆದವರು ವ್ಯಾಪಾರಿಗಳಿಂದ ಬಲವಂತವಾಗಿ ಹೆಚ್ಚು ಸುಂಕವನ್ನು ವಸೂಲಿ ಮಾಡುತ್ತಿದ್ದಾರೆ ಎಂದು ಕಳೆದ ಕೆಲವು ವರ್ಷಗಳಿಂದ ದೂರುಗಳು ಬರುತ್ತಿದ್ದವು. ಆದ್ದರಿಂದ, ಈ ವರ್ಷದಿಂದ ಸುಂಕ ವಸೂಲಿಗೆ ಟೆಂಡರ್ ಕೈಬಿಡಲು ಹಾಗೂ ವ್ಯಾಪಾರಸ್ಥರಿಂದ ಸುಂಕ ವಸೂಲಿ ಮಾಡದಂತೆ ನಿರ್ಧರಿಸಲಾಗಿದೆ. ಒಂದು ವೇಳೆ ಯಾರಾದರೂ ಅನಧಿಕೃತವಾಗಿ ಸುಂಕ ವಸೂಲಿ ಮಾಡುವುದು ಕಂಡಬಂದಲ್ಲಿ ಪೊಲೀಸ್ ಇಲಾಖೆಯವರು ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಸಭೆಯಲ್ಲಿ ಸೂಚಿಸಲಾಗಿದೆ. ಬಿಬಿಎಂಪಿ, ಪೊಲೀಸ್ ಇಲಾಖೆ ಹಾಗೂ ದೊಡ್ಡ ಗಣಪತಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಇದರ ಮೇಲ್ವಿಚಾರಣೆ ನಡೆಸಲೂ ಸೂಚಿಸಲಾಗಿದೆ.

ಮುಖ್ಯಾಂಶಗಳು

- ಸುಂಕ ವಸೂಲಿ ಕಂಡರೆ ಕ್ರಮ
- ಪ್ಲಾಸ್ಟಿಕ್ ಚೀಲಗಳ ನಿಷೇಧ
- ವಿವಿಧ ಇಲಾಖೆಗಳಿಗೆ ಜವಾಬ್ದಾರಿ

ರಸ್ತೆಯಲ್ಲಿ ಬ್ಯಾರಿಕೇಡ್, ಸಂಚಾರ ನಿಯಂತ್ರಣ, ನಿರಂತರ ವಿದ್ಯುತ್, ಕುಡಿಯುವ ನೀರಿನ ವ್ಯವಸ್ಥೆ, ದೇವಾಲಯದ ಒಳ ಮತ್ತು ಹೊರಭಾಗದಲ್ಲಿ ವಿದ್ಯುತ್ ದೀಪಾಲಂಕಾರ, ಸಾರ್ವಜನಿಕ ಶೌಚಾಲಯ, ಬೀದಿ ದೀಪಗಳ ಅಳವಡಿಕೆ, ಸಿಸಿ ಟಿವಿ ಕ್ಯಾಮೆರಾ ಅಳವಡಿಕೆ, ವಾಹನಗಳ ನಿಲುಗಡೆ ನಿಷೇಧ, ಅಗ್ನಿ ಶಾಮಕ ವಾಹನ ನಿಯೋಜನೆ, ಮಾರ್ಷಲ್‌ಗಳ ನಿಯೋಜನೆಗಳಿಸಲು ಬಿಬಿಎಂಪಿ, ಪೊಲೀಸ್ ಇಲಾಖೆ, ಎನ್‌ಜಿಒ ಮತ್ತು ಧಾರ್ಮಿಕ ದತ್ತಿ ಪರಿಷತ್, ದೊಡ್ಡ ಗಣಪತಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಗೆ ಜವಾಬ್ದಾರಿ ವಹಿಸಲಾಯಿತು.

ಪ್ಲಾಸ್ಟಿಕ್ ನಿಷೇಧ: ಕಡಲೆಕಾಯಿ ಪರಿಷೆಯಲ್ಲಿ ಎನ್‌ಜಿಒಗಳ ಸಹಕಾರೊಂದಿಗೆ ಪ್ಲಾಸ್ಟಿಕ್ ಚೀಲಗಳನ್ನು ಬಳಸದಂತೆ 'ಪರಿಷೆಗೆ ಬನ್ನಿ ಕೈಚೀಲ ತನ್ನಿ' ಎಂಬ ಘೋಷಣೆ ಮೂಲಕ ವ್ಯಾಪಾರಿಗಳು ಹಾಗೂ ನಾಗರಿಕರಲ್ಲಿ ಅರಿವು ಮೂಡಿಸಬೇಕು. ಪ್ಲಾಸ್ಟಿಕ್ ಚೀಲಗಳ ಬದಲಿಗೆ ಬಟ್ಟೆ ಬ್ಯಾಗ್‌ಗಳನ್ನು ಬಳಸುವಂತೆ ಸೂಚಿಸಬೇಕು. ಪ್ಲಾಸ್ಟಿಕ್ ಚೀಲಗಳನ್ನು ನಿಷೇಧಿಸಲು ಕ್ರಮ ಕೈಗೊಳ್ಳಬೇಕು ಎಂದು ಸಭೆಯಲ್ಲಿ ಅಧಿಕಾರಿಗಳಿಗೆ ಸೂಚಿಸಲಾಯಿತು.

'ರೈತರಿಂದ ಜನರಿಗೋಸ್ಕರ ನಡೆಯುವ ಐತಿಹಾಸಿಕ ಕಡಲೆಕಾಯಿ ಪರಿಷೆಯಲ್ಲಿ ಇದೇ ಮೊದಲನೆಯ ಬಾರಿಗೆ ಟೆಂಡರ್ ಶುಲ್ಕ, ಟ್ಯಾಕ್ಸ್ ಇಲ್ಲದೆ ಪರಿಷೆ ನಡೆಯಲಿದೆ' ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

19ರಿಂದ ಬೆಂಗಳೂರು ಟೆಕ್ ಶೃಂಗ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ಇದೇ 19ರಿಂದ 21ರವರೆಗೆ 27ನೇ ಬೆಂಗಳೂರು ಟೆಕ್ ಶೃಂಗ- 'ಬಿಟಿಎಸ್-2024' ನಡೆಯಲಿದೆ' ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

'ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ (ಎಸ್‌ಟಿಪಿಐ) ಸಹಭಾಗಿತ್ವದಲ್ಲಿ ಎಲೆಕ್ಟ್ರಾನಿಕ್ಸ್, ಐಟಿ ಮತ್ತು ಬಿಟಿ ಇಲಾಖೆಯು ಈ ಶೃಂಗವನ್ನು ಆಯೋಜಿಸಿದೆ. 'ಅನ್‌ಬೌಂಡ್' ಎಂಬ ವಿಷಯದಡಿ ಸ್ಟಾರ್ಟ್‌ಅಪ್‌ಗಳ ಸರ್ವತೋಮುಖ ಅಭಿವೃದ್ಧಿಯನ್ನು ಗುರಿಯಾಗಿಸಿ ಜಾಗತಿಕ ಪಾಲುದಾರಿಕೆಯ ನಿರೀಕ್ಷೆಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶೃಂಗವನ್ನು ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜರ್ಮನಿಯ ಆರ್ಥಿಕ ವ್ಯವಹಾರ ಮತ್ತು ಫೆಡರಲ್ ಸಚಿವಾಲಯದ ಸ್ಟಾರ್ಟ್‌ಅಪ್‌ಗಳ ಆಯುಕ್ತ ಅನ್ನಾ ಕ್ರಿಸ್ಮನ್ ಮತ್ತು ಫ್ರಾನ್ಸ್‌ನ ಆರ್ಥಿಕ ಅಭಿವೃದ್ಧಿಯ ರಿಕವರಿ ವಿಭಾಗದ ಉಪಾಧ್ಯಕ್ಷೆ ಅಲೆಕ್ಸಾಂಡ್ರಾ ಡಬ್ಲಾಂಚೆ, ಟೆಕ್ಸಾಸ್ ಇನ್ಸ್ಟ್ರುಮೆಂಟ್ಸ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸಂತೋಷ್ ಕುಮಾರ್, ಸ್ವಿಗ್ಗಿ ಸಂಸ್ಥೆಯ ಸಹ-ಸ್ಥಾಪಕರು ಮತ್ತು ಸಿಇಒ ಶ್ರೀಹರ್ಷ ಮಜೆಟಿ, ಬಯೋಕಾನ್‌ನ ಕಾರ್ಯಕಾರಿ ಅಧ್ಯಕ್ಷರು ಮತ್ತು ಸಂಸ್ಥಾಪಕರಾದ ಕಿರಣ್ ಮಜುಂದಾರ್-ಶಾ, ಕ್ರಿಸ್ ಗೋಪಾಲಕೃಷ್ಣನ್ ಮುಂತಾದವರು ಭಾಗವಹಿಸಲಿದ್ದಾರೆ' ಎಂದು ಅವರು ವಿವರಿಸಿದರು.

'ಈ ಶೃಂಗದಲ್ಲಿ ಆಸ್ಟ್ರೇಲಿಯಾ, ಯುಕೆ, ಫ್ರಾನ್ಸ್, ಆಸ್ಟ್ರಿಯಾ, ಡೆನ್ಮಾರ್ಕ್, ಫಿನ್ಲೆಂಡ್, ಪೋಲೆಂಡ್, ಜಪಾನ್, ಜರ್ಮನಿ, ಸ್ವಿಟ್ಜರ್ಲೆಂಡ್, ಇಸ್ರೇಲ್ ಮತ್ತು ಯುಎಸ್‌ಎ ಸೇರಿದಂತೆ 15ಕ್ಕೂ ಹೆಚ್ಚು ದೇಶಗಳ ಉನ್ನತ ಮಟ್ಟದ ನಿಯೋಗಗಳು ಭಾಗವಹಿಸಲಿವೆ' ಎಂದರು.

ಹೆಚ್ಚಿನ ವಿವರಗಳಿಗೆ www.bengalurutechsummit.com ಕ್ಲಿಕ್ಕಿಸಬಹುದು.

ಅಪಘಾತ: ಬಾಲ ನಟನಿಗೆ ಗಾಯ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಪಾಲಹಳ್ಳಿ ಮತ್ತು ಹೊಸಹಳ್ಳಿ ನಡುವೆ ಬಸ್ ಮತ್ತು ಕಾರಿನ ನಡುವೆ ಡಿಕ್ಕಿ ಸಂಭವಿಸಿ ಬಾಲ ನಟ ರೋಹಿತ್ (14) ಸೇರಿ ಐದು ಮಂದಿ ತೀವ್ರ ಗಾಯಗೊಂಡಿದ್ದಾರೆ.

ಪಾಂಡವಪುರದ ರೋಹಿತ್ ಅವರ 'ಒಂದಲ್ಲಾ ಎರಡಲ್ಲಾ' ಚಿತ್ರದ ನಟನೆಗಾಗಿ ರಾಷ್ಟ್ರ ಪ್ರಶಸ್ತಿ ಬಂದಿದೆ. 'ಕಾಟೇರ' ಚಲನಚಿತ್ರದಲ್ಲೂ ನಟಿಸಿದ್ದಾರೆ. ಅವರ ತಾಯಿ ಛಾಯಾಲಕ್ಷ್ಮಿ ಅವರ ಒಂದು ಕೈ ಮತ್ತು ಒಂದು ಕಾಲು ಮುರಿದಿದೆ. ಇದೇ ಕಾರಿನಲ್ಲಿದ್ದ ರೋಹಿತ್ ಸ್ನೇಹಿತ ಯಶಸ್, ಆರಾಧನಾ ಕಾಲೇಜಿನ ಉಪನ್ಯಾಸಕರಾದ ಕೇಶವ್ ಮತ್ತು ಶ್ರೀಕಾಂತ್ ಗಾಯಗೊಂಡಿದ್ದಾರೆ. ಶ್ರೀಕಾಂತ್ ಕಾರು ಚಲಾಯಿಸುತ್ತಿದ್ದರು ಎಂದು ತಿಳಿದುಬಂದಿದೆ.

ಗಾಯಗೊಂಡವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ತಾಲ್ಲೂಕಿನ ಹೊಸಹಳ್ಳಿ ಬಳಿಯ ಆರಾಧನಾ ಕಾಲೇಜಿನಲ್ಲಿ ಶನಿವಾರ ಸಂಜೆ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ರೋಹಿತ್, ಅವರ ತಾಯಿ ಮತ್ತು ಸ್ನೇಹಿತರನ್ನು ಕಾಲೇಜಿನ ಮುಖ್ಯಸ್ಥ ಯೋಗಣ್ಣ ಅವರ ಕಾರಿನಲ್ಲಿ ಪಾಂಡವಪುರದಿಂದ ಕರೆತರುವಾಗ ಈ ಅವಘಡ ಸಂಭವಿಸಿದೆ.

ವಾಜರಹಳ್ಳಿಯಲ್ಲಿ ಅನಧಿಕೃತ ಕಟ್ಟಡವನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು

ನಕ್ಷೆ ಉಲ್ಲಂಘನೆ: 2 ಅಂತಸ್ತು ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿನಗರ ವಲಯದ ವಾಜರಹಳ್ಳಿಯಲ್ಲಿ ನಕ್ಷೆ ಮಂಜೂರಾತಿಗಿಂತ ಹೆಚ್ಚುವರಿಯಾಗಿ ಅನಧಿಕೃತವಾಗಿ ನಿರ್ಮಿಸಿದ ಕಟ್ಟಡದ ಎರಡು ಅಂತಸ್ತುಗಳ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಸಿಬ್ಬಂದಿ ಶನಿವಾರ ಆರಂಭಿಸಿದ್ದಾರೆ.

ವಾಜರಹಳ್ಳಿಯಲ್ಲಿ ಸ್ವತ್ತಿನ ಸಂಖ್ಯೆ 271ರಲ್ಲಿ ಮಾಲೀಕರಾದ ಮದನ್ ದೇವಾಸಿ ಬಿ ಮತ್ತು ಮಹೇಂದ್ರ ದೇವಾಸಿ ಅವರು 30 x 40 ಅಡಿ ನಿವೇಶನದಲ್ಲಿ ಪಾಲಿಕೆ ಮಂಜೂರು ಮಾಡಿರುವ ನಕ್ಷೆಗೆ ವಿರುದ್ಧವಾಗಿ ಮೂರು ಮತ್ತು ನಾಲ್ಕನೇ ಅಂತಸ್ತನ್ನು ನಿರ್ಮಾಣ ಮಾಡುತ್ತಿದ್ದಾರೆ. ಅದರ ತೆರವು ಕಾರ್ಯವನ್ನು ಆರಂಭಿಸಲಾಗಿದೆ ಎಂದು ವಲಯ ಆಯುಕ್ತರಾದ ಬಿ.ಸಿ ಸತೀಶ್ ತಿಳಿಸಿದ್ದಾರೆ.

ನಾಲ್ಕು ಬಾರಿ ನೋಟಿಸ್ ಜಾರಿ ಮಾಡಿದರೂ ಮಾಲೀಕರು, ಅನಧಿಕೃತವಾಗಿ ನಿರ್ಮಿಸಿದ್ದ ಕಟ್ಟಡದ ಭಾಗಗಳನ್ನು ತೆರವುಗೊಳಿಸಿರಲಿಲ್ಲ. ಹೀಗಾಗಿ ಬಿಬಿಂಪಿ ವತಿಯಿಂದಲೇ ತೆರವು ಕಾರ್ಯ ನಡೆಯುತ್ತಿದೆ. ಈ ಕಾರ್ಯಾಚರಣೆ ಪೂರ್ಣಗೊಂಡ ಬಳಿಕ ತೆರವುಗೊಳಿಸಲು ತಗುಲಿದ ವೆಚ್ಚವನ್ನು ಕಟ್ಟಡ ಮಾಲೀಕರಿಂದ ವಸೂಲಿ ಮಾಡಲಾಗುವುದು ಎಂದು ಹೇಳಿದ್ದಾರೆ.

'ವೀರಲೋಕ' ಪುಸ್ತಕ ಸಂತೆಗೆ ಎರಡನೆ ದಿನ ಉತ್ತಮ ಪ್ರತಿಕ್ರಿಯೆ

ಮಳೆ ನಡುವೆಯೂ ಪುಸ್ತಕ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಲೋಕ ಪ್ರಕಾಶನವು ಜಯನಗರದ ಶಾಲಿನಿ ಮೈದಾನದಲ್ಲಿ ಹಮ್ಮಿಕೊಂಡಿರುವ 'ವೀರಲೋಕ ಪುಸ್ತಕ ಸಂತೆ'ಗೆ ಎರಡನೇ ದಿನವಾದ ಶನಿವಾರ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಸಂಜೆ ಮಳೆಯ ನಡುವೆಯೂ ಜನರು ಪುಸ್ತಕ ಖರೀದಿಸಿ ಸಂಭ್ರಮಿಸಿದರು.

ಬೆಳಿಗ್ಗೆಯಿಂದಲೇ ನಗರದ ವಿವಿಧೆಡೆಯಿಂದ ಬಂದಿದ್ದ ಜನರು, ವಿವಿಧ ಪುಸ್ತಕ ಮಳಿಗೆಗಳಿಗೆ ಭೇಟಿ ನೀಡಿ, ತಮ್ಮ ನೆಚ್ಚಿನ ಲೇಖಕರ ಪುಸ್ತಕ ಗಳನ್ನು ರಿಯಾಯಿತಿ ದರದಲ್ಲಿ ಖರೀದಿಸಿದರು. ಮಧ್ಯಾಹ್ನದ ಬಳಿಕ ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸಂತೆಗೆ ಬಂದು, ಅಲ್ಲಿದ್ದ ವಿವಿಧ ತಿನಿಸುಗಳನ್ನೂ ಸವಿದರು. ಸಂಜೆಯಾಗುತ್ತಿದ್ದಂತೆ ಸಾಹಿತ್ಯಾಸಕ್ತರ ದಂಡೇ ಬಂದಿತ್ತು. ಆದರೆ, ಮಳೆಯಿಂದಾಗಿ ವಿವಿಧೆಡೆ ಚದುರಬೇಕಾಯಿತು. ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನೂ ಪುಸ್ತಕ ಮಳಿಗೆಗಳು ಇರುವೆಡೆ ಸ್ಥಳಾಂತರಿಸಲಾಯಿತು.

ಚಿತ್ರ ಸಾಹಿತಿ ವಿ.ನಾಗೇಂದ್ರ ಪ್ರಸಾದ್, ನಾಟಕಕಾರ ಎಸ್.ಎನ್. ಸೇತುರಾಂ, ಗಜಾನನ ಶರ್ಮ, ಜಗದೀಶಶರ್ಮ ಸಂಪ, ಜೋಗಿ, ಕೆ.ಎನ್. ಗಣೇಶಯ್ಯ ಮೊದಲಾದ ಲೇಖಕರು ಪಾಲ್ಗೊಂಡಿದ್ದರು. ಅವರೊಂದಿಗೆ ಛಾಯಾಚಿತ್ರಗಳನ್ನು ಕ್ಲಿಕ್ಕಿಸಿಕೊಂಡ ಸಾಹಿತ್ಯಾಸಕ್ತರು, ಪುಸ್ತಕಗಳಿಗೆ ಲೇಖಕರ ಹಸ್ತಾಕ್ಷರವನ್ನೂ ಪಡೆದುಕೊಂಡರು.

ಮಧ್ಯಾಹ್ನದ ಬಳಿಕ 'ಕತೆ ಕಟ್ಟೋಣ ಬನ್ನಿ...' ಕಾರ್ಯಾಗಾರ ನಡೆಯಿತು. ಇದನ್ನು ಉಪನ್ಯಾಸಕ ಶಿವಕುಮಾರ್ ಮಾವಲಿ ಹಾಗೂ ಪ್ರಕಾಶಕ ಶ್ರೀಧರ ಬನವಾಸಿ ನಡೆಸಿಕೊಟ್ಟರು. ಸಂಜೆ ನಡೆದ ಕಾರ್ಯಕ್ರಮದಲ್ಲಿ ಎ.ಎನ್. ಪ್ರಸನ್ನ ಅವರ 'ಪರದೆ ಮತ್ತಿತರ ಕತೆಗಳು', ಮಹಾಬಲೇಶ್ವರರಾವ್ ಅವರ 'ಈ ಸಾವು ನ್ಯಾಯವೇ', ಡಿ.ಎಸ್. ಶ್ರೀನಿವಾಸ ಪ್ರಸಾದ್ ಅವರ 'ಬದುಕು ಬದಲಾಯಿತು', ರಶ್ಮಿ ಅಭಯಸಿಂಹ ಅವರ 'ಪಿಂಕ್ ಮುಜಾಂಡ', ಮಂಜುನಾಥ್ ಕುಣಿಗಲ್ ಅವರ 'ಶಿವಾಜಿ ಟೆಂಟ್' ಹಾಗೂ ಅರುಣ್ ಕಿಲ್ಲೂರು ಅವರ 'ಶ್ರೀಮಂತರಾಗೋಣ ಬನ್ನಿ' ಪುಸ್ತಕಗಳು ಬಿಡುಗಡೆಯಾದವು.

ಪುಸ್ತಕ ಸಂತೆಯಲ್ಲಿ ಸಾಹಿತ್ಯಾಸಕ್ತರು ಪುಸ್ತಕಗಳನ್ನು ಪರಿಶೀಲಿಸಿ ಖರೀದಿಸಿದರು
—ಪ್ರಜಾವಾಣಿ ಚಿತ್ರ

ಪುಸ್ತಕ ಸಂತೆಗೆ ತೆರೆ ಇಂದು

ಪುಸ್ತಕ ಸಂತೆಯ ಕಡೆಯ ದಿನವಾದ ಭಾನುವಾರವೂ ಬೆಳಿಗ್ಗೆ 10ರಿಂದ ರಾತ್ರಿ 9 ಗಂಟೆಯವರೆಗೆ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಮೂಡ್ನಾಕೂಡು ಚಿನ್ನಸ್ವಾಮಿ, ವಿಶ್ವೇಶ್ವರ ಭಟ್, ಅಬ್ದುಲ್ ರಶೀದ್ ಸೇರಿ ಹಲವು ಲೇಖಕರು ಪಾಲ್ಗೊಳ್ಳುತ್ತಾರೆ. 'ಕವಿತೆ ಹುಟ್ಟುವ ಸಮಯ' ಕಾರ್ಯಾಗಾರ ನಡೆಯಲಿದ್ದು, ಕವಿ ವಾಸುದೇವ ನಾಡಿಗ್ ನಡೆಸಿಕೊಡಲಿದ್ದಾರೆ. ಸಂಜೆ 4 ಗಂಟೆಗೆ ಅಯುಬ ಜ ಧನ್ನೂರ ಅವರಿಂದ ಮ್ಯಾಜಿಕ್ ಶೊ, 5.30ಕ್ಕೆ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ. ಅತಿಥಿಗಳಾಗಿ ಟಿ.ಎನ್. ಸೀತಾರಾಮ್, ಬಿ. ದಯಾನಂದ್ ಭಾಗವಹಿಸುತ್ತಾರೆ. ಸಂಜೆ 6.30ರಿಂದ ಸಿನಿಮಾ ಸಂಜೆ ಕಾರ್ಯಕ್ರಮ ನಡೆಯಲಿದೆ.

ಒಟ್ಟಾಗಿ ಹೋರಾಡುತ್ತೇವೆ

ಯತ್ನಾಳ ಅವರೂ ಪ್ರವಾಸದಲ್ಲಿ ಇರಲಿದ್ದಾರೆ: ಪ್ರೀತಂಗೌಡ

ಪ್ರಜಾವಾಣಿ ವಾರ್ತೆ

ಪ್ರೀತಂಗೌಡ

ಬೆಂಗಳೂರು: ವಕ್ಫ್ ಸಮಸ್ಯೆಗೆ ಸಂಬಂಧಿಸಿದಂತೆ ಪಕ್ಷದ ಎಲ್ಲರೂ ಒಟ್ಟಾಗಿ ಪ್ರವಾಸ ಮಾಡಿ ಹೋರಾಟ ನಡೆಸುತ್ತೇವೆ. ಬಸನಗೌಡ ಪಾಟೀಲ್ ಯತ್ನಾಳ ಅವರು ಪಕ್ಷದ ಹಿರಿಯ ನಾಯಕರು. ಪ್ರವಾಸದಲ್ಲಿ ಅವರೂ ಇರಲಿದ್ದಾರೆ' ಎಂದು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ ಹೇಳಿದರು.

ಪಕ್ಷದ ಕಚೇರಿಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಕ್ಫ್ ಹೋರಾಟ ವಿಚಾರದಲ್ಲಿ ಪಕ್ಷದ ನಾಯಕರ ಮಧ್ಯೆ ಯಾವುದೇ ಗೊಂದಲ ಇಲ್ಲ. ರೈತರು, ಮಠಗಳು, ಸಾರ್ವಜನಿಕರಿಗೆ ವಕ್ಫ್‌ನಿಂದ ತೊಂದರೆ ಆಗಬಾರದು ಎಂಬುದು ನಮ್ಮ ಉದ್ದೇಶ. ಎಲ್ಲರೂ ಒಟ್ಟಾಗಿ ಹೋರಾಡಿ, ಈ ಸಮಸ್ಯೆಗೆ ತಾರ್ಕಿಕ ಅಂತ್ಯ ಕಂಡುಕೊಳ್ಳುತ್ತೇವೆ' ಎಂದರು.

'ವಕ್ಫ್ ಹೋರಾಟದ ಸಂಬಂಧ ಉಪ ಚುನಾವಣೆಗೂ ಮುನ್ನ ಸಭೆ ನಡೆಸಿದ್ದೆವು. ಚುನಾವಣೆ ಸಂದರ್ಭದಲ್ಲಿ ಸಹಜವಾಗಿ ಅತ್ತಲೇ ಗಮನ ಕೊಟ್ಟಿದ್ದೇವೆ. ಈಗ ಸಭೆ ನಡೆಸಿ, ಹೋರಾಟದ ಸ್ವರೂಪ ಮತ್ತು ದಿನಾಂಕಗಳನ್ನು ನಿರ್ಧರಿಸುತ್ತೇವೆ. ಈ ಹೋರಾಟದಲ್ಲಿ ಪಕ್ಷದ ಕಟ್ಟಕಡೆಯ ಕಾರ್ಯಕರ್ತರೂ ಭಾಗಿಯಾಗಲಿದ್ದಾರೆ' ಎಂದರು.

'ಕಾಂಗ್ರೆಸ್ ಸೇರಿ ಎಲ್ಲ ಪಕ್ಷಗಳಲ್ಲೂ ಭಿನ್ನಾಭಿಪ್ರಾಯವಿದೆ. ಅದು ಇದ್ದರಷ್ಟೇ ಪಕ್ಷ ಸರಿದಾರಿಯಲ್ಲಿ ನಡೆಯುತ್ತದೆ' ಎಂದರು.

40% ಆರೋಪ ನಿರಾಧಾರ: ವಿಜಯೇಂದ್ರ



ವಿಜಯೇಂದ್ರ

'ಬಿಜೆಪಿ ಸರ್ಕಾರದ ವಿರುದ್ಧ ಮಾಡಲಾಗಿದ್ದ 40 % ಕಮಿಷನ್ ಆರೋಪದಲ್ಲಿ ಹುರುಳಿಲ್ಲ ಎಂಬುದು ಲೋಕಾಯುಕ್ತ ತನಿಖೆಯಲ್ಲಿ ಗೊತ್ತಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸುದ್ದಿಯೊಂದನ್ನು ಪೋಸ್ಟ್‌ನಲ್ಲಿ ಲಗತ್ತಿಸಿರುವ ಅವರು, 'ಆರೋಪ ಮಾಡಿದ್ದ ಅಂಬಿಕಾಪತಿ ಹಲವು ವರ್ಷಗಳಿಂದ ಯಾವುದೇ ಗುತ್ತಿಗೆ ಪಡೆದಿರಲಿಲ್ಲ ಎಂಬುದು ಲೋಕಾಯುಕ್ತ ತನಿಖಾ ವರದಿಯಲ್ಲಿದೆ' ಎಂದಿದ್ದಾರೆ.

ಇದೇ ವಿಷಯವಾಗಿ ಪೋಸ್ಟ್ ಮಾಡಿರುವ ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ, '40 % ಕಮಿಷನ್ ಆರೋಪ ಚುನಾವಣೆಗಾಗಿ ಸೃಷ್ಟಿ ಮಾಡಿದ್ದ ಸುಳ್ಳು, ಅಪಪ್ರಚಾರ ಎಂದು ಕಾಂಗ್ರೆಸ್‌ನ ಹಲವು ನಾಯಕರೇ ಒಪ್ಪಿಕೊಂಡಿದ್ದಾರೆ. ಜನರು ಈ ಸರ್ಕಾರವನ್ನು ಮನೆಗೆ ಕಳುಹಿಸುವ ದಿನ ದೂರವಿಲ್ಲ' ಎಂದಿದ್ದಾರೆ.

'ಶಾಸಕರನ್ನು ಖರೀದಿಗೆ ಇಟ್ಟಿದ್ದೀರಾ?'

ಬೆಂಗಳೂರು: 'ಕಾಂಗ್ರೆಸ್‌ನ ಯಾವ ಶಾಸಕರಿಗೆ ಆಮಿಷ ಒಡ್ಡಲಾಗಿತ್ತು? ನಿಮ್ಮ ಶಾಸಕರು ದನಕರುಗಳೇ? ಖರೀದಿಗೆ ಅವರನ್ನು ಮಾರುಕಟ್ಟೆಯಲ್ಲಿ ಇಟ್ಟಿದ್ದೀರಾ' ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು.

ಛಲವಾದಿ

ಪಕ್ಷದ ಕಚೇರಿಯಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸರ್ಕಾರ ಬೀಳಿಸಲು ಪ್ರತಿ ಶಾಸಕರಿಗೆ ₹50 ಕೋಟಿಯ ಆಮಿಷ ಒಡ್ಡಿದ್ದಾರೆ ಎಂದು ಮುಖ್ಯಮಂತ್ರಿ ಆರೋಪ ಮಾಡಿದ್ದಾರೆ. ಅದಕ್ಕೆ ಅವರು ಪುರಾವೆ ನೀಡಬೇಕು. ಇಲ್ಲವೇ ರಾಜೀನಾಮೆ ನೀಡಿ ಹೋಗಬೇಕು' ಎಂದು ಆಗ್ರಹಿಸಿದರು.

'ಸಿದ್ದರಾಮಯ್ಯ ಅವರನ್ನು ಕೆಳಗೆ ಇಳಿಸಲು ಅವರ ಪಕ್ಷದವರೇ ಖೆಡ್ಡಾ ತೋಡಿದ್ದಾರೆ. ಸರ್ಕಾರ ಬೀಳಿಸುವ ಅವಶ್ಯ ನಮಗಿಲ್ಲ. ಒಂದು ಕೋಟಿಗೆ ಬರುತ್ತೇವೆ ಎಂದು ಅವರ ಶಾಸಕರು ಹೇಳಿದರೂ, ನಮಗವರು ಬೇಡ. ಸರ್ಕಾರ ತಾನಾಗಿಯೇ ಬೀಳುತ್ತದೆ. ನಾವು ಚುನಾವಣೆ ಎದುರಿಸಿ ಸರ್ಕಾರ ರಚಿಸುತ್ತೇವೆ' ಎಂದರು.

ನಮ್ಮ ಮೆಟ್ರೊಗೆ ರಾಷ್ಟ್ರೀಯ ಮಟ್ಟದ 'ಗ್ರೀನ್ ಚಾಂಪಿಯನ್' ಪ್ರಶಸ್ತಿ

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಮತ್ತು ಅಧಿಕಾರಿಗಳು ಶುಕ್ರವಾರ 'ಗ್ರೀನ್ ಚಾಂಪಿಯನ್' ಪ್ರಶಸ್ತಿ ಸ್ವೀಕರಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಸಿರು ಕಟ್ಟಡದ ಉತ್ತೇಜನ ಯೋಜನೆಗಳನ್ನು ಅಳವಡಿಸಿಕೊಂಡಿರುವ 'ನಮ್ಮ ಮೆಟ್ರೊ'ಗೆ ರಾಷ್ಟ್ರೀಯ ಮಟ್ಟದ 'ಗ್ರೀನ್ ಚಾಂಪಿಯನ್' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಮೆಟ್ರೊ ರೈಲು ಪ್ರಾಧಿಕಾರ ವರ್ಗದ ಅಡಿಯಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ನಡೆಯುತ್ತಿರುವ 'ಗ್ರೀನ್ ಬಿಲ್ಡಿಂಗ್ ಕಾಂಗ್ರೆಸ್–2024' ಸಮಾರಂಭದಲ್ಲಿ ಶುಕ್ರವಾರ ಬಿಎಂಆರ್‌ಸಿಎಲ್‌ಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್, ನಿರ್ದೇಶಕ (ಯೋಜನೆ ಮತ್ತು ಪರಿಯೋಜನೆ) ಡಿ.ಆರ್.ಕೆ. ರೆಡ್ಡಿ, ಹಿರಿಯ ಅಧಿಕಾರಿಗಳು ಪ್ರಶಸ್ತಿ ಸ್ವೀಕರಿಸಿದರು.

ನಮ್ಮ ಮೆಟ್ರೊ ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ, ನಿರ್ವಹಣೆ ಕ್ಷೇತ್ರಗಳಲ್ಲಿ ಹಸಿರು ಉತ್ತೇಜಿಸುವ ಮತ್ತು ಅನುಷ್ಠಾನಗೊಳಿಸುವ ಪ್ರಯತ್ನಗಳನ್ನು ಗುರುತಿಸಿ ಪ್ರಶಸ್ತಿ ನೀಡಲಾಗಿದೆ.

ಜಲಮಂಡಳಿಗೆ 'ಸಿಐಐ ಐಜಿಬಿಸಿ ಗ್ರೀನ್ ಪ್ರಾಜೆಕ್ಟ್' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರಿನ ಬಳಕೆ ಮತ್ತು ನಿರ್ವಹಣೆಯಲ್ಲಿ ಸುಸ್ಥಿರ ಹಾಗೂ ಹೊಸ ತಂತ್ರಜ್ಞಾನಗಳ ಅಳವಡಿಕೆ ಹಾಗೂ ಬೇಸಿಗೆಯಲ್ಲಿ ಕುಡಿಯುವ ನೀರಿನ ಪೂರೈಕೆಯನ್ನು ಸಮರ್ಥವಾಗಿ ನಿಭಾಯಿಸಿದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ 'ಸಿಐಐ ಐಜಿಬಿಸಿ ಗ್ರೀನ್ ಪ್ರಾಜೆಕ್ಟ್–2024' ಪ್ರಶಸ್ತಿ ಲಭಿಸಿದೆ.

ನಗರದ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ನಡೆದ 'ಗ್ರೀನ್ ಎಕ್ಸ್‌ಪೊ ಗ್ರೀನ್ ಬಿಲ್ಡಿಂಗ್ ಕಾಂಗ್ರೆಸ್' ಕಾರ್ಯಕ್ರಮದಲ್ಲಿ ಸಿಐಐ ಐಜಿಬಿಸಿಯ ಶೇಖರ್ ರೆಡ್ಡಿ ಹಾಗೂ ಗುರ್‌ಮೀತ್ ಸಿಂಗ್ ಅರೋರ ಅವರು ಜಲಮಂಡಳಿ ಅಧ್ಯಕ್ಷ ಡಾ.ರಾಮ್‌ಪ್ರಸಾತ್ ಮನೋಹರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ರಾಮ್‌ಪ್ರಸಾತ್ ಮನೋಹರ್ ಮಾತನಾಡಿ, 'ಬೆಂಗಳೂರಿನಲ್ಲಿ ಈ ಬಾರಿ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಹೆಚ್ಚಿತ್ತು. ಅಂತರ್ಜಲ ಕುಸಿತದಿಂದ ನೀರಿನ ಕೊರತೆ ಉಂಟಾಗಿತ್ತು. ಇಂತಹ ಸಂಕಷ್ಟದ ಸಮಯದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ ಹಲವಾರು ಸುಸ್ಥಿರ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಯಿತು. ಅನಗತ್ಯವಾಗಿ ನೀರು ಪೋಲಾಗುವುದನ್ನು ತಡೆಯಲು ಏರಿಯೇಟರ್ ಅಳವಡಿಕೆಯನ್ನು ಕಡ್ಡಾಯಗೊಳಿಸಲಾಯಿತು' ಎಂದು ಹೇಳಿದರು.

'ನೀರಿನ ಉಳಿತಾಯ ಮಾಡುವ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು, ಸಂಸ್ಕರಿಸಿದ ನೀರಿನ ಬಳಕೆ ಹೆಚ್ಚಿಸುವುದು, ಇಂಗುಗುಂಡಿಗಳಲ್ಲಿ ಮಳೆ ನೀರು ಸಂಗ್ರಹಿಸುವುದು, ಈ ಎಲ್ಲಾ ಹೊಸ ಅನುಷ್ಠಾನಗಳ ಬಗ್ಗೆ ಗ್ರಾಹಕರಿಗೆ ಹಾಗೂ ಸಿಬ್ಬಂದಿಗಳಿಗೆ ಮಾಹಿತಿಯನ್ನು ನೀಡಿ ನೀರಿನ ಮಹತ್ವವನ್ನು ತಿಳಿಸಲಾಯಿತು. ಇದರಿಂದ ಬೇಸಿಗೆಯಲ್ಲಿ ನೀರಿನ ಬವಣೆಯನ್ನು ನಿಭಾಯಿಸುವಲ್ಲಿ ನಮ್ಮ ಜಲಮಂಡಳಿ ಯಶಸ್ವಿಯಾಯಿತು' ಎಂದು ತಿಳಿಸಿದರು.

ಗ್ರೀನ್ ಎಕ್ಸ್‌ಪೊ ಗ್ರೀನ್ ಬಿಲ್ಡಿಂಗ್ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಸಿಐಐ ಐಜಿಬಿಸಿಯ ಶೇಖರ್ ರೆಡ್ಡಿ ಹಾಗೂ ಗುರ್‌ಮೀತ್ ಸಿಂಗ್ ಆರೋರ ಅವರು ಜಲಮಂಡಳಿ ಅಧ್ಯಕ್ಷ ಡಾ.ರಾಮ್‌ಪ್ರಸಾತ್ ಮನೋಹರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು

ಯಶಸ್ವಿ ಶಸ್ತ್ರಚಿಕಿತ್ಸೆಯಿಂದ 20 ವರ್ಷದ ವೇದನೆಗೆ ಪರಿಹಾರ

ಬೆಂಗಳೂರು: ನಗರದ ಭಗವಾನ್ ಮಹಾವೀರ ಜೈನ್ ಆಸ್ಪತ್ರೆಯ ತಜ್ಞ ವೈದ್ಯರು 'ಡಿಸ್ಟೋನಿಯಾ' ಎಂಬ ಅಪರೂಪದ ಕಾಯಿಲೆಯಿಂದಾಗಿ 20 ವರ್ಷದಿಂದ ಬಳಲುತ್ತಿದ್ದ ವಿದೇಶಿ ಗಿಟಾರ್ ವಾದಕರೊಬ್ಬರಿಗೆ ಮಿದುಳನ್ನು ಜಾಗೃತ ಸ್ಥಿತಿಯಲ್ಲಿರಿಸಿ ಶಸ್ತ್ರ ಚಿಕಿತ್ಸೆ ಮಾಡಿ, ಕಾಯಿಲೆಯನ್ನು ಗುಣಪಡಿಸಿದ್ದಾರೆ.

ಅಮೆರಿಕದ ಲಾಸ್‌ಏಂಜಲೀಸ್‌ನ ಜೋಸೆಫ್ ಡಿಸೋಜಾ(65) ಈ ಅಪರೂಪದ ಶಸ್ತ್ರಚಿಕಿತ್ಸೆಗೆ ಒಳಗಾಗಿ ಗುಣಮುಖರಾದ ಗಿಟಾರ್ ವಾದಕ. ಆಸ್ಪತ್ರೆಯ ಡಾ. ಶರಣ್ ಶ್ರೀನಿವಾಸನ್ ಮತ್ತು ಡಾ. ಸಂಜೀವ್ ಸಿ.ಸಿ ನೇತೃತ್ವದ ತಂಡ ಈ ಶಸ್ತ್ರಚಿಕಿತ್ಸೆ ನಡೆಸಿದೆ.

ಈ ಬಗ್ಗೆ ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಾ.ಶರಣ್ ಶ್ರೀವಾಸನ್, 'ಜೋಸೆಫ್ ಡಿಸೋಜ ಅವರು 'ಟಾಸ್ಕ್‌ಸ್ಪೆಸಿಫಿಕ್ ಫೋಕಲ್ ಹ್ಯಾಂಡ್ ಡಿಸ್ಟೋನಿಯಾ' (ಟಿಎಸ್‌ಎಫ್‌ಎಚ್‌ಡಿ) ಎಂಬ ನರಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು. ಅವರ ಕೈ ಹಾಗೂ ಬೆರಳುಗಳ ಸ್ನಾಯುಗಳು ಇದಕ್ಕಿದ್ದಂತೆ ಅಂಗೈಗೆ ಮುರುಟಿಕೊಳ್ಳುತ್ತಿದ್ದವು. ಇದರಿಂದ ಅವರಿಗೆ ಗಿಟಾರ್ ನುಡಿಸಲು ಕಷ್ಟವಾಗುತ್ತಿತ್ತು' ಎಂದು ವಿವರಿಸಿದರು.

'ಒಂದು ಲಕ್ಷದಲ್ಲಿ 30 ಮಂದಿಗೆ ಈ ಕಾಯಿಲೆ ಬರಬಹುದು. ಪ್ರಾಥಮಿಕ ಹಂತದಲ್ಲಿ 'ಬಾಟುಲಿನಿಯಮ್' ಇಂಜೆಕ್ಷನ್ ಸೇರಿದಂತೆ ವಿವಿಧ ಔಷಧೋಪಚಾರಗಳಿಂದ ಚಿಕಿತ್ಸೆ ನೀಡಬಹುದು. ಆದರೆ, ಅಂತಿಮವಾಗಿ ನರಶಸ್ತ್ರಚಿಕಿತ್ಸೆ ಮೂಲಕವೇ ರೋಗವನ್ನು ಗುಣಪಡಿಸಬೇಕಾಗುತ್ತದೆ' ಎಂದು ಹೇಳಿದರು.

28 ವಿಧಾನಸಭಾ ಕ್ಷೇತ್ರಗಳಲ್ಲೂ ಬೀದಿ ನಾಯಿಗಳಿಗೆ ಆಹಾರ ಸ್ಥಳ ನಿಗದಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭೆ ಕ್ಷೇತ್ರಗಳಲ್ಲಿ ತಲಾ ಐದು ಸ್ಥಳಗಳಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡುವ ಸ್ಥಳಗಳನ್ನು ಗುರುತಿಸಲಾಗಿದೆ ಎಂದು ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ಆಹಾರ ನೀಡುವ ಎಲ್ಲಾ ತಂಡಗಳೊಂದಿಗೆ ಪರಿಶೀಲನಾ ಸಭೆ ನಡೆಸಿ, ಎದುರಿಸುತ್ತಿರುವ ಸವಾಲುಗಳನ್ನು ಪರಿಹರಿಸುವ ಯೋಜನೆಯನ್ನು ರೂಪಿಸಲಾಯಿತು. ಪಾಲಿಕೆಯ ಪಶು ಸಂಗೋಪನಾ ಇಲಾಖೆಯು ಪ್ರಾಣಿ ಪ್ರಿಯರ ಸಹಯೋಗದೊಂದಿಗೆ ಸುಮಾರು ಒಂದು ಸಾವಿರ ನಾಯಿಗಳಿಗೆ ಆಹಾರವನ್ನು ನೀಡುವ ಗುರಿ ಹೊಂದಿದೆ ಎಂದರು.

'ನಗರದ ಎಲ್ಲ ನಾಗರಿಕರು ಪ್ರತಿದಿನ ಒಳ್ಳೆಯ ಆಹಾರವನ್ನು ಒಂದು ಬಟ್ಟಲಿನಲ್ಲಿ ತಮ್ಮ ಮನೆಯ ಮುಂದಿರುವ ನಾಯಿಗೆ ನೀಡಿ, ಕೈಲಾದಷ್ಟು ಸಹಾನುಭೂತಿ ತೋರಬೇಕು. ಇದರಿಂದ ಎಷ್ಟೋ ನಾಯಿಗಳಿಗೆ ಆಹಾರ ಸಿಗುವಂತಾಗುತ್ತದೆ. ಪ್ರಾಣಿಗಳ ಆಕ್ರಮಣಕಾರಿ ಸ್ವಭಾವವನ್ನು ನಿಯಂತ್ರಿಸಲು ಆಹಾರವು ಬಹಳ ಮುಖ್ಯ ಪಾತ್ರ ವಹಿಸುತ್ತದೆ' ಎಂದು ಹೇಳಿದರು.

ಬೊಮ್ಮನಹಳ್ಳಿ ವಲಯದ ಕಬಾಬ್ ಮಹಲ್, ಕೃಷ್ಣಂ, ಎಂಪೈರ್ ಮತ್ತು ಕೆಎಫ್‌ಸಿ, ಯಲಹಂಕ ವಲಯದ ಉಡುಪಿ ಹೋಟೆಲ್, ಆರ್.ಆರ್. ನಗರ ವಲಯದ ಗಂಗಾಧರ್ ಕ್ಯಾಟರಿಂಗ್, ಪಶ್ಚಿಮ ವಲಯದ ಇಂದಿರಾ ಕ್ಯಾಂಟೀನ್, ಗಾಯತ್ರಿ ನಗರ, ಮಹದೇವಪುರ ವಲಯದ ಹೈದರಾಬಾದ್ ಬಿರಿಯಾನಿ ಹೌಸ್ ಹಾಗೂ ಉಡುಪಿ ಹೋಟೆಲ್, ದಾಸರಹಳ್ಳಿ ವಲಯದ ಎಲೈಟ್ ಹೋಟೆಲ್, ದಕ್ಷಿಣ ವಲಯದಲ್ಲಿ ನಂದಿನಿ, ಎಸ್‌ಎಲ್‌ಎನ್ ಮಿಲಿಟರಿ ಹೋಟೆಲ್‌ನವರು ಪ್ರಾಣಿಗಳಿಗೆ ಆಹಾರ ನೀಡುವ ಕಾರ್ಯಕ್ಕೆ ಕೈಜೋಡಿಸಿದ್ದಾರೆ ಎಂದು ಮಾಹಿತಿ ನೀಡಿದರು.

'ಕ್ಯೂಎಸ್ ಐ ಗೇಜ್ ಇನ್‌ಸ್ಟಿಟ್ಯೂಷನ್ ಆಫ್ ಹ್ಯಾಪಿನೆಸ್ ವರದಿ 2024' ಬಿಡುಗಡೆ

'ಶಿಕ್ಷಕರು ಸಂತಸದಿಂದಿದ್ದರೆ ಕಲಿಕೆ ಆಸಕ್ತಿ ವೃದ್ಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಕರು ಸಂತೋಷದಿಂದಿದ್ದರೆ, ಧನಾತ್ಮಕ ವರ್ತನೆಗಳಿಂದ ವಿದ್ಯಾರ್ಥಿಗಳು ಪ್ರೇರೇಪಿತರಾಗಿ ಕಲಿಕೆಯ ಆಸಕ್ತಿಯನ್ನು ವೃದ್ಧಿಸಿಕೊಳ್ಳುತ್ತಾರೆ' ಎಂದು 'ಕ್ಯೂಎಸ್ ಐ ಗೇಜ್ ಇನ್‌ಸ್ಟಿಟ್ಯೂಷನ್ ಆಫ್ ಹ್ಯಾಪಿನೆಸ್ ವರದಿ 2024'ಯಲ್ಲಿ ತಿಳಿಸಲಾಗಿದೆ.

ಶೈಕ್ಷಣಿಕ ಪರಿಸರದಲ್ಲಿ ಸಂತೋಷ, ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳ ವಿಶ್ಲೇಷಣೆಯನ್ನು ಒಳಗೊಂಡ ವರದಿಯನ್ನು ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ ಅನಾವರಣಗೊಳಿಸಿದರು.

16 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ 108 ಶಿಕ್ಷಣ ಸಂಸ್ಥೆಗಳಲ್ಲಿ 1,60,710 ವಿದ್ಯಾರ್ಥಿಗಳು ಮತ್ತು 20,768 ಅಧ್ಯಾಪಕರಿಂದ ಪ್ರತಿಕ್ರಿಯೆ ಸಂಗ್ರಹಿಸಿ ವರದಿ ಸಿದ್ಧಪಡಿಸಲಾಗಿದೆ ಎಂದು ಕ್ಯೂಎಸ್ ಐ ಗೇಜ್ ವ್ಯವಸ್ಥಾಪಕ ನಿರ್ದೇಶಕ ರವಿನ್ ನಾಯರ್ ತಿಳಿಸಿದರು.

'ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯನ್ನು ಪ್ರೇರೇಪಿಸುವುದು ನಮ್ಮ ಗುರಿ. ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡುವ ಮೂಲಕ ಮತ್ತು ಸಂತೋಷದ ಸಂಸ್ಕೃತಿಯನ್ನು ಬೆಳೆಸಿದರೆ, ಶೈಕ್ಷಣಿಕ ಮತ್ತು ವೈಯಕ್ತಿಕ ಬೆಳವಣಿಗೆಗೆ ಹೆಚ್ಚು ಅನುಕೂಲಕರ ವಾತಾವರಣ ಸೃಷ್ಟಿಸಬಹುದು' ಎಂದರು.

ಕ್ಯಾಂಪಸ್‌ನಲ್ಲಿನ ಸುರಕ್ಷತೆಯ ಪ್ರಜ್ಞೆ ವಿದ್ಯಾರ್ಥಿ ಮತ್ತು ಅಧ್ಯಾಪಕರ ತೃಪ್ತಿಮಟ್ಟವನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ. ಮಾನಸಿಕ ಆರೋಗ್ಯ ಒತ್ತಡವನ್ನು ನಿವಾರಿಸುತ್ತದೆ ಮತ್ತು ಒಟ್ಟಾರೆ ಸಂತೋಷವನ್ನು ಹೆಚ್ಚಿಸುತ್ತದೆ. ವೃತ್ತಿ ಮಾರ್ಗದರ್ಶನವು ಆತ್ಮ ವಿಶ್ವಾಸವನ್ನು ವೃದ್ಧಿಸುತ್ತದೆ. ನಿರಂತರ ವೃತ್ತಿಪರ ಅಭಿವೃದ್ಧಿಗೆ ಶಿಕ್ಷಕರ ಧಾರಣಾ ಶಕ್ತಿ ಅತ್ಯಗತ್ಯ ಎಂದು ವರದಿಯಲ್ಲಿ ಹೇಳಲಾಗಿದೆ.

ಎ.ಎಸ್.ಎಂ.ಡಿ ಕಾರ್ಯನಿರ್ವಾಹಕ ನಿರ್ದೇಶಕ ಅಶ್ವಿನ್ ಫರ್ನಾಂಡಿಸ್ ಮಾತನಾಡಿ, 'ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ತಮ್ಮ ವಿಧಾನವನ್ನು ಸುಧಾರಿಸಲು ಬಯಸುವ ಶಿಕ್ಷಣ ಸಂಸ್ಥೆಗಳಿಗೆ ಈ ವರದಿ ಮಾನದಂಡವಾಗಲಿದೆ' ಎಂದರು.

'ಕ್ಯೂಎಸ್ ಐ ಗೇಜ್ ಇನ್‌ಸ್ಟಿಟ್ಯೂಷನ್ ಆಫ್ ಹ್ಯಾಪಿನೆಸ್ ವರದಿ 2024'ಯನ್ನು ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ ಅನಾವರಣಗೊಳಿಸಿದರು

ಸಾಹಿತ್ಯ ಅಕಾಡೆಮಿಯು ನಗರದ ಕಲಾಗ್ರಾಮದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಪುಸ್ತಕ ಸಪ್ತಾಹದ ಭಾಗವಾಗಿ, ಶನಿವಾರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ವಿಮರ್ಶಕ ಎನ್‌.ಮನು ಚಕ್ರವರ್ತಿ, ಅಕಾಡೆಮಿ ಸದಸ್ಯ ಮನು ಬಳಿಗಾರ್ ಮತ್ತು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್‌.ಎಲ್‌.ಪುಷ್ಪಾ ಪರಸ್ಪರ ಚರ್ಚಿಸಿದರು

ಇಂದು ಜಲಮಂಡಳಿ ಸಹಾಯವಾಣಿ ಸ್ಥಗಿತ

ಬೆಂಗಳೂರು: ಬೆಂಗಳೂರು ಜಲಮಂಡಳಿಯ (24/7)ದೂರು ನಿರ್ವಹಣಾ ಕೇಂದ್ರದ ಟೋಲ್ ಫ್ರೀ ಸಂಖ್ಯೆ1916 ಅನ್ನು ಭಾನುವಾರದಂದು ಸ್ಥಗಿತಗೊಳಿಸಲಾಗುತ್ತಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ದೂರು ನಿರ್ವಹಣಾ ಕೇಂದ್ರದ ಸರ್ವರ್‌ನ ವಾರ್ಷಿಕ ನಿರ್ವಹಣೆ ಕೈಗೊಳ್ಳುತ್ತಿರುವ ಕಾರಣ ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ತಾತ್ಕಾಲಿಕವಾಗಿ 1916 ಟೋಲ್ ಫ್ರೀ ಸಂಖ್ಯೆಯು ಕಾರ್ಯ ನಿರ್ವಹಿಸುವುದಿಲ್ಲ ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ಕೊಲೆ ಆರೋಪದ ಅಡಿ ತಂದೆಯ ಬಂಧನ, ಕಾಶಿನಗರದಲ್ಲಿ ಕೃತ್ಯ

ಮೊಬೈಲ್‌ಗೆ ಪುತ್ರನ ಹಟ: ಥಳಿಸಿ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮೊಬೈಲ್ ಕೊಡಿಸುವಂತೆ ಬಲವಂತ ಮಾಡಿದ್ದ ಪುತ್ರನಿಗೆ ಕ್ರಿಕೆಟ್ ಬ್ಯಾಟ್‌ನಿಂದ ಥಳಿಸಿ, ಕೊಲೆ ಮಾಡಿರುವ ಆರೋಪದ ಅಡಿ ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ತಂದೆಯನ್ನು ಶನಿವಾರ ಬಂಧಿಸಿದ್ದಾರೆ.

9ನೇ ತರಗತಿಯ ವಿದ್ಯಾರ್ಥಿ ತೇಜಸ್(14) ಕೊಲೆಯಾಗಿದ್ದು, ಆತನ ತಂದೆ ರವಿಕುಮಾರ್(44) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ. ಠಾಣಾ ವ್ಯಾಪ್ತಿಯ ಕಾಶಿನಗರದಲ್ಲಿ ಕೃತ್ಯ ನಡೆದಿದೆ.

'ರವಿಕುಮಾರ್ ಅವರು ಕಾರ್ಪೆಂಟರ್ ಕೆಲಸ ಮಾಡುತ್ತಿದ್ದರು. ಅವರ ಪತ್ನಿ ಶಶಿಕಲಾ ಕೂಲಿ ಕೆಲಸ ಮಾಡುತ್ತಿದ್ದಾರೆ. ದಂಪತಿಗೆ ವಿಶಾಲ್ ಹಾಗೂ ತೇಜಸ್ ಇಬ್ಬರು ಮಕ್ಕಳು. ತೇಜಸ್ ಸರಿಯಾಗಿ ಶಾಲೆಗೆ ಹೋಗದೇ ಸ್ನೇಹಿತರ ಜತೆಗೆ ಹೆಚ್ಚು ಸುತ್ತಾಡುತ್ತಿದ್ದ. ತೇಜಸ್‌ಗೆ ಚಿಕ್ಕ ವಯಸ್ಸಿನಲ್ಲೇ ಕೆಲವು ದುಶ್ಚಟಗಳಿದ್ದವು. ಪ್ರತಿನಿತ್ಯ ಪೋಷಕರ ಬಳಿ ಒಂದಲ್ಲ ಒಂದು ಬೇಡಿಕೆ ಇಡುತ್ತಿದ್ದ. ಇದು ದಂಪತಿಗೆ ಸಿಟ್ಟು ಹಾಗೂ ಬೇಸರ ತರಿಸುತ್ತಿತ್ತು. ಇದೇ ವಿಚಾರಕ್ಕೆ ಮನೆಯಲ್ಲಿ ಗಲಾಟೆ ಸಹ ನಡೆಯುತ್ತಿತ್ತು' ಎಂದು ಮೂಲಗಳು ತಿಳಿಸಿವೆ.

'ಮದ್ಯವ್ಯಸನಿ ಆಗಿದ್ದ ರವಿಕುಮಾರ್ ಅವರು ಕೆಲವು ದಿನಗಳಿಂದ ಕಾರ್ಪೆಂಟರ್ ಕೆಲಸಕ್ಕೆ ಹೋಗುತ್ತಿರಲಿಲ್ಲ. ಶಶಿಕಲಾ ಅವರ ಕೆಲಸ ಮಾಡಿ ಅದರಿಂದ ಬಂದ ಸಂಪಾದನೆಯಲ್ಲಿ ಕುಟುಂಬ ನಿರ್ವಹಣೆ ಮಾಡುತ್ತಿದ್ದರು. ಶುಕ್ರವಾರ ಬೆಳಿಗ್ಗೆ ಮೊಬೈಲ್ ಕೊಡಿಸುವ ವಿಚಾರಕ್ಕೆ ತಂದೆ ಹಾಗೂ ಪುತ್ರನ ಮಧ್ಯೆ ಜಗಳವಾಗಿತ್ತು' ಎಂದು ಮೂಲಗಳು ಹೇಳಿವೆ.

'ನನ್ನ ಎಲ್ಲ ಸ್ನೇಹಿತರ ಬಳಿ ಮೊಬೈಲ್ ಇದೆ. ನೀನೂ ನನಗೆ ಹೊಸ ಫೋನ್ ಕೊಡಿಸು ಎಂದು ತಂದೆಯನ್ನು ಕೇಳಿದ್ದ. ಹೊಸ ಫೋನ್ ಕೊಡಿಸಲು ಹಣ ಇಲ್ಲ, ಮನೆಯಲ್ಲಿರುವ ಹಳೆಯ ಫೋನ್ ರಿಪೇರಿ ಮಾಡಿಸಿಕೊಡುವುದಾಗಿ ಕೇಳಿದ್ದ. ಜೀವನ ನಿರ್ವಹಣೆಯೇ ಕಷ್ಟವಾಗಿದ್ದು, ಮೊಬೈಲ್ ಕೊಡಿಸಲು ಸಾಧ್ಯವಿಲ್ಲ ಎಂದು ತಾಯಿ ಬುದ್ಧಿಮಾತು ಹೇಳಿದ್ದರು. ಆಗ ತಂದೆ-ಪುತ್ರ ಮಧ್ಯೆ ಮತ್ತೆ ಗಲಾಟೆ ನಡೆದಿತ್ತು. ಮನೆಯಲ್ಲಿದ್ದ ಕ್ರಿಕೆಟ್ ಬ್ಯಾಟ್‌ನಿಂದ ಆರೋಪಿ, ಪುತ್ರನನ್ನು ಥಳಿಸಿ ಗೋಡೆಗೆ ದೂಡಿದ್ದ. ಇದರಿಂದ ತಲೆಗೆ ಪೆಟ್ಟಾಗಿತ್ತು' ಎಂದು ಪೊಲೀಸರು ಹೇಳಿದರು.

'ತಲೆಗೆ ಬಲವಾದ ಪೆಟ್ಟು ಬಿದ್ದ ಕಾರಣಕ್ಕೆ ತೇಜಸ್ ಅಂದು ಶಾಲೆಗೆ ತೆರಳಿರಲಿಲ್ಲ. ಮಧ್ಯಾಹ್ನದ ವೇಳೆಗೆ ನೋವು ತೀವ್ರವಾಗಿತ್ತು. ಆಗ ಎಚ್ಚೆತ್ತ ದಂಪತಿ, ಪುತ್ರನನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಪರಿಶೀಲಿಸಿದ ವೈದ್ಯರು, ಮಗು ಮೃತಪಟ್ಟು ಒಂದು ತಾಸು ಕಳೆದಿದೆ ಎಂಬುದಾಗಿ ಹೇಳಿದ್ದರು. 'ಇದರಿಂದ ಗಾಬರಿಗೊಂಡ ದಂಪತಿ ಮೃತದೇಹವನ್ನು ಮನೆಗೆ ತಂದು ತರಾತುರಿಯಲ್ಲಿ ಅಂತ್ಯಸಂಸ್ಕಾರಕ್ಕೆ ಸಿದ್ಧತೆ ನಡೆಸಿದ್ದರು. ಅದೇ ವೇಳೆ ಅಕ್ಕಪಕ್ಕದ ನಿವಾಸಿಗಳು ಪೊಲೀಸರಿಗೆ ಕೃತ್ಯದ ಬಗ್ಗೆ ಸುಳಿವು ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ತಾಯಿಯ ವಿಚಾರಣೆ ನಡೆಸಿದಾಗ ಹಲ್ಲೆಯಿಂದ ನಡೆದಿರುವ ಕೊಲೆಯ ವಿಚಾರ ಬಯಲಾಗಿದೆ' ಎಂದು ಪೊಲೀಸರು ಹೇಳಿದರು.

'ತಲೆಯಲ್ಲಿ ರಕ್ತಸ್ರಾವ ಹಾಗೂ ಬಲವಾದ ಪೆಟ್ಟಿನಿಂದ ಸಾವು ಸಂಭವಿಸಿದೆ ಎಂದು ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರು ವರದಿ ನೀಡಿದ್ದು ತಂದೆಯ ವಿರುದ್ಧ ಕೊಲೆ ಪ್ರಕರಣ ದಾಖಲು ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಕುಮಾರಸ್ವಾಮಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಂಜಾ ಮಾರಾಟ: ಡ್ರಗ್ಸ್ ಪೆಡ್ಲರ್ ಬಂಧನ

ಬೆಂಗಳೂರು: ಒಡಿಶಾದಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಡ್ರಗ್ಸ್ ಪೆಡ್ಲರ್‌ನನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪ್ರವೀಣ್

ಕೋರಮಂಗಲದ ವೆಂಕಟಾಪುರ ನಿವಾಸಿ ಪ್ರವೀಣ್ ಕುಮಾರ್(26) ಬಂಧಿತ. ಆರೋಪಿಯಿಂದ ₹ 4 ಲಕ್ಷ ಮೌಲ್ಯದ 12 ಕೆ.ಜಿ ಗಾಂಜಾ, ಒಂದು ಮೊಬೈಲ್ ಫೋನ್, ₹1,600 ನಗದು ಮತ್ತು ಕೃತ್ಯ ಎಸಗಲು ಬಳಸುತ್ತಿದ್ದ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಆರೋಪಿ ಬೇರೆಲ್ಲೂ ಕೆಲಸ ಮಾಡುತ್ತಿರಲಿಲ್ಲ. ಮಾದಕ ವಸ್ತುಗಳ ಮಾರಾಟವನ್ನೇ ವೃತ್ತಿ ಮಾಡಿಕೊಂಡಿದ್ದ. ಇದರಿಂದ ಬಂದ ಹಣದಿಂದ ಮೋಜು ನಡೆಸುತ್ತಿದ್ದ. ಇತ್ತೀಚೆಗೆ ಒಡಿಶಾದಿಂದ ಗಾಂಜಾ ತಂದು ಠಾಣೆ ವ್ಯಾಪ್ತಿಯ ಬನ್ನಪ್ಪ ಉದ್ಯಾನದ ಸಮೀಪ ಗ್ರಾಹಕರಿಗೆ ಪೂರೈಸುತ್ತಿದ್ದ. ಖಚಿತ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಈತನ ವಿರುದ್ಧ ಕೋರಮಂಗಲ, ವಿವೇಕನಗರ ಮತ್ತು ಸಿಸಿಬಿ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣಗಳು ದಾಖಲಾಗಿದ್ದವು. ಆರೋಪಿ ಜೈಲಿಗೂ ಹೋಗಿ ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದಿದ್ದ. ಮತ್ತೆ ಅದೇ ಕೃತ್ಯಕ್ಕೆ ಇಳಿದಿದ್ದ' ಎಂದು ಪೊಲೀಸರು ಹೇಳಿದರು.

ಆಟೊದಲ್ಲಿ ಅಪರಿಚಿತ ಬ್ಯಾಗ್: ಬೆದರಿದ ಚಾಲಕ

ಬೆಂಗಳೂರು: ಅಪರಿಚಿತ ಬ್ಯಾಗ್ ಕಂಡು ಗಾಬರಿಗೊಂಡ ಚಾಲಕರೊಬ್ಬರು, ಆಟೊ ಸಮೇತ ಶನಿವಾರ ಬೆಳಿಗ್ಗೆ ಜಯನಗರದ ಠಾಣೆಗೆ ಬಂದು, 'ಯಾರೋ ಬಾಂಬ್ ಇಟ್ಟಿದ್ದಾರೆ' ಎಂದು ಹೇಳಿ ಪೊಲೀಸರ ಎದುರು ಅಳಲು ತೋಡಿಕೊಂಡಿದ್ದರು.

ಇದರಿಂದ ಕ್ಷಣಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಜಯನಗರ ನಿವಾಸಿ, ಆಟೊ ಚಾಲಕ ಬೆಳಿಗ್ಗೆ 11 ಗಂಟೆ ಸುಮಾರಿಗೆ ಆಟೊ ಹಿಂದಿನ ಸೀಟ್‌ನಲ್ಲಿ ಎರಡು ಅಪರಿಚಿತ ಬ್ಯಾಗ್ ಕಂಡು ಗಾಬರಿಗೊಂಡಿದ್ದರು. 'ಯಾರೊ ಆಟೊದಲ್ಲಿ ಬಾಂಬ್ ಇಟ್ಟಿದ್ದಾರೆ' ಎಂದು ಭಾವಿಸಿ ಕೂಡಲೇ ಜಯನಗರ ಪೊಲೀಸ್ ಠಾಣೆಗೆ ಆಟೊ ಸಮೇತ ತೆರಳಿದ್ದರು. ಪೊಲೀಸರು, ಬಾಂಬ್ ನಿಷ್ಕ್ರಿಯ ದಳ ಹಾಗೂ ಬಾಂಬ್ ಪತ್ತೆದಳದ ಸಿಬ್ಬಂದಿಯನ್ನು ಕರೆಸಿ ಬ್ಯಾಗ್‌ಗಳ ಪರಿಶೀಲಿಸಿದರು. 'ಪರಿಶೀಲನೆ ವೇಳೆ ಬ್ಯಾಗ್‌ನಲ್ಲಿ ಮೋಟರ್ ವಸ್ತುಗಳು ಪತ್ತೆಯಾಗಿವೆ. ಯಾವುದೇ ಸ್ಫೋಟಕ ವಸ್ತುಗಳು ಪತ್ತೆ ಆಗಿಲ್ಲ' ಎಂದು ಪೊಲೀಸರು ಮಾಹಿತಿ ನೀಡಿದರು. 'ಚಾಲಕನಿಂದ ದೂರು ಸ್ವೀಕರಿಸಿ ಕಳುಹಿಸಲಾಗಿದೆ. ಬ್ಯಾಗ್‌ಗಳನ್ನು ಆಟೊಗೆ ತಂದು ಯಾರು ಇಟ್ಟುಹೋಗಿದ್ದಾರೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

15 ಪ್ರಕರಣದಲ್ಲಿ ಭಾಗಿ ರೌಡಿಶೀಟರ್ ಬಂಧನ

ಬೆಂಗಳೂರು: ಗಂಭೀರ ಸ್ವರೂಪದ 15 ಪ್ರಕರಣಗಳಲ್ಲಿ ಭಾಗಿಯಾಗಿದ್ದ ರೌಡಿಶೀಟರ್ ಮಹಮ್ಮದ್ ಶಾಬಾಜ್‌ನನ್ನು(27) ಗೋವಿಂದಪುರ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

'ಸರ್ವಜ್ಞನಗರದ ಶಾಂಪುರ ಮುಖ್ಯರಸ್ತೆಯ ನಿವಾಸಿ ಮಹಮ್ಮದ್ ಶಾಬಾಜ್, ಗೋವಿಂದಪುರ ಠಾಣಾ ವ್ಯಾಪ್ತಿಯ ರೌಡಿಶೀಟರ್ ಆಗಿದ್ದಾನೆ. ಕೊಲೆ, ಕೊಲೆಗೆ ಪ್ರಯತ್ನ, ಹಲ್ಲೆ, ದರೋಡೆ ಮಾಡಲು ಸಿದ್ಧತೆ ಮಾಡಿಕೊಳ್ಳುವುದು, ಅಪಹರಣ ಸೇರಿದಂತೆ ಗಂಭೀರ ಸ್ವರೂಪದ 15 ಪ್ರಕರಣಗಳಲ್ಲಿ ಶಾಬಾಜ್ ಭಾಗಿ ಆಗಿದ್ದ. ಆರು ಪ್ರಕರಣಗಳಲ್ಲಿ ಜಾಮೀನಿನ ಮೇಲೆ ಬಿಡುಗೆಯಾಗಿ, ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡು ಓಡಾಟ ನಡೆಸುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

'ಪ್ರತಿಬಂಧಕ ಕಾಯ್ದೆಯಡಿ ರೌಡಿಶೀಟರ್‌ನನ್ನು ಬಂಧಿಸುವಂತೆ ನಗರ ಪೊಲೀಸ್ ಕಮಿಷನರ್ ಆದೇಶ ಹೊರಡಿಸಿದ್ದರು. ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಿ ಬಳ್ಳಾರಿ ಜೈಲಿಗೆ ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಕಾರಿನಲ್ಲಿ ಕುಳಿತು ಬೆಂಕಿ ಹಚ್ಚಿಕೊಂಡು ಉದ್ಯಮಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುದ್ದಿನಪಾಳ್ಯದ ವಿಶ್ವೇಶ್ವರಯ್ಯ ಬಡಾವಣೆಯ ಖಾಲಿ ಪ್ರದೇಶದಲ್ಲಿ ಕಾರಿನ ಒಳಗೆ ಕುಳಿತು ಬೆಂಕಿಹಚ್ಚಿಕೊಂಡು ಹೋಟೆಲ್ ಉದ್ಯಮಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಾಗರಬಾವಿ ಎರಡನೇ ಹಂತದ 12ನೇ ಮುಖ್ಯರಸ್ತೆ ನಿವಾಸಿ, ಉದ್ಯಮಿ ಪ್ರದೀಪ್ (42) ಆತ್ಮಹತ್ಯೆ ಮಾಡಿಕೊಂಡವರು.

'ಶನಿವಾರ ಮಧ್ಯಾಹ್ನದ ವೇಳೆ ತಮ್ಮ ಸ್ಕೋಡಾ ಕಾರಿನಲ್ಲಿ ಬಂದಿದ್ದ ಪ್ರದೀಪ್ ಕಾರಿನಲ್ಲಿ ಕುಳಿತು ಮೈಮೇಲೆ ಪೆಟ್ರೋಲ್ ಸುರಿದುಕೊಂಡು ನಂತರ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾರು ಸಂಪೂರ್ಣ ಭಸ್ಮವಾಗಿದೆ. ಮೃತದೇಹವು ಗುರುತಿಸಲಾರದಷ್ಟು ಸುಟ್ಟು ಹೋಗಿತ್ತು. ಕಾರು ಸಂಚರಿಸಿದ್ದ ಮಾರ್ಗದಲ್ಲಿದ್ದ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿ ಆಧರಿಸಿ ಗುರುತು ಪತ್ತೆ ಮಾಡಲಾಯಿತು' ಎಂದು ಪೊಲೀಸರು ಹೇಳಿದರು.

ಆರ್ಥಿಕ ನಷ್ಟ: ಹೋಟೆಲ್ ಉದ್ಯಮದಲ್ಲಿ ಪ್ರದೀಪ್ ನಷ್ಟ ಅನುಭವಿಸಿದ್ದರು. ಸಾಕಷ್ಟು ಸಾಲ ಮಾಡಿಕೊಂಡಿದ್ದರು. ಇದೇ ಕಾರಣಕ್ಕೆ ಮನನೊಂದು ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ ಎಂದು ಹೇಳಲಾಗಿದ್ದು, ನಿಖರ ಕಾರಣ ಪತ್ತೆ ಮಾಡಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಪ್ರದೀಪ್

'ಮುದ್ದಿನಪಾಳ್ಯಕ್ಕೆ ಶನಿವಾರ ಮಧ್ಯಾಹ್ನ 2 ಗಂಟೆ ಸುಮಾರಿಗೆ ಸ್ಕೋಡಾ ಕಾರಿನಲ್ಲಿ ಪ್ರದೀಪ್ ಬಂದಿದ್ದರು. ಕೆಲ ಸಮಯ ಕಾರಿನಲ್ಲೇ ಕುಳಿತಿದ್ದರು. ಅದಾದ ಮೇಲೆ ಕಾರು ಹೊತ್ತಿ ಉರಿಯಲು ಆರಂಭಿಸಿತ್ತು. ಸಮೀಪದ ಮನೆಯವರು ಕಾರಿಗೆ ಬೆಂಕಿ ಬಿದ್ದಿರುವುದನ್ನು ಗಮನಿಸಿ, ಅಗ್ನಿಶಾಮಕದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಅಗ್ನಿಶಾಮಕ ದಳದ ವಾಹನ ಸ್ಥಳಕ್ಕೆ ಬಂದಾಗ ಮಧ್ಯಾಹ್ನ 2.45 ಆಗಿತ್ತು. ಆ ವೇಳೆಗೆ ಕಾರು ಬಹುತೇಕ ಭಸ್ಮವಾಗಿತ್ತು. ಬೆಂಕಿ ನಂದಿಸಿದ ನಂತರ ಪರಿಶೀಲನೆ ನಡೆಸಿದಾಗ ಕಾರಿನ ಒಳಗೆ ಮೃತದೇಹ ಪತ್ತೆಯಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಪೆಟ್ರೋಲ್ ಖರೀದಿ: ಆತ್ಮಹತ್ಯೆ ಮಾಡಿ ಕೊಳ್ಳಲು ಉದ್ಯಮಿ ಪೆಟ್ರೋಲ್ ಖರೀದಿಸಿ ಬಾಟಲಿಯಲ್ಲಿ ತುಂಬಿಕೊಂಡು ಬಂದಿದ್ದರು ಎನ್ನಲಾಗಿದೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ. ಘಟನೆಯ ಸಂಪೂರ್ಣ ದೃಶ್ಯ ಅಕ್ಕಪಕ್ಕದ ಮನೆಗಳಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ' ಎಂದು ಪೊಲೀಸರು ಹೇಳಿದರು.

'ದೆಹಲಿ ನೋಂದಣಿ ಸಂಖ್ಯೆಯ ಸ್ಕೋಡಾ ಕಾರನ್ನು ಪ್ರದೀಪ್ ಅವರು ಇತ್ತೀಚೆಗಷ್ಟೇ ಖರೀದಿಸಿದ್ದರು. ಮಾಲೀಕತ್ವ ಇನ್ನೂ ಬದಲಾವಣೆ ಆಗಿರಲಿಲ್ಲ' ಎಂದು ಮೂಲಗಳು ಹೇಳಿವೆ.

ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಯುಡಿಆರ್ ಪ್ರಕರಣ ದಾಖಲಾಗಿದೆ.

ಅವಹೇಳನಕಾರಿ ಹೇಳಿಕೆ: ನಟಿ ಕಸ್ತೂರಿ ಸೆರೆ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ತೆಲುಗು ಮಾತನಾಡುವ ಜನರ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದ ನಟಿ ಕಸ್ತೂರಿ ಅವರನ್ನು ಪೊಲೀಸರು ಹೈದರಾಬಾದ್‌ನಲ್ಲಿ ಶನಿವಾರ ಬಂಧಿಸಿದ್ದಾರೆ.

ನಟಿಯ ಹೇಳಿಕೆಗಳು ದ್ವೇಷ ಭಾಷಣದಿಂದ ಕೂಡಿವೆ ಎಂಬುದನ್ನು ಮನಗಂಡ ಮದ್ರಾಸ್ ಹೈಕೋರ್ಟ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಎರಡು ದಿನಗಳ ಹಿಂದಷ್ಟೇ ವಜಾಗೊಳಿಸಿತ್ತು.

ಅದರ ಬೆನ್ನಲ್ಲೇ ನಟಿ ಕಸ್ತೂರಿ ಅವರ ಬಂಧನವಾಗಿದೆ.

ಹೈದರಾಬಾದ್‌ನಲ್ಲಿ ಅಡಗಿದ್ದ ನಟಿಯನ್ನು ತಮಿಳುನಾಡು ಪೊಲೀಸರ ವಿಶೇಷ ತಂಡ ಪತ್ತೆ ಹಚ್ಚಿ ಬಂಧಿಸಿತು ಎಂದು ಮೂಲಗಳು ತಿಳಿಸಿವೆ.

ನವೆಂಬರ್ 3ರಂದು ಸಭೆಯೊಂದರಲ್ಲಿ ಕಸ್ತೂರಿ ಅವರು ತಮಿಳುನಾಡಿನಲ್ಲಿ ನೆಲೆಸಿರುವ ತೆಲುಗು ಭಾಷಿಗರ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದರು.

ಅವರ ಹೇಳಿಕೆಗಳನ್ನು ಖಂಡಿಸಿ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಮದುರೈನಲ್ಲಿ ದೂರು ದಾಖಲಾಗಿತ್ತು. ಇದರ ಬೆನ್ನಲ್ಲೇ ನಟಿಯ ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್ ಮೊರೆ ಹೋಗಿದ್ದರು.

'ಡಿಸೆಂಬರ್‌ನಲ್ಲಿ ಕಿಮೊಥೆರಪಿ ಕೇಂದ್ರಗಳ ಉದ್ಘಾಟನೆ'

ಮಂಗಳೂರು: ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ತೆರೆಯುವ ಡೇ ಕೇರ್ ಕಿಮೊಥೆರಪಿ ಕೇಂದ್ರಗಳ ಉದ್ಘಾಟನೆ ಡಿಸೆಂಬರ್‌ನಲ್ಲಿ ನಡೆಯಲಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

10 ಆಸನಗಳ ಕಿಮೊಥೆರಪಿ ಕೇಂದ್ರಗಳು ಎಲ್ಲ ಜಿಲ್ಲೆಗಳಲ್ಲೂ ಸೇವೆಗೆ ಲಭ್ಯವಾಗಲಿವೆ. ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನದಲ್ಲಿ ಅಥವಾ ಯಾವುದಾದರೂ ಜಿಲ್ಲಾ ಕೇಂದ್ರದಲ್ಲಿ ಮುಖ್ಯಮಂತ್ರಿಯವರು ಈ ಯೋಜನೆಗೆ ಚಾಲನೆ ನೀಡುವರು ಎಂದು ಶನಿವಾರ ಇಲ್ಲಿ ತಿಳಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಕ್ಯಾನ್ಸರ್ ತಜ್ಞರು ಇರುವುದಿಲ್ಲ. ಇದ್ದರೂ ಕೆಲಸದ ಒತ್ತಡ ಹೆಚ್ಚು ಇರುತ್ತದೆ. ಆದ್ದರಿಂದ ಕಿಮೊಥೆರಪಿ ಕೇಂದ್ರಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ನಿರ್ವಹಿಸಲು ನಿರ್ಧರಿಸಲಾಗಿದೆ. ಮಂಗಳೂರಿನಲ್ಲಿ ಯೆನೆಪೋಯ ವೈದ್ಯಕೀಯ ಕಾಲೇಜಿನ ನೆರವು ಪಡೆಯಲಾಗುವುದು ಎಂದು ವಿವರಿಸಿದರು.

ಎಂಆರ್‌ಐ ಮತ್ತು ಸಿಟಿ ಸ್ಕ್ಯಾನ್ ಜಿಲ್ಲಾಸ್ಪತ್ರೆಗಳಲ್ಲಿ ಉಚಿತವಾಗಿ ಮಾಡಲಾಗುತ್ತದೆ. ಆದರೆ ವೆನ್ಲಾಕ್ ಆಸ್ಪತ್ರೆಯಲ್ಲಿ ಶುಲ್ಕ ಪಡೆಯುತ್ತಿದ್ದಾರೆ ಎಂಬ ದೂರು ಕೇಳಿಬಂದಿದ್ದು ಪರಿಶೀಲಿಸಲಾಗುತ್ತಿದೆ. ಲೋಪಗಳು ಕಂಡುಬಂದರೆ ಈಗ ನಿರ್ವಹಣೆ ಮಾಡುತ್ತಿರುವ ಕಂಪನಿಯನ್ನು ಕೈಬಿಟ್ಟು ಹೊಸ ಗುತ್ತಿಗೆ ನೀಡಲಾಗುವುದು ಎಂದು ಹೇಳಿದರು.

ಪೆಟ್ರೋಲ್ ಬಂಕ್ ನೌಕರನಿಂದ ಹಣ ಕಿತ್ತು ಪರಾರಿ: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿರುವ ಗಾಂಧಿ ಭವನದ ಪಕ್ಕದ ಪೆಟ್ರೋಲ್ ಬಂಕ್ ನೌಕರನ ಮೇಲೆ ಹಲ್ಲೆ ನಡೆಸಿ ಹಣ ಕಿತ್ತುಕೊಂಡು ಪರಾರಿಯಾಗಿದ್ದ ಬೆಂಗಳೂರಿನ ನಾಲ್ವರು ಆರೋಪಿಗಳನ್ನು ಇಲ್ಲಿಯ ಪುರ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಬೆಂಗಳೂರಿನ ಲಕ್ಕಸಂದ್ರದ ಮಹಮ್ಮದ್ ಸೂಫಿಯಾನ್, ಉಮ್ರಾಜ್ ಪಾಷಾ, ಮೊಹಮ್ಮದ್ ಅಷ್ರಾ, ಸೈಯ್ಯದ್ ಶೋಹೆಬ್ ಬಂಧಿತರು. ಕೃತ್ಯಕ್ಕೆ ಬಳಸಿದ್ದ ಕಾರು ಹಾಗೂ ಚಾಕುವನ್ನು ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿದೆ.

ನ.7 ರಂದು ಮುಂಜಾನೆ ಬೆಂಗಳೂರು–ಮೈಸೂರು ಹೆದ್ದಾರಿಯ ಪೆಟ್ರೋಲ್ ಬಂಕ್‌ಗೆ ತೆರಳಿದ್ದ ಆರೋಪಿಗಳು ಬಂಕ್ ನೌಕರನಿಗೆ ಐದು ಸಾವಿರ ನಗದು ಕೊಡುವಂತೆ ಮತ್ತು ಅದಕ್ಕೆ ಬದಲಾಗಿ ಮೊಬೈಲ್ ವಾಲೆಟ್‌ನಿಂದ ಹಣ ವರ್ಗಾಯಿಸುವುದಾಗಿ ಹೇಳಿದ್ದರು.

ಅದನ್ನು ನಂಬಿದ ನೌಕರ ಬ್ಯಾಗ್‌ನಿಂದ ಹಣ ತೆಗೆದು ಕೊಡಲು ಮುಂದಾದಾಗ ಮೊಬೈಲ್‌ನಿಂದ ಹಣ ವರ್ಗಾಯಿಸಲು ಸಾಧ್ಯವಾಗುತ್ತಿಲ್ಲ ಎಂದು ಯುವಕರ ತಂಡ ನಾಟಕವಾಡಿತ್ತು. ಆಗ ಹಣ ನೀಡಲು ನಿರಾಕರಿಸಿದ ಬಂಕ್ ನೌಕರ ಹಣವನ್ನು ಮತ್ತೆ ಬ್ಯಾಗ್‌ನೊಳಗೆ ಹಾಕಿಕೊಂಡಿದ್ದ.

ಆರೋಪಿಗಳು ಚಾಕುವಿನಿಂದ ಆತನ ಮೇಲೆ ಹಲ್ಲೆ ಮಾಡಿ ಬ್ಯಾಗ್‌ನಲ್ಲಿದ್ದ ₹22 ಸಾವಿರ ನಗದು ಕಿತ್ತುಕೊಂಡು ಪರಾರಿಯಾಗಿದ್ದರು. ಚನ್ನಪಟ್ಟಣದ ಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪೆಟ್ರೋಲ್ ಬಂಕ್‌ನಲ್ಲಿ ಅಳವಡಿಸಿದ್ದ ಸಿಸಿಟಿವಿ ದೃಶ್ಯ ಪರಿಶೀಲಿಸಿದ ಪೊಲೀಸರು ಆರೋಪಿಗಳ ಬಗ್ಗೆ ಮಾಹಿತಿ ಕಲೆ ಹಾಕಿದ್ದರು. ಸರ್ಕಲ್ ಇನ್‌ಸ್ಪೆಕ್ಟರ್ ರವಿಕಿರಣ್ ನೇತೃತ್ವದ ತಂಡ ಬೆಂಗಳೂರಿನ ಲಕ್ಕಸಂದ್ರದಲ್ಲಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿ ಕರೆತಂದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಅಪಘಾತ: ಚಾಲಕ ಸಾವು

ಬೆಂಗಳೂರು: ನೈಸ್ ರಸ್ತೆಯ ಕೊಮ್ಮಘಟ್ಟ ಮೇಲ್ಸೇತುವೆ ಬಳಿ ಸಂಭವಿಸಿದ ಸರಣಿ ಅಪಘಾತದಲ್ಲಿ ಚಾಲಕರೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತಮಿಳುನಾಡಿನ ಕೃಷ್ಣಗಿರಿಯ ಹರಿಹರನ್(30) ಮೃತ ಚಾಲಕ. ಶುಕ್ರವಾರ ರಾತ್ರಿ ಮೂರು ವಾಹನಗಳ ಮಧ್ಯೆ ಸರಣಿ ಅಪಘಾತ ಸಂಭವಿಸಿದೆ.

'ಮಾಗಡಿ ಕಡೆಯಿಂದ ಬರುತ್ತಿದ್ದ ಟಿಪ್ಪರ್‌ಗೆ ಹಿಂದಿನಿಂದ ಬರುತ್ತಿದ್ದ ಮತ್ತೊಂದು ಟಿಪ್ಪರ್ ಡಿಕ್ಕಿ ಹೊಡೆದಿದೆ. ಅದೇ ಮಾರ್ಗದಲ್ಲಿ ಬರುತ್ತಿದ್ದ ಐಷರ್ ವಾಹನವು ಟಿಪ್ಪರ್‌ಗೆ ಡಿಕ್ಕಿ ಹೊಡೆದು, ಚಾಲಕ ಹರಿಹರನ್ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

'ವಾಹನಗಳು ಚಲಿಸುವಾಗಲೇ ಈ ಸರಣಿ ಅಪಘಾತ ಸಂಭವಿಸಿದೆ. ಘಟನೆ ಬಳಿಕ ಮೊದಲ ಟಿಪ್ಪರ್ ವಾಹನದ ಚಾಲಕ ವಾಹನ ನಿಲ್ಲಿಸದೆ ಪರಾರಿಯಾಗಿದ್ದಾನೆ. ಎರಡನೇ ಟಿಪ್ಪರ್ ವಾಹನ ಹಾಗೂ ಐಷರ್ ವಾಹನ ಜಪ್ತಿ ಮಾಡಲಾಗಿದೆ' ಎಂದು ಸಂಚಾರ ಪೊಲೀಸರು ಹೇಳಿದರು. ಕೆಂಗೇರಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿತ್ರಾವಳಿ

ವಿದೇಶಿ ವನ್ಯಜೀವಿಗಳ ರಕ್ಷಣೆ

ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಈಚೆಗೆ ಕಳ್ಳಸಾಗಣೆದಾರರಿಂದ ರಕ್ಷಿಸಿದ ವಿದೇಶಿ ವನ್ಯಜೀವಿಗಳು. ಮಲೇಷ್ಯಾದಿಂದ 41 ವನ್ಯಜೀವಿಗಳನ್ನು ಟ್ರಾಲಿ ಬ್ಯಾಗ್‌ಗಳಲ್ಲಿ ಕಳ್ಳಸಾಗಣೆ ಮಾಡಲಾಗುತ್ತಿತ್ತು.

ನಕ್ಷತ್ರ ಆಮೆಗಳು

ದೊಡ್ಡ ಪಾದದ ಆಮೆ

ಮೊಸಳೆ ಮರಿ

ಪ್ರಾಣಿಗಳನ್ನು ತರಲು ಬಳಸಿದ್ದ ಟ್ರಾಲಿಗಳು

ನಿಧನ ವಾರ್ತೆ

ಸಾವಿತ್ರಿ ಗುಂಡಿ

ಹುಬ್ಬಳ್ಳಿ: ವಿಧಾನ ಪರಿಷತ್ತಿನ ಮಾಜಿ ಸದಸ್ಯೆ, ವಕೀಲರಾಗಿದ್ದ ಸಾವಿತ್ರಿ ಎಂ. ಗುಂಡಿ (84) ಶುಕ್ರವಾರ ನಿಧನರಾದರು. ಅವರು ಹುಬ್ಬಳ್ಳಿಯ ಜೆ.ಸಿ.ನಗರದಲ್ಲಿ ವಾಸವಿದ್ದರು. ಅಂತ್ಯಕ್ರಿಯೆ ಶನಿವಾರ ನೆರವೇರಿತು. 1942ರಲ್ಲಿ ದಾವಣಗೆರೆಯಲ್ಲಿ ಜನಿಸಿದ ಸಾವಿತ್ರಿ ಅವರು ಬಿ.ಎಸ್ಸಿ, ಎಲ್‌ಎಲ್‌ಬಿ ಶಿಕ್ಷಣ ಪಡೆದು ವಕೀಲರಾಗಿದ್ದರು. ವಿವಿಧ ಸಾಮಾಜಿಕ ಕಾರ್ಯದಲ್ಲಿ ತೊಡಗಿಕೊಂಡಿದ್ದರು. 1986-92ರವರೆಗೆ ವಿಧಾನಪರಿಷತ್ ಸದಸ್ಯರಾಗಿದ್ದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಚೇರಿ: 30/1, 1ನೇ ಹಾಗೂ 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು – 560 051.

No:CGM(Tech)/BSWML/PR/148/2023-24 Date: 16.11.2024

ಅಧಿಸೂಚನೆ – ತ್ಯಾಜ್ಯ ಸಂಸ್ಕರಣಾಗಾರರನ್ನು ಎಂಪ್ಯಾನೆಲಿಂಗ್ ಮಾಡಲು ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ.

ಪರಿಸರ(ಸಂರಕ್ಷಣೆ) ಕಾಯಿದೆ 1986ರ ಸೆಕ್ಷನ್ 3, 6 ಮತ್ತು 25ರ ಅಡಿಯಲ್ಲಿಯ ಅಧಿಕಾರಗಳನ್ನು ಚಲಾಯಿಸಿ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಘನತ್ಯಾಜ್ಯ ನಿರ್ವಹಣೆ ನಿಯಮಗಳು–2016 ಗೆಜೆಟ್ ಅಧಿಸೂಚನೆ ಸಂಖ್ಯೆ: GSR 451(ಇ), ವಿಭಾಗ–2, ಉಪ–ವಿಭಾಗ–1, ದಿನಾಂಕ: 03.06.2015 ಮತ್ತು 08.04.2016 ರನ್ನು ಜಾರಿಗೊಳಿಸಲಾಗಿದೆ.

ಸ್ಥಳೀಯ ಸಂಸ್ಥೆಗಳು ನಿಯಮ–15(ಝಡ್‌ಎಫ್) ಅಡಿಯಲ್ಲಿ ಎಸ್‌ಡಬ್ಲ್ಯೂಎಂ–ಬೈ ಲಾ ಗಳನ್ನು ಸೂಚಿಸಲು ಮತ್ತು ಅದರ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಎಸ್‌ಡಬ್ಲ್ಯೂಎಂ ಬೈ–ಲಾ ಅನ್ನು ಗೆಜೆಟ್ ಅಧಿಸೂಚನೆ ಸಂ: Addl.com/SWM/PR/G/9266/2019-20, ದಿನಾಂಕ: 20.04.2020 ರಲ್ಲಿ ಸೂಚಿಸಿದೆ.

ಎಸ್‌ಡಬ್ಲ್ಯೂಎಂ–ಬೈ ಲಾ ಗಳಲ್ಲಿ ಸೂಚಿಸಿದಂತೆ ತ್ಯಾಜ್ಯ ಉತ್ಪಾದಕರಿಂದ ಬಳಕೆದಾರರ ಶುಲ್ಕವನ್ನು ಪಾವತಿಸುವ ಬಗ್ಗೆ ನಿಯಮ–4(3) ಹೇಳುತ್ತದೆ ಮತ್ತು ತ್ಯಾಜ್ಯ ಉತ್ಪಾದಕರಿಂದ ಸ್ಥಳೀಯ ಸಂಸ್ಥೆಗಳು ಬಳಕೆದಾರರ ಶುಲ್ಕವನ್ನು ಸಂಗ್ರಹಿಸುವ ಬಗ್ಗೆ ನಿಯಮ–15(ಎಫ್) ಹೇಳುತ್ತದೆ.

ಇದಲ್ಲದೆ, ಗೌರವಾನ್ವಿತ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ, ಪ್ರಧಾನ ಪೀಠ, ನವದೆಹಲಿಯು OA No.606/2018, ರಲ್ಲಿ ನೀಡಲಾದ ತನ್ನ ಹಲವಾರು ಆದೇಶಗಳಲ್ಲಿ "ಮಾಲಿನ್ಯಕಾರರು ಪಾವತಿಸುವ ಸಿದ್ಧಾಂತ" ದ ಅನುಷ್ಠಾನಕ್ಕೆ ನಿರ್ದೇಶನ ನೀಡಿರುತ್ತದೆ.

ಎಸ್‌ಡಬ್ಲ್ಯೂಎಂ ಬೈ–ಲಾ 2020ರ ಬೈ–ಲಾ 14(7) ಸ್ಥಳೀಯ ಸಂಸ್ಥೆಗಳು ಸೇವೆಗಳನ್ನು ಬಳಸದ ತ್ಯಾಜ್ಯ ಉತ್ಪಾದಕರು ಸಂಗ್ರಹಿಸಿದ, ಸಾಗಿಸಿದ ಮತ್ತು ಸಂಸ್ಕರಿಸಿದ/ವಿಲೇವಾರಿ ಮಾಡಿದ ಘನತ್ಯಾಜ್ಯದ ಪ್ರಮಾಣದ ವಾರ್ಷಿಕ ರಿಟರ್ನ್ ಸಲ್ಲಿಸಬೇಕೆಂದು ಸೂಚಿಸುತ್ತದೆ.

ಎಸ್‌ಡಬ್ಲ್ಯೂಎಂ ಬೈ–ಲಾ 2020ರ ಬೈ–ಲಾ 14(8) ಮತ್ತು 21(6) ರ ಪ್ರಕಾರ ಯಾವುದೇ ಅಧಿಕೃತ ತ್ಯಾಜ್ಯ ಸಂಸ್ಕರಣಾಗಾರರು ತಮ್ಮನ್ನು ಸ್ಥಳೀಯ ಸಂಸ್ಥೆಯಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಆದ್ದರಿಂದ ಬಿಬಿಎಂಪಿ ಕಾಯಿದೆ 2020ರ ಪ್ರಕಾರ ಅದರ ಏಜೆನ್ಸಿಯೊಂದಿಗೆ ನೋಂದಾಯಿಸಿಕೊಳ್ಳಬೇಕಾಗುತ್ತದೆ ಹಾಗೂ ಈ ಸಂಸ್ಕರಣಾಗಾರರು ನಿರ್ವಹಿಸಬೇಕಾದ ದಾಖಲೆಗಳ ವಿವರಗಳು ಮತ್ತು ಪಾವತಿಸಬೇಕಾದ ನೋಂದಣಿ/ನವೀಕರಣ ಶುಲ್ಕ ಕುರಿತು ಸೂಚಿಸುತ್ತದೆ.

ಎಸ್‌ಡಬ್ಲ್ಯೂಎಂ ಬೈ–ಲಾ 2020ರ ಬೈ–ಲಾ 20(1) (ಎ&ಬಿ) ಮತ್ತು 21(2/3/4/5)ರ ಪ್ರಕಾರ ಬೃಹತ್ ತ್ಯಾಜ್ಯ ಉತ್ಪಾಕರುಗಳನ್ನು ಗುರುತಿಸುವುದು ಮತ್ತು ಇನ್–ಸಿತು ಅಳವಡಿಸಿಕೊಳ್ಳಲು ಸ್ಥಳಾವಕಾಶದ ಕೊರತೆಯ ಸಂದರ್ಭದಲ್ಲಿ ಎಡಬ್ಲ್ಯೂಪಿ ಗಳ ಸೇವೆಗಳನ್ನು ಪಡೆಯುವ ಬಗ್ಗೆ ಸೂಚಿಸುತ್ತದೆ.

ಎಸ್‌ಡಬ್ಲ್ಯೂಎಂ ಬೈ–ಲಾ 2020ರ ಬೈ–ಲಾ 21(7)ರ ಪ್ರಕಾರ ಶಾಸನಬದ್ಧ ದಾಖಲೆಗಳನ್ನು ಹೊಂದಿರುವ ಮತ್ತು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಂದ ಅಧಿಕೃತಗೊಳಿಸಲಾದ ಎಡಬ್ಲ್ಯೂಪಿ ಗಳ ಸೇವೆಗಳನ್ನು ಪಡೆಯುವ ಬಗ್ಗೆ ಸೂಚಿಸುತ್ತದೆ.

ಬಿಬಿಎಂಪಿ ಕಾಯಿದೆ 2020, ಬಿಬಿಎಂಪಿ ಎಸ್‌ಡಬ್ಲ್ಯೂಎಂ ಬೈ–ಲಾ 2020 ಮತ್ತು ಎಸ್‌ಡಬ್ಲ್ಯೂಎಂ ನಿಯಮಗಳು 2016ರ ಸೆಕ್ಷನ್ 285ರ ಅಡಿಯಲ್ಲಿ ನೀಡಲಾದ ಅಧಿಕಾರಗಳ ಅನ್ವಯ, ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತವು ತ್ಯಾಜ್ಯ ಸಂಸ್ಕರಣಾಗಾರರುಗಳಿಗೆ ಬೃಹತ್ ತ್ಯಾಜ್ಯ ಉತ್ಪಾದಕರಿಂದ ಸಂಗ್ರಹಣೆ, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿ ಕಾರ್ಯವನ್ನು ಎಸ್‌ಡಬ್ಲ್ಯೂಎಂ ನಿಯಮಗಳು–2016 ಮತ್ತು ಬಿಬಿಎಂಪಿ ಎಸ್‌ಡಬ್ಲ್ಯೂಎಂ ಬೈ–ಲಾ 2020ರ ಪ್ರಕಾರ ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲು ನಿರ್ಧರಿಸಿರುತ್ತದೆ.

ಈ ಸಂಬಂಧವಾಗಿ, ಎಸ್‌ಡಬ್ಲ್ಯೂಎಂ ನಿಯಮಗಳು–2016/ಬಿಬಿಎಂಪಿ ಎಸ್‌ಡಬ್ಲ್ಯೂಎಂ ಬೈ–ಲಾಗಳು/ಎಸ್‌ಒಪಿಗಳು ಮತ್ತು ಕೆಎಸ್‌ಪಿಸಿಬಿ/ಸಿಪಿಸಿಬಿ ಮಾರ್ಗಸೂಚಿಗಳನ್ವಯ ಸಂಸ್ಕರಣಾ ಸೌಲಭ್ಯ/ಮರುಬಳಕೆ ಘಟಕವನ್ನು ಹೊಂದುವ ಮೂಲಕ ಘನತ್ಯಾಜ್ಯ ನಿರ್ವಹಣೆಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಪನಿಗಳು/ಸಂಸ್ಥೆಗಳು/ವ್ಯಕ್ತಿಗಳಿಂದ ಮಾತ್ರ ಅಧಿಕೃತವಾಗಿ ತ್ಯಾಜ್ಯ ಸಂಸ್ಕರಣಾಗಾರರಾಗಿ ಎಂಪ್ಯಾನೆಲ್ ಮಾಡಲು ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ವಿಧಾನ

ಆಸಕ್ತಿಯುಳ್ಳ ಅರ್ಜಿದಾರರು/ಘಟಕಗಳು **http://bswml.in/** ಗೆ ಭೇಟಿ ನೀಡಬಹುದು ಅಥವಾ ಕೆಳಕಂಡ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಬೇಕು

ಅನುಸರಿಸಬೇಕಾದ ಹಂತಗಳು/ಪ್ರಕ್ರಿಯೆ

1. Visit to website. 2. Click register 3. Enter basic details (mobile number and password are important) and submit – Pop up will follow. 4. Login page- enter registered mobile number and password- click login. 5. Screen will redirect to homepage. 6. Select Authorized Waste Processors. 7. Enter essential details and upload documents- submit final application. 8. Applicant will receive an email and Whatsapp confirmation with application Id. 9.Download acknowledgement.

ವೇಳಾಪಟ್ಟಿಯು ಈ ಕೆಳಕಂಡಂತಿರುತ್ತದೆ:

ಕ್ರ.ಸಂ.	ವಿವರಗಳು	ದಿನಾಂಕ ಮತ್ತು ಸಮಯ
1	ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸುವ ಪ್ರಾರಂಭದ ದಿನಾಂಕ:	19.11.2024ರ ಮಧ್ಯಾಹ್ನ 14.00 ಗಂಟೆಯಿಂದ.
2	ನೋಂದಾವಣಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ:	30.11.2024ರ ರಾತ್ರಿ 23.59 ಗಂಟೆವರೆಗೆ.
3	ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ:	30.11.2024ರ ರಾತ್ರಿ 23.59 ಗಂಟೆವರೆಗೆ.

ಸಲ್ಲಿಸಿದ ಅಂತಿಮ ಅರ್ಜಿಯ ನಕಲು ಮತ್ತು ನೋಂದಣಿ ಶುಲ್ಕಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತರ ಪರವಾಗಿ ನೋಂದಣಿ ಶುಲ್ಕ/ಡಿಡಿ ಪಾವತಿಯ ಪುರಾವೆಯನ್ನು ಅಪ್‌ಲೋಡ್ ಮಾಡಿದ ಎಲ್ಲಾ ದಾಖಲೆಗಳೊಂದಿಗೆ ದಿನಾಂಕ: **05.12.2024 ರಂದು 17.30 ಗಂಟೆಯವರೆಗೆ ಅಥವಾ ಅದಕ್ಕೂ ಮೊದಲು** ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಸಲ್ಲಿಸಬೇಕು.

Scan here to apply

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು/ಮುಅ
ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ.

ವಾಸಾಸಂಇ/ವಾ.ಪ್ರ/3275/ಎಂಎಎ/2024–25

ನಗರದಲ್ಲಿ ಇಂದು

'ಕೆಕೆಎಂಎಫ್ ಕನ್ನಡೋತ್ಸವ-2024': ಸಾನಿಧ್ಯ: ಮಂಜುನಾಥ ಭಾರತಿ ಸ್ವಾಮೀಜಿ, ಉಪಸ್ಥಿತಿ: ಸಂತೋಷ್ ಲಾಡ್, ಹಂಸಲೇಖ, ಪಿ.ಜಿ.ಆರ್. ಸಿಂಧ್ಯ, ಕನ್ನಡ ಧ್ವಜಾರೋಹಣ: ಎಸ್. ಜಿ. ಸಿದ್ಧರಾಮಯ್ಯ, ದೇಸಿ ಕ್ರೀಡಾಸ್ಪರ್ಧೆಗಳ ಉತ್ಸವಕ್ಕೆ ಚಾಲನೆ: ಲಕ್ಷ್ಮಿ ಹೆಬ್ಬಾಳ್ಕರ್, ಆಯೋಜನೆ: ಕನ್ನಡ ಕ್ಷತ್ರಿಯ ಮರಾಠ ಫೌಂಡೇಷನ್, ಸ್ಥಳ: ಡಾ. ರಾಜ್‌ಕುಮಾರ್ ಸಭಾಂಗಣ, ಗೆಳೆಯರ ಬಳಗ, ಮಹಾಲಕ್ಷ್ಮಿ ಲೇಔಟ್, ಬೆಳಿಗ್ಗೆ 9

ಹಂಸಲೇಖ

6ನೇ ಅಖಿಲ ಭಾರತ ಹರಿದಾಸ ಸಾಹಿತ್ಯ ಸಮ್ಮೇಳನ: ಸಾನ್ನಿಧ್ಯ: ಅಕ್ಷೋಭ್ಯರಾಮಪ್ರಿಯತೀರ್ಥ ಶ್ರೀಪಾದ ಸ್ವಾಮೀಜಿ, ಸಮ್ಮೇಳನದ ಅಧ್ಯಕ್ಷತೆ: ಅರಳುಮಲ್ಲಿಗೆ ಪಾರ್ಥಸಾರಥಿ, ಅತಿಥಿಗಳು: ಡಿ.ವಿ. ಪರಮಶಿವಮೂರ್ತಿ, ಬಿ. ವೆಂಕಟಕೃಷ್ಣ ಶಾಸ್ತ್ರಿ, ಎಂ. ರುಕ್ಮಾಂಗದ ನಾಯ್ಡು, ಸಿ.ಆರ್. ಮುರಳಿ, ಸುಭಾಸ ಬಿ. ಕಾಖಂಡಕಿ, ಆಯೋಜನೆ: ರಾಷ್ಟ್ರೀಯ ವೇದವಿಜ್ಞಾನ ಸಂಸ್ಥೆ ಟ್ರಸ್ಟ್, ಸ್ಥಳ: ಶ್ರೀಕೃಷ್ಣ ಸಮೂಹ ವಿದ್ಯಾ ಸಂಸ್ಥೆ, ಐಟಿಐ ಲೇಔಟ್, ಬೆಳಿಗ್ಗೆ 9.30

ತೊಗಟವೀರ ಕ್ಷತ್ರಿಯ ಸಂಘದ ನೂತನವಾಗಿ ನಿರ್ಮಿಸಿರುವ ವಿದ್ಯಾರ್ಥಿನಿಲಯದ ಉದ್ಘಾಟನೆ: ಸಾನ್ನಿಧ್ಯ: ದಿವ್ಯಜ್ಞಾನಾನಂದಗಿರಿ ಸ್ವಾಮೀಜಿ, ಉದ್ಘಾಟನೆ: ಪಿ.ಸಿ. ಮೋಹನ್, ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಬಿ.ಎಸ್. ಸೋಮಶೇಖರ್, ಆಯೋಜನೆ: ತೊಗಟವೀರ ಕ್ಷತ್ರಿಯ ಸಂಘ, ಸ್ಥಳ: ಎನ್.ಎಸ್. ಅಯ್ಯಂಗಾರ್ ರಸ್ತೆ, ಮೂರನೇ ಕ್ರಾಸ್, ಕುಮಾರಪಾರ್ಕ್ ಪಶ್ಚಿಮ, ಶೇಷಾದ್ರಿಪುರಂ ಕಾಲೇಜಿನ ಹಿಂಭಾಗ, ಬೆಳಿಗ್ಗೆ 10

ಚಿಣ್ಣರ ಉತ್ಸವ: ಆಯೋಜನೆ: ಸಮ್ಮತಿ ವೆಲ್ಫೇರ್ ಅಸೋಸಿಯೇಷನ್, ಸ್ಥಳ: ಜವಾಹರ್ ಬಾಲಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 10ರಿಂದ

ಜೋಗಿ ಅವರ 'ಇಳಂಗೋವನ್' ಪುಸ್ತಕ ಬಿಡುಗಡೆ: ಅತಿಥಿಗಳು: ಬಿ.ಆರ್. ಲಕ್ಷ್ಮಣರಾವ್, ಟಿ.ಎನ್. ಸೀತಾರಾಂ, ಪ್ರಕಾಶ್ ರಾಜ್, ಪ್ರಕಾಶ್ ಕಂಬತ್ತಳ್ಳಿ, ಆಯೋಜನೆ: ಸಾವಣ್ಣ ಪ್ರಕಾಶನ, ಸ್ಥಳ: ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಕವಿ ಬಿ.ಆರ್. ಲಕ್ಷ್ಮಣರಾವ್

ಪ್ರಾದೇಶಿಕ ಹೂಡಿಕೆದಾರರ ಜಾಗೃತಿ ವಿಚಾರ ಸಂಕಿರಣ: 'ಆರ್ಥಿಕ ಸಾಕ್ಷರತಾ ಸಂಭ್ರಮ 'ಅರ್ಥೋತ್ಸವ': ಅಧ್ಯಕ್ಷತೆ: ಡಾ.ನಾ. ಸೋಮೇಶ್ವರ, ಅತಿಥಿಗಳು: ಎಂ. ಜಯದೇವ್, ಟಿ.ಜಿ. ಸೆಂಥಿಲ್ ವೇಲನ್, ಸ್ಥಳ: ಮಾರುತಿ ಸಭಾಂಗಣ, ವಾಸವಿ ವಿದ್ಯಾನಿಕೇತನ ಶಾಲೆ, ವಾಣಿ ವಿಲಾಸ್ ರಸ್ತೆ, ವಿ.ವಿ. ಪುರ, ಬೆಳಿಗ್ಗೆ 10

'ಮಹರ್ಷಿ ವಾಲ್ಮೀಕಿ ಜಯಂತಿ, ಪ್ರತಿಭಾ ಪುರಸ್ಕಾರ-2024': ಉದ್ಘಾಟನೆ: ಸತೀಶ್ ಜಾರಕಿಹೊಳಿ, ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಕೆ.ಎನ್. ರಾಜಣ್ಣ, ಪ್ರತಿಭಾ ಪುರಸ್ಕಾರ: ಎಂ. ಕೃಷ್ಣಪ್ಪ, ಅಧ್ಯಕ್ಷತೆ: ಬಿ.ಎನ್. ಚಂದ್ರಶೇಖರಯ್ಯ, ಅತಿಥಿ: ಪ್ರಿಯಕೃಷ್ಣ, ಸನ್ಮಾನಿತರು: ಪ್ರಿಯಾಂಕಾ ಎಸ್. ಜಾರಕಿಹೊಳಿ, ಕೆ.ಎಸ್. ಮೃತ್ಯುಂಜಯ, ಆಯೋಜನೆ: ವಿಜಯನಗರ ನಾಯಕ ಸಂಘ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10

'ಉದಯೋನ್ಮುಖಿ' ಎಸ್‌ವಿಎನ್‌-ರಮಣ ಮ್ಯೂಸಿಕ್ ಯೂಥ್ ಫೆಸ್ಟಿವೆಲ್‌-2024: ಕೊಳಲು ವಾದನ: ಮೇಧಾ ಉಡುಪ, ಪಿಟೀಲು: ವರಲಕ್ಷ್ಮಿ, ಮೃದಂಗ: ನೀಲಾಭ ಡೋಂಗ್ರೆ, ಗಾಯನ: ಆದಿತ್ಯ ರವಿದಾಸ್, ಪಿಟೀಲು: ಅಭಿನವ್ ಅಯ್ಯಂಗಾರ್, ಪಿಟೀಲು: ಹಂಸಾ ಎಚ್.ಎನ್., ಮೃದಂಗ: ಅಪ್ರಮೇಯ, ಘಟ: ಸ್ಕಂದ, ಆಯೋಜನೆ: ಎಸ್‌ವಿಎನ್ ಮ್ಯೂಸಿಕ್ ಅಕಾಡೆಮಿ, ಭಗವಾನ್ ಶ್ರೀರಮಣ ಮಹರ್ಷಿ ರಿಸರ್ಚ್ ಸೆಂಟರ್, ಸ್ಥಳ: ರಮಣ ಮಹರ್ಷಿ ಹೆರಿಟೇಜ್ ಸಭಾಂಗಣ, ಸಂಜಯನಗರ, ಬೆಳಿಗ್ಗೆ 10ರಿಂದ

ಡಿ.ವಿ. ಗುಂಡಪ್ಪ ಅವರ 'ಮಂಕು ತಿಮ್ಮನ ಕಗ್ಗ' ಅನುವಾದಿತ 'ಮಡ್ಲಲ್ಡ್ ಮುಫ್ಸ್ ಮ್ಯುಸ್ಸಿಂಗ್ಸ್' ಪುಸ್ತಕ ಬಿಡುಗಡೆ ಹಾಗೂ ಸಂವಾದ: ಪುಸ್ತಕ ಬಿಡುಗಡೆ: ಶತವಧಾನಿ ಆರ್. ಗಣೇಶ್, ಪುಸ್ತಕದ ಕುರಿತು: ವೆಂಕಟೇಶ್ ಪ್ರಸನ್ನ, ಅಧ್ಯಕ್ಷತೆ: ಬಸರಾಜ ಕಲ್ಗುಡಿ, ಆಯೋಜನೆ: ಸಾಹಿತ್ಯ ಅಕಾಡೆಮಿ, ಸ್ಥಳ: ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್, ದೊಡ್ಡಬಸಣ್ಣ ದೇವಸ್ಥಾನದ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

'ಮ್ಯೂಸಿಯಂ ಆಫ್ ಮೆಮೊರೀಸ್' ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿ, ಕಸ್ತೂರಬಾ ರಸ್ತೆ, ಶಾಂತಲಾನಗರ, ಬೆಳಿಗ್ಗೆ 11

'ಕುರಬ್ಕಿ-ಕುರುಬರ ಜೊತೆಗೊಂದು ಪ್ರಯಾಣ': ಉಣ್ಣೆಯ ಕಾರ್ಯಾಗಾರ, ಸೂಜಿ ಫೆಲ್ಟಿಂಗ್, ವಸ್ತ್ರ ನೇಯ್ಗೆ, ಲೈವ್ ಪರ್ಫಾಮೆನ್ಸ್: ವಾಸು ದೀಕ್ಷಿತ್, ಕುರುಬ ಸಮುದಾಯದಿಂದ, ಆಯೋಜನೆ ಮತ್ತು ಸ್ಥಳ: ಕುರುಬ್ಕಿ, ಸಮಗತ ಫೌಂಡೇಷನ್, ನಾಲ್ಕನೇ ಮಹಡಿ, ಚರ್ಚ್ ಸೀಟ್, ಬೆಳಿಗ್ಗೆ 11

ಹುಣ್ಣಿಮೆ ಹಾಡು, ಕಾಡುಮಲ್ಲೇಶ್ವರ ಕಡಲೆಕಾಯಿ ಪರಿಷೆ: ಬೆಳಿಗ್ಗೆ 11ಕ್ಕೆ ಹುಣ್ಣಿಮೆ ಹಾಡು-202: ಅಪರೂಪದ ಭಾವಗೀತೆಗಳ ಕಾರ್ಯಕ್ರಮ: ಮಧು ಮನೋಹರನ್, ಕಾರ್ತಿಕ್ ಪಾಂಡವಪುರ ತಂಡದಿಂದ, ಅತಿಥಿ: ಬಾಲಚಂದ್ರ, ಸಂಜೆ 6.30ಕ್ಕೆ ಹುಣ್ಣಿಮೆ ಹಾಡು-2023: ಸೃಷ್ಟಿ ನಿರಂತರ ಮತ್ತು ತಂಡ, ಅತಿಥಿ: ದೊಡ್ಡಣ್ಣ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಭ್ರಮರಾಂಭ ಸಮೇತ ಕಾಡುಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ಸಂಪಿಗೆ ರಸ್ತೆ, ಮಲ್ಲೇಶ್ವರ

ಬಡಗುತಿಟ್ಟು ಪೌರಾಣಿಕ ಯಕ್ಷೋತ್ಸವ: **ಅತಿಥಿಗಳು:** ಮೋಹನ್ ಹೆಗಡೆ, ವೀರಕಪುತ್ರ ಶ್ರೀನಿವಾಸ, ಸಾರ್ಥಕ ಪ್ರಶಸ್ತಿ ಪುರಸ್ಕೃತರು: ಉಮೇಶ್ ಭಟ್ ಬಾಡ, ಅಭಿನಂದನಾ ನುಡಿ: ಎ.ಪಿ. ಪಾಠಕ್, 'ಸುಭದ್ರಾ ಕಲ್ಯಾಣ', 'ಮಾನಿಷಾದ' ಯಕ್ಷಗಾನ ಪ್ರದರ್ಶನ, ಆಯೋಜನೆ: ಯಕ್ಷಸಿಂಚನ ಟ್ರಸ್ಟ್, ಸ್ಥಳ: ಉದಯಭಾನು ಕಲಾಸಂಘ, ಗವಿಪುರ ಸಾಲು ಛತ್ರಗಳ ಎದುರು, ಕೆಂಪೇಗೌಡನಗರ, ಮಧ್ಯಾಹ್ನ 3ರಿಂದ

ಎಲ್ಲ ಜಿಲ್ಲೆಗಳಿಗೆ ಹವಾಮಾನದ ಮುನ್ನೋಟ ಬಿಡುಗಡೆ: ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದೊಮ್ಮಲೂರು, ಬೆಳಿಗ್ಗೆ 11.30ರಿಂದ

ಸಂಸ್ಥಾಪಕರ ದಿನಾಚರಣೆ: ಅತಿಥಿಗಳು: ಕೆ. ಗೋವಿಂದರಾಜು, ಮಂಜುಳಾ ಲಿಂಬಾವಳಿ, ಸುಧೀರ ಮೆನನ್ ಚೆಂಬಾಜಿ, ಬೆನ್ ಚಿಕ್ಕಸ್ವಾಮಿ, ಕೆ.ಸಿ. ರಾಜುರೆಡ್ಡಿ, ಕೆ.ಸಿ. ರಾಮಮೂರ್ತಿ, ಸಬಿತಾ ರಾಮಮೂರ್ತಿ, ಆಯೋಜನೆ: ಸಿಎಂಆರ್ ವಿಶ್ವವಿದ್ಯಾಲಯ, ಸ್ಥಳ: ಏಕ್ಯ ನಾವ, ಪಣತ್ತೂರು, ವರ್ತೂರು, ಸಂಜೆ 4

ಮೊಳಗಲಿ ಕನ್ನಡ ಜಯಭೇರಿ: ಅತಿಥಿ: ಎಲ್.ಎ. ರವಿ ಸುಬ್ರಮಣ್ಯ, ಅಧ್ಯಕ್ಷತೆ: ಕಿಕ್ಕೇರಿ ಕೃಷ್ಣಮೂರ್ತಿ, ಅತಿಥಿಗಳು: ಅನಸೂಯ ಪ್ರಸಾದ್, ಸತ್ಯನಾರಾಯಣ, ಅಮರನಾಥ, ಪಿ. ಶಿವಶಂಕರ್, ಆಯೋಜನೆ: ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಸ್ಥಳ: ಕಹಳೆಬಂಡೆ ಉದ್ಯಾನ, ಬಸವನಗುಡಿ, ಸಂಜೆ 5

ಸಂಗೀತಾ-ಸಿತಾರಾ: ಗಾಯನ: ಸಂಗೀತಾ ಹೆಗಡೆ, ತಬಲಾ: ಯೋಗೀಶ ಭಟ್ಟ, ಹಾರ್ಮೋನಿಯಂ: ಗುರುಪ್ರಸಾದ ಹೆಗಡೆ, ಸಿತಾರ ವಾದನ: ಛೋಟೆ ರೆಹಮತ್ ಖಾನ್, ತಬಲಾ: ರಾಜೇಂದ್ರ ನಾಕೋಡ್, ಆಯೋಜನೆ: ಸಪ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

'ಕೇಡರ್ಸ್ ಸ್ಪೆಕ್ಟ್ರಮ್ ಆಫ್ ಆರ್ಟ್' ಪ್ರದರ್ಶನ: ಆಯೋಜನೆ: ಕೇಡರ್ ದಿ ಆಟಿಸಂ ಸೆಂಟರ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 5.45ರಿಂದ

ವಾರ್ಷಿಕ ಸಂಗೀತೋತ್ಸವ: ಗಾಯನ: ಶ್ರೀಕೃಷ್ಣ ಮೋಹನ್, ರಾಮಕುಮಾರ್ ಮೋಹನ್, ಪಿಟೀಲು: ಎಡಪಲ್ಲಿ ಅಜಿತ್ ಕುಮಾರ್, ಮೃದಂಗ: ತ್ರಿಚೂರ್ ಮೋಹನ್, ಮೋರ್ಸಿಂಗ್: ಬಿ. ರಾಜಶೇಖರ್, ದ್ವಂದ್ವ ಪಿಟೀಲು: ಎಂ. ನಾಗರಾಜ್, ಎಂ. ಮಂಜುನಾಥ್, ಸ್ಥಳ: ಗಾಯನ ಸಮಾಜ, ಸಂಜೆ 6

'ನಂಗ್ಯಾಕೊ ಡೌಟು' ನಾಟಕ ಪ್ರದರ್ಶನ: ಆಯೋಜನೆ: ರಂಗರಥ, ಸ್ಥಳ: ವ್ಯೋಮ ಆರ್ಟ್ಸ್ ಸ್ಪೇಸ್ ಆ್ಯಂಡ್ ಸ್ಟುಡಿಯೊ ಥಿಯೇಟರ್, ಎಂಟನೇ ಮುಖ್ಯರಸ್ತೆ, ಜೆ.ಪಿ. ನಗರ, ಮೂರನೇ ಹಂತ, ಸಂಜೆ 6

ರಮೇಶ್‌ಚಂದ್ ಎಚ್‌.ಸಿ. ಅವರ 'ಶೇಷಗ್ರಸ್ತರು' ಪುಸ್ತಕ ಬಿಡುಗಡೆ: ಉಮಾಶ್ರೀ, 'ಶೇಷಗ್ರಸ್ತರು' ರಂಗಪ್ರಯೋಗ: ನಿರ್ದೇಶನ: ರಮೇಶ್‌ಚಂದ್ ಎಚ್. ಸಿ., ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.45

ಕ್ರಾಂತಿ ಬಂತು ಕ್ರಾಂತಿ ನಾಟಕ ಪ್ರದರ್ಶನ: ರಚನೆ: ಪಿ. ಲಂಕೇಶ್, ನಿರ್ದೇಶನ: ಅಭಿಷೇಕ ಚಕ್ರಣ್ಣವರ, ಪ್ರಸ್ತುತಿ: ಕಲಾವಿಲಾಸಿ ತಂಡ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಖದೀಮರ ಹೊಸ ವಿಧಾನ 'ಸೈಬರ್ ಕಿಡ್ನಾಪ್': ಜನರ ನೆಮ್ಮದಿ ಕೆಡಿಸುತ್ತಿರುವ ಸೈಬರ್ ಕಳ್ಳರ ಕರೆ

ಹಣ ದೋಚಲು 'ಅಪಹರಣದ ತಂತ್ರ'

• ಆದಿತ್ಯ ಕೆ.ಎ.

ಬೆಂಗಳೂರು: ಸೈಬರ್ ಖದೀಮರು ಹಣ ದೋಚಲು ದಿನಕ್ಕೊಂದು ತಂತ್ರ ರೂಪಿಸುತ್ತಿದ್ದು, ಮತ್ತೊಂದು ವಿನೂತನ ವಂಚನೆ ವಿಧಾನ ಕಂಡುಕೊಂಡಿದ್ದಾರೆ. ಕುಟುಂಬದ ಸದಸ್ಯರೊಬ್ಬರ ಅಥವಾ ತಮ್ಮ ಮಕ್ಕಳ ಅಪಹರಣವಾಗಿದೆ ಎಂದು ಕರೆ ಮಾಡಿ ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ.

ಸೈಬರ್ ಕಳ್ಳರು ಅನುಸರಿಸುತ್ತಿರುವ ಹೊಸ ವಿಧಾನಗಳು ಸೈಬರ್ ಅಪರಾಧ ಠಾಣೆಯ ಪೊಲೀಸರಿಗೂ ತಲೆನೋವಾಗಿದೆ. 'ಅಪರಿಚಿತ ಕರೆಗಳು' ಜನರ ನೆಮ್ಮದಿಯನ್ನೂ ಕೆಡಿಸುತ್ತಿವೆ.

ಇದುವರೆಗೂ ಕೃತಕ ಬುದ್ಧಿಮತ್ತೆಯ (ಎ.ಐ) ಮಿಮಿಕ್ರಿ, ಒಎಲ್‌ಎಕ್ಸ್, ಬ್ಯಾಂಕ್ ವಹಿವಾಟಿನ ಒನ್ ಟೈಂ ಪಾಸ್‌ವರ್ಡ್ (ಒಟಿಪಿ), ಡಿಜಿಟಲ್ ಅರೆಸ್ಟ್ (ಫೋನ್ ಹಾಗೂ ವಿಡಿಯೊ ಕರೆಗಳ ಮೂಲಕ ಗೃಹಬಂಧನ), ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಂಡರೆ, ಹಬ್ಬದ ಗಿಫ್ಟ್‌ಗಳು ಸಿಗಲಿವೆ ಎಂದು ಆಮಿಷವೊಡ್ಡಿ ವಂಚಿಸುತ್ತಿದ್ದ ಸೈಬರ್ ಕಳ್ಳರು, ಕಳೆದ ಕೆಲವು ದಿನಗಳಿಂದ 'ಸೈಬರ್ ಕಿಡ್ನಾಪ್' ಅಥವಾ 'ಡಿಜಿಟಲ್ ಅಪಹರಣ'ದ ಸೋಗಿನಲ್ಲಿ ದೊಡ್ಡ ಪ್ರಮಾಣದಲ್ಲಿ ಹಣ ದೋಚುತ್ತಿದ್ದಾರೆ.

'ಮನೆಯ ಸದಸ್ಯರೊಬ್ಬರ ಅಪಹರಣ ಮಾಡಲಾಗಿದೆ' ಎಂದು ಕರೆ ಬಂದಿತ್ತು ಎಂದು ರಾಜ್ಯದ ವಿವಿಧೆಡೆ ಠಾಣೆಗಳಿಗೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಕರೆಗಳ ಜಾಡು ಪರಿಶೀಲಿಸಿದಾಗ ಸೈಬರ್ ಕಳ್ಳರ ಹೊಸ ಮಾರ್ಗ ಎಂಬುದು ಬಯಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಕಳೆದ ಒಂದು ವಾರದಲ್ಲಿ ಬೆಂಗಳೂರಿನ ಹಲವರಿಗೆ ಈ ರೀತಿಯ ಕರೆಗಳು ಬಂದಿರುವುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ. ಅಲ್ಲದೇ ಈ ರೀತಿಯ ಕರೆಗಳು ಬಂದಿರುವುದಾಗಿ ಸಾಮಾಜಿಕ ಮಾಧ್ಯಮದಲ್ಲೂ ಕೆಲವರು ಮಾಹಿತಿ ಹಂಚಿಕೊಂಡಿದ್ದಾರೆ ಎಂದು ಗೊತ್ತಾಗಿದೆ.

ವಿದೇಶಗಳಲ್ಲಿ ಕುಳಿತು ಕರೆ ಮಾಡುತ್ತಿರುವ ವಂಚಕರು, 'ನಿಮ್ಮ ಪುತ್ರಿ/ಪುತ್ರ ಅಥವಾ ಕುಟುಂಬದ ಸದಸ್ಯರೊಬ್ಬರನ್ನು ಅಪಹರಿಸಿದ್ದೇವೆ. ಅವರ ಬಿಡುಗಡೆಗೆ ತಕ್ಷಣವೇ ಇಂತಿಷ್ಟು ಹಣ ನೀಡಬೇಕು' ಎಂದು ಕರೆ ಮಾಡುತ್ತಿದ್ದಾರೆ. ಇನ್ನೂ ಕೆಲವು ವಂಚಕರು, 'ನಿಮ್ಮ ಮಗು ಅಥವಾ ವೃದ್ಧರೊಬ್ಬರ ಬಂಧನವಾಗಿದೆ' ಎಂಬುದಾಗಿ ಕರೆ ಮಾಡಿ ಬೆದರಿಸುತ್ತಿದ್ದಾರೆ.

'ಮಕ್ಕಳನ್ನು ಶಾಲೆಗೆ ಕಳುಹಿಸಿ ಪೋಷಕರು ಕೆಲಸಕ್ಕೆ ತೆರಳಿರುತ್ತಾರೆ ಅಥವಾ ಮನೆಯಲ್ಲೇ ಬೇರೆ ಕೆಲಸಗಳಲ್ಲಿ ಮಗ್ನರಾಗುತ್ತಾರೆ. ಅಂತಹ ಪೋಷಕರನ್ನೇ ಹುಡುಕಿ ವಂಚಕರು ಕರೆ ಮಾಡುತ್ತಿದ್ದಾರೆ. ಕರೆ ಮಾಡುವುದಕ್ಕೂ ಮೊದಲು ಪೋಷಕರ ಪೂರ್ವಾಪರ ಪರಿಶೀಲನೆ ನಡೆಸಿಯೇ ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ' ಎಂದು ಸಿಐಡಿ ಸೈಬರ್ ಅಪರಾಧ ವಿಭಾಗದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಖಾತ್ರಿ ಪಡಿಸಿಕೊಳ್ಳಿ': ಅಪರಿಚಿತರಿಂದ ಅಪಹರಣದ ಕರೆಗಳು ಬಂದಾಗ ನಿಮ್ಮ ಕುಟುಂಬದ ಸದಸ್ಯರಿಗೆ ಕರೆ ಮಾಡಿ ಖಾತ್ರಿ ಪಡಿಸಿಕೊಳ್ಳಬೇಕು. ಶಾಲೆಗೂ ಕರೆ ಮಾಡಿ ಮಗುವಿನ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು' ಎಂದು ತಿಳಿಸಿದರು.

'ರಾಜಸ್ಥಾನ, ಬಿಹಾರ, ಜಾರ್ಖಂಡ್ ಹಾಗೂ ವಿದೇಶಗಳಲ್ಲಿ ವಂಚಕರು ಕುಳಿತು ತಂತ್ರಾಂಶ ಬಳಸಿ ಕರೆ ಮಾಡುತ್ತಿದ್ದಾರೆ. ಡಿಜಿಟಲ್ ಅರೆಸ್ಟ್, ಒಟಿಪಿ ವಂಚನೆಯ ಬಗ್ಗೆ ಜನರು ಈಗ ಹೆಚ್ಚು ಜಾಗೃತರಾಗಿದ್ದಾರೆ. ಇದೇ ಕಾರಣಕ್ಕೆ ವಂಚಕರು ಬೇರೆ ದಾರಿಗಳ ಮೂಲಕ ಜನರಿಂದ ಹಣ ದೋಚುತ್ತಿದ್ದಾರೆ. ಅಪಹರಣದ ಭಯ ಹುಟ್ಟಿಸಿದರೆ ತಕ್ಷಣವೇ ಹಣ ನೀಡುತ್ತಾರೆಂದು ವಿನೂತನ ಮಾರ್ಗವನ್ನು ಅನುಸರಿಸುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸೈಬರ್ ಕಿಡ್ನಾಪ್' ಬಗ್ಗೆ ಜಾಗೃತಿ ಜಾಗೃತಿ ಮೂಡಿಸುತ್ತಿರುವ ಪೊಲೀಸರು

ಅಪರಿಚಿತರ ಬಳಿ ದಾಖಲೆಗಳ ವಿವರವನ್ನು ಹಂಚಿಕೊಳ್ಳಬಾರದು. ಕರೆ ಬಂದಾಗ ಧೈರ್ಯದಿಂದ ಪೊಲೀಸರಿಗೆ ಮಾಹಿತಿ ನೀಡಬೇಕು

ಬಿ.ದಯಾನಂದ
ಬೆಂಗಳೂರು ನಗರ ಪೊಲೀಸ್ ಕಮಿಷನರ್

ಅಪಹರಣ ಬೆದರಿಕೆಯ ಕರೆಗಳು ಬಂದಲ್ಲಿ ತಕ್ಷಣವೇ 112ಕ್ಕೆ ಕರೆ ಮಾಡಿ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತೆರಳಿ ಮಾಹಿತಿ ಕೊಡಿ

ಅನೂಪ್ ಶೆಟ್ಟಿ
ಎಸ್‌ಪಿ, ಸೈಬರ್ ಕ್ರೈಂ ವಿಭಾಗ, ಸಿಐಡಿ

ಮಾಹಿತಿ ಕಲೆಹಾಕಿ ಕಾರ್ಯಾಚರಣೆ

'ಕೆಲವು ಪ್ರಕರಣಗಳಲ್ಲಿ ಕುಟುಂಬಸ್ಥರ ಸಂಪೂರ್ಣ ಮಾಹಿತಿ ಕಲೆ ಹಾಕಿದ ನಂತರವಷ್ಟೇ ಖದೀಮರು ಕಾರ್ಯಾಚರಣೆಗೆ ಇಳಿಯುತ್ತಿದ್ದಾರೆ. ಕರೆ ಮಾಡಿ, ಎಲ್ಲ ಸದಸ್ಯರ ಹೆಸರನ್ನು ಸೈಬರ್ ವಂಚಕರೇ ಹೇಳುತ್ತಾರೆ. ನಂಬುವಂತೆ ಮಾಡುತ್ತಾರೆ. ನಂತರ, ತಮ್ಮ ವ್ಯಾಪ್ತಿಯ ಠಾಣೆ ಪೊಲೀಸರೆಂದು ಪರಿಚಯಿಸಿಕೊಳ್ಳುತ್ತಾರೆ. 'ನಿಮ್ಮ ಮಗು ನಾಪತ್ತೆಯಾಗಿದೆ' ಎಂದು ಭಯ ಹುಟ್ಟಿಸುತ್ತಾರೆ. ತಾವು ನೀಡುವ ಬ್ಯಾಂಕ್ ಖಾತೆಗೆ ಹಣ ಹಾಕಿದರೆ, ತಕ್ಷಣವೇ ಮಗುವನ್ನು ಅಪಹರಣಕಾರರಿಂದ ಬಿಡಿಸಿಕೊಂಡು ತಮಗೆ ಒಪ್ಪಿಸುವುದಾಗಿ ಹೇಳಿ ಹಣ ದೋಚುತ್ತಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಸುದ್ದಿ 2 ನಿಮಿಷ

ಸರ್ಕಾರ ಬೀಳಿಸುವುದು ಹುಚ್ಚುತನದ ಪರಮಾವಧಿ: ಬಿಎಸ್ ಯಡಿಯೂರಪ್ಪ

ಶಿವಮೊಗ್ಗ: 'ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರವನ್ನು ಬೀಳಿಸುವ ಕೆಲಸವನ್ನು ಯಾರೂ ಮಾಡುತ್ತಿಲ್ಲ. ಪೂರ್ಣ ಬಹುಮತ ಹೊಂದಿರುವ ಸರ್ಕಾರವನ್ನು ಬೀಳಿಸುವುದು ಹುಚ್ಚುತನದ ಪರಮಾವಧಿ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

'ಸರ್ಕಾರ ಬೀಳಿಸುವುದಕ್ಕಾಗಿ ಕಾಂಗ್ರೆಸ್ ಶಾಸಕರನ್ನು ಯಾರೂ ಬಿಜೆಪಿಗೆ ಕರೆಯುತ್ತಿಲ್ಲ' ಎಂದು ಶನಿವಾರ ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಕೋವಿಡ್ ಸಂದರ್ಭದಲ್ಲಿ ಜೀವ ಉಳಿಸುವ ಕೆಲಸ ಮಾಡಿದ್ದೇವೆ. ಯಾವುದೇ ಭ್ರಷ್ಟಾಚಾರ ಅಥವಾ ಹಣಕಾಸಿನ ಏರುಪೇರು ಆಗಿಲ್ಲ. ರಾಜ್ಯ ಸರ್ಕಾರ ದುರುದ್ದೇಶದಿಂದ ಎಸ್‌ಐಟಿ ರಚನೆ ಮಾಡಿದೆ. ತನ್ನ ವೈಫಲ್ಯಗಳಿಂದ ಜನರ ಗಮನ ಬೇರೆಡೆ ಸೆಳೆಯಲು ಕೋವಿಡ್ ವಿಚಾರ ಪ್ರಸ್ತಾಪಿಸಿದೆ. ನಾವು ಎಲ್ಲಾ ರೀತಿಯ ತನಿಖೆ ಎದುರಿಸಿ ಆಪಾದನೆಗಳಿಂದ ಮುಕ್ತರಾಗಿ ಹೊರಗೆ ಬರುತ್ತೇವೆ' ಎಂದು ತಿಳಿಸಿದರು.

'ರಾಜ್ಯದ ಮೂರು ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಎನ್‌ಡಿಎ ಬೆಂಬಲಿತ ಅಭ್ಯರ್ಥಿಗಳು ಗೆಲ್ಲುತ್ತಾರೆ. ವಕ್ಫ್ ವಿಚಾರವಾಗಿ ಬಿಜೆಪಿಯಿಂದ ರಚಿಸಿರುವ ಸಮಿತಿ ರಾಜ್ಯದಲ್ಲಿ ಪ್ರವಾಸ ಮಾಡಿ ವರದಿ ಕೊಡಲಿದೆ' ಎಂದರು.

ಜೀವನ್ಮರಣದ ಪ್ರಶ್ನೆ ಸೃಷ್ಟಿಸಿದ ವಕ್ಫ್: ಶೋಭಾ ಕರಂದ್ಲಾಜೆ

ಬೆಂಗಳೂರು: 'ವಕ್ಫ್ ವಿಚಾರವು ಜೀವನ್ಮರಣದ ಪ್ರಶ್ನೆಯನ್ನು ಸೃಷ್ಟಿಸಿದೆ. ಅದರ ವಿರುದ್ಧ ಯಾರೇ ಹೋರಾಟವನ್ನು ಮುನ್ನಡೆಸಿದರೂ ನಮ್ಮ ಬೆಂಬಲ ಇದೆ' ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, 'ವಕ್ಫ್ ವಿಚಾರದಲ್ಲಿ ಬಿಜೆಪಿಯಲ್ಲಿ ಯಾವುದೇ ಗುಂಪುಗಾರಿಕೆ ಇಲ್ಲ' ಎಂದು ಅಭಿಪ್ರಾಯಪಟ್ಟರು.

'ವಿಜಯಪುರದಲ್ಲಿ 16 ಸಾವಿರ ಎಕರೆ ಜಮೀನು ವಕ್ಫ್ ಆಸ್ತಿ ಎಂದು ಹೇಳುತ್ತಿದ್ದಾರೆ. ಜಮೀರ್ ಕೃಪಾಕಟಾಕ್ಷದಿಂದ ಆಸ್ತಿಯ ವಿಸ್ತೀರ್ಣ ದಿನೇ ದಿನೇ ಜಾಸ್ತಿ ಆಗುತ್ತಿದೆ. ಈ ಜಮೀನು ರೈತರಿಗೆ, ಮಠ, ದೇವಸ್ಥಾನಗಳಿಗೆ ಸೇರಿದ್ದು' ಎಂದು ತಿಳಿಸಿದರು.

ಚಾಲುಕ್ಯರು, ಹೊಯ್ಸಳರು ಕಟ್ಟಿರುವ ದೇವಸ್ಥಾನಗಳೆಲ್ಲ ಇಂದು ವಕ್ಫ್ ಆಸ್ತಿ ಆಗಿವೆ. ವಕ್ಫ್ ಕಾನೂನು ಜಾರಿಗೆ ಬಂದಿದ್ದೇ 1954ರಲ್ಲಿ. ಸಾವಿರಾರು ವರ್ಷಗಳ ಹಿಂದಿನ ದೇವಸ್ಥಾನಗಳ ಆಸ್ತಿ ವಕ್ಫ್ ಹೆಸರಲ್ಲಿ ಬರಬೇಕಿದ್ದರೆ ಏನು ಕುತಂತ್ರ ನಡೆಯುತ್ತಿದೆ ಎಂದು ಅರ್ಥ ಮಾಡಿಕೊಳ್ಳಬೇಕು' ಎಂದರು.

ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮಾತನಾಡಿ, 'ಬುದ್ಧಿವಂತರು ಜಾಸ್ತಿ ಇರುವಲ್ಲಿ ವಿವಾದ ಇದ್ದೇ ಇರುತ್ತದೆ. ವಕ್ಫ್ ವಿರುದ್ಧದ ಹೋರಾಟದ ಧ್ವನಿ ಒಂದೇ ಆಗಿದೆ. ಉಪ ಚುನಾವಣೆ ಫಲಿತಾಂಶ ಬಂದ ಮೇಲೆ ನಮ್ಮ ಎಲ್ಲ ಬಣಗಳು ಒಂದಾಗುತ್ತವೆ' ಎಂದರು.

ಪಿಜಿಸಿಇಟಿ: 21ರೊಳಗೆ ಕಾಲೇಜು ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಬಿಎ, ಎಂಸಿಎ, ಎಂಇ, ಎಂ.ಟೆಕ್, ಎಂ.ಆರ್ಕ್ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಮೊದಲ ಸುತ್ತಿನ ಸೀಟು ಹಂಚಿಕೆ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಚಾಯ್ಸ್‌ಗೆ ಇದೇ 19ರವರೆಗೆ ಅವಕಾಶ ನೀಡಿದೆ.

ಅಭ್ಯರ್ಥಿಗಳು ತಮ್ಮ ಪೋಷಕರ ಜತೆ ಚರ್ಚಿಸಿ, ಸೂಕ್ತ ಚಾಯ್ಸ್ ದಾಖಲಿಸಬೇಕು. ಚಾಯ್ಸ್ 1 ಮತ್ತು 2 ಆಯ್ಕೆ ಮಾಡಿದವರು ಇದೇ 20ರೊಳಗೆ ಶುಲ್ಕ ಪಾವತಿ ಮಾಡಿ, 21ರ ಒಳಗೆ ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಕಾಲೇಜುಗಳಿಗೆ ಹೋಗುವಾಗ ಕಡ್ಡಾಯವಾಗಿ ಮೂಲ ದಾಖಲೆಗಳನ್ನು ತೆಗೆದುಕೊಂಡು ಹೋಗಬೇಕು.

ಮೂಲ ದಾಖಲೆಗಳು ಇಲ್ಲದಿದ್ದರೆ ಕಾಲೇಜುಗಳಲ್ಲಿ ಪ್ರವೇಶ ಮಾಡಿಸಿಕೊಳ್ಳುವುದಿಲ್ಲ ಎಂದೂ ಅವರು ಹೇಳಿದ್ದಾರೆ.

'ಕರಿಯ ಎಂದಿದ್ದು ಜಮೀರ್ ತಪ್ಪು'

ಹೇಳಿಕೆ ಸರಿಯಲ್ಲ, ತಿದ್ದುವ ಕೆಲಸ ಮಾಡುತ್ತೇವೆ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಂಗಳೂರು: 'ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಬಗ್ಗೆ ಸಚಿವ ಜಮೀರ್ ಅಹಮದ್ ಖಾನ್ ಅವರು 'ಕರಿಯ' ಎಂಬ ಬದ ಬಳಸಿರುವುದು ತಪ್ಪು' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶನಿವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಪ್ಪು ಬಿಳುಪು ಎಂದು ಕರೆಯುವುದು ಸರಿಯಲ್ಲ. ಜಮೀರ್ ಮತ್ತು ಕುಮಾರಸ್ವಾಮಿ ಏನು ಬೇಕಾದರೂ ಕರೆದುಕೊಳ್ಳಲಿ. ಕರಿಯ ಎಂದಾದರೂ ಹೇಳಲಿ, ಕೊಚ್ಚೆ ಎಂದಾದರೂ ಕರೆಯಲಿ. ಆದರೆ, ಪಕ್ಷದ ಅಧ್ಯಕ್ಷನಾಗಿ ನಾನು ಹೇಳುತ್ತಿದ್ದೇನೆ, ಜಮೀರ್ ಹೇಳಿಕೆ ಸರಿಯಲ್ಲ' ಎಂದರು.

'ಜಮೀರ್ ಅವರನ್ನು ತಿದ್ದುವ ಕೆಲಸ ಮಾಡುತ್ತೇವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಸಾರ್ವಜನಿಕವಾಗಿ ಹೇಳಲು ಆಗುವುದಿಲ್ಲ' ಎಂದರು.

'ಜಮೀರ್ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೆಪಿಸಿಸಿ ಉಪಾಧ್ಯಕ್ಷ ಎ.ಆರ್.ಎಂ. ಹುಸೇನ್ ಅವರು ಪತ್ರ ಬರೆದಿದ್ದು, ಕ್ರಮ ತೆಗೆದುಕೊಳ್ಳುತ್ತೀರಾ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಅದು ಅವರಿಬ್ಬರ (ಜಮೀರ್ ಮತ್ತು ಕುಮಾರಸ್ವಾಮಿ) ಆಂತರಿಕ ವಿಚಾರ. ಜಮೀರ್ ಅವರು ಪ್ರೀತಿ, ಸಲುಗೆಯಿಂದ ಮಾತನಾಡಿದ್ದಾರೋ ಗೊತ್ತಿಲ್ಲ. ಮಾತನಾಡಿದ್ದು ತಪ್ಪು ಎಂದು ಅವರಿಗೆ ಹೇಳಿದ್ದೇವೆ. ಅದಕ್ಕೆ ಅವರು ಈಗಾಗಲೇ ಕ್ಷಮೆ ಕೇಳಿದ್ದಾರೆ' ಎಂದರು.

'ಜಮೀರ್ ಅವರನ್ನು ಕುಮಾರಸ್ವಾಮಿ ಅವರು ಕೊಚ್ಚೆ' ಎಂದು ಕರೆದಿರುವ ಬಗ್ಗೆ ಕೇಳಿದಾಗ, 'ಮೊದಲೇ ಹೇಳಿದಂತೆ ಅದು ಅವರಿಬ್ಬರಿಗೆ ಬಿಟ್ಟ ವಿಚಾರ. ಅವರು ಕೊಚ್ಚೆ ಎಂದು, ಇವರು ಕರಿಯ ಎಂದು ಕರೆದಿದ್ದನ್ನು ಜನರು ನೋಡಿದ್ದಾರೆ. ಅವರೇ ತೀರ್ಮಾನಿಸುತ್ತಾರೆ' ಎಂದರು.

'ಡಿಕೆಶಿ ತಮ್ಮ ಅಭಿಪ್ರಾಯ ಹೇಳಿರಬಹುದು'

ಜಮೀರ್ ಅಹಮದ್ ಖಾನ್

ಮಂಗಳೂರು: 'ಕಾಲಾ' ಪದ ಬಳಕೆ ಬಗ್ಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿರುವ ಹೇಳಿಕೆ ಗಮನಿಸಿಲ್ಲ. ಅವರ ಅಭಿಪ್ರಾಯ ಅವರು ಹೇಳಿರಬಹುದು' ಎಂದು ಸಚಿವ ಜಮೀರ್ ಅಹಮದ್ ಖಾನ್ ಪ್ರತಿಕ್ರಿಯಿಸಿದರು.

ಕೇರಳದ ಕಾರ್ಯಕ್ರಮಕ್ಕೆ ತೆರಳುವ ವೇಳೆ ಶನಿವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಉತ್ತರಿಸಿದ ಅವರು, 'ಜಮೀರ್ ಪ್ರಚಾರಕ್ಕೆ ಬಂದಿದ್ದು ಅನುಕೂಲವಾಗಿದೆ ಎಂದು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ ಹೇಳಿದ್ದಾರೆ. ಜಮೀರ್ ಹೇಳಿಕೆಯಿಂದ ನಷ್ಟವೂ ಆಗಿರಬಹುದು ಎಂದಿರಬಹುದು. ನಾನು ಚನ್ನಪಟ್ಟಣದಲ್ಲಿ ಮೂರು ದಿನ ಪ್ರಚಾರ ಮಾಡಿದ್ದೇನೆ. ಯೋಗೇಶ್ವರ 18–20 ಸಾವಿರ ಮತಗಳ ಅಂತರದಿಂದ ಗೆಲ್ಲುತ್ತಾರೆ' ಎಂದರು.

'ಕಾಲಾ ಪದವನ್ನು ಕುಮಾರಸ್ವಾಮಿಗೆ ವೈಯಕ್ತಿಕವಾಗಿ ಬಳಕೆ ಮಾಡಿದ್ದು. ಒಕ್ಕಲಿಗ ಸಮುದಾಯದ ಬಗ್ಗೆ ನನಗೆ ಬಹಳ ಗೌರವ ಇದೆ. ನಾನು ಜೆಡಿಎಸ್ ಸೇರಲು ಆದಿಚುಂಚನಗಿರಿಯ ಹಿರಿಯ ಸ್ವಾಮೀಜಿ ಕಾರಣ. ನಾನು ಬೆಳೆದಿದ್ದು ಆ ಮಠದಲ್ಲಿ. ಸ್ವಾಮೀಜಿ ಬೆಂಗಳೂರಿಗೆ ಬಂದಾಗ ದಿನವಿಡೀ ನಾನು ಅವರ ಜೊತೆಗಿರುತ್ತಿದ್ದೆ. ಇದು ಕುಮಾರಸ್ವಾಮಿಗೂ ಗೊತ್ತು' ಎಂದು ಹೇಳಿದರು.

'ದೇವೇಗೌಡರ ಕುಟುಂಬ ಖರೀದಿ ಮಾಡುವುದಾಗಿ ನಾನು ಹೇಳಿಲ್ಲ. ಎಚ್.ಡಿ. ಕುಮಾರಸ್ವಾಮಿ ತಮಗೆ ಮುಸ್ಲಿಂ ಮತ ಬೇಕಾಗಿಲ್ಲ ಎಂದು ಹೇಳಿದ್ದರ ವಿಡಿಯೊ ನನ್ನ ಬಳಿ ಇದೆ. ಈ ಕಾರಣಕ್ಕೆ ಮುಸ್ಲಿಮರ ಮತ ಬೇಡವೆಂದು ಹೇಳಿ, ಹಣಕೊಟ್ಟು ಅವರನ್ನು ಕೊಂಡುಕೊಳ್ಳುತ್ತಿದ್ದೀರಲ್ಲ, ಅದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದ್ದೆ. ಮುಸ್ಲಿಮರು ಪಂಕ್ಚರ್ ಹಾಕುವವರು, ವೆಲ್ಡಿಂಗ್ ಮಾಡುವವರು ಎನ್ನುವ ಮೂಲಕ ಕುಮಾರಸ್ವಾಮಿ ನಮ್ಮ ಸಮುದಾಯದ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ' ಎಂದರು.

'ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿರುವ ಆರೋಪದ ಮೇಲೆ ಜಾರಿ ನಿರ್ದೇಶನಾಲಯವು ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ವರ್ಗಾಯಿಸಿತ್ತು. ಈಗ ಈ ಪ್ರಕರಣವು ಲೋಕಾಯುಕ್ತದಲ್ಲಿದ್ದು, ಲೋಕಾಯುಕ್ತ ನೋಟಿಸ್ ನೀಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ' ಎಂದರು.

ಸಹಾಯಕ ಪ್ರಾಧ್ಯಾಪಕ: 1,016 ಮಂದಿಗೆ ಸ್ಥಳ ನಿಯುಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ನೇಮಕಗೊಂಡಿರುವ 1,016 ಅಭ್ಯರ್ಥಿಗಳಿಗೆ ಉನ್ನತ ಶಿಕ್ಷಣ ಇಲಾಖೆಯು ಶನಿವಾರ ಆನ್‌ಲೈನ್ ಮೂಲಕ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಸಿ, ಸ್ಥಳ ನಿಯುಕ್ತಿ ಆದೇಶ ನೀಡಿದೆ.

ಸಹಾಯಕ ಪ್ರಾಧ್ಯಾಪಕರ ಮಂಜೂರಾದ ಹುದ್ದೆಗಳಲ್ಲಿ ಒಟ್ಟು 1,654 ಹುದ್ದೆಗಳು ಖಾಲಿ ಇದ್ದವು. ಈ ಪೈಕಿ, ಪ್ರಸ್ತುತ 1,016 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಈ ನೇಮಕಾತಿಗೂ ಮೊದಲು ಕಾರ್ಯನಿರತ ಕಾಯಂ ಬೋಧಕರ ಸಂಖ್ಯೆ ಶೇ 73.58ರಷ್ಟಿತ್ತು. ಹೊಸ ನೇಮಕಾತಿಯಿಂದ ಶೇ 88.85ರಷ್ಟಾಗಿದೆ. ಆ ಮೂಲಕ, ಬೋಧಕರ ಸಂಖ್ಯೆ ಶೇ 15.27 ಹೆಚ್ಚಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದ್ದಾರೆ.

'ಕಾಯಂ ಸಹಾಯಕ ಪ್ರಾಧ್ಯಾಪಕರ ಕೊರತೆಯಿಂದಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ತೊಂದರೆಗೀಡಾಗಿದ್ದರು. ಹೊಸ ನೇಮಕಾತಿಯಿಂಸ ಕಲ್ಯಾಣ ಕರ್ನಾಟಕ ಭಾಗವನ್ನೂ ಒಳಗೊಂಡಂತೆ, 'ಇ' ಮತ್ತು 'ಡಿ' ವಲಯಗಳ ಗ್ರಾಮೀಣ ಭಾಗದ ಸರ್ಕಾರಿ ಕಾಲೇಜುಗಳಿಗೆ ಪೂರ್ಣಕಾಲಿಕ ಅಧ್ಯಾಪಕರು ನೇಮಕಗೊಂಡಂತಾಗಿದೆ. ಅಲ್ಲದೆ, ಈ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಾಗ, ಕಲ್ಯಾಣ ಕರ್ನಾಟಕ ಭಾಗಕ್ಕೆ ಮಂಜೂರಾದ ಸಹಾಯಕ ಪ್ರಾಧ್ಯಾಪಕರ ಬಹುತೇಕ ಹುದ್ದೆಗಳನ್ನು ಭರ್ತಿ ಮಾಡಿದಂತಾಗುತ್ತದೆ' ಎಂದೂ ಅವರು ವಿವರಿಸಿದ್ದಾರೆ.

ಪದವಿ ಸಂಭ್ರಮ

ಹುಬ್ಬಳ್ಳಿಯ ವಿದ್ಯಾನಗರದ ಬಿವಿಬಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ನಡೆದ ಕೆಎಲ್ಇ ತಾಂತ್ರಿಕ ವಿಶ್ವವಿದ್ಯಾಲಯದ ಆರನೇ ಘಟಿಕೋತ್ಸವದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳ ಸಂಭ್ರಮ
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಕುವೆಂಪು ಭಾಷಾ ಭಾರತಿ 'ಗೌರವ ಪ್ರಶಸ್ತಿ' ಪ್ರಕಟ



ರಾಘವೇಂದ್ರ ರಾವ್

ರಾಜೇಂದ್ರ ಚೆನ್ನಿ

ದು. ಸರಸ್ವತಿ



ಕುಲಕರ್ಣಿ

ನಟರಾಜ್ ಹುಳಿಯಾರ್

ಕರೀಗೌಡ

ಬಸು

ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ 2023 ಹಾಗೂ 2024ನೇ ಸಾಲಿನ ವಾರ್ಷಿಕ 'ಗೌರವ ಪ್ರಶಸ್ತಿ'ಗೆ ಹತ್ತು ಜನ ಲೇಖಕರು, ಅನುವಾದಕರನ್ನು ಆಯ್ಕೆ ಮಾಡಲಾಗಿದೆ.

ಪ್ರಾಧಿಕಾರದ ಅಧ್ಯಕ್ಷ ಚನ್ನಪ್ಪ ಕಟ್ಟಿ ಅವರು ಪ್ರಶಸ್ತಿ ಪಟ್ಟಿಯನ್ನು ಶನಿವಾರ ಬಿಡುಗಡೆ ಮಾಡಿದ್ದಾರೆ. ಕನ್ನಡ ಹಾಗೂ ಇತರ ಭಾಷೆಗಳ ನಡುವೆ ಅನುವಾದಕ್ಕೆ ಸಂಬಂಧಿಸಿದಂತೆ ಆಯ್ಕೆ ಮಾಡಲಾಗಿದೆ.

2023ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ಪ್ರೊ.ಎಚ್.ಎಸ್. ರಾಘವೇಂದ್ರರಾವ್, ವಿನಯ್ ಚೈತನ್ಯ, ನಟರಾಜ್ ಹುಳಿಯಾರ್, ದು.ಸರಸ್ವತಿ, ಎಚ್.ಎಂ. ಕುಮಾರಸ್ವಾಮಿ ಆಯ್ಕೆಯಾಗಿದ್ದಾರೆ.

2024ನೇ ಸಾಲಿಗೆ ಆರ್.ಕೆ. ಕುಲಕರ್ಣಿ, ಕರೀಗೌಡ ಬೀಚನಹಳ್ಳಿ, ರಾಜೇಂದ್ರ ಚೆನ್ನಿ, ಬೋಡೆ ರಿಯಾಜ್ ಅಹ್ಮದ್ ಮತ್ತು ಬಸು ಬೇವಿನಗಿಡದ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರಶಸ್ತಿಯು ₹50 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

2022ನೇ ಸಾಲಿನ ಪುಸ್ತಕ ಬಹುಮಾನ

ವಿಭಾಗ	ಅನುವಾದಿತ ಕೃತಿ	ಅನುವಾದಕರು	ಮೂಲ ಲೇಖಕರು
ಕನ್ನಡದಿಂದ ಇಂಗ್ಲಿಷ್	ತೇಜೋ ತುಂಗಭದ್ರ	ಮೈತ್ರೇಯಿ ಕರ್ನೂರು	ವಸುಧೇಂದ್ರ
ಇಂಗ್ಲಿಷ್‌ನಿಂದ ಕನ್ನಡಕ್ಕೆ	ದಿ ಚಾಯ್ಸ್	ಜಯಶ್ರೀ ಭಟ್	ಈಡಿತ್ ಎಗರ್
ಇಂಗ್ಲಿಷ್‌ನಿಂದ ಕನ್ನಡಕ್ಕೆ	ಹೆಣಹೊರುವವನ ವೃತ್ತಾಂತ	ಜಯರಾಮರಾಜೇ ಅರಸ್	ಸೈರಸ್ ಮಿಸ್ತ್ರಿ
ಇಂಗ್ಲಿಷ್‌ಯೇತರ ಭಾಷೆಗಳಿಂದ ಕನ್ನಡಕ್ಕೆ	ದೇಹವೇ ದೇಶ	ವಿಕ್ರಮವಿಸಾಜಿ	ಗರಿಮಾ ಶ್ರೀವಾಸ್ತವ
	ಜಾಲ	ಶುಭಮಂಗಳ ಎಂ.ಜಿ.	ಪೆದ್ದಿಂಟಿ ಅಶೋಕ್ ಕುಮಾರ್

2023ನೇ ಸಾಲಿನ ಪುಸ್ತಕ ಬಹುಮಾನ

ವಿಭಾಗ	ಅನುವಾದಿತ ಕೃತಿ	ಅನುವಾದಕರು	ಮೂಲ ಲೇಖಕರು
ಕನ್ನಡದಿಂದ ಇಂಗ್ಲಿಷ್	ಲವ್ ಆ್ಯಂಡ್ ವಾಟರ್ ಫ್ಲೋ ಟುಗೆದರ್	ಸುಕನ್ಯಾ ಕನಾರಳ್ಳಿ	ಅಗ್ರಹಾರ ಕೃಷ್ಣಮೂರ್ತಿ
ಇಂಗ್ಲಿಷ್‌ನಿಂದ ಕನ್ನಡಕ್ಕೆ	ಪಾತ್ರ ಪ್ರವೇಶ	ಶ್ರೀಧರ್ ಹೆಗ್ಗೋಡು	ಕೋನ್‌ಸ್ಟಂಟಿನ್ ಸ್ತಾನಿಸ್ಲಾವಸ್ಕಿಯ
ಇಂಗ್ಲಿಷ್‌ನಿಂದ ಕನ್ನಡಕ್ಕೆ	ಅಂಬೇಡ್ಕರ್ ಜಗತ್ತು	ವಿಕಾಸ್ ಆರ್. ಮೌರ್ಯ	ಎಲೀನರ್ ಜೆಲಿಯಟ್
ಇಂಗ್ಲಿಷ್‌ಯೇತರ ಭಾಷೆಗಳಿಂದ ಕನ್ನಡಕ್ಕೆ	ನನ್ನ ಪಿತಾಮಹ ಮಹಾತ್ಮಾ ಗಾಂಧಿ	ಎಸ್.ಜಿ. ಭಾಗ್ವತ್	ಸುಮಿತ್ರಾಗಾಂಧಿ ಕುಲಕರ್ಣಿ
	ತೌಲನಿಕ ಧರ್ಮ ದರ್ಶನ	ತೋಂಟದ ಸಿದ್ಧರಾಮ ಸ್ವಾಮೀಜಿ	ಯಾಕೂಬ್ ಮಸೀಹ

2022 ಹಾಗೂ 2023ರಲ್ಲಿ ಪ್ರಕಟವಾದ ಅನುವಾದಿತ ಕೃತಿಗಳಿಗೆ ವಿವಿಧ ವಿಭಾಗಗಳಲ್ಲಿ ನೀಡಲಾಗುವ ಪುಸ್ತಕ ಬಹುಮಾನಗಳನ್ನೂ ಪ್ರಾಧಿಕಾರ ಪ್ರಕಟಿಸಿದೆ. ಪುಸ್ತಕ ಬಹುಮಾನವು ತಲಾ ₹ 25 ಸಾವಿರ ನಗದು ಒಳಗೊಂಡಿದೆ.

'ಎ.ಸಿ ನ್ಯಾಯಾಲಯ: ಶೇ 80ರಷ್ಟು ಪ್ರಕರಣ ಇತ್ಯರ್ಥ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪ ವಿಭಾಗಾಧಿಕಾರಿ (ಎ.ಸಿ) ಅರೆ ನ್ಯಾಯಿಕ ನ್ಯಾಯಾಲಯದಲ್ಲಿ ಈ ಹಿಂದಿನ ಸರ್ಕಾರ ಉಳಿಸಿ ಹೋಗಿದ್ದ ಹಳೆಯ ತಕರಾರು ಅರ್ಜಿಗಳ ಪೈಕಿ, ಶೇ 80ರಷ್ಟು ಪ್ರಕರಣಗಳನ್ನು ಒಂದು ವರ್ಷದಲ್ಲಿ ಇತ್ಯರ್ಥಪಡಿಸಲಾಗಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಎಲ್ಲ ಉಪ ವಿಭಾಗಾಧಿಕಾರಿಗಳ ಜೊತೆ ಶನಿವಾರ ವಿಡಿಯೊ ಸಂವಾದದ ಮೂಲಕ ಮಾಸಿಕ ಸಭೆ ನಡೆಸಿದ ಅವರು, 'ಎ.ಸಿ ನ್ಯಾಯಾಲಯಗಳಲ್ಲಿ ಪ್ರಕರಣಗಳ ವಿಲೇವಾರಿಗೆ ಸರ್ಕಾರ ನಿಗದಿಪಡಿಸಿರುವ ಕಾಲಮಿತಿ ಆರು ತಿಂಗಳು ಮಾತ್ರ. ಆದರೆ, ಹಿಂದಿನ ಸರ್ಕಾರ ಕಂದಾಯ ನ್ಯಾಯಾಲಯಗಳ ಪ್ರಕರಣಗಳ ವಿಳಂಬದ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ' ಎಂದರು.

1,774 ಪ್ರಕರಣಗಳು ಬಾಕಿ: 'ನಮ್ಮ ಸರ್ಕಾರ ಅಧಿಕಾರ ವಹಿಸಿಕೊಂಡಾಗ ಎ.ಸಿ ನ್ಯಾಯಾಲಯದಲ್ಲಿ ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಯ 59,339 ಪ್ರಕರಣಗಳು ವಿಲೇ ಆಗದೆ ಬಾಕಿ ಇದ್ದವು. ಮುಖ್ಯಮಂತ್ರಿಯವರ ಸೂಚನೆ ಮೇರೆಗೆ ಬಾಕಿ ಪ್ರಕರಣಗಳ ವಿಲೇವಾರಿಗೆ ಕಳೆದ ಒಂದು ವರ್ಷ ಅಭಿಯಾನ ಮಾದರಿಯಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ' ಎಂದರು.

ಅಂಕಿ ಅಂಶಗಳು

59,339
ಒಂದು ವರ್ಷಕ್ಕಿಂತ ಹೆಚ್ಚು ಅವಧಿಯಿಂದ ಬಾಕಿ ಇದ್ದ ಪ್ರಕರಣಗಳು

36,956
ಒಂದು ವರ್ಷದಲ್ಲಿ ಇತ್ಯರ್ಥಪಡಿಸಿದ ಪ್ರಕರಣಗಳು

'ಎ.ಸಿ ನ್ಯಾಯಾಲಯಗಳಲ್ಲಿ ಒಂದು ವರ್ಷಕ್ಕಿಂತ ಹೆಚ್ಚು ಅವಧಿಗೆ ಬಾಕಿ ಇದ್ದ ಪ್ರಕರಣಗಳ ಪೈಕಿ 36,956 ಪ್ರಕರಣಗಳನ್ನು ಒಂದು ವರ್ಷದಲ್ಲಿ ವಿಲೇ ಮಾಡಲಾಗಿದೆ' ಎಂದರು.

'1 ವರ್ಷದಿಂದ 5 ವರ್ಷಗಳ ಅವಧಿಯಲ್ಲಿ ಬಾಕಿ ಇದ್ದ 26,552 ಪ್ರಕರಣಗಳ ಪೈಕಿ 10,992 ಪ್ರಕರಣಗಳನ್ನು ವಿಲೇ ಮಾಡಲಾಗಿದೆ. ಹಿಂದಿನ ಸರ್ಕಾರ ಐದು ವರ್ಷಕ್ಕೂ ಹೆಚ್ಚು ಅವಧಿಯ 32,787 ಪ್ರಕರಣಗಳನ್ನು ಬಾಕಿ ಉಳಿಸಿತ್ತು. ಈ ಪ್ರಕರಣಗಳಲ್ಲಿ 25,964 ಪ್ರಕರಣಗಳಿಗೆ ವರ್ಷದಲ್ಲಿ ಮುಕ್ತಿ ನೀಡಲಾಗಿದೆ. 6,823 ಪ್ರಕರಣಗಳು ಉಳಿದಿವೆ' ಎಂದರು.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯ, ಕಂದಾಯ ಆಯುಕ್ತ ಸುನೀಲ್ ಕುಮಾರ್ ಇದ್ದರು.

'18 ವಿಶೇಷ ಎ.ಸಿಗಳ ನೇಮಕ'

'ಎ.ಸಿ ಕಂದಾಯ ನ್ಯಾಯಾಲಯಗಳಲ್ಲಿನ ಪ್ರಕರಣಗಳ ಇತ್ಯರ್ಥಕ್ಕೆ 18 ಜನ ವಿಶೇಷ ಉಪ ವಿಭಾಗಾಧಿಕಾರಿಗಳನ್ನು ನೇಮಿಸಲಾಗಿದೆ. ತಕರಾರು ಅರ್ಜಿಗಳ ವಿಲೇವಾರಿಯನ್ನು ಎಲ್ಲ ಅಧಿಕಾರಿಗಳು ಇದೇ ವೇಗದಲ್ಲಿ ಮುಂದುವರೆಸಿದರೆ ಮುಂದಿನ ಜನವರಿ ಅಥವಾ ಫೆಬ್ರವರಿ ಒಳಗೆ ಎಲ್ಲ ಬಾಕಿ ಪ್ರಕರಣಗಳು ಇತ್ಯರ್ಥ ಆಗಬಹುದು. ಅಲ್ಲದೆ, ಉಪ ವಿಭಾಗಾಧಿಕಾರಿಗಳು ವಾರಕ್ಕೆ ನಾಲ್ಕು, ವಿಶೇಷ ಉಪ ವಿಭಾಗಾಧಿಕಾರಿಗಳು ಎರಡು ಪ್ರಕರಣವನ್ನು ವಿಲೇಗೊಳಿಸಬೇಕು' ಎಂದು ಕೃಷ್ಣ ಬೈರೇಗೌಡ ಸೂಚನೆ ನೀಡಿದರು.

ಪಿಪಿಇ ಕಿಟ್ ಖರೀದಿ: ₹203 ಕೋಟಿ ಅಕ್ರಮ

ಒಂದನೇ ಪುಟದಿಂದ...

ಈ ಅಕ್ರಮದ ವ್ಯಾಪ್ತಿಯನ್ನು ಪತ್ತೆಮಾಡಲು ಕೂಲಂಕಷ ತನಿಖೆಯ ಅಗತ್ಯವಿದೆ ಎಂದು ಆಯೋಗ ಹೇಳಿದೆ. ಅಕ್ರಮದಲ್ಲಿ ಭಾಗಿಯಾದವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಬೇಕು. ಖರೀದಿಗೆ ಅನುಮೋದನೆ ನೀಡಿದವರನ್ನು ತನಿಖೆಗೆ ಒಳಪಡಿಸಬೇಕು. ತನಿಖೆಯನ್ನು ಲೋಕಾಯುಕ್ತ ಅಥವಾ ರಾಜ್ಯ ಅಥವಾ ರಾಷ್ಟ್ರಮಟ್ಟದ ತನಿಖಾ ಸಂಸ್ಥೆಗೆ ವಹಿಸಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

- ಬೇಡಿಕೆ ಇಲ್ಲದೇ ಇದ್ದರೂ ಆಸ್ಪತ್ರೆಗಳಿಗೆ ಪಿಪಿಇ ಕಿಟ್‌ಗಳ ಪೂರೈಕೆ. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆ (45,000 ಕಿಟ್‌ಗಳು) ಮತ್ತು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ (30,994 ಕಿಟ್‌ಗಳು) ತಮ್ಮಲ್ಲಿ ಒಟ್ಟು 75,394 ಕಿಟ್‌ಗಳು ವ್ಯರ್ಥವಾಗಿ ಬಿದ್ದಿವೆ ಎಂದು 2022ರಲ್ಲಿ ನಿರ್ದೇಶನಾಲಯಕ್ಕೆ ಪತ್ರ ಬರೆದಿವೆ
- ಬೇಡಿಕೆ ಇಲ್ಲದೇ ಇದ್ದರೂ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ಕೆಎಸ್‌ಎಂಎಸ್‌ಸಿಎಲ್‌ಗೆ 2.67 ಲಕ್ಷ ಕಿಟ್‌ಗಳನ್ನು ಪೂರೈಸಿದೆ
- ಎಲ್ಲ ವಹಿವಾಟುಗಳ ಬಗ್ಗೆ ವಿವರಣೆ ನೀಡುವಂತೆ ನಿರ್ದೇಶನಾಲಯದ ಹಿಂದಿನ ನಿರ್ದೇಶಕರು, ನಿರ್ದೇಶನಾಲಯಕ್ಕೆ ಸೂಚಿಸಿದ್ದರೂ ಪ್ರತಿಕ್ರಿಯೆ ಬಂದಿಲ್ಲ

₹41.35 ಕೋಟಿ ಮೌಲ್ಯದ ಕಿಟ್ ನಾಪತ್ತೆ

2020ರ ಆಗಸ್ಟ್‌ನಲ್ಲಿ ಪಿಪಿಇ ಕಿಟ್ ಖರೀದಿಗೆ ಇ–ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದ್ದು, ಕಡಿಮೆ ದರ ನಮೂದಿಸಿದ್ದ ಲಾಜ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಎಂಬ ಕಂಪನಿಗೆ ಟೆಂಡರ್ ನೀಡಲಾಗಿದೆ. ಮೂರು ಪ್ರತ್ಯೇಕ ಆದೇಶಗಳಲ್ಲಿ 2.59 ಲಕ್ಷ ಪಿಪಿಇ ಕಿಟ್‌ಗಳನ್ನು (ತಲಾ ಒಂದಕ್ಕೆ ₹1,312ರಂತೆ) ಪೂರೈಸಲು ಲಾಜ್ ಎಕ್ಸ್‌ಪೋರ್ಟ್‌ಗೆ ಆದೇಶಿಸಲಾಗಿದೆ.

2.59 ಲಕ್ಷ ಕಿಟ್‌ಗಳನ್ನು ಕಂಪನಿ ಪೂರೈಸಿದೆ ಮತ್ತು ಅದಕ್ಕೆ ₹41.35 ಕೋಟಿ ಪಾವತಿಸಿದ್ದೇವೆ ಎಂದು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು ದಾಖಲೆ ಸಲ್ಲಿಸಿದೆ. ಯಾವ ಆಸ್ಪತ್ರೆಗಳಿಗೆ ಕಿಟ್ ಪೂರೈಸಲಾಗಿದೆ ಎಂಬ ದಾಖಲೆ ಅದರಲ್ಲಿಲ್ಲ. ಒಂದು ಬಿಳಿ ಹಾಳೆಯಲ್ಲಿ, ಆಸ್ಪತ್ರೆಗಳ ಹೆಸರು ಮತ್ತು ಕಿಟ್‌ಗಳ ಸಂಖ್ಯೆಯ ಇರುವ ಪಟ್ಟಿಯನ್ನು ನೀಡಿದೆ. ಕಿಟ್ ಪೂರೈಕೆ ಮಾಡಿದವರ ಮತ್ತು ಪಡೆದುಕೊಂಡವರ ಸಹಿ ಹಾಗೂ ಮೊಹರು ಅದರಲ್ಲಿಲ್ಲ. ಈ ಸಂಬಂಧ ನಿರ್ದೇಶನಾಲಯ ಅಥವಾ ಲಾಜ್ ಎಕ್ಸ್‌ಪೋರ್ಟ್ಸ್‌ನಿಂದಾಗಲಿ ವಿವರಣೆ ದೊರೆತಿಲ್ಲ. ವಾಸ್ತವದಲ್ಲಿ 2.59 ಲಕ್ಷ ಕಿಟ್‌ಗಳು ಪೂರೈಕೆ ಬಗ್ಗೆಯೇ ಸಂದೇಹವಿದೆ.

ವರದಿ ಬಿಚ್ಚಿಟ್ಟ ಅಕ್ರಮಗಳ ಪರಿ

ನಿಯಮ ಬಾಹಿರ ಖರೀದಿಗೆ ₹81.68 ಕೋಟಿ ಪಾವತಿ

2020ರ ಡಿಸೆಂಬರ್‌ನಿಂದ 2021ರ ಮಾರ್ಚ್ ನಡುವೆ ಒಟ್ಟು 6.22 ಲಕ್ಷ ಪಿಪಿಇ ಕಿಟ್‌ಗಳ ಪೂರೈಕೆಗೆ ಟೆಂಡರ್ ಕರೆಯದೆಯೇ, ಲಾಜ್ ಎಕ್ಸ್‌ಪೋರ್ಟ್ಸ್‌ಗೇ ಆದೇಶಗಳನ್ನು ನೀಡಲಾಗಿದೆ. ಈ ಹಿಂದಿನ ದರದಲ್ಲೇ (ತಲಾ ಒಂದಕ್ಕೆ ₹1,312) ಪಿಪಿಇ ಕಿಟ್ ಪೂರೈಸುವಂತೆ ಆದೇಶಿಸಲಾಗಿದೆ.

'ಜಿಇಎಂ ಪೋರ್ಟಲ್‌ನಲ್ಲಿ ಟೆಂಡರ್ ನಡೆಸಿದಾಗ ನಿಗದಿಯಾದ ದರವು ಒಂದು ವರ್ಷದವರೆಗೆ ಅನ್ವಯವಾಗುತ್ತದೆ. ಹೀಗಾಗಿ ಹಿಂದಿನ ಟೆಂಡರ್‌ನಲ್ಲಿ ಇದ್ದ ದರದಲ್ಲೇ ಪೂರೈಕೆ ಆದೇಶ ನೀಡಲಾಗಿದೆ' ಎಂದು ನಿರ್ದೇಶನಾಲಯವು ದಾಖಲೆಗಳಲ್ಲಿ ವಿವರಿಸಿದೆ. ಆದರೆ ನಿರ್ದೇಶನಾಲಯವು ಈ ಹಿಂದೆ ಟೆಂಡರ್ ಕರೆದದ್ದು 'ಇ–ಪೋರ್ಟಲ್'ನಲ್ಲಿ. ದಾಖಲೆಗಳಲ್ಲಿ 'ಜಿಇಎಂ' ಪೋರ್ಟಲ್ ಎಂದು ವಿವರಿಸಿದೆ. ಪೂರ್ವಾನುಮತಿ ಪಡೆಯದೆ, ಹಣ ಬಿಡುಗಡೆ ಮಾಡಿಸಿಕೊಳ್ಳದೆ ಕಿಟ್‌ಗಳನ್ನು ಖರೀದಿಸಲಾಗಿದೆ. ಹೀಗಾಗಿ ಇಡೀ ಪ್ರಕ್ರಿಯೆಯೇ ಅಕ್ರಮವಾಗಿದೆ. ಇದರಲ್ಲಿ ₹81.68 ಕೋಟಿ ಪಾವತಿಯಾಗಿದೆ.

ಇದೇ ಕಂಪನಿ ಮತ್ತೆ 6.28 ಲಕ್ಷ ಕಿಟ್‌ಗಳನ್ನು ₹82 ಕೋಟಿ ವೆಚ್ಚದಲ್ಲಿ ಪೂರೈಕೆ ಮಾಡಿದೆ. ಆದರೆ ಇದಕ್ಕೆ ಯಾವುದೇ ಹಣ ಪಾವತಿ ಆಗಿಲ್ಲ. ಪೂರ್ವಾನುಮತಿ, ಪೂರೈಕೆ ಆದೇಶ ಇಲ್ಲದಿದ್ದರೂ ನಿರ್ದೇಶನಾಲಯವು ಕಿಟ್‌ಗಳನ್ನು ಪಡೆದುಕೊಂಡಿದೆ. ಇದಕ್ಕೆ ಪಾವತಿಸಲು ನಿರ್ದೇಶನಾಲಯದ ಬಳಿ ಹಣವೇ ಇರಲಿಲ್ಲ. ಈವರೆಗೂ ಹಣ ಪಾವತಿಯಾಗಿಲ್ಲ. ₹78 ಕೋಟಿ ಮತ್ತು ಅದಕ್ಕೆ ವಾರ್ಷಿಕ ಶೇ 18ರಷ್ಟು ಬಡ್ಡಿ ನೀಡುವಂತೆ ನಿರ್ದೇಶನ ನೀಡಿ ಎಂದು ಪೂರೈಕೆದಾರರು ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.ಈ ಎರಡು ವಹಿವಾಟುಗಳಲ್ಲಿ ಒಟ್ಟಾರೆ ₹160 ಕೋಟಿ ಅಕ್ರಮ ನಡೆದಿದೆ.

ಟೆಂಡರ್ ಒಬ್ಬರಿಗೆ, ಬಿಲ್ ಪಾವತಿ ಮತ್ತೊಬ್ಬರಿಗೆ

ಪಿಪಿಇ ಕಿಟ್‌ಗಳ ಪೂರೈಕೆಗೆ ಟೆಂಡರ್ ಪಡೆದಿದ್ದು ಲಾಜ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್. ಬೆಂಗಳೂರಿನ ಯಶವಂತಪುರದ ಕೈಗಾರಿಕಾ ಪ್ರದೇಶದ ಸಣ್ಣ ಶೆಡ್‌ನಲ್ಲಿರುವ ಈ ಕಂಪನಿ ಹೆಸರಿನಲ್ಲೇ ₹203 ಕೋಟಿಯಷ್ಟು ವಹಿವಾಟು ನಡೆದಿದೆ. ಆದರೆ ಕಿಟ್ ಪೂರೈಸಿದ್ದು, ಬಿಲ್ ಸಲ್ಲಿಸಿದ್ದು, ಹಣ ಪಡೆದು ಕೊಂಡಿದ್ದು ಮಾತ್ರ ಮುಂಬೈನ 'ಪ್ರುಡೆಂಟ್ ಮ್ಯಾನೇಜ್‌ಮೆಂಟ್ ಲಿಮಿಟೆಡ್'.

ಈ ಬಗ್ಗೆ ವಿವರಣೆ ನೀಡುವಂತೆ ಲಾಜ್ ಎಕ್ಸ್‌ಪೋರ್ಟ್ಸ್‌ಗೆ ಸಮನ್ಸ್ ನೀಡಲಾಗಿತ್ತು. ಕಂಪನಿಯ ನಿರ್ದೇಶಕ ಬಿ.ವಿ.ರೆಡ್ಡಿ ಪತ್ರ ಬರೆದು, 'ಟೆಂಡರ್ ನಮಗೆ ದೊರೆತಿದ್ದರೂ ಪೂರೈಕೆ, ಬಿಲ್ ಸಲ್ಲಿಕೆ ಮತ್ತು ಹಣ ಪಡೆದುಕೊಳ್ಳುವ ಅಧಿಕಾರವನ್ನು ನಮ್ಮ ಅಧಿಕೃತ ಡೀಲರ್‌ಗಳಾದ ಪ್ರುಡೆಂಟ್ ಮ್ಯಾನೇಜ್‌ಮೆಂಟ್‌ಗೆ ವರ್ಗಾಯಿಸಿದ್ದೇವೆ' ಎಂದು ವಿವರಿಸಿದ್ದರು.

ಟೆಂಡರ್ ಷರತ್ತುಗಳ ಪ್ರಕಾರ ಪೂರೈಕೆ ಗುತ್ತಿಗೆಯನ್ನು ಲಾಜ್ ಎಕ್ಸ್‌ಪೋರ್ಟ್ಸ್ ಮತ್ತೊಂದು ಕಂಪನಿಗೆ ವರ್ಗಾಯಿಸಲು ಬರುವುದಿಲ್ಲ. ಈ ರೀತಿ ವರ್ಗಾವಣೆಗೆ ಟೆಂಡರ್ ತಾಂತ್ರಿಕ ಸಮಿತಿಯ ಅನುಮೋದನೆ ಪಡೆದುಕೊಂಡಿಲ್ಲ. ಪಿಪಿಇ ಕಿಟ್ ತಯಾರಿಸುವ ಮತ್ತು ಲಕ್ಷಗಟ್ಟಲೆ ಪೂರೈಸುವ ಸಾಮರ್ಥ್ಯ ಲಾಜ್ ಎಕ್ಸ್‌ಪೋರ್ಟ್ಸ್‌ಗೆ ಇಲ್ಲ. ಮೊದಲೇ ಗುರುತು ಮಾಡಿಕೊಳ್ಳಲಾಗಿದ್ದ ಮುಂಬೈನ ಕಂಪನಿಗೇ ಗುತ್ತಿಗೆ ದೊರೆಯುವಂತೆ ಮಾಡುವ ಉದ್ದೇಶದಿಂದ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. ಅದರಲ್ಲಿ ಲಾಜ್ ಎಕ್ಸ್‌ಪೋರ್ಟ್ಸ್ ಅನ್ನು ಡಮ್ಮಿಯಂತೆ ಭಾಗಿ ಮಾಡಲಾಗಿದೆ. ನಂತರ ಟೆಂಡರ್ ವರ್ಗಾವಣೆಯಾಗಿದೆ. ಹೀಗೆ ಪ್ರುಡೆಂಟ್ ಮ್ಯಾನೇಜ್‌ಮೆಂಟ್ ಜತೆಗೆ ನಡೆದ ₹203 ಕೋಟಿ ವಹಿವಾಟಿನಲ್ಲಿ ಹಲವರು ಅಕ್ರಮ ಲಾಭ ಮಾಡಿಕೊಂಡಿದ್ದಾರೆ. ಹೀಗಾಗಿ ಇಡೀ ವಹಿವಾಟೇ ಅಕ್ರಮ.

ವಿಧಾನಸಭಾ ಚುನಾವಣೆ: ಪ್ರಮುಖ ನಾಯಕರಿಂದ 'ದ್ರೋಹಿ' ಪದ ಬಳಕೆ

ಮಹಾರಾಷ್ಟ್ರದಲ್ಲಿ 'ಗದ್ದಾರ್' ಗದ್ದಲ

ಪ್ರಜಾವಾಣಿ ವಾರ್ತೆ

ಮುಂಬೈ: ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ವಾಹನವು ಮುಂಬೈನ ಚಾಂದಿವಲಿ ಪ್ರದೇಶದಲ್ಲಿ ಸಾಗುತ್ತಿದ್ದಾಗ, ಸಂತೋಷ್ ಕಟ್ಕೆ ಎನ್ನುವ ಯುವಕನೊಬ್ಬ ಅವರ ವಾಹನಕ್ಕೆ ಅಡ್ಡ ಬಂದು, ಶಿಂದೆ ಅವರನ್ನು ಉದ್ದೇಶಿಸಿ 'ದ್ರೋಹಿ' (ಗದ್ದಾರ್) ಎಂದು ಕರೆದ. ಎರಡೂವರೆ ವರ್ಷಗಳ ಹಿಂದೆ ಉದ್ಧವ್ ಠಾಕ್ರೆ ವಿರುದ್ಧ ಬಂಡೆದ್ದು, ಮುಖ್ಯಮಂತ್ರಿ ಆಗಿದ್ದ ಶಿಂದೆ ಅವರು ಈ ಪ್ರಸಂಗದ ಕಾರಣದಿಂದಾಗಿ ಮುಜುಗರಕ್ಕೆ ಒಳಗಾಗಿದ್ದರು.

'ಇಂತಹ ಪರಿಸ್ಥಿತಿಗಳನ್ನು ನಿಭಾಯಿಸುವುದರಲ್ಲಿ ಚತುರ' ಎಂಬ ಹೆಸರು ಹೊಂದಿರುವ ಶಿಂದೆ, ತಮ್ಮ ವಿರುದ್ಧ ಘೋಷಣೆ ಕೂಗುತ್ತಿದ್ದವರ ಜೊತೆ ಮುಖಾಮುಖಿಯಾಗಲು ಮುಂದಾಗಿದ್ದರು. ಆಗ ಆ ಪ್ರತಿಭಟನಕಾರರು ಕಾಂಗ್ರೆಸ್ ಕಚೇರಿಯೊಳಕ್ಕೆ ಹೋಗಿ ಕುಳಿತಿದ್ದರು.

ಅವರನ್ನು ಹಿಂಬಾಲಿಸಿದ ಶಿಂದೆ, ಅವರ ವರ್ತನೆಯನ್ನು ಪ್ರಶ್ನಿಸಿದರು. ಅವರನ್ನು ಬಂಧಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದರು. ಪ್ರತಿಭಟನಕಾರರನ್ನು ನಂತರ ಬಿಡುಗಡೆ ಮಾಡಲಾಯಿತು. 'ಇದಾದ ನಂತರ ಉದ್ಧವ್ ಠಾಕ್ರೆ ಅವರು ಸಂತೋಷ್ ಕಟ್ಕೆ ಮತ್ತು ಅವರ ತಂದೆ ಸಾಹು ಕಟ್ಕೆ ಅವರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡರು.

2022ರ ಜೂನ್–ಜುಲೈನಲ್ಲಿ ಶಿಂದೆ ಅವರ ಶಿವಸೇನಾ ಪಕ್ಷವನ್ನು ಒಡೆದು, ಉದ್ಧವ್ ಠಾಕ್ರೆ ನೇತೃತ್ವದ ಮಹಾರಾಷ್ಟ್ರ ಸರ್ಕಾರವನ್ನು ಉರುಳಿಸಿ, ಶಿವಸೇನಾ ಪಕ್ಷವನ್ನು ಹಾಗೂ ಅದರ ಬಿಲ್ಲು-ಬಾಣದ ಚಿಹ್ನೆಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡ ನಂತರದಲ್ಲಿ 'ದ್ರೋಹಿ' ಎಂಬ ಪದವು ಮಹಾರಾಷ್ಟ್ರ ರಾಜಕಾರಣದಲ್ಲಿ ಬಹಳ ವ್ಯಾಪಕವಾಗಿ ಬಳಕೆಯಾಗುತ್ತಿದೆ. ಅಜಿತ್ ಪವಾರ್ ಅವರು ಶರದ್ ಪವಾರ್ ವಿರುದ್ಧ ಬಂಡಾಯವೆದ್ದ ನಂತರದಲ್ಲಿ 'ದ್ರೋಹಿ' ಪದದ ಬಳಕೆಯು ಹೆಚ್ಚಾಗಿದೆ. ಶಿವಸೇನಾ ಹಾಗೂ ಎನ್‌ಸಿಪಿಯ ವಿಭಜನೆ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮಹಾರಾಷ್ಟ್ರದಲ್ಲಿ ಪ್ರಮುಖ ವಿಷಯಗಳಾಗಿದ್ದವು. ಈಗ ವಿಧಾನಸಭಾ ಚುನಾವಣೆಯ ಹೊತ್ತಿನಲ್ಲಿಯೂ ಅವು ಪ್ರಮುಖವಾಗಿ ಪ್ರಸ್ತಾಪ ಆಗುತ್ತಿವೆ.

ಉದ್ಧವ್ ಠಾಕ್ರೆ, ಆದಿತ್ಯ ಠಾಕ್ರೆ ಮತ್ತು ಸಂಜಯ್ ರಾವುತ್ ಮಾತ್ರವೇ ಅಲ್ಲದೆ, ಶರದ್ ಪವಾರ್ ಅವರೂ ಈ ಪದವನ್ನು ಚುನಾವಣಾ ರ್ಯಾಲಿಗಳಲ್ಲಿ ಬಳಸುತ್ತಿದ್ದಾರೆ.

2023ರ ಡಿಸೆಂಬರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಿಂಧುದುರ್ಗದಲ್ಲಿ ಅನಾವರಣಗೊಳಿಸಿದ್ದ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಯು ಈಚೆಗೆ ಕುಸಿದುಬಿತ್ತು. ಆಗಲೂ ಈ ಪದದ ಬಳಕೆ ಆಯಿತು. ಪ್ರತಿಮೆ ಬಿದ್ದ ವಿಚಾರವಾಗಿ ಮೋದಿ ಅವರು ಕ್ಷಮೆ ಯಾಚಿಸಿದರಾದರೂ, ಮಹಾ ವಿಕಾಸ ಆಘಾಡಿ ಮೈತ್ರಿಕೂಟವು ಮೋದಿ ವಿರುದ್ಧ ವಾಗ್ದಾಳಿ ನಡೆಸಿತು.

'ಕ್ಷಮೆ ಕೇಳುವಾಗಲೂ ಅವರ (ಮೋದಿ) ಮುಖದಲ್ಲಿ ಅಹಂಕಾರ ಇತ್ತು. ಇದನ್ನು ಒಪ್ಪಲಾಗದು. ಕ್ಷಮೆ ಯಾಚಿಸಿದ್ದು ಪ್ರತಿಮೆ ಬಿತ್ತು ಎಂಬ ಕಾರಣಕ್ಕೋ, ಭ್ರಷ್ಟಾಚಾರ ನಡೆದಿದೆ ಎಂಬುದಕ್ಕೋ ಅಥವಾ ಭ್ರಷ್ಟಾಚಾರವನ್ನು ಮುಚ್ಚಿಹಾಕುವುದಕ್ಕೋ? ಶಿವಾಜಿ ಮಹಾರಾಜರಿಗೆ ಅವಮಾನ ಎಸಗಿದವರನ್ನು ಜನ ಕ್ಷಮಿಸುವುದಿಲ್ಲ. ಶಿವಾಜಿ ಮಹಾರಾಜರಿಗೆ ದ್ರೋಹ ಮಾಡಿದವರನ್ನು ಭಾರತದಿಂದ ಹೊರಹಾಕುವವರೆಗೆ ನಾವು ವಿರಮಿಸುವುದಿಲ್ಲ' ಎಂದು ಠಾಕ್ರೆ ಆಗ ಹೇಳಿದ್ದರು.

ಠಾಕ್ರೆ ಅವರು ಚುನಾವಣಾ ರ್ಯಾಲಿಗಳಲ್ಲಿ 'ದ್ರೋಹಿ' ಪದವನ್ನು ಹಲವು ಬಾರಿ ಬಳಸುತ್ತಾರೆ. 'ಈ ದ್ರೋಹಿಗಳಿಗೆ ಪಾಠ ಕಲಿಸಿ' ಎಂದು ಅವರು ಹಲವು ಬಾರಿ ಹೇಳುತ್ತಾರೆ. ಇದು ಲೋಕಸಭಾ ಚುನಾವಣೆಯಲ್ಲಿ ಇವರಿಗೆ ಒಂದಿಷ್ಟು ನೆರವಿಗೆ ಬಂದಿದೆ.

ಆರೋಪಗಳಿಗೆ ಉತ್ತರಿಸಿ: ನಡ್ಡಾ, ಖರ್ಗೆಗೆ ಸೂಚನೆ

ಜೆ.ಪಿ.ನಡ್ಡಾ

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಕುರಿತಂತೆ ಮಾಡಿದ ಆರೋಪಗಳ ಕುರಿತು ಉತ್ತರ ನೀಡುವಂತೆ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಚುನಾವಣಾ ಆಯೋಗವು ಶನಿವಾರ ಸೂಚನೆ ನೀಡಿದೆ. ಎರಡೂ ಪಕ್ಷಗಳು ಈ ಕುರಿತು ಆಯೋಗಕ್ಕೆ ಪ್ರತ್ಯೇಕವಾಗಿ ದೂರು ಸಲ್ಲಿಸಿದ್ದವು.

ತಮ್ಮ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಸೋಮವಾರ ಮಧ್ಯಾಹ್ನ ಒಂದು ಗಂಟೆಯ ಒಳಗಾಗಿ ಉತ್ತರಿಸುವಂತೆ ಪ್ರತ್ಯೇಕವಾಗಿ ಕಳುಹಿಸಿದ ಪತ್ರದಲ್ಲಿ ತಿಳಿಸಿದೆ. ಜಾರ್ಖಂಡ್ ಹಾಗೂ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಬಹಿರಂಗ ಪ್ರಚಾರ ಅಂತ್ಯಕ್ಕೊಳ್ಳುವ ಕೊನೆಯ ದಿನ. ಪಕ್ಷದ 'ಸ್ಟಾರ್ ಪ್ರಚಾರಕರು' ಮಾದರಿ ನೀತಿ ಸಂಹಿತೆ ಉಲ್ಲಂಘಿಸುವ ಯಾವುದೇ ಹೇಳಿಕೆಗಳನ್ನು ನೀಡದಂತೆ ಪಕ್ಷವು ನೋಡಿಕೊಳ್ಳಬೇಕು ಎಂದು ಈ ಹಿಂದೆ ಹೊರಡಿಸಿದ್ದ ಸುತ್ತೋಲೆಯನ್ನು ಎರಡೂ ಪಕ್ಷಗಳಿಗೆ ಆಯೋಗವು ನೆನಪಿಸಿದೆ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ಸಂವಿಧಾನವನ್ನು ರದ್ದುಗೊಳಿಸಲು ಪ್ರಯತ್ನಿಸುತ್ತಿವೆ ಎಂದು ಮುಂಬೈನಲ್ಲಿ ನ.6ರಂದು ನಡೆದ ಚುನಾವಣಾ ಪ್ರಚಾರದಲ್ಲಿ ರಾಹುಲ್ ಗಾಂಧಿ ತಿಳಿಸಿದ್ದರು. ಈ ಹೇಳಿಕೆಯು 'ತಪ್ಪು ಮಾಹಿತಿಯಿಂದ ಕೂಡಿದೆ' ಎಂದು ಆರೋಪಿಸಿ ಬಿಜೆಪಿಯು ಆಯೋಗಕ್ಕೆ ದೂರು ನೀಡಿತ್ತು.

'ಜವಾಹರ್‌ಲಾಲ್ ನೆಹರೂ, ಇಂದಿರಾ ಗಾಂಧಿ ಹಾಗೂ ರಾಜೀವ್ ಗಾಂಧಿ ಅವರು ದಲಿತ, ಬುಡಕಟ್ಟು ಸಮುದಾಯ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ವಿರೋಧಿಸಿದ್ದರು' ಎಂದು ಮಹಾರಾಷ್ಟ್ರದ ನಾಸಿಕ್‌ನಲ್ಲಿ ನ.8ರಂದು ಚುನಾವಣಾ ಪ್ರಚಾರದ ವೇಳೆ ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದರು. ಇದಕ್ಕೆ ತಿರುಗೇಟು ನೀಡಿದ್ದ ಕಾಂಗ್ರೆಸ್, 'ಮೋದಿ ಪ್ರಸ್ತಾಪಿಸಿದ ವಿಚಾರ ಸುಳ್ಳು ಹಾಗೂ ನಿಂದನೀಯ'ವಾಗಿದೆ ಎಂದು ತಿಳಿಸಿ ಆಯೋಗಕ್ಕೆ ದೂರು ಸಲ್ಲಿಸಿತ್ತು.

ವಾಕ್ ಸ್ವಾತಂತ್ರ್ಯ ಹತ್ತಿಕ್ಕುತ್ತಿರುವ ಪ್ರಧಾನಿ ಮೋದಿ: ಖರ್ಗೆ ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಮತ್ತು ತನ್ನ ತಪ್ಪುಗಳ ವಿರುದ್ಧ ಮಾತನಾಡುವವರನ್ನು ಜೈಲಿಗಟ್ಟುವ ಪ್ರಧಾನಿ ನರೇಂದ್ರ ಮೋದಿ ಅವರು ಬಡವರನ್ನು ಬಡವರನ್ನಾಗಿಸುವ ಮತ್ತು ಶ್ರೀಮಂತರನ್ನು ಶ್ರೀಮಂತರನ್ನಾಗಿಸುವ ಧೋರಣೆ ಹೊಂದಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶನಿವಾರ ಆರೋಪಿಸಿದರು.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ಪ್ರಧಾನಿಯನ್ನು ಕೋಟ್ಯಧಿಪತಿಗಳ ಕೈಗೊಂಬೆ ಎಂದು ವಾಗ್ದಾಳಿ ನಡೆಸಿದ ಮರು ದಿನ ಖರ್ಗೆ ಅವರು ವಾಗ್ದಾಳಿ ನಡೆಸಿದರು.

ಜಾರ್ಖಂಡ್‌ನ ಜಾಮತಾಢಾ ಮತ್ತು ರಾಂಚಿಯಲ್ಲಿ ನಡೆದ ಚುನಾವಣಾ ರ್ಯಾಲಿಯಲ್ಲಿ ಮಾತನಾಡಿದ ಅವರು, ರಾಹುಲ್ ಮತ್ತು ತಮ್ಮ ಹೆಲಿಕಾಪ್ಟರ್ ಸಂಚಾರದ ವಿಳಂಬದ ಕುರಿತು ಪ್ರಶ್ನೆ ಮಾಡಿದರು.

ಜೆಎಂಎಂ ತೊರೆದು ಬಿಜೆಪಿ ಸೇರಿದ ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಚಂಪೈ ಸೊರೇನ್ ಅವರನ್ನು 'ದ್ರೋಹಿ' ಎಂದು ಕರೆದ ಖರ್ಗೆ ಅವರು, ತಮ್ಮನ್ನು ಪೋಷಿಸಿದ ಜನರಿಗೆ ಅವರು ವಿಶ್ವಾಸದ್ರೋಹ ಬಗೆದಿದ್ದಾರೆ ಎಂದು ದೂರಿದರು.

ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರನ್ನು ಈ ವರ್ಷದ ಆರಂಭದಲ್ಲಿ ಜೈಲಿಗೆ ಹಾಕಿದ್ದನ್ನು ಪ್ರಸ್ತಾಪಿಸಿದ ಅವರು, ಬುಡಕಟ್ಟು ಸಮುದಾಯದ ಮುಖ್ಯಮಂತ್ರಿಯನ್ನು ಜೈಲಿಗಟ್ಟುವುದು ಪ್ರಜಾಪ್ರಭುತ್ವವೇ ಎಂದು ಪ್ರಶ್ನಿಸಿದರು. ಬಿಜೆಪಿಯು ತನ್ನ ವಿರುದ್ಧ ಮಾತನಾಡುವವರನ್ನು ಈ ಮೂಲಕ ಹತ್ತಿಕ್ಕುತ್ತಿದೆ ಎಂದರು.

ಪ್ರಧಾನಿ ಆವಾಸ್ ಯೋಜನೆಯಡಿ ಜಾರ್ಖಂಡ್‌ಗೆ ನೀಡಬೇಕಾದ 1.36 ಲಕ್ಷ ಕೋಟಿ ಬಿಡುಗಡೆ ಮಾಡದೆ, ಮೋದಿ ಅವರ ಅದರ ಮೇಲೆ ಕುಳಿತಿದ್ದಾರೆ ಎಂದು ಅವರು ಟೀಕಿಸಿದರು.

ಬಡವರನ್ನು ಬಡವರನ್ನಾಗಿಸಲಾಗಿತ್ತಿದೆ: 'ಮೋದಿ ಅವರ ಅವಧಿಯಲ್ಲಿ ದೇಶದ ಶೇ 62ರಷ್ಟು ಸಂಪತ್ತು ಕೇವಲ ಶೇ 5ರಷ್ಟು ಶ್ರೀಮಂತರ ಬಳಿ ಕೇಂದ್ರೀಕೃತವಾಗಿದ್ದರೆ, ಶೇ 3ರಷ್ಟು ಸಂಪತ್ತು ಶೇ 50ರಷ್ಟು ಜನರ ಬಳಿಯಿದೆ. ಹೀಗೆ ಪ್ರಧಾನಿಯವರ ನೀತಿಗಳು ಶ್ರೀಮಂತರನ್ನು ಶ್ರೀಮಂತರನ್ನಾಗಿಸುತ್ತಿದ್ದರೆ, ಬಡವರನ್ನು ಬಡವರನ್ನಾಗಿಸುತ್ತಿದೆ' ಎಂದು ಟೀಕಿಸಿದರು.

ಹೆಲಿಕಾಪ್ಟರ್ 20 ನಿಮಿಷ ತಡ

'ಇಂದು ಗೃಹ ಸಚಿವ ಅಮಿತ್ ಶಾ ಅವರು ಲ್ಯಾಂಡ್ ಆಗಲಿದ್ದ ಕಾರಣ ನನ್ನ ಹೆಲಿಕಾಪ್ಟರ್ 20 ನಿಮಿಷ ತಡವಾಯಿತು. ಇಬ್ಬರದ್ದೂ ಪ್ರತ್ಯೇಕ ಮಾರ್ಗವಾಗಿದ್ದರೂ ನನಗೆ ವಿಳಂಬ ಮಾಡಲಾಯಿತು. ಅಲ್ಲದೆ ವಿಮಾನ ನಿಲ್ದಾಣದಲ್ಲಿ ಕಾಯ್ದಿರಿಸಿದ ವಿಶ್ರಾಂತಿ ಕೊಠಡಿ ಪ್ರವೇಶಿಸಲು ಅವಕಾಶ ನಿರಾಕರಿಸಲಾಯಿತು. ಅದನ್ನು ಪ್ರಧಾನಿ ಅವರಿಗಾಗಿ ಕಾಯ್ದಿರಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದರು. ಪ್ರಧಾನಿ ಅವರಿಗಾಗಿ ಒಂದು ಶೌಚಾಲಯವನ್ನು ಮೀಸಲಿಡಬಹುದೇ ಎಂದು ನಾನು ಅವರನ್ನು ಕೇಳ ಬಯಸುತ್ತೇನೆ' ಎಂದು ಅವರು ವಿಮಾನ ನಿಲ್ದಾಣದ ಹೆಸರನ್ನು ಉಲ್ಲೇಖಿಸಿದೆ ಟೀಕಿಸಿದರು.

'ಇಂಡಿಯಾ ಒಕ್ಕೂಟದ ಪಕ್ಷಗಳು ಜಾರ್ಖಂಡ್‌ನಲ್ಲಿ ಬಾಂಗ್ಲಾದೇಶಿ ನುಸುಳುಕೋರರಿಗೆ ಅವಕಾಶ ಕಲ್ಪಿಸುತ್ತಿದೆ ಎಂದು ಬಿಜೆಪಿ ಹೇಳುತ್ತಿದೆ. ಹಾಗಾದರೆ ಮೋದಿ ಮತ್ತು ಅಮಿತ್ ಶಾ ಅವರೇನು ನಿದ್ದೆ ಮಾಡುತ್ತಿದ್ದಾರಾ? ಅಧಿಕಾರದಲ್ಲಿರುವ ಅವರು ನುಸುಳುಕೋರರನ್ನು ಏಕೆ ಪರಿಶೀಲಿಸುತ್ತಿಲ್ಲ? ಹೆಲಿಕಾಪ್ಟರ್ ಅನ್ನು ತಡೆಯಬಹುದಾದ ಅವರಿಗೆ, ನುಸುಳುಕೋರರನ್ನು ತಡೆಯಲು ಏಕೆ ಸಾಧ್ಯವಾಗುತ್ತಿಲ್ಲ' ಎಂದು ಖರ್ಗೆ ಪ್ರಶ್ನಿಸಿದರು.

ಪ್ರಚಾರ... ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಶನಿವಾರ ನಡೆದ ಬಿಜೆಪಿ ಚುನಾವಣಾ ರ್ಯಾಲಿಗೆ ಜೆಸಿಬಿಯಲ್ಲಿ ಬಂದ ಬೆಂಬಲಿಗರು – ಪಿಟಿಐ ಚಿತ್ರ

ಆರ್‌ಎಸ್‌ಎಸ್– ಬಿಜೆಪಿ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ

'ಬಿಜೆಪಿ ಪಾಲಿಗೆ ಸಂವಿಧಾನ ಖಾಲಿ ಪುಸ್ತಕ'



ಅಮರಾವತಿ (ಪಿಟಿಐ): ಕಾಂಗ್ರೆಸ್ ಪಕ್ಷವು ಸಂವಿಧಾನವನ್ನು ದೇಶದ 'ಡಿಎನ್‌ಎ' ಎಂದು ಪರಿಗಣಿಸುತ್ತದೆ. ಆದರೆ ಆಡಳಿತಾರೂಢ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅದನ್ನು 'ಖಾಲಿ ಪುಸ್ತಕ'ವಾಗಿ ಪರಿಗಣಿಸುತ್ತವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ಆರೋಪಿಸಿದರು.

ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು, 'ರಾಹುಲ್ ಗಾಂಧಿ ಅವರು ಪ್ರಚಾರ ರ್ಯಾಲಿಗಳಲ್ಲಿ ಖಾಲಿ ಹಾಳೆ ಇರುವ ಸಂವಿಧಾನದ ಪ್ರತಿಯನ್ನು ತೋರಿಸುತ್ತಾರೆ' ಎಂದು ಆರೋಪಿಸಿದ್ದರು. ಅದಕ್ಕೆ ಪ್ರತಿಯಾಗಿ ರಾಹುಲ್ ಗಾಂಧಿ ಈ ಹೇಳಿಕೆ ಮೂಲಕ ತಿರುಗೇಟು ನೀಡಿದರು.

ರ್ಯಾಲಿ ಉದ್ದೇಶಿಸಿ ಮಾತನಾಡಿದ ರಾಹುಲ್ ಅವರು, 'ಮಹಾರಾಷ್ಟ್ರದಲ್ಲಿ ಮಾಡಿದಂತೆ ಶಾಸಕರನ್ನು ಖರೀದಿಸಿ ಸರ್ಕಾರಗಳನ್ನು ಉರುಳಿಸಬಹುದು ಮತ್ತು ಉದ್ಯಮಿಗಳ 16 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಬಹುದು ಎಂದು ಸಂವಿಧಾನದಲ್ಲಿ ಎಲ್ಲೂ ಬರೆದಿಲ್ಲ' ಎಂದು ವಾಗ್ದಾಳಿ ನಡೆಸಿದರು.

'ನಾನು ದಲಿತರು, ಆದಿವಾಸಿಗಳು ಮತ್ತು ಹಿಂದುಳಿದ ವರ್ಗಗಳ ಪರವಾಗಿ ಇರುವ ಕಾರಣ ನನ್ನ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಬಿಜೆಪಿಯು ಕೋಟಿಗಟ್ಟಲೆ ಹಣವನ್ನು ವ್ಯಯಿಸಿತು' ಎಂದು ಆರೋಪಿಸಿದರು.

ಸರಕು ಮತ್ತು ಸೇವಾ ತೆರಿಗೆ ಮತ್ತು ಅಧಿಕ ಮೌಲ್ಯದ ನೋಟುಗಳ ರದ್ದತಿ, ರೈತರು ಮತ್ತು ಸಣ್ಣ ವ್ಯಾಪಾರಿಗಳನ್ನು ಕೊಲ್ಲುವ ಸಾಧನಗಳು. ನಿರುದ್ಯೋಗ ಪ್ರಮಾಣ ಏರಿಕೆಯಾಗುತ್ತಿದೆ ಮತ್ತು ಇದೇ ಕಾರಣದಿಂದ ಸಮಾಜದಲ್ಲಿ ದ್ವೇಷವು ಹೆಚ್ಚುತ್ತಿದೆ ಎಂದರು.

'ಪ್ರಧಾನಿ ಮೋದಿ ಅವರೇ ಕೈಗಾರಿಕೋದ್ಯಮಿಗಳು ನಿಮ್ಮನ್ನು ಆಯ್ಕೆ ಮಾಡಿಲ್ಲ. ದೇಶದ ಜನರು ನಿಮ್ಮನ್ನು ಆಯ್ಕೆ ಮಾಡಿದ್ದಾರೆ' ಎಂದು ಹರಿಹಾಯ್ದರು.

'ಮೋದಿ ನೆನಪಿನ ಶಕ್ತಿ ಕಳೆದುಕೊಂಡಿದ್ದಾರೆ'

'ಕಳೆದ ಲೋಕಸಭಾ ಚುನಾವಣೆ ವೇಳೆ ಸಂಸತ್ತಿನಲ್ಲಿ ಮಾತನಾಡುತ್ತಾ, ಜಾತಿ ಗಣತಿ ನಡೆಸುತ್ತೇವೆ ಮತ್ತು ಮೀಸಲಾತಿಗೆ ಇರುವ ಶೇ 50ರ ಮಿತಿಯನ್ನು ತೆಗೆದುಹಾಕುತ್ತೇವೆ ('ಇಂಡಿಯಾ' ಮೈತ್ರಿಕೂಟ ಅಧಿಕಾರಕ್ಕೆ ಬಂದರೆ) ಎಂದು ಹೇಳಿದ್ದೆ. ಈಗ ಅವರು ರಾಹುಲ್ ಗಾಂಧಿ ಮೀಸಲಾತಿ ವಿರೋಧಿ ಎಂದು ಹೇಳುತ್ತಿದ್ದಾರೆ. ಅಮೆರಿಕದ ನಿರ್ಗಮಿತ ಅಧ್ಯಕ್ಷರಂತೆ ಮೋದಿ ಅವರು ಸಹ ನೆನಪಿನ ಶಕ್ತಿಯನ್ನು ಕಳೆದುಕೊಂಡಿದ್ದಾರೆ' ಎಂದು ಟೀಕಿಸಿದರು.

ಅಧ್ಯಕ್ಷ ಜೋ ಬೈಡನ್ ಅವರು, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಎಂದು ಕರೆದಿದ್ದರು. ಈ ಘಟನೆಯನ್ನು ಸ್ಮರಿಸಿ ಮೇಲಿನ ಮಾತು ಹೇಳಿದರು. ಇದೇ ಸಂದರ್ಭದಲ್ಲಿ, ಮೋದಿ ಅವರು ಜಾತಿ ಗಣತಿ ವಿರೋಧಿ. ಇಲ್ಲದಿದ್ದರೆ 5–7 ವರ್ಷಗಳ ಹಿಂದೆಯೇ ಅವರು ಗಣತಿ ನಡೆಸುತ್ತಿದ್ದರು ಎಂದು ಹೇಳಿದರು.

ರಾಹುಲ್ ವಿರುದ್ಧ ಮೋದಿ, ಶಾ ಅಪಪ್ರಚಾರ: ಪ್ರಿಯಾಂಕಾ

ಶಿರಡಿ: ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸಚಿವ ಅಮಿತ್ ಶಾ ಅವರು ಮೀಸಲಾತಿ ವಿಚಾರವಾಗಿ ರಾಹುಲ್ ಗಾಂಧಿ ವಿರುದ್ಧ ಸುಳ್ಳು ಸುದ್ದಿ ಹರಡುತ್ತಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಶನಿವಾರ ಆರೋಪಿಸಿದರು.

ಚುನಾವಣಾ ರ್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ದೇಶದಲ್ಲಿ ಜಾತಿ ಗಣತಿ ನಡೆಸಬೇಕು ಎಂದು ಒತ್ತಾಯಿಸುವ ಕಾರಣ ರಾಹುಲ್ ಗಾಂಧಿ ಅವರನ್ನು ಕಂಡರೆ ಈ ನಾಯಕರಿಗೆ ಭಯ' ಎಂದು ಹೇಳಿದರು. 'ನನ್ನ ಸಹೋದರ ಮೀಸಲಾತಿ ವಿರೋಧಿ ಎಂದು ಅವರು ಹೇಳುತ್ತಾರೆ. ನ್ಯಾಯ ಮತ್ತು ಜಾತಿ ಗಣತಿಗಾಗಿ ಕನ್ಯಾಕುಮಾರಿ ಯಿಂದ ಕಾಶ್ಮೀರದವರೆಗೆ ಪಾದಯಾತ್ರೆ ನಡೆಸಿರುವುದು ತಿಳಿದೂ ಅವರು ಇಂಥ ಸುಳ್ಳು ಹೇಳಿಕೆ ನೀಡುತ್ತಾರೆ' ಎಂದು ಕಿಡಿಕಾರಿದರು.

'ಮಹಾರಾಷ್ಟ್ರದ ಬಗ್ಗೆ ನಮ್ಮೆಲ್ಲರಿಗೂ ಹೆಮ್ಮೆ ಇದೆ. ಈ ನೆಲದಲ್ಲಿ ಛತ್ರಪತಿ ಶಿವಾಜಿ ಮಹಾರಾಜ ಅವರನ್ನು ಅವಮಾನಿಸಲಾಗಿದೆ, ನಿಮ್ಮನ್ನು ಅವಮಾನಿಸಲಾಗಿದೆ. ಮೋದಿ ಅವರೂ ಸೇರಿದಂತೆ ಈ ಎಲ್ಲ ನಾಯಕರು ಶಿವಾಜಿ ಅವರ ಹೆಸರನ್ನು ಬಳಸಿಕೊಳ್ಳುತ್ತಾರೆ, ಆದರೆ ಅವರಿಗೆ ಗೌರವ ನೀಡುವುದಿಲ್ಲ' ಎಂದು ವಾಗ್ದಾಳಿ ನಡೆಸಿದರು.

'ಒಗ್ಗಟ್ಟು ಒಡೆಯಲು ಕಾಂಗ್ರೆಸ್ ಯತ್ನ'

'ಏಕ್ ಹೈ ತೊ ಸೇಫ್ ಹೈ' ಪುನರುಚ್ಚರಿಸಿದ ಪ್ರಧಾನಿ ಮೋದಿ

ಪ್ರಜಾವಾಣಿ ವಾರ್ತೆ

ಮುಂಬೈ: ಪ್ರಧಾನಿ ನರೇಂದ್ರ ಮೋದಿ ಅವರು 'ಏಕ್ ಹೈ ತೊ ಸೇಫ್ ಹೈ' (ಒಗ್ಗಟ್ಟಿನಿಂದ ಇದ್ದರೆ ನಾವು ಸುರಕ್ಷಿತವಾಗಿರುತ್ತೇವೆ) ನಿರೂಪಣೆಯನ್ನು ಪುನರುಚ್ಚರಿಸಿದ್ದು, 'ಕಾಂಗ್ರೆಸ್ ಪಕ್ಷವು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯವನ್ನು ವಿಭಜಿಸುತ್ತಿದೆ' ಎಂದು ಆರೋಪಿಸಿದರು.

'ಏಕ್ ಹೈ ತೊ ಸೇಫ್ ಹೈ ನಿರೂಪಣೆಯನ್ನು ಜನರು ತಮ್ಮಲ್ಲಿ ಅಳವಡಿಸಿಕೊಂಡಿದ್ದಾರೆ. ವಾಸ್ತವವಾಗಿ ಅದು ಜನರ ಮನಸ್ಸಿನಲ್ಲಿತ್ತು. ನಾನು ಅದಕ್ಕೆ ಧ್ವನಿ ನೀಡಿದ್ದೇನೆ' ಎಂದು 'ನಮೋ ಆ್ಯಪ್' ಮೂಲಕ ಬಿಜೆಪಿ ಕಾರ್ಯಕರ್ತರ ಜತೆಗಿನ ಸಂವಾದದಲ್ಲಿ ಅವರು ಹೇಳಿದರು.

'ಮೇರಾ ಬೂತ್ ಸಬ್‌ಸೆ ಮಜ್‌ಬೂತ್' ಅಭಿಯಾನದ ಅಂಗವಾಗಿ ಶನಿವಾರ ನಡೆದ ಸಂವಾದದ ವೇಳೆ ಪ್ರಧಾನಿ ಅವರು ಕಾಂಗ್ರೆಸ್ ಮತ್ತು ಮಹಾ ವಿಕಾಸ ಆಘಾಡಿ ಮೈತ್ರಿಕೂಟದ ವಿರುದ್ಧ ವಾಗ್ದಾಳಿ ನಡೆಸಿದರು. 'ಕಾಂಗ್ರೆಸ್‌ಗೆ ತನ್ನ ಇತಿಹಾಸಗೊತ್ತಿದೆ. ದೇಶದಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಲ್ಲಿ ಜಾಗೃತಿ ಮೂಡುವವರೆಗೂ ಕಾಂಗ್ರೆಸ್ ಪಕ್ಷವು ಕೇಂದ್ರದಲ್ಲಿ ಸರ್ಕಾರ ರಚಿಸುತ್ತಿತ್ತು' ಎಂದು ಹೇಳಿದರು.

'ವೋಟ್ ಬ್ಯಾಂಕ್ ರಾಜಕಾರಣದಿಂದ ದೂರ'



ನವದೆಹಲಿ (ಪಿಟಿಐ): 'ವೋಟ್ ಬ್ಯಾಂಕ್' ರಾಜಕಾರಣದಿಂದ ದೂರ ಉಳಿದು ಜನರ ಅಭಿವೃದ್ಧಿಯ ಮಂತ್ರದೊಂದಿಗೆ ತಮ್ಮ ಸರ್ಕಾರ ಮುನ್ನಡೆಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

'ಎಚ್‌.ಟಿ ನಾಯಕತ್ವ ಶೃಂಗ'ದಲ್ಲಿ ಮಾತನಾಡಿದ ಅವರು, ತಮ್ಮ ಆಡಳಿತವು ಸರ್ಕಾರದ ಮೇಲಿನ ಜನರ ನಂಬಿಕೆಯನ್ನು ಮರುಸ್ಥಾಪಿಸಿದೆ ಎಂದು ಪ್ರತಿಪಾದಿಸಿದರು. ಭಾರತವು 10 ವರ್ಷಗಳಲ್ಲಿ ಐದು ಚುನಾವಣೆಗಳನ್ನು ಕಂಡಂತಹ 1990ರ ದಶಕವನ್ನು ನೆನಪಿಸಿಕೊಂಡ ಮೋದಿ, 'ಕೆಲ ವರ್ಷಗಳ ಹಿಂದೆ ದೇಶದಲ್ಲಿ ಅಸ್ಥಿರತೆ ಇತ್ತು' ಎಂದರು.

'ಚಿಂತಕರು, ಪತ್ರಿಕೆಗಳಲ್ಲಿ ರಾಜಕೀಯ ವಿಶ್ಲೇಷಣೆ ಬರೆಯುವವರು ಭಾರತದಲ್ಲಿ ಎಲ್ಲವೂ ಹೀಗೆಯೇ ಮುಂದುವರಿಯಲಿದೆ ಎಂದು ಭವಿಷ್ಯ ನುಡಿದಿದ್ದರು. ಆದರೆ ದೇಶದ ಜನರು ಅವರ ಭವಿಷ್ಯವನ್ನು ಸುಳ್ಳಾಗಿಸಿದರು' ಎಂದು ಹೇಳಿದರು.

'ಈ ಹಿಂದೆಯೆಲ್ಲಾ, ಮುಂದಿನ ಚುನಾವಣೆಯನ್ನು ಗೆಲ್ಲಬೇಕು ಎಂಬ ಏಕೈಕ ಉದ್ದೇಶವನ್ನಿಟ್ಟುಕೊಂಡು ಸರ್ಕಾರ ನಡೆಸಲಾಗುತ್ತಿತ್ತು. ಚುನಾವಣೆ ಗೆಲ್ಲಲು ವೋಟ್ ಬ್ಯಾಂಕ್ ಅನ್ನು ರಚಿಸಿ, ಆ ವೋಟ್ ಬ್ಯಾಂಕ್ ಅನ್ನು ಮೆಚ್ಚಿಸಲು ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿತ್ತು' ಎಂದು ಕಾಂಗ್ರೆಸ್ ನೇತೃತ್ವದ ಹಿಂದಿನ ಸರ್ಕಾರಗಳ ವಿರುದ್ಧ ವಾಗ್ದಾಳಿ ನಡೆಸಿದರು.

ಭಯೋತ್ಪಾದಕರು ಸುರಕ್ಷಿತವಾಗಿಲ್ಲ: 'ನೆರೆಯ ದೇಶಗಳ ಪ್ರಾಯೋಜಿತ ಭಯೋತ್ಪಾದನೆಯಿಂದಾಗಿ ನಮ್ಮ ದೇಶದ ಜನರು ತಮ್ಮ ಸ್ವಂತ ಮನೆ ಮತ್ತು ನಗರಗಳಲ್ಲಿ ಸುರಕ್ಷತೆಯ ಭಾವ ಹೊಂದಿದ್ದ ಕಾಲವೊಂದಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಭಯೋತ್ಪಾದಕರು ಅವರ ಮನೆಗಳಲ್ಲೂ ಸುರಕ್ಷಿತವಾಗಿಲ್ಲ' ಎಂದು ಪ್ರಧಾನಿ ಹೇಳಿದರು.

ಸಂದೀಪ್ ಕಾಂಗ್ರೆಸ್‌ಗೆ ಸೇರ್ಪಡೆ

ತಿರುವನಂತಪುರ: ಕೇರಳದ ಬಿಜೆಪಿ ನಾಯಕ ಸಂದೀಪ್.ಜಿ ವಾರಿಯರ್ ಅವರು ಶನಿವಾರ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ.

ಪಾಲಕ್ಕಾಡ್ ವಿಧಾನ ಸಭಾ ಕೇತ್ರದಲ್ಲಿ ಉಪಚುನಾವಣೆ ಎದುರಿಸಲು ಸಿದ್ಧವಾಗಿರುವ ಬಿಜೆಪಿಗೆ ಮುಖಭಂಗವಾಗಿದೆ. 'ದ್ವೇಷಕೂಟದಿಂದ ಹೊರಬಂದು, ಪ್ರೀತಿಯ ಅಂಗಡಿಯ ಸದಸ್ಯನಾಗಿರುವುದು ಸಮಾಧಾನ ತಂದಿದೆ. ತನಿಖೆಗಳಿಂದ ತಪ್ಪಿಸಿಕೊಳ್ಳಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ಅವರು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಜೊತೆ ಒಳಒಪ್ಪಂದ ಮಾಡಿಕೊಂಡಿದ್ದಾರೆ' ಎಂದು ಸಂದೀಪ್ ಆರೋಪಿಸಿದ್ದಾರೆ.

'ಜಿ20 ಸಭೆ: ಅರ್ಥಪೂರ್ಣ ಚರ್ಚೆ'

ನವದೆಹಲಿ (ಪಿಟಿಐ): ಬ್ರೆಜಿಲ್‌ನಲ್ಲಿ ನಡೆಯಲಿರುವ ಜಿ20 ದೇಶಗಳ ಸಭೆಯಲ್ಲಿ ಅರ್ಥಪೂರ್ಣ ಮಾತುಕತೆ ನಡೆಯುವುದನ್ನು ತಾವು ಎದುರು ನೋಡುತ್ತಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ನೈಜೀರಿಯಾ, ಬ್ರೆಜಿಲ್, ಗಯಾನಾ ದೇಶಗಳ ಪ್ರವಾಸಕ್ಕೂ ಮೊದಲು ಮೋದಿ ಈ ಮಾತು ಹೇಳಿದ್ದಾರೆ. ಪ್ರಧಾನಿಯವರು ಮೊದಲು ನೈಜೀರಿಯಾಕ್ಕೆ ಭೇಟಿ ನೀಡಲಿದ್ದಾರೆ. ಅಲ್ಲಿಂದ ಅವರು ಬ್ರೆಜಿಲ್‌ಗೆ ತೆರಳಲಿದ್ದಾರೆ.

'ಬ್ರೆಜಿಲ್‌ನಲ್ಲಿ ನಾನು ಜಿ20 ದೇಶಗಳ ಶೃಂಗದಲ್ಲಿ ಭಾಗಿಯಾಗಲಿದ್ದೇನೆ. ಕಳೆದ ವರ್ಷ ಜಿ20 ಗುಂಪಿಗೆ ಭಾರತವು ಯಶಸ್ವಿಯಾಗಿ ಅಧ್ಯಕ್ಷತೆ ವಹಿಸಿದ್ದಾಗ, ಈ ಗುಂಪನ್ನು ಜನಸಾಮಾನ್ಯರ ಗುಂಪನ್ನಾಗಿ ಮೇಲಕ್ಕೆತ್ತಲಾಗಿತ್ತು. ಜಾಗತಿಕ ದಕ್ಷಿಣದ ಆದ್ಯತೆಗಳನ್ನು ಜಿ20 ಗುಂಪಿನ ಕಾರ್ಯಸೂಚಿಗಳಾಗಿ ಮುಖ್ಯವಾಹಿನಿಗೆ ತರಲಾಗಿತ್ತು' ಎಂದು ಮೋದಿ ಅವರು ನೆನಪಿಸಿಕೊಂಡಿದ್ದಾರೆ.

ಬ್ರೆಜಿಲ್‌ನ ರಿಯೊ ಡಿ ಜನ್ಯೆರೊದಲ್ಲಿ ಸೋಮವಾರ ಮತ್ತು ಮಂಗಳವಾರ ನಡೆಯುವ ಶೃಂಗಸಭೆಯಲ್ಲಿ ಮೋದಿ, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್, ಅಮೆರಿಕದ ಅಧ್ಯಕ್ಷ ಜೋ ಬೈಡನ್ ಸೇರಿದಂತೆ ಹಲವು ದೇಶಗಳ ಪ್ರಮುಖರು ಭಾಗಿಯಾಗಲಿದ್ದಾರೆ.

ಜಿ20 ಶೃಂಗದಲ್ಲಿ ಭಾಗಿಯಾದ ನಂತರ ಮೋದಿ ಅವರು ಗಯಾನಾಕ್ಕೆ ತೆರಳಲಿದ್ದಾರೆ. ತಮ್ಮ ದೇಶಕ್ಕೆ ಭೇಟಿ ನೀಡುವಂತೆ ಮೋದಿ ಅವರನ್ನು ಅಲ್ಲಿನ ಅಧ್ಯಕ್ಷ ಮೊಹಮದ್ ಇರ್ಫಾನ್ ಅಲಿ ಆಹ್ವಾನಿಸಿದ್ದಾರೆ. ಭಾರತದ ಪ್ರಧಾನಿ ಗಯಾನಾಕ್ಕೆ ಭೇಟಿ ನೀಡುತ್ತಿರುವುದು 50 ವರ್ಷಕ್ಕೂ ಹೆಚ್ಚಿನ ಅವಧಿಯಲ್ಲಿ ಇದೇ ಮೊದಲು.

'ಶೇ 50ರಷ್ಟು ವಿದ್ಯಾರ್ಥಿಗಳ ಕಲಿಕೆಗೆ 2,500 ವಿ.ವಿ ಅಗತ್ಯ'



ಹೈದರಾಬಾದ್ (ಪಿಟಿಐ): 'ದೇಶದಲ್ಲಿನ ಶೇಕಡ 50ರಷ್ಟು ವಿದ್ಯಾರ್ಥಿಗಳ ಕಲಿಕೆಗೆ ವಿಶ್ವವಿದ್ಯಾಲಯ ಗಳನ್ನು ದ್ವಿಗುಣಗೊಳಿಸಬೇಕಿದ್ದು, ಈ ನಿಟ್ಟಿನಲ್ಲಿ ವಿ.ವಿ.ಗಳ ಸಂಖ್ಯೆಯನ್ನು 2,500ಕ್ಕೆ ಹೆಚ್ಚಿಸುವ ಅಗತ್ಯವಿದೆ' ಎಂದು ನೀತಿ ಆಯೋಗದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ.ಆರ್. ಸುಬ್ರಹ್ಮಣ್ಯಂ ತಿಳಿಸಿದರು.

ಇಂಡಿಯನ್ ಸ್ಕೂಲ್ ಆಫ್ ಬ್ಯುಸಿನೆಸ್ (ಐಎಸ್‌ಬಿ)ನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮುಖ್ಯ ಭಾಷಣ ಮಾಡಿದ ಅವರು, 'ಕಳೆದ 10 ವರ್ಷಗಳಲ್ಲಿ ದೇಶದಲ್ಲಿ ಪ್ರತಿ ವಾರಕ್ಕೊಂದು ವಿಶ್ವವಿದ್ಯಾಲಯ, ಎರಡು ಕಾಲೇಜುಗಳು ಆರಂಭಗೊಳ್ಳುತ್ತಿವೆ. ಹೀಗಿದ್ದರೂ, ಶೇ 29ರಷ್ಟು ವಿದ್ಯಾರ್ಥಿಗಳು ಮಾತ್ರ ವಿಶ್ವವಿದ್ಯಾಲಯಗಳಲ್ಲಿ ದಾಖಲಾಗುತ್ತಿದ್ದಾರೆ' ಎಂದರು.

'ಭಾರತ ಬೃಹತ್ ಪ್ರಮಾಣದಲ್ಲಿ ಡಿಜಿಟಲ್ ಮೂಲಸೌಕರ್ಯ ಹೊಂದಿದ್ದು, ಡಿಜಿಟಲ್ ಜಗತ್ತಿನಲ್ಲಿ ದೇಶವು ಅತ್ಯಂತ ದೊಡ್ಡ ಪ್ರಯೋಗಾಲಯವಾಗುತ್ತಿದೆ. ದೇಶದಲ್ಲಿ 1,200 ವಿಶ್ವವಿದ್ಯಾಲಯಗಳಿದ್ದು, 4 ಕೋಟಿಗಿಂತಲೂ ಹೆಚ್ಚಿನ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಕನಿಷ್ಠ ಶೇಕಡ 50ರಷ್ಟು ವಿದ್ಯಾರ್ಥಿಗಳು ಕಾಲೇಜಿಗೆ ದಾಖಲಾಗಬೇಕು' ಎಂದರು.

ಸಂಕ್ಷಿಪ್ತ ಸುದ್ದಿ

ಚುನಾವಣೆಗೆ ಧಾರ್ಮಿಕ ಬಣ್ಣ: ಶರದ್ ಆರೋಪ

ಸತಾರಾ (ಪಿಟಿಐ): 'ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹಾಗೂ ಅವರ ಬಿಜೆಪಿ ಸಹೋದ್ಯೋಗಿಗಳು 'ಮತ ಜಿಹಾದ್' ಅನ್ನು ಮುಂದೆ ಮಾಡಿಕೊಂಡು ಚುನಾವಣೆಗೆ ಧಾರ್ಮಿಕ ಬಣ್ಣ ಬಳಿಯಲು ಯತ್ನಿಸುತ್ತಿದ್ದಾರೆ' ಎಂದು ಎನ್‌ಸಿಪಿ (ಶರದ್ ಬಣ) ಮುಖ್ಯಸ್ಥ ಶರದ್ ಪವಾರ್ ಶನಿವಾರ ಆರೋಪಿಸಿದರು.

'ಪುಣೆಯ ಒಂದು ಪ್ರದೇಶದಲ್ಲಿ ಹಿಂದೂ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಮತ್ತು ಅವರು ಬಿಜೆಪಿಗೆ ಮತ ನೀಡುತ್ತಾರೆ. ಹಿಂದೂಗಳು ಬಿಜೆಪಿಗೇ ಮತ ನೀಡುತ್ತಾರೆ ಎನ್ನುವುದು ಸಾಮಾನ್ಯ ಜ್ಞಾನ. ಹಾಗೆಂದ ಮಾತ್ರಕ್ಕೆ ಇದನ್ನು 'ಮತ ಜಿಹಾದ್' ಎನ್ನಲಾಗದು. ಚುನಾವಣೆಗೆ ಧಾರ್ಮಿಕ ಬಣ್ಣ ನೀಡುವುದನ್ನು ನಾವು ವಿರೋಧಿಸುತ್ತೇವೆ' ಎಂದರು.

ಮನವಿ ಪತ್ರ: ಮತದಾನಕ್ಕೆ ಕೆಲವೇ ದಿನಗಳು ಉಳಿದಿರುವಂತೆ ಶರದ್ ಪವಾರ್ ಅವರು ಕೆಲವು ಮನವಿಗಳನ್ನು ಸಾರ್ವಜನಿಕರ ಮುಂದಿಟ್ಟಿದ್ದಾರೆ. ಈ ಮನವಿ ಪತ್ರವು ಮರಾಠಿ ಪತ್ರಿಕೆಗಳಲ್ಲಿ ಶನಿವಾರ ಪ್ರಕಟಗೊಂಡಿವೆ. 'ರಾಜ್ಯದ ಸುಸಂಸ್ಕೃತ ರಾಜಕಾರಣವನ್ನು ಹಾಳು ಮಾಡಿ, ಪಕ್ಷಗಳನ್ನು, ಕುಟುಂಬಗಳನ್ನು ಇಬ್ಭಾಗ ಮಾಡಿದವರನ್ನು ಮತದಾರರು ತಿರಸ್ಕರಿಸಬೇಕು' ಎಂದು ಅವರು ಮನವಿ ಮಾಡಿದ್ದಾರೆ.

'ಹಿಂದೆಂದೂ ಪ್ರಚಾರ ಮಾಡದ ಚಿಕ್ಕಮ್ಮನಿಂದ ಈಗ ಪ್ರಚಾರ'

ಬಾರಾಮತಿ (ಪಿಟಿಐ): ಪವಾರ್ ಕುಟುಂಬದ ನಡುವಿನ ವಾಕ್ಸಮರಕ್ಕೆ ಬಾರಾಮತಿ ವಿಧಾನಸಭಾ ಕ್ಷೇತ್ರ ಸಾಕ್ಷಿಯಾಗುತ್ತಿದೆ. ಎನ್‌ಸಿಪಿ ಪಕ್ಷವು ಎರಡು ಭಾಗಗಳಾದ ಬಳಿಕ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದೆ.

1991ರಿಂದ ಅಜಿತ್ ಪವಾರ್ (ಅವಿಭಜಿತ ಎನ್‌ಸಿಪಿ) ಅವರು ಬಾರಾಮತಿ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗುತ್ತಾ ಬಂದಿದ್ದಾರೆ. ಈಗ ಎನ್‌ಸಿಪಿ (ಅಜಿತ್ ಬಣ) ಮುಖ್ಯಸ್ಥ ಅಜಿತ್ ವಿರುದ್ಧ ಅವರ ಸಹೋದರನ ಮಗ ಯೋಗೇಂದ್ರ ಪವಾರ್ ಅವರನ್ನು ಶರದ್ ಪವಾರ್ ಅವರು ತಮ್ಮ ಪಕ್ಷದಿಂದ ಕಣಕ್ಕಿಳಿಸಿದ್ದಾರೆ.

ಬಾರಾಮತಿ ಕ್ಷೇತ್ರದಲ್ಲಿ ಶನಿವಾರ ಚುನಾವಣಾ ಪ್ರಚಾರ ನಡೆಸಿದ ಅಜಿತ್ ಅವರು ತಮ್ಮ ಚಿಕ್ಕಮ್ಮ ಪ್ರತಿಭಾ ಪವಾರ್ ಅವರನ್ನು ಕುರಿತು ಮಾತನಾಡಿದ್ದಾರೆ. 'ಇಷ್ಟು ವರ್ಷಗಳಿಂದ ನಾನು ಇದೇ ಕ್ಷೇತ್ರದಿಂದ ಆಯ್ಕೆ ಆಗುತ್ತಾ ಬಂದಿದ್ದೇನೆ. ನೀವು ಎಂದಾದರೂ ನನ್ನ ಚಿಕ್ಕಮ್ಮ ಚುನಾವಣಾ ಪ್ರಚಾರ ಮಾಡಿದ್ದನ್ನು ನೋಡಿದ್ದೀರಾ' ಎಂದು ಅಜಿತ್ ಅವರು ಜನರನ್ನು ಪ್ರಶ್ನಿಸಿದರು.

'ಮೊಮ್ಮಗ ಯೋಗೇಂದ್ರನ ಕುರಿತು ಅವರಿಗೆ ಅದು ಹೇಗೆ ಒಮ್ಮೆಲೆ ಪ್ರೇಮ ಉಕ್ಕುತ್ತಿದೆ. ಚುನಾವಣೆ ಮುಗಿದ ಬಳಿಕ ಚಿಕ್ಕಮ್ಮನಲ್ಲಿ ಈ ಬಗ್ಗೆ ನಾನು ಕೇಳುತ್ತೇನೆ' ಎಂದರು. ಸಂಸದೆ ಸುಪ್ರಿಯಾ ಸುಳೆ ಅವರ ಪುತ್ರಿ ರೇವತಿ ಅವರೂ ಯೋಗೇಂದ್ರ ಅವರ ಪರ ಪ್ರಚಾರ ನಡೆಸುತ್ತಿದ್ದಾರೆ.

ಅಜಿತ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಎನ್‌ಸಿಪಿ (ಶರದ್ ಬಣ) ಮುಖ್ಯಸ್ಥ ಶರದ್ ಪವಾರ್, 'ಈ ಹಿಂದೆಯೂ ಹಲವು ಬಾರಿ ನನ್ನ ಪತ್ನಿ (ಪ್ರತಿಭಾ ಪವಾರ್) ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡಿದ್ದಳು. ನಮ್ಮ ಕುಟುಂಬದ ಎಲ್ಲರೂ ಚುನಾವಣಾ ಸಮಯದಲ್ಲಿ ಪ್ರಚಾರ ಮಾಡುತ್ತಾರೆ' ಎಂದರು.

ಸುಖಬೀರ್ ರಾಜೀನಾಮೆ

ಚಂಡೀಗಢ (ಪಿಟಿಐ): ಶಿರೋಮಣಿ ಅಕಾಲಿದಳದ (ಎಸ್‌ಎಡಿ) ಅಧ್ಯಕ್ಷ ಸ್ಥಾನಕ್ಕೆ ಸುಖಬೀರ್ ಸಿಂಗ್ ಬಾದಲ್ ಶನಿವಾರ ರಾಜೀನಾಮೆ ನೀಡಿದ್ದಾರೆ. ಅಕಲ್ ತಖ್ತ್, ಬಾದಲ್ ಅವರನ್ನು 'ತಂಖೈಯ' (ಧಾರ್ಮಿಕ ದುರಾಚಾರದ ತಪ್ಪಿತಸ್ಥ) ಎಂದು ಘೋಷಿಸಿರುವ ಕಾರಣ, ಪಕ್ಷದ ಕಾರ್ಯಕಾರಿ ಸಮಿತಿಗೆ ತಮ್ಮ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ ಎಂದು ಎಸ್‌ಎಡಿಯ ಹಿರಿಯ ಮುಖಂಡ ದಲಜೀತ್ ಸಿಂಗ್ ಚೀಮಾ 'ಎಕ್ಸ್'ನಲ್ಲಿ ಪ್ರಕಟಿಸಿದ್ದಾರೆ.

ಶ್ರೀ ನೀಲಕಂಠೇಶ್ವರ ವಿದ್ಯಾ ವರ್ಧಕ ಸಂಸ್ಥೆ (ರಿ)
ತಿಪ್ಪಿಮಠ, ಬೈಲಹೊಂಗಲ ತಾ: ಬೈಲಹೊಂಗಲ ಜಿ: ಬೆಳಗಾವಿ



ಪ್ರಕಟಣೆ

ಶ್ರೀ ನೀಲಕಂಠೇಶ್ವರ ವಿದ್ಯಾ ವರ್ಧಕ ಸಂಸ್ಥೆ (ರಿ) ತಿಪ್ಪಿಮಠ, ಬೈಲಹೊಂಗಲ ತಾ: ಬೈಲಹೊಂಗಲ ಜಿ: ಬೆಳಗಾವಿ ಸದರ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಮಾನ್ಯ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಅವರ ಆದೇಶ ಸಂಖ್ಯೆ: ಜಿ5/ಶಾಶಿಇ/ಹುತುಅ/ನೀವಿಬೈ/15/2024–25/2124 ದಿನಾಂಕ: 16–10–2024ರ ಅನುಮತಿ ನೀಡಿದ ಪ್ರಕಾರ ಕೆಳಗಿನ ಪೂರ್ಣಾವಧಿ ಹುದ್ದೆಗಳಿಗೆ ಅರ್ಜಿ ಕರೆಯಲಾಗಿದೆ.

ಅ.ನಂ	ಶಾಲೆಯ ಹೆಸರು	ಹುದ್ದೆಯ ವಿವರ	ಅನುಮತಿಸಿದ ವಿಷಯ	ಮೀಸಲಾತಿ ಸೂಚ್ಯಾಂಕ	ಸಮತಳ ಮೀಸಲಾತಿ	ಮೀಸಲಾತಿ ಗುಂಪು	ಶಾಲಾ ಮಾಧ್ಯಮ	ವೇತನ ಶ್ರೇಣಿ (ರೂ.)
1	ಶ್ರೀ ನೀ.ವಿ.ವ.ಸಂಸ್ಥೆಯ, ಬಿ.ಎಸ್.ಜಕಾತಿ ಪ್ರೌಢಶಾಲೆ, ತಿಗಡಿ ತಾ: ಬೈಲಹೊಂಗಲ ಜಿ: ಬೆಳಗಾವಿ	ಸಹ ಶಿಕ್ಷಕರು ಕನ್ನಡ ಭಾಷೆ	ಕನ್ನಡ ಭಾಷಾ	1 ನೇ ಸೂಚ್ಯಾಂಕ	ಸಮತಳ ಮೀಸಲಾತಿ ಬಿಂದು–01	ಪರಿಶಿಷ್ಟ ಜಾತಿ	ಕನ್ನಡ	54175 – 99400
2	ಶ್ರೀ ನೀ.ವಿ.ವ.ಸಂಸ್ಥೆಯ, ಎಸ್.ಜಿ.ವ್ಹಿ.ಸಂ.ಪ.ಪೂ. ಮಹಾವಿದ್ಯಾಲಯ (ಪ್ರೌಢಶಾಲಾ ವಿಭಾಗ) ತಾ: ಬೈಲಹೊಂಗಲ ಜಿ: ಬೆಳಗಾವಿ	ಸಹ ಶಿಕ್ಷಕರು ಹಿಂದಿ ಭಾಷೆ	ಹಿಂದಿ	2, ನೇ ಸೂಚ್ಯಾಂಕ	ಸಮತಳ ಮೀಸಲಾತಿ ಬಿಂದು–01	ಸಾಮಾನ್ಯ		54175 – 99400
3		ದೈಹಿಕ ಶಿಕ್ಷಣ ಶಿಕ್ಷಕರು	ದೈಹಿಕ ಶಿಕ್ಷಣ	1, ನೇ ಸೂಚ್ಯಾಂಕ	ಸಮತಳ ಮೀಸಲಾತಿ ಬಿಂದು–01	ಪರಿಶಿಷ್ಟ ಜಾತಿ		54175 – 99400

ಈ ಜಾಹಿರಾತು ಪ್ರಕಟಣೆಗೊಂಡ 21 ದಿನದೊಳಗಾಗಿ ಅರ್ಹ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ದಾಖಲಾತಿಗಳೊಂದಿಗೆ ಅರ್ಜಿಯನ್ನು ಅಧ್ಯಕ್ಷರು, ಶ್ರೀ. ನೀಲಕಂಠೇಶ್ವರ ವಿದ್ಯಾವರ್ಧಕ ಸಂಸ್ಥೆ(ರಿ) ತಿಪ್ಪಿಮಠ, ಬೈಲಹೊಂಗಲ ತಾ: ಬೈಲಹೊಂಗಲ, ಜಿ: ಬೆಳಗಾವಿ ಇವರಿಗೆ ಹಾಗೂ ಒಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಬೆಳಗಾವಿ (ದ) ಇವರಿಗೆ ಕಳುಹಿಸಬೇಕು. ನೇಮಕಾತಿಯು ನಿಯಮಾನುಸಾರ ವಿದ್ಯಾರ್ಹತೆ ಪ್ರಕಾರ ನಡೆಯುತ್ತದೆ. ಅರ್ಜಿಯೊಂದಿಗೆ ಅಧ್ಯಕ್ಷರು ಶ್ರೀ. ನೀಲಕಂಠೇಶ್ವರ ವಿದ್ಯಾವರ್ಧಕ ಸಂಸ್ಥೆ (ರಿ) ತಿಪ್ಪಿಮಠ, ಬೈಲಹೊಂಗಲ, ಜಿ: ಬೆಳಗಾವಿ ಇವರ ಹೆಸರಿಗೆ ಸಾಮಾನ್ಯ ಅಭ್ಯರ್ಥಿಗಳು ರೂ. 1000/– ಡಿಡಿ ಯನ್ನು ಹಾಗೂ ಎಸ್.ಸಿ./ಎಸ್.ಟಿ ಅಭ್ಯರ್ಥಿಗಳು ರೂ. 500/– ಡಿಡಿಯನ್ನು ಕಳುಹಿಸಬೇಕು. ಡಿಡಿ ಮೊಬಲಗಿನ ಹಣವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ. ಅಪೂರ್ಣ ಮಾಹಿತಿಗಳುಳ್ಳ ಹಾಗೂ ನಿಗದಿತ ದಿನಾಂಕವನ್ನು ಮೀರಿ ಬರುವ ಅರ್ಜಿಗಳನ್ನು ಯಾವ ಹಿಂಬರಹ ನೀಡದೆ ತಿರಸ್ಕರಿಸಲಾಗುವುದು ಹಾಗೂ ಹಿಂದಿರುಗಿಸಲಾಗುವುದಿಲ್ಲ. ಸಂದರ್ಶನ ದಿನಾಂಕವನ್ನು ಅಂಚೆ ಮೂಲಕ ತಿಳಿಸಲಾಗುವುದು.

ಸಹಿ/– ಅಧ್ಯಕ್ಷರು
ಶ್ರೀ. ಮ.ನಿ.ಪ್ರ.ಸ್ವ ಪ್ರಭು ನೀಲಕಂಠ ಮಹಾಸ್ವಾಮಿಗಳು
ಶ್ರೀ.ನಿ.ವಿ.ವ.ಸಂಸ್ಥೆ, ತಿಪ್ಪಿಮಠ–ಮೂರುಸಾವಿರಮಠ, ಬೈಲಹೊಂಗಲ

ಸ್ಥಳ : ಬೈಲಹೊಂಗಲ
ದಿನಾಂಕ : 16–11–2024

ಕರ್ನಾಟಕ ಸರಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಇಲಾಖೆ ವಿಭಾಗ ಕಲಬುರಗಿ ದೂರವಾಣಿ : 08472 –220196, www. midnglb@rediffmail.com.

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–1/ಕೆ.ಡಬ್ಲ್ಯೂ–4/2024–25/ 2654 ದಿನಾಂಕ: 15–11–2024

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–4) ::

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ ಕೆ.ಕೆ.ಆರ್.ಡಿ.ಬಿ. ಮೈಕ್ರೋ ಯೋಜನೆ ಅಡಿ ಕಾಮಗಾರಿಗಾಗಿ ಇ–ಟೆಂಡರ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿಯ ಟೆಂಡರಗಿಟ್ಟ ಮೊತ್ತ: ರೂ. 670,58,062.94 3) ಗುತ್ತಿಗೆದಾರರ ಅರ್ಹತೆ ವಿವರ: 1ನೇ ದರ್ಜೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಕೆ.ಪಿ.ಪಿ.ಪಿ. ಪೋರ್ಟಲ್‌ನಂತೆ ಇ.ಎಂ.ಡಿ. ಮೊತ್ತ 10,06,000.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: 28–11–2024 ಬೆಳಿಗ್ಗೆ 11.00 ಗಂಟೆಯ ವರೆಗೆ, 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 29–11–2024 ಸಾಯಂಕಾಲ 17.30 ಗಂಟೆಯ ವರೆಗೆ, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: : 30–11–2024 ಸಾಯಂಕಾಲ 17.30 ಗಂಟೆಯ ವರೆಗೆ, 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: 02–12–2024 ಸಾಯಂಕಾಲ 17.30 ಗಂಟೆಯ ವರೆಗೆ, 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ: https://kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/629/ಕೆ.ಎಸ್.ಎಂ.ಸಿ.&ಎ/2024–25

ಪೈರಸಿ ಅಪಾರ, ದೂರು ವಿರಳ

ಒಂದನೇ ಪುಟದಿಂದ...
ಆದರೆ ಈ ಲಿಂಕ್‌ಗಳು ಹುಟ್ಟಿಕೊಳ್ಳುವ ಮೂಲ ಹುಡುಕುವುದೇ ಸದ್ಯ ಪೊಲೀಸರಿಗೂ, ಚಿತ್ರರಂಗಕ್ಕೂ ಇರುವ ಸವಾಲಾಗಿದೆ.

ಇತ್ತೀಚೆಗೆ ಇವೈ ಮತ್ತು ಇಂಟರ್‌ನೆಟ್ ಆ್ಯಂಡ್ ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ 'ದಿ ರಾಬ್ ರಿಪೋರ್ಟ್' ಎಂಬ ವರದಿ ಬಿಡುಗಡೆ ಮಾಡಿತು. ಇದರ ಪ್ರಕಾರ 2023ರಲ್ಲಿ ಪೈರಸಿಯಿಂದಾಗಿ ಭಾರತೀಯ ಮನರಂಜನಾ ಉದ್ಯಮವು ₹22,400 ಕೋಟಿ ನಷ್ಟ ಅನುಭವಿಸಿದೆ. ಶೇ 51ರಷ್ಟು ಮಾಧ್ಯಮ ಗ್ರಾಹಕರು ಪೈರಸಿ ಮೂಲಗಳಿಂದಲೇ ಕಂಟೆಂಟ್ ಪಡೆಯುತ್ತಿದ್ದಾರೆ. ಚಿತ್ರಮಂದಿರಗಳ ಪೈರಸಿ ಕಂಟೆಂಟ್‌ನಿಂದ ₹13,700 ಕೋಟಿ ಹಾಗೂ ಒಟಿಟಿ ವೇದಿಕೆಗಳ ಕಂಟೆಂಟ್‌ನಿಂದ ₹8,700 ಕೋಟಿ ನಷ್ಟವಾಗಿದೆ. ಇದರಿಂದ ₹4,300 ಕೋಟಿ ಜಿಎಸ್‌ಟಿ ವರಮಾನ ನಷ್ಟವಾಗಿದೆ ಎಂಬ ಅಂಶ ವರದಿಯಲ್ಲಿದೆ.

ಕನ್ನಡ ಚಿತ್ರರಂಗಕ್ಕೆಷ್ಟು ನಷ್ಟ?

'ಪ್ರತಿ ವರ್ಷ ಅಂದಾಜು 200–250 ಕನ್ನಡ ಸಿನಿಮಾಗಳು ತೆರೆಕಾಣುತ್ತಿವೆ. ಪೈರಸಿಯಿಂದಾಗಿ ಕನ್ನಡ ಚಿತ್ರರಂಗ ವರ್ಷಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ₹300–₹400 ಕೋಟಿಯವರೆಗೆ ನಷ್ಟ ಅನುಭವಿಸುತ್ತಿದೆ' ಎನ್ನುತ್ತಾರೆ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್. 'ವರ್ಷಕ್ಕೆ ಸರಿಸುಮಾರು 400 ಸಿನಿಮಾಗಳು ಸೆನ್ಸಾರ್ ಆಗುತ್ತಿವೆ. ಹೇಗಿದ್ದರೂ ಪೈರಸಿ ಮೂಲಕ ಚಿತ್ರ ಬಂದೇ ಬರುತ್ತದೆ ಎಂದು ನಿರೀಕ್ಷೆ ಇರುವವರು ಚಿತ್ರಮಂದಿರದತ್ತ ಮುಖ ಹಾಕುವುದಿಲ್ಲ' ಎಂದರು ಬಣಕಾರ್.

ದೂರಿನಿಂದ ಬಲು ದೂರ!

ಹಿಂದೆ ಪೈರಸಿಯ ಸಾಕ್ಷ್ಯ ರೂಪದಲ್ಲಿ ಸಿ.ಡಿಗಳು ದೊರೆಯುತ್ತಿದ್ದವು. ಇದೀಗ ಪೈರಸಿ ಜಾಲವು ಹೊಸ ತಂತ್ರಜ್ಞಾನಗಳನ್ನು ಬಳಸಿಕೊಂಡು ಆನ್‌ಲೈನ್‌ನಲ್ಲೇ ಕಾರ್ಯನಿರ್ವಹಿಸುತ್ತಿರುವ ಕಾರಣ, ಮೂಲ ಪತ್ತೆಹಚ್ಚಲು ಸಾಧ್ಯವಾಗುತ್ತಿಲ್ಲ. ತಮಿಳ್ ರಾಕರ್ಸ್, ಮೂವಿ ರೂಲ್ಜ್, 1337 ಎಕ್ಸ್, ಟೊರೆಂಟ್ ಮೂಲಕ ಟೆಲಿಗ್ರಾಂ, ಇನ್‌ಸ್ಟಾಗ್ರಾಂ ಜೊತೆಗೆ ವಾಟ್ಸ್‌ಆ್ಯಪ್‌ನಲ್ಲೂ ಇದೀಗ ಪೈರಸಿಯಾದ ಸಿನಿಮಾಗಳ ಲಿಂಕ್‌ಗಳು, ಸಿನಿಮಾದ ದೃಶ್ಯಗಳು ಹರಿದಾಡುತ್ತಿವೆ.

3ಜಿ–4ಜಿ ಇಂಟರ್‌ನೆಟ್ ಯುಗಕ್ಕಿಂತ ಮುನ್ನ ನಿರ್ಮಾಪಕರು ತಮ್ಮ ಸಿನಿಮಾ ಪೈರಸಿಯಾದಾಗ, ಸೈಬರ್ ಪೊಲೀಸರ ಮೊರೆ ಹೋಗುವುದು ಅನಿವಾರ್ಯವಾಗಿತ್ತು. ಆದರೆ ಇದೀಗ ತಮ್ಮ ಸಿನಿಮಾಗಳು ಪೈರಸಿಯಾದರೆ ನಿರ್ಮಾಪಕರು ಹೊಸ ಮಾರ್ಗ ಕಂಡುಕೊಂಡಿದ್ದಾರೆ. ಸೈಬರ್ ಪೊಲೀಸರಿಗೆ ದೂರು ನೀಡಿ ಅದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವತ್ತಲೂ ಅವರ ಚಿತ್ತವಿಲ್ಲ. ಕಾರಣವಿಷ್ಟೇ ದೂರು ನೀಡಿ ಸಮಯ ವ್ಯರ್ಥ ಮಾಡುವುದಕ್ಕಿಂತ ಪೈರಸಿ ತಡೆಯುವ ಕಂಪನಿಗಳಿಗೆ ಹಣ ನೀಡಿ ವೆಬ್ ಲಿಂಕ್ಸ್ ತೆಗೆಯುವ ಕೆಲಸಕ್ಕೇ ನಿರ್ಮಾಪಕರು ಹೆಚ್ಚಿನ ಒತ್ತು ನೀಡುತ್ತಿದ್ದಾರೆ. ಮೊದಲ ಮೂರು ದಿನ ಅಥವಾ ಮೊದಲ ವಾರ ಬಾಕ್ಸ್ ಆಫೀಸ್ ಗಳಿಕೆ ಚಿತ್ರತಂಡಗಳಿಗೆ ಮುಖ್ಯವಾಗಿರುವ ಕಾರಣ ಆ ಅವಧಿಯಲ್ಲಿ ಪೈರಸಿ ಲಿಂಕ್ಸ್ ತೆಗೆಯುವುದಕ್ಕೇ ಅವರು ಆದ್ಯತೆ ನೀಡುತ್ತಿದ್ದಾರೆ.

ಕೆಲ ಕನ್ನಡ ಸಿನಿಮಾ ನಿರ್ಮಾಪಕರಷ್ಟೇ ಸೈಬರ್ ಪೊಲೀಸರಿಗೆ ದೂರು ನೀಡಿದ ಉದಾಹರಣೆಗಳು ಸಿಗುತ್ತವೆ. 'ನಿನ್ನ ಸನಿಹಕೆ', 'ಕೃಷ್ಣ ಟಾಕೀಸ್', 'ಪೈಲ್ವಾನ್', 'ಕೋಟಿಗೊಬ್ಬ–3', 'ಏಕ್ ಲವ್ ಯಾ', 'ಪೊಗರು' ಸೇರಿದಂತೆ ಕೆಲ ಚಿತ್ರದ ನಿರ್ಮಾಪಕರಷ್ಟೇ ದೂರು ನೀಡಿದ್ದಾರೆ. ಇತ್ತೀಚೆಗೆ ಬಿಡುಗಡೆಗೊಂಡ ಕನ್ನಡದ ಹಿಟ್ ಸಿನಿಮಾಗಳ ನಿರ್ಮಾಪಕರನ್ನು ಪ್ರಶ್ನಿಸಿದರೆ 'ಪೈರಸಿ ವಿರುದ್ಧ ನಾವು ದೂರು ನೀಡಿಲ್ಲ' ಎನ್ನುವ ಉತ್ತರ ದೊರಕುತ್ತಿದೆ. ತಮಿಳುನಾಡು, ಕೇರಳದಲ್ಲಿ ನಿರ್ಮಾಪಕರು ಪೈರಸಿಯ ದೂರುಗಳನ್ನು ದಾಖಲಿಸಿರುವುದು ವರದಿಯಾಗಿದೆ.

'ಪೈರಸಿ ಕುರಿತಾದ ದೂರು ನೀಡಲು ವಾಣಿಜ್ಯ ಮಂಡಳಿ, ನಿರ್ಮಾಪಕರ ಸಂಘದಲ್ಲಿ ಯಾವುದೇ ಪ್ರತ್ಯೇಕ ಘಟಕವಿಲ್ಲ. ಈ ಹಿಂದೆ ದೂರುಗಳನ್ನು ತುಂಬಾ ನೀಡಲಾಗಿದೆ. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪೈರಸಿ ಜಾಲ ಇರುವ ಕಾರಣ ಕಾನೂನು ಕ್ರಮಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಪೊಲೀಸರು ಹೇಳುತ್ತಾರೆ. ಇಡೀ ದೇಶದಲ್ಲಿ ಪೈರಸಿ ಮಾಡಿದವರಿಗೆ ಕಠಿಣ ಶಿಕ್ಷೆಯಾದ ಹೆಚ್ಚಿನ ಉದಾಹರಣೆಗಳೇ ಸಿಗುವುದಿಲ್ಲ. ಏನೂ ಆಗುವುದಿಲ್ಲ ಎಂದು ತಿಳಿದ ನಿರ್ಮಾಪಕರು ದೂರು ನೀಡುವುದನ್ನೇ ನಿಲ್ಲಿಸಿದ್ದಾರೆ' ಎಂಬುವುದು ಉಮೇಶ್ ಬಣಕಾರ್ ಅಭಿಮತ.

ಎಐ ಚಿತ್ರ: ಕಣಕಾಲಮಠ

ಖರ್ಚು ಮಾಡುತ್ತಿರುವುದೆಷ್ಟು?

ರಾಜ್ಯದಲ್ಲಿ ಈ ವರ್ಷ ಇಲ್ಲಿಯವರೆಗೆ 177 ಸಿನಿಮಾಗಳು ಬಿಡುಗಡೆಯಾಗಿವೆ. ಇವುಗಳಲ್ಲಿ ಪ್ರಮುಖ ಸಿನಿಮಾಗಳ ನಿರ್ಮಾಪಕರು ₹5–₹10 ಲಕ್ಷವನ್ನು ಪೈರಸಿ ತಡೆಯುವ ನಿಟ್ಟಿನಲ್ಲಿ ಆ್ಯಂಟಿ ಪೈರಸಿ ಏಜೆನ್ಸಿಗಳಿಗಾಗಿ ಖರ್ಚು ಮಾಡುತ್ತಿದ್ದಾರೆ. 'ನಾವು ಪೈರಸಿ ತಡೆಯಲು ಬ್ಲಾಕ್‌ಎಕ್ಸ್ ಸೇರಿದಂತೆ ಎರಡು ಮೂರು ಆ್ಯಂಟಿ ಪೈರಸಿ ಏಜೆನ್ಸಿಗಳನ್ನು ನಿಯೋಜಿಸಿಕೊಂಡಿದ್ದೇವೆ. ಪೈರಸಿ ತಡೆಯಲು ಪ್ರತಿ ಸಿನಿಮಾಗೂ ₹10–₹15 ಲಕ್ಷ ಖರ್ಚು ಮಾಡುತ್ತೇವೆ. ಆದಾಯದ ಮೇಲೆ ಪೈರಸಿ ಪರಿಣಾಮ ಬೀರಿದೆ. ಶೇ 5–10 ಆದಾಯ ನಷ್ಟವಾಗಿದೆ' ಎನ್ನುತ್ತಾರೆ 'ಕೆಜಿಎಫ್', 'ಸಲಾರ್', ಕಾಂತಾರ', 'ಬಘೀರ' ಮುಂತಾದ ಹಿಟ್ ಸಿನಿಮಾಗಳನ್ನು ನೀಡಿದ ಹೊಂಬಾಳೆ ಫಿಲ್ಮ್ಸ್‌ನ ಸಹ ಸಂಸ್ಥಾಪಕ ಚಲುವೇಗೌಡ.

ನೆರೆರಾಜ್ಯಗಳಲ್ಲಿ ಪೈರಸಿ ಹೆಚ್ಚು

ತಮಿಳು, ತೆಲುಗು, ಹಿಂದಿ ಹಾಗೂ ಮಲಯಾಳ ಸಿನಿಮಾಗಳು ಹೆಚ್ಚು ಪೈರಸಿಗೆ ಒಳಗಾಗುತ್ತಿವೆ. ಏಕೆಂದರೆ ಇವುಗಳನ್ನು ಬೇರೆ ರಾಜ್ಯಗಳಲ್ಲೂ ನೋಡುವ ಜನರ ಸಂಖ್ಯೆ ಹೆಚ್ಚು ಇದೆ. ಈ ವರ್ಷ ಬಾಕ್ಸ್ ಆಫೀಸ್‌ನಲ್ಲಿ ಹೆಚ್ಚು ಗಳಿಕೆ ಮಾಡಿದ್ದ ಪ್ರಭಾಸ್ ನಟನೆಯ 'ಕಲ್ಕಿ -2898 ಎಡಿ', ಬಾಲಿವುಡ್‌ನ 'ಸ್ತ್ರೀ–2' ಸಿನಿಮಾಗಳು ಬಿಡುಗಡೆಗೊಂಡ ಕೆಲವೇ ಗಂಟೆಗಳಲ್ಲಿ ಲೀಕ್ ಆಗಿದ್ದವು. ವಾರದ ಹಿಂದೆ ಬಿಡುಗಡೆಗೊಂಡ ಅಜಯ್ ದೇವಗನ್ ನಟನೆಯ 'ಸಿಂಗಂ ಅಗೈನ್', 'ಭೂಲ್ ಬುಲೈಯ್ಯ 3' ಚಿತ್ರ ಬಿಡುಗಡೆಗೊಂಡ ದಿನವೇ ಆ ಸಿನಿಮಾಗಳ ಪೈರಸಿ ಲಿಂಕ್‌ಗಳು ಹಲವು ವೆಬ್‌ಸೈಟ್‌ಗಳಲ್ಲಿ ಹರಿದಾಡಿದ್ದವು. ರಜನಿಕಾಂತ್ ನಟನೆಯ 'ವೇಟ್ಟೈಯನ್', ಮಲಯಾಳದ ಟೊವಿನೊ ಥಾಮಸ್ ನಟನೆಯ 'ಅಜಯಂಡೆ ರಂಡಾಂ ಮೋಷಣಮ್–ಎಆರ್‌ಎಂ' ಸಿನಿಮಾ ಪೈರಸಿ ಮಾಡಿದ ಸಂಬಂಧ ಕೊಚ್ಚಿ ನಗರ ಸೈಬರ್ ಪೊಲೀಸರು ಬೆಂಗಳೂರಿನಲ್ಲಿ ಇಬ್ಬರನ್ನು ಬಂಧಿಸಿ ಕರೆದೊಯ್ದಿದ್ದರು. ಕೊಯಮತ್ತೂರಿನ ಚಿತ್ರಮಂದಿರವೊಂದರಲ್ಲಿ ಈ ಸಿನಿಮಾಗಳನ್ನು ಆರೋಪಿಗಳು ಚಿತ್ರೀಕರಿಸಿದ್ದರು.

ಅಧಿಕ ಟಿಕೆಟ್ ದರವೂ ಪೈರಸಿಗೆ ಕಾರಣ

ರಾಜ್ಯದ ಏಕಪರದೆ ಚಿತ್ರಮಂದಿರಗಳಲ್ಲಿ ಕನಿಷ್ಠ ₹100ರಿಂದ ಗರಿಷ್ಠ ₹300ರವರೆಗೆ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ ಕನಿಷ್ಠ ₹160ರಿಂದ ಗರಿಷ್ಠ ₹1,800ರವರೆಗೆ ಟಿಕೆಟ್ ದರವಿದೆ. ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳಲ್ಲಿ ಮಲ್ಟಿಪ್ಲೆಕ್ಸ್‌ಗಳಲ್ಲಿ ಕನಿಷ್ಠ ದರ ₹60ರಿಂದ ಗರಿಷ್ಠ ₹200ರವರೆಗಿದೆ. ರಜನಿಕಾಂತ್ ನಟನೆಯ 'ವೇಟ್ಟೈಯನ್' ಸಿನಿಮಾವನ್ನು ತಮಿಳುನಾಡಿನ ಮಲ್ಟಿಪ್ಲೆಕ್ಸ್ ಒಂದರಲ್ಲಿ ₹60ಕ್ಕೆ ವೀಕ್ಷಿಸಬಹುದು. ಅದೇ ಬೆಂಗಳೂರಿನಲ್ಲಿ ಇದಕ್ಕೆ ₹1000ದ ಮೇಲೆ ನೀಡಬೇಕು. ಇಂತಹ ಟಿಕೆಟ್ ದರ ವ್ಯತ್ಯಾಸವೂ ಪೈರಸಿ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ. ಜೊತೆಗೆ ಚಿತ್ರಮಂದಿರ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿನ ತಿಂಡಿಗಳ ದರವೂ ಇದಕ್ಕೆ ಇಂಬು ನೀಡಿದೆ. ನಾಲ್ವರ ಕುಟುಂಬವೊಂದು ಏಕಪರದೆ ಚಿತ್ರಮಂದಿರಕ್ಕೆ ಹೋಗಿ ಸಿನಿಮಾ ನೋಡಬೇಕಾದರೆ ಕನಿಷ್ಠ ₹1500 ಖರ್ಚು ಮಾಡಬೇಕು. ಪೈರಸಿ ಮೂಲಕ ಸಿನಿಮಾವೊಂದು ಖರ್ಚಿಲ್ಲದೆ ಅಂಗೈಗೇ ತಲುಪುತ್ತಿರುವಾಗ, ಈ ದಾರಿಯನ್ನು ಹಿಡಿಯುವವರೇ ಹೆಚ್ಚಾಗಿದ್ದಾರೆ.

ಪೈರಸಿ ತಡೆಗೆ ಕಾನೂನು ಏನಿದೆ?

'ದಿ ಸಿನಿಮಾಟೋಗ್ರಾಫ್(ತಿದ್ದುಪಡಿ)ಮಸೂದೆ –2023'ರ ಅಡಿ ಸಿನಿಮಾದ ಪೈರಸಿ ಮಾಡುವ ವ್ಯಕ್ತಿಗೆ ಗರಿಷ್ಠ 3 ವರ್ಷ ಜೈಲು ಶಿಕ್ಷೆ ಮತ್ತು ನಿರ್ಮಾಣ ವೆಚ್ಚದ ಶೇ 5ರಷ್ಟು ದಂಡ ವಿಧಿಸಬಹುದು. ಕೇಂದ್ರ ಸರ್ಕಾರವು ಪೈರಸಿಯನ್ನು ತಡೆಯಲು ವಾರ್ತಾ ಮತ್ತು ಪ್ರಸಾರ ಇಲಾಖೆ ಹಾಗೂ ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿ(ಸಿಬಿಎಫ್‌ಸಿ)ಯಲ್ಲಿ 12 ನೋಡಲ್ ಅಧಿಕಾರಿಗಳನ್ನು ನೇಮಿಸಿದೆ. ಇವರ ಬಳಿ ಪೈರಸಿಗೆ ಸಂಬಂಧಿಸಿದ ದೂರು ನೀಡಿದರೆ, 48 ಗಂಟೆಗಳೊಳಗಾಗಿ ಕ್ರಮ ತೆಗೆದುಕೊಳ್ಳುವ ಭರವಸೆಯನ್ನು ಸರ್ಕಾರ ನೀಡಿದೆ. ಈ ಹಾದಿಗಿಂತ ಖಾಸಗಿ ಕಂಪನಿಗಳ ಮೂಲಕವೇ ಪೈರಸಿ ಲಿಂಕ್ಸ್ ತೆಗೆಯುವ ಹಾದಿ ಚಿತ್ರತಂಡಗಳಿಗೆ ಸುಲಭವಾಗಿ ತೋರುತ್ತಿದೆ. 'ಮೊದಲ ಮೂರು ವಾರ ನಮ್ಮ ಸಿನಿಮಾಗಳಿಗೆ ಒಂದು ಮುಖ್ಯ ಅವಧಿ. ಈ ಸಮಯದಲ್ಲಿ ದೂರು ನೀಡುತ್ತಾ ಕುಳಿತರೆ ಸಮಯ ವ್ಯರ್ಥ. ಹೀಗಾಗಿ ಏಜೆನ್ಸಿಗಳ ಮೊರೆ ಹೋಗುತ್ತೇವೆ' ಎನ್ನುತ್ತಾರೆ ನಿರ್ಮಾಪಕ ಚಲುವೇಗೌಡ.

ಪೈರಸಿ ಮಾಡುವಲ್ಲಿ ಹೆಸರುವಾಸಿಯಾಗಿರುವ ತಮಿಳ್ ರಾಕರ್ಸ್ ಮಲ್ಟಿಪಲ್ ಡೊಮೈನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವುಗಳ ಪತ್ತೆ ಅಸಾಧ್ಯವಾಗಿದೆ. ಇವುಗಳ ಮೂಲಕ ಹರಿದಾಡುವ ಲಿಂಕ್‌ಗಳು ಟೆಲಿಗ್ರಾಂ ಆ್ಯಪ್‌ನ ಹಲವು ಚಾನೆಲ್‌ಗಳಲ್ಲಿ ಸಿಗುತ್ತವೆ. 'ನ್ಯೂ ಕನ್ನಡ ಮೂವೀಸ್', '2024 ಫಿಲ್ಮ್ಸ್' ಹೀಗೆ ದಿನಕ್ಕೊಂದು ಚಾನಲ್‌ಗಳು ಟೆಲಿಗ್ರಾಂನಲ್ಲಿ ಹುಟ್ಟಿಕೊಳ್ಳುತ್ತಿವೆ.

'ಟೆಲಿಗ್ರಾಂ ಆ್ಯಪ್ ನಿಯಂತ್ರಿಸಲು ಸರ್ಕಾರ ಕಠಿಣವಾದ ಕ್ರಮ ಕೈಗೊಳ್ಳುವ ಅಗತ್ಯವಿದೆ. ಸಿನಿಮಾ ರಿಲೀಸ್ ಆದ ಒಂದೆರಡು ದಿನಗಳಲ್ಲಿ ಸಿನಿಮಾಗಳು ಮೊಬೈಲ್‌ನಲ್ಲಿ ಹರಿದಾಡುತ್ತಿರುತ್ತವೆ. ಪೈರಸಿ ವಿರುದ್ಧ ಗೂಂಡಾ ಕಾಯ್ದೆ ಇದೆ. ಇದು ಸೂಕ್ತವಾಗಿ ಜಾರಿಯಾಗಬೇಕು. ಕೆಎಫ್‌ಸಿಸಿಯಲ್ಲಿ ಪೈರಸಿಯ ದೂರು ನೀಡಲು ಪ್ರತ್ಯೇಕ ಘಟಕವಿಲ್ಲ. ಇದನ್ನು ಮಾಡುವ ಯೋಚನೆ ಇದೆ. ನಮಗೆ ದೂರು ಬಂದರೆ ಅದನ್ನು ಪೊಲೀಸರಿಗೆ ತಿಳಿಸುತ್ತೇವೆ. ಹಿಟ್ ಆಗುವ ಮುನ್ಸೂಚನೆ ಇರುವ ಸಿನಿಮಾಗಳ ಪೈರಸಿ ಹೆಚ್ಚು ಆಗುತ್ತಿದೆ' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ(ಕೆಎಫ್‌ಸಿಸಿ) ಅಧ್ಯಕ್ಷ ಎನ್.ಎಂ.ಸುರೇಶ್ ಬೇಸರದಿಂದ ಹೇಳಿದರು.

'ಐದು ವರ್ಷಗಳ ಹಿಂದೆ ಬೆಂಗಳೂರಿನ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಹೆಚ್ಚಿನ ಪೈರಸಿ ಪ್ರಕರಣಗಳು ದಾಖಲಾಗುತ್ತಿದ್ದವು. ಪೊಲೀಸರೂ ಪೈರಸಿ ಮಾಡುತ್ತಿದ್ದವರನ್ನು ವಿಳಂಬವಾದರೂ ಪತ್ತೆಹಚ್ಚಿ ಬಂಧಿಸುತ್ತಿದ್ದರು. ಇತ್ತೀಚೆಗೆ ಸಾಮಾಜಿಕ ಮಾಧ್ಯಮಗಳು ಪ್ರಬಲವಾಗಿದ್ದು, ಸಿನಿಮಾ ಬಿಡುಗಡೆಯಾದ ದಿನದಂದು ಸಂಜೆ ವೇಳೆಗೇ ಟೆಲಿಗ್ರಾಂ ಸೇರಿದಂತೆ ವಿವಿಧ ಜಾಲತಾಣಗಳಲ್ಲಿ ಲಿಂಕ್‌ಗಳು ಹರಿದಾಡುತ್ತಿವೆ. ಕಾನೂನು ಪ್ರಕಾರ ಕ್ರಮ ಕೈಗೊಳ್ಳುವ ವೇಳೆಗೆ ಅದು ಲಕ್ಷಾಂತರ ಮೊಬೈಲ್ ಫೋನ್‌ಗಳಲ್ಲಿ ಹೋಗಿಯಾಗಿರುತ್ತವೆ. ಇದೇ ಕಾರಣದಿಂದ ಪೊಲೀಸ್ ಠಾಣೆಗೆ ಬರುವ ನಿರ್ಮಾಪಕರ ಸಂಖ್ಯೆ ಇತ್ತೀಚೆಗೆ ಕಡಿಮೆಯಾಗಿದ್ದು ಅವರೇ ಪರ್ಯಾಯ ಮಾರ್ಗ ಕಂಡುಕೊಂಡಿದ್ದಾರೆ' ಎನ್ನುತ್ತಾರೆ ಪೊಲೀಸ್ ಅಧಿಕಾರಿಯೊಬ್ಬರು.

ಪೈರಸಿ ತಡೆಯಲು ಪ್ರತಿ ಸಿನಿಮಾಗೂ ₹2–₹3 ಲಕ್ಷ ಖರ್ಚು ಮಾಡುತ್ತಿದ್ದೇವೆ. ಜನರಿಂದಲೇ ಪೈರಸಿ ತಡೆಯಲು ಸಾಧ್ಯ. ಪೈರೇಟೆಡ್ ಕಾಪಿ ನೋಡಲ್ಲ ಎನ್ನುವುದನ್ನು ಜನರೇ ನಿರ್ಧರಿಸಬೇಕು. ಸಿನಿಮಾ ಪ್ರತಿಯೊಬ್ಬರಿಗೂ ನಿಲುಕುವ ದರದಲ್ಲಿ ಸಿಗುವಂತೆ ಮಾಡಲು ಚಿತ್ರರಂಗವೂ ಯೋಚಿಸಬೇಕು.

ಕಾರ್ತಿಕ್ ಗೌಡ, ನಿರ್ಮಾಪಕ ವಿತರಕ– ಕೆಆರ್‌ಜಿ ಸ್ಟುಡಿಯೋಸ್

ಸಿನಿಮಾ ಒಟಿಟಿಗೆ ಬಂದ ಮೇಲೆ ಹೆಚ್ಚಿನ ಪೈರಸಿ ಆಗಿದೆ. ನಾವು ಪೇಪರ್ ವ್ಯೂ ಆಧಾರದಲ್ಲಿ ಸಿನಿಮಾ ನೀಡಿರುವುದರಿಂದ ನಮ್ಮ ಆದಾಯವೂ ಇಳಿಕೆಯಾಗಿರುವುದನ್ನು ಗಮನಿಸಿದ್ದೇನೆ.

ಚಂದ್ರಜಿತ್ ಬೆಳ್ಳಪ್ಪ, 'ಇಬ್ಬನಿ ತಬ್ಬಿದ ಇಳೆಯಲಿ' ನಿರ್ದೇಶಕ

ಕನ್ನಡ, ತೆಲುಗಿನಲ್ಲಿ ಪೈರಸಿ ನಿಯಂತ್ರಣಕ್ಕೆ ಎರಡು ಕಂಪನಿಗಳಿಗೆ ₹5 ಲಕ್ಷ ಖರ್ಚು ಮಾಡಿದ್ದೇನೆ. ಶೇ 75ರಷ್ಟು ಪೈರಸಿ ಲಿಂಕ್‌ಗಳನ್ನು ಅವರು ಬ್ಲಾಕ್ ಮಾಡಿದ್ದಾರೆ. ದೂರು ನೀಡಿದರೆ ಕ್ರಮಕ್ಕೆ ಮುನ್ನವೇ ಎಲ್ಲರ ಕೈಗೆ ಪೈರಸಿಯಾದ ಸಿನಿಮಾ ತಲುಪಿರುತ್ತದೆ.

ನಿತಿನ್ ಕೃಷ್ಣಮೂರ್ತಿ
'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ನಿರ್ದೇಶಕ

ಜಾಲ ಹೇಗೆ ಕಾರ್ಯನಿರ್ವಹಿಸುತ್ತದೆ?

ಚಿತ್ರಮಂದಿರದಲ್ಲಿ ಕುಳಿತು ಸಿನಿಮಾ ಚಿತ್ರೀಕರಿಸುತ್ತಿದ್ದ ತಮಿಳುನಾಡು ಮೂಲದ ಓರ್ವನನ್ನು ಕೇರಳ ಸೈಬರ್ ಪೊಲೀಸರು ಕಳೆದ ಜುಲೈನಲ್ಲಿ ಕೊಚ್ಚಿಯಲ್ಲಿ ಬಂಧಿಸಿದ್ದರು. ಆತ ಪೈರಸಿ ತಂಡ ಹೇಗೆ ಕಾರ್ಯನಿರ್ವಹಿಸುತ್ತದೆ ಎನ್ನುವುದನ್ನು ಪೊಲೀಸರಿಗೆ ವಿವರಿಸಿದ್ದ. ಪೈರಸಿ ಮಾಡುವ ತಂಡದ ಸದಸ್ಯರು ತಮಿಳುನಾಡು, ಕೇರಳ, ಕರ್ನಾಟಕದ ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆ ದಿನ ಹೆಚ್ಚಿನ ದರವಿರುವ ಐದು ಸೀಟುಗಳ ಟಿಕೆಟ್‌ಗಳನ್ನು ಖರೀದಿಸುತ್ತಾರೆ. ಇವರಲ್ಲಿ ನಡುವಿನಲ್ಲಿ ಕುಳಿತವನು ರಹಸ್ಯವಾಗಿ ಕ್ಯಾಮೆರಾ ಇಟ್ಟುಕೊಂಡು ಪೂರ್ತಿಯಾಗಿ ತನ್ನನ್ನು ಒಂದು ಹೊದಿಕೆಯಿಂದ ಮುಚ್ಚಿಕೊಂಡು ಇಡೀ ಸಿನಿಮಾವನ್ನು ರೆಕಾರ್ಡ್ ಮಾಡಿಕೊಳ್ಳುತ್ತಾನೆ. ಇದಕ್ಕೆ ₹5000ದವರೆಗೆ ಆತ ಹಣ ಪಡೆಯುತ್ತಾನೆ. ಈ ಸಿನಿಮಾ ಲಿಂಕ್ ಅನ್ನು ತನ್ನನ್ನು ಗೊತ್ತು ಮಾಡಿದವನಿಗೆ ಕಳುಹಿಸಿಕೊಡುತ್ತಾನೆ ಎಂದು ಆತ ಕಾರ್ಯಾಚರಣೆಯ ವಿಧಾನವನ್ನು ತಿಳಿಸಿದ್ದ.

ಹೀಗೆ ಸೃಷ್ಟಿಯಾಗುವ ಲಿಂಕ್‌ಗಳನ್ನು ತೆಗೆಯಲು ಆ್ಯಂಟಿ ಪೈರಸಿ ಏಜೆನ್ಸಿಗಳು ದಿನದ 24 ಗಂಟೆಯೂ ಕೆಲಸ ಮಾಡುತ್ತಿವೆ. 'ಶೇ 85ರಷ್ಟು ಪೈರಸಿ ಲಿಂಕ್‌ಗಳು, ಕಂಟೆಂಟ್‌ಗಳು ಟೆಲಿಗ್ರಾಂ, ಇನ್‌ಸ್ಟಾಗ್ರಾಂ, ಟ್ವಿಟರ್‌ನಂತಹ ವೇದಿಕೆಗಳಲ್ಲಿ ಬರುತ್ತವೆ. ಚಿತ್ರತಂಡದ ಕಾಪಿರೈಟ್ ಕುರಿತು ನ್ಯಾಯಾಲಯದ ಆದೇಶವಿಟ್ಟುಕೊಂಡು ನಾವು ಈ ಕಂಟೆಂಟ್‌ಗಳನ್ನು ನೇರವಾಗಿ ಬ್ಲಾಕ್ ಮಾಡುತ್ತೇವೆ. ಕಾಪಿರೈಟ್ ಕಾನೂನು ಬಹಳ ಕ್ಷೀಣವಿರುವ ನೆದರ್‌ಲ್ಯಾಂಡ್‌ನಂತಹ ದೇಶಗಳಲ್ಲಿ ತಮಿಳ್ ರಾಕರ್ಸ್‌ನಂಥ ವೆಬ್‌ಸೈಟ್‌ಗಳ ಹೋಸ್ಟಿಂಗ್ ಪ್ರೊವೈಡರ್‌ಗಳು ಇರುತ್ತವೆ. ಇಂತಹ ವೆಬ್‌ಸೈಟ್‌ಗಳಿಂದ ಕಂಟೆಂಟ್ ತೆಗೆಯಲು ನ್ಯಾಯಾಲಯದ ಮೂಲಕ ಆದೇಶ ಪಡೆದುಕೊಂಡು ಇಂಟರ್‌ನೆಟ್ ಪ್ರೊವೈಡರ್‌ಗಳಿಗೆ ನೋಟಿಸ್ ಕಳುಹಿಸುತ್ತೇವೆ' ಎಂದು ತಮ್ಮ ಕಾರ್ಯವೈಖರಿ ಬಗ್ಗೆ ಮಾಹಿತಿ ನೀಡಿದರು ಆ್ಯಂಟಿ ಪೈರಸಿ ಏಜೆನ್ಸಿಯಾದ 'ಬ್ಲಾಕ್‌ಎಕ್ಸ್' ಸಂಸ್ಥಾಪಕ ಶಿವ ಧರ್ಮ.

ಈ ತಂಡಗಳು ಟೆಲಿಗ್ರಾಂ, ಯುಟ್ಯೂಬ್, ವರ್ಲ್ಡ್ ವೈಡ್ ವೆಬ್ ಸೇರಿ ಎಲ್ಲ ವೇದಿಕೆಗಳಲ್ಲಿ ಸಿನಿಮಾದ ಹೆಸರನ್ನು, ಹೀರೊ, ನಿರ್ದೇಶಕರ ಹೆಸರನ್ನು ಬೇರೆ ಬೇರೆ ರೀತಿಯಲ್ಲಿ ಹುಡುಕಿ, ನ್ಯೂ ಕನ್ನಡ ಫಿಲ್ಮ್, 2024 ಕನ್ನಡ ಫಿಲ್ಮ್ಸ್ ಹೀಗೆ ಹಲವು ಪದಗಳನ್ನು ಸರ್ಚ್‌ಗೆ ಹಾಕಿ, ಪೈರಸಿ ಲಿಂಕ್‌ಗಳನ್ನು ತೆಗೆಯುತ್ತಿವೆ.

'ಬ್ಲಾಕ್‌ಎಕ್ಸ್' ಕಂಪನಿಯು ಕೆಜಿಎಫ್ ಚಾಪ್ಟರ್– 2 ಸಿನಿಮಾದ 4 ಲಕ್ಷ ಲಿಂಕ್‌ಗಳನ್ನು ಬ್ಲಾಕ್ ಮಾಡಿದ್ದು, ಈ ಪೈಕಿ ಇಡೀ ಸಿನಿಮಾವಿದ್ದ 75 ಸಾವಿರ ಲಿಂಕ್‌ಗಳಿದ್ದವು. ಉಳಿದವು ಚಿತ್ರಮಂದಿರದಲ್ಲಿ ಪ್ರೇಕ್ಷಕರು ರೆಕಾರ್ಡ್ ಮಾಡಿದ ಕ್ಲಿಪ್ಸ್ ಆಗಿದ್ದವು.

ಮೊಬೈಲ್ ಬಳಕೆ ಸಾಮಾನ್ಯ

ಚಿತ್ರಮಂದಿರಗಳಲ್ಲಿ ಮೊಬೈಲ್ ಬಳಕೆ ಇತ್ತೀಚೆಗೆ ಸಾಮಾನ್ಯವಾಗುತ್ತಿವೆ. ಏಕಪರದೆ ಚಿತ್ರಮಂದಿರಗಳಲ್ಲಿ ಫ್ಯಾನ್ಸ್ ಶೋ ಸಂದರ್ಭದಲ್ಲಿ ಸಿನಿಮಾದ ಮೊದಲ 5–10 ನಿಮಿಷಗಳು ಯಾರ ನಿರ್ಬಂಧವೂ ಇಲ್ಲದೆ ಮೊಬೈಲ್‌ನಲ್ಲಿ ಸೆರೆಯಾಗುತ್ತಿವೆ. ಇತ್ತೀಚೆಗೆ 'ಉಪೇಂದ್ರ' ಸಿನಿಮಾ ರೀರಿಲೀಸ್ ಆಗಿತ್ತು. 'ಬೆಂಗಳೂರು ಬ್ಯಾಂಟರ್' ಎನ್ನುವ ಯುಟ್ಯೂಬ್ ಚಾನೆಲ್‌ನಲ್ಲಿ ಮೊಬೈಲ್‌ನಲ್ಲೇ ಚಿತ್ರೀಕರಿಸಿದ ಈ ಸಿನಿಮಾದ ಹಾಡುಗಳ 9 ನಿಮಿಷದ ವಿಡಿಯೊ ಅಪ್‌ಲೋಡ್ ಆಗಿದೆ. ಇದನ್ನು 90 ಸಾವಿರಕ್ಕೂ ಅಧಿಕ ಜನ ವೀಕ್ಷಿಸಿದ್ದಾರೆ.

ಒಟಿಟಿ ಆದಾಯವೂ ಇಳಿಕೆ

ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿ ಜನರನ್ನು ಸೆಳೆದ ಸಿನಿಮಾಗಳನ್ನು ರೆವೆನ್ಯೂ ಶೇರ್ (ಹಣ ಹಂಚಿಕೆ ಆಧಾರದ ಮೇಲೆ–PVOD) ಮೂಲಕ ಒಟಿಟಿ ವೇದಿಕೆಗಳು ಪಡೆಯುತ್ತಿವೆ. ಸಿನಿಮಾವೊಂದಕ್ಕೆ ಗಂಟೆಗೆ ₹4–₹6 ನಿರ್ಮಾಪಕರ ಕೈಸೇರುತ್ತಿದೆ. ಇತ್ತೀಚೆಗೆ ಒಟಿಟಿಯಲ್ಲಿ ಸಿನಿಮಾಗಳು ಬಿಡುಗಡೆಯಾದ ಬೆನ್ನಲ್ಲೇ ಅವುಗಳ ಪೈರಸಿಯಾಗುತ್ತಿದ್ದು, ಒಂದೆರಡು ದಿನಗಳ ಅಂತರದಲ್ಲಿ ವೀಕ್ಷಣೆಯ ಅವಧಿಯಲ್ಲಿ ಗಣನೀಯವಾದ ಇಳಿಕೆಯನ್ನು ನಿರ್ಮಾಪಕರು ಗಮನಿಸಿದ್ದಾರೆ.

'ನಮ್ಮ 'ಭೀಮ' ಸಿನಿಮಾ ಒಟಿಟಿಯಲ್ಲಿ ಬಂದ ಬಳಿಕ ಹೈಡೆಫಿನೇಷನ್ ಕಾಪಿಯನ್ನು ಒಬ್ಬರು ಯುಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಿದ್ದರು. ಇದು ಕೇವಲ ಒಂದು ಗಂಟೆಯಲ್ಲಿ 1 ಲಕ್ಷ ವ್ಯೂಸ್ ಪಡೆದಿತ್ತು. ಅದನ್ನು ತಕ್ಷಣದಲ್ಲೇ ಬ್ಲಾಕ್ ಮಾಡಿದೆವು. ಒಂದೇ ಗಂಟೆಯಲ್ಲಿ 1 ಲಕ್ಷ ವ್ಯೂಸ್ ಬಂದಿದೆ ಎಂದರೆ ಸಿನಿಮಾ ಬಿಡುಗಡೆಯ ದಿನವೇ ಪೈರಸಿ ಲಿಂಕ್ ಸಿಕ್ಕಿದರೆ ಎಷ್ಟು ಲಕ್ಷ ಡೌನ್‌ಲೋಡ್ ಆಗಿರಬಹುದು ಯೋಚಿಸಿ. ಯುಟ್ಯೂಬ್‌ನಲ್ಲಿ ಎಷ್ಟು ಜನ ನೋಡಿದ್ದಾರೆ ಎಂದು ಲೆಕ್ಕ ಸಿಗುತ್ತದೆ ಆದರೆ ಟೆಲಿಗ್ರಾಂ ಆ್ಯಪ್ ಮೂಲಕ ಸಿನಿಮಾ ಡೌನ್‌ಲೋಡ್ ಮಾಡಿಕೊಂಡವರ ಸಂಖ್ಯೆ ಲೆಕ್ಕಕ್ಕೆ ಸಿಗುವುದಿಲ್ಲ. ನಾವು ದೂರು ನೀಡಿದರೆ ಅದರ ಪ್ರಕ್ರಿಯೆ ಮುಗಿಯುವ ಹೊತ್ತಿಗೆ ಇನ್ನೂ ಸಾವಿರಾರು ಲಿಂಕ್‌ಗಳು ಮೊಬೈಲ್‌ಗೆ ಬಂದಿರುತ್ತವೆ' ಎನ್ನುತ್ತಾರೆ ನಿರ್ಮಾಪಕ ಕೃಷ್ಣ ಸಾರ್ಥಕ್.

ಪೂರಕ ಮಾಹಿತಿ: ಆದಿತ್ಯ ಕೆ.ಎ.

ಗಂಭೀರ ಕ್ರಮದ ಅಗತ್ಯ

ನಾವು ಪೈರಸಿ ತಡೆಯಲು ₹3 ಲಕ್ಷ ಖರ್ಚು ಮಾಡಿದ್ದೇವೆ. 500ಕ್ಕೂ ಅಧಿಕ ಲಿಂಕ್ಸ್ ತೆಗಿಸಿದ್ದೇವೆ. ಇಂತಹ ಕೆಲ ಏಜೆನ್ಸಿಗಳೇ ಪೈರಸಿ ಲಿಂಕ್ಸ್ ಸೃಷ್ಟಿ ಮಾಡಿ ಅವುಗಳನ್ನು ತೆಗೆಯುತ್ತಿವೆ ಎನ್ನುವ ವದಂತಿಯಿದೆ. ಆದರೂ ನಮ್ಮ ಸಿನಿಮಾಗೆ ಯಾವುದೇ ತೊಂದರೆಯಾಗಬಾರದು ಎಂದು ಇಂತಹ ಏಜೆನ್ಸಿಗಳನ್ನು ನೇಮಿಸಿಕೊಳ್ಳುತ್ತೇವೆ. ಪೈರಸಿ ಲಿಂಕ್‌ಗಳನ್ನು ಇಟ್ಟುಕೊಂಡು ದೂರು ಕೊಡುವುದು ಕಷ್ಟದ ಕೆಲಸವೇನಲ್ಲ. ಆದರೆ ಒಂದು ಪ್ರತ್ಯೇಕ ಘಟಕ ರಾಜ್ಯದಲ್ಲಿ ಇಲ್ಲ. ಇಂತಹ ಕೃತ್ಯಗಳಿಗೆ ಒಂದು ಗಂಭೀರವಾದ ಕ್ರಮ ಆಗುವಂತಿದ್ದರೆ ಖಂಡಿತವಾಗಿಯೇ ನಾನೇ ಮೊದಲು ದೂರು ನೀಡುತ್ತೇನೆ.



ಶ್ರೀನಿವಾಸ ರಾಜು, 'ಕೃಷ್ಣಂ ಪ್ರಣಯ ಸಖಿ' ನಿರ್ದೇಶಕ

ವರಮಾನ ಇಳಿಕೆ

ಕೆಲವು ಆಡಿಯೊ ಕಂಪನಿಗಳು ತಮ್ಮ ಯುಟ್ಯೂಬ್ ಚಾನಲ್‌ಗಳಲ್ಲಿ ಮೊದಲು ಹಾಡಿನ ಲಿರಿಕಲ್ ವಿಡಿಯೊ ಬಿಡುಗಡೆ ಮಾಡಿ, ಸಿನಿಮಾ ರಿಲೀಸ್ ಆದ ಬಳಿಕ ಅದರ ಹಾಡಿನ ವಿಡಿಯೊ ಬಿಡುಗಡೆ ಮಾಡುತ್ತವೆ. ಕೆಲವರು ಚಿತ್ರಮಂದಿರಗಳಲ್ಲೇ ಕುಳಿತು ಈ ಹಾಡುಗಳನ್ನು ಚಿತ್ರೀಕರಿಸಿಕೊಂಡು ಹರಿಯಬಿಡುತ್ತಾರೆ. ಇದರಿಂದ ಆಡಿಯೊ ಕಂಪನಿ ಯುಟ್ಯೂಬ್ ವರಮಾನ ಇಳಿಕೆಯಾಗುತ್ತಿದೆ. ಎಲ್ಲಾ ಚಿತ್ರೋದ್ಯಮಗಳಿಗೂ ಪೈರಸಿ ಏಟು ಒಂದೇ ರೀತಿ ಇದೆ.

ಲಹರಿ ವೇಲು, ನಿರ್ಮಾಪಕ, ಲಹರಿ ಮ್ಯೂಸಿಕ್ ಮುಖ್ಯಸ್ಥ

ಲಿಂಕ್ ತೆಗೆಯುವುದೇ ಸರಳ

ದೂರು ನೀಡುವ ವ್ಯವಸ್ಥೆ ಸಮರ್ಪಕವಾಗಿಲ್ಲ. ಹೀಗೆ ದೂರುಗಳನ್ನು ನೀಡುವುದಕ್ಕಿಂತ ಲಿಂಕ್‌ಗಳನ್ನು ತೆಗೆಯುವುದೇ ಸರಳವಾಗಿದೆ. ನಮ್ಮ ಸಿನಿಮಾ ದೊಡ್ಡ ಮಟ್ಟಿಗೆ ಹಿಟ್ ಆಯಿತು. ನಾವೇ ಇಷ್ಟು ತಲೆಕೆಡಿಸಿಕೊಳ್ಳುತ್ತಿದ್ದೇವೆ ಎಂದರೆ, ಮೊದಲನೇ ಬಾರಿ ನಿರ್ಮಾಣ ಮಾಡುತ್ತಿರುವ ನಿರ್ಮಾಪಕರ ಗತಿ ಏನು. ಆದಷ್ಟು ಮಟ್ಟಿಗೆ ಪೈರಸಿ ಕಾಪಿಗಳು ಸಿಗಬಾರದು ಎನ್ನುವುದಕ್ಕೇ ನಾವು ಹಣ ಖರ್ಚು ಮಾಡುತ್ತಿದ್ದೇವೆ.



ಕೃಷ್ಣ ಸಾರ್ಥಕ್, 'ಭೀಮ' ಸಿನಿಮಾದ ನಿರ್ಮಾಪಕ

ಆದಾಯದ ಶೇ 20 ಖೋತ!

ಇವೈ ಸಂಸ್ಥೆ ನೀಡಿರುವ ಅಂಕಿ ಅಂಶ ಸತ್ಯಕ್ಕೆ ಹತ್ತಿರವಾಗಿದೆ. ಸರ್ಕಾರಕ್ಕೆ ಈ ಕುರಿತು ಮೂರ್ನಾಲ್ಕು ದಶಕದಿಂದ ದೂರು ನೀಡುತ್ತಲೇ ಇದ್ದೇವೆ. ಹೀಗಿದ್ದರೂ ಪೈರಸಿ ಚಾಲ್ತಿಯಲ್ಲಿದೆ. ಚಿತ್ರರಂಗವನ್ನು ಕಡೆಗಣಿಸುತ್ತಿರುವುದಕ್ಕೆ ಇದು ಉದಾಹರಣೆ. ನಾವು ದೂರು ದಾಖಲಿಸಿ ಇನ್ನೂ ಕೋರ್ಟ್ ಕೇಸ್ ಎಂದು ಓಡಾಡುತ್ತಿದ್ದೇವೆ.



ಇದೀಗ ದೂರು ನೀಡಿ ಯಾವ ಪ್ರಯೋಜನವೂ ಇಲ್ಲವೆಂತಾಗಿದೆ. 'ಕಾಟೇರ' ಬಿಡುಗಡೆ ಸಂದರ್ಭದಲ್ಲಿ 70 ಜನರ ತಂಡವಿಟ್ಟುಕೊಂಡು ಪೈರಸಿ ಲಿಂಕ್ ತೆಗೆಸಿದ್ದೆವು. ಪೈರಸಿ ತಡೆಯಲು ದೊಡ್ಡ ಸಿನಿಮಾ ನಿರ್ಮಾಪಕರು ಸುಮಾರು ₹15–20 ಲಕ್ಷ ಖರ್ಚು ಮಾಡುತ್ತಾರೆ. ಇದೂ ನಮಗೆ ಹೊರೆಯಾಗಿದೆ. ಪೈರಸಿಯಿಂದ ಆದಾಯದ ಸುಮಾರು ಶೇ 20ರಷ್ಟು ಕಳೆದುಕೊಂಡಿದ್ದೇನೆ. ಸ್ಟಾರ್ ಫ್ಯಾನ್ ವಾರ್ ಹೆಸರಿನಲ್ಲೂ ಇಂದು ಪೈರಸಿ ನಡೆಯುತ್ತಿರುವುದು, ಸಿನಿಮಾ ನೋಡದೇ ಇರುವುದು ಆಘಾತಕಾರಿ.

ರಾಕ್‌ಲೈನ್ ವೆಂಕಟೇಶ್, ನಿರ್ಮಾಪಕ

ಚಿತ್ರಮಂದಿರದ ಮಾಲೀಕರಿಗೂ ನಷ್ಟ

ಸಿನಿಮಾಗಳು ಆನ್‌ಲೈನ್‌ನಲ್ಲಿ ವಿತರಣೆಯಾಗುವ ಸಂದರ್ಭದಲ್ಲೇ ಹ್ಯಾಕ್ ಮಾಡಿ ಪೈರಸಿ ಮಾಡುತ್ತಿದ್ದಾರೆ. ಸಿನಿಮಾ ಹಿಟ್ ಆದರಷ್ಟೇ ಪೈರಸಿ ಕಂಟೆಂಟ್‌ಗಳನ್ನು ಹೆಚ್ಚಿನ ಮೊತ್ತಕ್ಕೆ ಮಾರುತ್ತಿದ್ದಾರೆ. ಇಂಟರ್‌ನೆಟ್ ವ್ಯಾಪ್ತಿ ಹೆಚ್ಚಾದಂತೆ ಪೈರಸಿಯೂ ಅಧಿಕವಾಗಿದೆ. ಒಂದು ಸಿನಿಮಾ ಚಿತ್ರಮಂದಿರದಲ್ಲಿ ಗಳಿಸಿದ ಮೊತ್ತದ ಶೇ 20–30ರಷ್ಟೇ ಚಿತ್ರಮಂದಿರದ ಮಾಲೀಕರ ಕೈಗೆ ಸಿಗುತ್ತದೆ. ಪೈರಸಿಯಿಂದಾಗಿ ನಿರ್ಮಾಪಕರು, ವಿತರಕರಿಗಷ್ಟೇ ಅಲ್ಲ, ಚಿತ್ರಮಂದಿರದ ಮಾಲೀಕರಿಗೂ ನಷ್ಟ. ಇದೀಗ ಸಿನಿಮಾಗಳು 350 ಚಿತ್ರಮಂದಿರಗಳಲ್ಲಿ ಏಕಕಾಲದಲ್ಲಿ ರಿಲೀಸ್ ಆಗುತ್ತಿವೆ. 850 ಜನ ಒಳಗೆ ಕುಳಿತಿರುವಾಗ ಎಲ್ಲರ ಮೇಲೆ ನಿಗಾವಹಿಸುವುದು ಕಷ್ಟ. ಕೆಲವರು ಹೀರೊ ಎಂಟ್ರಿಯನ್ನು, ಕೆಲವರು ಹಾಡುಗಳನ್ನು, ಸಾಹಸ ದೃಶ್ಯಗಳನ್ನು ಚಿತ್ರೀಕರಿಸಿಕೊಳ್ಳುತ್ತಿರುತ್ತಾರೆ. ಹೀಗೆ ಒಬ್ಬೊಬ್ಬರು 5–10 ನಿಮಿಷ ರೆಕಾರ್ಡ್ ಮಾಡಿಕೊಂಡರೆ ಇಡೀ ಸಿನಿಮಾವೇ ಆನ್‌ಲೈನ್‌ನಲ್ಲಿ ಸಿಗುವ ಸ್ಥಿತಿ ಎದುರಾಗುತ್ತದೆ.

ಕೆ.ವಿ.ಚಂದ್ರಶೇಖರ್, ಪ್ರದರ್ಶಕರ ಸಂಘದ ಅಧ್ಯಕ್ಷ

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 17-11-1999

● ಏಕರೂಪ ಮಾರಾಟ ತೆರಿಗೆ ಜಾರಿಗೆ ರಾಜ್ಯಗಳ ಸಮ್ಮತಿ

ನವದೆಹಲಿ, ನ.16 (ಪಿಟಿಐ)– ಅತಿ ಮಹತ್ವದ ನಿರ್ಧಾರವೊಂದರಲ್ಲಿ ಏಕರೂಪ ಕನಿಷ್ಠ ಮಾರಾಟ ತೆರಿಗೆ ಜಾರಿಗೊಳಿಸಲು ಪ್ರೋತ್ಸಾಹ ಆಧಾರಿತ ಮಾರಾಟ ತೆರಿಗೆಯನ್ನು ಹಂತ ಹಂತವಾಗಿ ತೆಗೆದು ಹಾಕಿ 2000 ಇಸ್ವಿ ಜನವರಿ 1ರೊಳಗೆ ಅಂತರ ರಾಜ್ಯ ತೆರಿಗೆ ಸಮರ ಕೊನೆಗೊಳಿಸಲು ಮತ್ತು 2001ರ ಏಪ್ರಿಲ್ 1ರಂದು ಏಕರೂಪದ ಮೌಲ್ಯ ವರ್ಧಿತ ತೆರಿಗೆ ನೀತಿ ಜಾರಿಗೆ ತರಲು ಎಲ್ಲ ರಾಜ್ಯಗಳು ಸಮ್ಮತಿಸಿವೆ.

ಇಲ್ಲಿ ಇಂದು ನಡೆದ ಮುಖ್ಯಮಂತ್ರಿಗಳ ಒಂದು ದಿನದ ಸಮಾವೇಶದಲ್ಲಿ ಈ ಮಹತ್ವದ ನಿರ್ಧಾರಕ್ಕೆ ಬರಲಾಗಿತು.

50 ವರ್ಷಗಳ ಹಿಂದೆ

ಭಾನುವಾರ, 17-11-1974

● ನ್ಯಾಯಾಲಯಗಳಲ್ಲಿ ಬಂಧನ ಪ್ರಶ್ನಿಸುವಂತಿಲ್ಲ

ನವದೆಹಲಿ, ನ. 16– ಆಂತರಿಕ ಭದ್ರತಾ ಶಾಸನದನ್ವಯ ಬಂಧಿಸಲಾಗಿರುವ ಅಕ್ರಮ ಸಾಗಾಣಿಕೆದಾರರು ತಮ್ಮ ಬಂಧನ ಪ್ರಶ್ನಿಸಿ ನ್ಯಾಯಾಲಯಕ್ಕೆ ಹೋಗುವಂತಿಲ್ಲ.

ಈ ಹಕ್ಕನ್ನು ಕಸಿದುಕೊಳ್ಳುವ ಸುಗ್ರೀವಾಜ್ಞೆಯೊಂದನ್ನು ರಾಷ್ಟ್ರಪತಿ ಫಕ್ರುದ್ದೀನ್ ಅಲೀ ಅಹ್ಮದ್ ಇಲ್ಲಿ ಹೊರಡಿಸಿದರು.

● ವಿಶ್ವ ಆಹಾರ ಭದ್ರತಾ ಸಮಿತಿ ರಚನೆಗೆ ಅಸ್ತು

ರೋಮ್, ನ. 16– ಅಂತರ ರಾಷ್ಟ್ರೀಯ ಸಂಸ್ಥೆಗಳು ಹಾಗೂ ಸರ್ಕಾರಗಳಿಗೆ ಸಲಹೆ ನೀಡುವಂಥ ವಿಶ್ವ ಆಹಾರ ಭದ್ರತಾ ಸಮಿತಿ ರಚಿಸಬೇಕೆಂಬ ಭಾರತದ ಸಲಹೆಗೆ ವಿಶ್ವಸಂಸ್ಥೆಯ ಆಹಾರ ಸಮ್ಮೇಳನ ಇಂದು ಒಪ್ಪಿಗೆ ಕೊಟ್ಟಿತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ನವೆಂಬರ್ 17, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ದ್ವಿತೀಯ ಗಂ. 21-07 **ನಕ್ಷತ್ರ:** ರೋಹಿಣಿ ಗಂ. 17-23 **ಯೋಗ:** ಶಿವ ಗಂ. 20-21 **ಕರಣ:** ತೈತಿಲ ಗಂ. 10-25, ವೃಶ್ಚಿಕ ಮಾಸದ 01 ನೇ ದಿನ, ಮಳೆನಕ್ಷತ್ರ: ವಿಶಾಖ 4.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-35 **ಸೂರ್ಯಾಸ್ತ :** 05-57
ಮುಸ್ಲಿಂ ದಿನಾಂಕ : 14 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 1, 8

ಮೇಷ: ವೃತ್ತಿಯಲ್ಲಿ ನಿಮ್ಮ ಸಹೋದ್ಯೋಗಿಗಳ ಮಾತಿನಂತೆ ನಡೆಯುವುದು ಉತ್ತಮ. ನಿಮ್ಮ ಪ್ರಿಯಕರನಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತವಾದ ಸಮಯ. ನಿಮ್ಮ ಅಭ್ಯುದಯದತ್ತಲೇ ನಿಮ್ಮ ಗಮನವಿರುವುದು ಉತ್ತಮ.

ವೃಷಭ: ಧಾರ್ಮಿಕ ಕಾರ್ಯಕ್ಕೆ ಹಣ ನೀಡುವ ಮನಸ್ಸಾಗಲಿದೆ. ವ್ಯಾಪಾರಸ್ಥರು ಗುಣಮಟ್ಟಕ್ಕೆ ಪ್ರಾಮುಖ್ಯತೆ ಕೊಡುವ ಬಗ್ಗೆ ಗಮನವಿರಲಿ. ನಿಮ್ಮ ಯೋಜನೆಗೆ, ಮಾತುಗಳಿಗೆ ಎಲ್ಲರಿಂದಲೂ ಮನ್ನಣೆ ದೊರೆಯಲಿದೆ.

ಮಿಥುನ: ಮನೆಯವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಮನೆಯ ವಾತಾವರಣ ಸರಿಯಾಗಿರುವುದು. ಮಹಾಗಣಪತಿಯ ಆರಾಧನೆಯಿಂದ ನಿಮ್ಮ ಮನೋಕಾಮನೆಗಳು ಈಡೇರುವುದು.

ಕರ್ಕಾಟಕ: ಸಮಾರಂಭದಲ್ಲಿ ಭಾಗವಹಿಸುವುದರಿಂದ ಮಗನ ಮದುವೆಯ ವಿಚಾರದಲ್ಲಿ ಅನುಕೂಲವಾಗುವುದು. ನಿಮ್ಮ ಯೋಜನೆಗಳು ಕಾರ್ಯಗತಗೊಳ್ಳಲು ಹೆಚ್ಚಿನ ಪ್ರಯತ್ನ ನಡೆಸಬೇಕಾಗುವುದು.

ಸಿಂಹ: ಬೇರೆಯವರ ಸಹಾಯ ಪಡೆಯದೆ ನಿಮ್ಮ ಶ್ರಮದಿಂದಲೇ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದು ಲಾಭದಾಯಕ. ನೀವು ಕೈಗೆತ್ತಿಕೊಂಡಿರುವ ಕೆಲಸಗಳು ಹೆಚ್ಚಿನ ಖರ್ಚಿನದಾದರೂ ಪ್ರಯೋಜನಕಾರಿ ಎನಿಸಲಿದೆ.

ಕನ್ಯಾ: ಹೊಸ ಮನೆಯ ಕೆಲಸಗಳು ಮುಕ್ತಾಯ ಹಂತವನ್ನು ತಲುಪುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ಅನೇಕ ರೀತಿಯಲ್ಲಿ ನಿಮಗೆ ಈ ದಿನ ಅದೃಷ್ಟದ ದಿನವೆನಿಸಲಿದೆ. ಮಗಳ ಮೇಲೆ ಇದ್ದಂತಹ ತಪ್ಪು ಕಲ್ಪನೆಗಳು ದೂರವಾಗಲಿವೆ.

ತುಲಾ: ಇನ್ನೊಬ್ಬರಿಗೆ ಉಪಕಾರ ಮಾಡಲು ಹೋಗಿ ನೀವು ಸಮಸ್ಯೆಯಲ್ಲಿ ಸಿಲುಕಿಕೊಳ್ಳಬಹುದು, ಎಚ್ಚರ. ರಾಜಕೀಯ ವ್ಯಕ್ತಿಗಳಿಂದ ಅನುಕೂಲವಾಗುವ ಲಕ್ಷಣಗಳಿವೆ. ಮಾನಸಿಕವಾದ ಕೊರಗುಗಳಿಗೆ ಅಂತಿಮ ಹಾಡಿ.

ವೃಶ್ಚಿಕ: ಜೀವನ ಶೈಲಿಯಲ್ಲಿ ಸಮತೋಲನ ಅನುಸರಿಸಿಕೊಂಡು ಹೋಗುವುದು ಒಳ್ಳೆಯದು. ಯಾವುದೇ ಟೀಕೆಗಳಿಗೆ ಕಿವಿಯೊಡ್ಡಬೇಡಿ, ಪ್ರಾಮಾಣಿಕತೆಯಿಂದ ನಿಮ್ಮ ಕೆಲಸ ಕಾರ್ಯವನ್ನು ಮುಂದುವರೆಸಿ.

ಧನು: ಸ್ವತ್ತು ಖರೀದಿ ಮಾಡುವ ವಿಚಾರದಲ್ಲಿ ಯಾವುದಾದರು ಗೃಹ ಸಮಾರಂಭದಲ್ಲಿ ನಾಲ್ಕಾರು ಜನರ ಮಧ್ಯ ಮಾತುಗಳು ಬರಲಿದೆ. ನಿಮ್ಮ ನಿಲುವನ್ನು ಬದಲಿಸಿಕೊಳ್ಳುವುದರಿಂದ ಎಲ್ಲರ ಪ್ರೀತಿಗೆ ಪಾತ್ರರಾಗುತ್ತೀರಿ.

ಮಕರ: ಮಿತ್ರರೊಡಗೂಡಿ ಸಣ್ಣಮಟ್ಟದ ಉತ್ಪಾದನಾ ಘಟಕ ಪ್ರಾರಂಭಿಸುವ ಯೋಚನೆಗಳು ಬರಲಿದೆ. ಯಾವುದೇ ಕೆಲಸ ಮಾಡಿದರೂ ಆಲೋಚಿಸಿ ಮಾಡುವುದು ಒಳ್ಳೆಯದು. ಸರ್ಕಾರಿ ಗುತ್ತಿಗೆ ಕೆಲಸಗಳು ನಿಮ್ಮದಾಗಲಿದೆ.

ಕುಂಭ: ನಿಮ್ಮ ಭಾವನೆಗಳಿಗೆ ಬೆಲೆ ಕೊಡುವ ಸಂಗಾತಿ ಸಿಕ್ಕಿರುವುದರಿಂದ ಸಂತೋಷ ಹೆಚ್ಚುತ್ತದೆ. ಕುಟುಂಬ ವರ್ಗದವರಲ್ಲಿ ಆರೋಗ್ಯ ಉತ್ತಮವಾಗಿ ಇರುವುದು. ಉತ್ತಮ ಕೌಟುಂಬಿಕ ಸಮಯ ದೊರೆಯಲಿದೆ.

ಮೀನ: ಹಿರಿಯರಿಂದ ಯಾವುದೇ ವಿಷಯಗಳನ್ನು ಮುಚ್ಚಿಡುವುದು ಸರಿಯಲ್ಲ. ತಂದೆಯವರ ಮಾತಿನಂತೆ ನಡೆಯುವುದರಿಂದ ಶ್ರೇಯಸ್ಸು ಲಭಿಸಲಿದೆ. ಸಂಜೆಯೊಳಗೆ ಅಚ್ಚರಿಯ ಸುದ್ದಿಯೊಂದನ್ನು ಕೇಳಲಿರುವಿರಿ.

ಪದಬಂಧ 5864

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ನೇರವಲ್ಲದ ನುಡಿ (5)
4.ವಾರದ ಕೊನೆಗೆ ತೋರಿದ ಡೌಲು (4)
6.ದೇಹದ ಒಂದು ಭಾಗ (2)
7.ಒಂದನೊಂದು ಅಗಲದೇ ಇರುವ ಸಂಬಂಧ (8)
10.ನದಿಗೆ ಸೇರುವ ನೀರು ಹರಿದು ಬರುವಪ್ರದೇಶ (8)
13.ಕಡಲ ಹತ್ತಿರ ನೀಡಿದ ಸಾಲ (2)
14.ಮರೀಚಿಕೆ ಇಲ್ಲಿ ಕಾಣುತ್ತಿದೆ (4)
16.ನೀರಿನಅಲೆ ನೋಡಿದಾಗಈ ವಾದ್ಯ ನೆನಪಾದೀತೇ? (5)

ಮೇಲಿಂದ ಕೆಳಕ್ಕೆ
1.ಸಗಟು ವ್ಯಾಪಾರದ ಅಂಗಡಿ (2)
2.ಬಡಿವಾರ ತೋರುವಾಗ ಆವರಿಸಿದ ಕ್ಷಾಮ (2)
3.ಆತುರವಾಗಿ ಓಡುತ್ತಿರುವ ಕುದುರೆ (3)
4.ಈಕೆ ದುಡ್ಡಿಲ್ಲದವಳು (3)
5.ಎಲೆ ಅಡಿಕೆ ಚೀಲವಿಲ್ಲಿ ತಿರುವುಮುರುವಾಗಿದೆ (2)
6.ಕುರುಡ ಇಲ್ಲಿದ್ದಾನೆ (2)
7. ಈಕೆ ಹಿರಿಯ ಸಹೋದರಿ (2)
8.ವರ್ತುಲಾಕಾರವಾಗಿರುವುದು ಇಲ್ಲಿದೆ (3)
9.ಕೋಶಾಧಿಕಾರಿ ಹತ್ತಿರವಿರುವ ಒರೆ (2)
10.ಆಲಸ್ಯ ಅಥವಾ ಸೋಮಾರಿತನ (2)
11.ನಗರದಲ್ಲಿರುವ ಮನುಷ್ಯ (2)
12.ಗುಡಿ ಇಲ್ಲಿದೆ (3)
13.ಧಾನ್ಯ ಸಂಗ್ರಹಿಸುವ ಸ್ಥಳ (3)
14.ಬೇಟೆಯಾಡುವ ಕಾಡು ಪ್ರಾಣಿ (2)
15.ಗಂಟುಕಟ್ಟಿದ ಕೂದಲು (2)



5863ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಾದಾಚಾರಿ 3.ಎದೆಗುದಿ 5.ಜರ್ಜರಿತ 7.ಸುಗಂಧ 8.ಮಕರಸಂಕ್ರಮಣ 12.ರಿಪೇರಿ 13.ಣಮಾರಿಪ 17.ಮಹಾಪ್ರಾಣ 18.ಪರಿಷ್ಕಾರ

ಮೇಲಿಂದ ಕೆಳಕ್ಕೆ:
1.ಪಾರಜ 2.ಚಾಕರಿ 3.ಎಲೆ 4.ದಿಗ್ಬಂಧನ 6.ತವರ 7.ಸುಗಮ 9.ಕಸ್ತೂರಿ 10.ಕ್ರಮೇಣ 11.ಪರಿಶ್ರಮ 14.ಮಾದರಿ 15.ಪಗಾರ 16.ಕೋಣ

ಸುಡೊಕು 6249

2		8		7			6	
			4		2	3		1
	3	1		5			8	
6		4		3			5	
5	7	2	6		9	1		8
				2			4	
3				1			9	
	2	5	8			6		7
1				6			2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6248 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗಂಭೀರ ಸ್ವರೂಪದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಸೂಚನೆ

ನಿಜಕ್ಕೂ ರಾಜಿ ಆಗಿದೆಯೇ; ಪರಿಶೀಲಿಸಿಕೊಳ್ಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅತ್ಯಾಚಾರದಂತಹ ಗಂಭೀರ ಸ್ವರೂಪದ ಪ್ರಕರಣಗಳಲ್ಲಿ ಕ್ರಿಮಿನಲ್ ಪ್ರಕ್ರಿಯೆಯನ್ನು ರದ್ದುಪಡಿಸಬೇಕೆಂದು ಕೋರುವ ಅರ್ಜಿಯನ್ನು ಮಾನ್ಯ ಮಾಡುವ ಮೊದಲು, ಆರೋಪಿ ಹಾಗೂ ಸಂತ್ರಸ್ತೆಯ ಮಧ್ಯೆ ನಿಜಕ್ಕೂ ರಾಜಿ ಏರ್ಪಟ್ಟಿದೆ ಎಂಬುದನ್ನು ಹೈಕೋರ್ಟ್ ಖಾತರಿಪಡಿಸಿಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ರಾಜಿ ನಿಜಕ್ಕೂ ಆಗಿದೆ ಎಂಬುದನ್ನು ಕೋರ್ಟ್ ಖಾತರಿಪಡಿಸಿಕೊಳ್ಳದ ಹೊರತು, ಪ್ರಕರಣ ರದ್ದುಪಡಿಸುವಂತೆ ಕೋರುವ ಅರ್ಜಿ ವಿಚಾರವಾಗಿ ಮುಂದಡಿ ಇರಿಸಲಾಗದು ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ರಾಜಿಗೆ ಸಂತ್ರಸ್ತೆ ಒಪ್ಪಿದ್ದಾಳೆ ಎಂಬುದಾಗಿ ಹೇಳುವ ಪ್ರಮಾಣಪತ್ರವು ಎದುರಿಗೆ ಇದ್ದರೂ, ಗಂಭೀರ ಸ್ವರೂಪದ ಪ್ರಕರಣಗಳಲ್ಲಿ ಹಾಗೂ ಮುಖ್ಯವಾಗಿ ಮಹಿಳೆಯರ ವಿರುದ್ಧ ಅಪರಾಧ ನಡೆದ ಪ್ರಕರಣಗಳಲ್ಲಿ, ಸಂತ್ರಸ್ತೆಯನ್ನು ಖುದ್ದಾಗಿ ಅಥವಾ ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಬರುವಂತೆ ಹೇಳುವುದು ಸೂಕ್ತ. ನಿಜಕ್ಕೂ ರಾಜಿ ಆಗಿದೆಯೇ, ಸಂತ್ರಸ್ತೆಯ ಮನಸ್ಸಿನಲ್ಲಿ ಅಸಮಾಧಾನ ಉಳಿದುಕೊಂಡಿಲ್ಲವೇ ಎಂಬುದನ್ನು ಸರಿಯಾಗಿ ಪರಿಶೀಲಿಸಲು ಕೋರ್ಟ್‌ಗೆ ಆಗ ಸಾಧ್ಯವಾಗುತ್ತದೆ ಎಂದು ಪೀಠವು ವಿವರಣೆ ನೀಡಿದೆ.

ಗುಜರಾತ್ ಹೈಕೋರ್ಟ್ 2023ರ ಸೆಪ್ಟೆಂಬರ್ 29ರಂದು ನೀಡಿದ ಆದೇಶವನ್ನು ಪ್ರಶ್ನಿಸಿ ಅತ್ಯಾಚಾರ ಪ್ರಕರಣದ ಸಂತ್ರಸ್ತೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ನವೆಂಬರ್ 5ರಂದು ನೀಡಿರುವ ತೀರ್ಪಿನಲ್ಲಿ ಮಾನ್ಯ ಮಾಡಿದೆ.

ಮಹಿಳೆಯು ತನಗೆ ಕೆಲಸ ನೀಡಿದ್ದವರ ವಿರುದ್ಧ ನೀಡಿದ್ದ ದೂರಿನ ಆಧಾರದಲ್ಲಿ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿತ್ತು. ರಾಜಿ ಆಗಿದೆ ಹಾಗೂ ಸಂತ್ರಸ್ತೆಯ ಪತಿಗೆ ₹3 ಲಕ್ಷ ಪರಿಹಾರ ನೀಡಲಾಗಿದೆ ಎಂಬ ಆಧಾರದಲ್ಲಿ ಆರೋಪಿಗಳು ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿ, ಹೈಕೋರ್ಟ್ ಈ ಕ್ರಮ ಕೈಗೊಂಡಿತ್ತು.

ಸಂತ್ರಸ್ತೆಯು ಅನಕ್ಷರಸ್ಥೆ, ಟೈಪ್ ಮಾಡಿದ ಪ್ರಮಾಣಪತ್ರದ ಮೇಲೆ ಅನುಮಾನಾಸ್ಪದ ಸಂದರ್ಭದಲ್ಲಿ ಆಕೆಯಿಂದ ಹೆಬ್ಬೆರಳಿನ ಅಚ್ಚನ್ನು ಪಡೆದುಕೊಳ್ಳಲಾಗಿದೆ ಎಂದು ಆಕೆಯ ಪರ ವಕೀಲರು ಪೀಠಕ್ಕೆ ವಿವರ ನೀಡಿದ್ದರು. 'ಅನಕ್ಷರಸ್ಥರು ಇಂತಹ ಪ್ರಮಾಣಪತ್ರಕ್ಕೆ ಹೆಬ್ಬೆಟ್ಟು ಒತ್ತಿದಾಗ, ಪ್ರಮಾಣಪತ್ರದಲ್ಲಿ ಏನಿತ್ತು ಎಂಬುದನ್ನು ಅವರಿಗೆ ಓದಿ ವಿವರಿಸಲಾಗಿತ್ತು ಎನ್ನುವ ಹಿಂಬರಹವೂ ಇರಬೇಕು' ಎಂದು ಪೀಠ ಹೇಳಿದೆ.

ಇಂತಹ ಹಿಂಬರಹ ಇಲ್ಲ ಎಂಬುದನ್ನು ಗಮನಿಸಿ ಹೈಕೋರ್ಟ್, ಸಂತ್ರಸ್ತೆಯು ಖುದ್ದಾಗಿ ಹಾಜರಾಗಬೇಕು ಎಂಬ ಸೂಚನೆ ನೀಡಬೇಕಿತ್ತು. ಆಗ ಪ್ರಮಾಣಪತ್ರದಲ್ಲಿನ ವಿವರಗಳನ್ನು ಅರ್ಥ ಮಾಡಿಕೊಂಡ ನಂತರ ಆಕೆ ಹೆಬ್ಬೆಟ್ಟಿನ ಗುರುತು ನೀಡಿದ್ದಳೇ ಎಂಬುದನ್ನು ಖಾತರಿಪಡಿಸಿಕೊಳ್ಳಲು ಆಗುತ್ತಿತ್ತು ಎಂದು ಪೀಠವು ಹೇಳಿದೆ.

ಹೈಕೋರ್ಟ್ ಆದೇಶವನ್ನು ರದ್ದುಪಡಿಸಿರುವ ಪೀಠವು, ವಿಷಯವನ್ನು ಮತ್ತೆ ಹೈಕೋರ್ಟ್‌ಗೆ ವರ್ಗಾಯಿಸಿದೆ.

ಶಿಕ್ಷೆ ರದ್ದು ಕೋರಿ ಅಸಾರಾಂ ಬಾಪು 'ಸುಪ್ರೀಂ'ಗೆ ಮೊರೆ

ಅಸಾರಾಂ

ನವದೆಹಲಿ: ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಸ್ವಯಂಘೋಷಿತ ದೇವಮಾನವ ಅಸಾರಾಂ ಬಾಪು ಅವರು, ಶಿಕ್ಷೆಯನ್ನು ರದ್ದುಗೊಳಿಸಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

86 ವರ್ಷದ ಅಸಾರಾಂ ಅವರು ಅಪರಾಧಿ ಎಂದು ಗುಜರಾತ್‌ನ ನ್ಯಾಯಾಲಯ 2023ರ ಜನವರಿಯಲ್ಲಿ ತೀರ್ಪು ನೀಡಿತ್ತು. ಶಿಕ್ಷೆಯನ್ನು ರದ್ದುಗೊಳಿಸಬೇಕೆಂದು ಕೋರಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಗುಜರಾತ್ ಹೈಕೋರ್ಟ್ ಇದೇ ವರ್ಷದ ಆಗಸ್ಟ್‌ನಲ್ಲಿ ತಿರಸ್ಕರಿಸಿತ್ತು.

ವಕೀಲರಾದ ರಾಜೇಶ್ ಇನಾಂದಾರ್ ಮತ್ತು ಶಾಶ್ವತ್ ಆನಂದ್ ಅವರ ಮೂಲಕ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ, ತಮ್ಮ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸುವ ಯಾವುದೇ ವೈದ್ಯಕೀಯ ಅಥವಾ ಸ್ವತಂತ್ರ ಸಾಕ್ಷ್ಯಗಳಿಲ್ಲ ಎಂದು ಪ್ರತಿಪಾದಿಸಿದ್ದಾರೆ.

ತಮ್ಮ ಪ್ರತಿಷ್ಠೆಯನ್ನು ಹಾಳು ಮಾಡಲು ಮತ್ತು ಆಶ್ರಮದಿಂದ ಹೊರಹಾಕಲು ಸುಳ್ಳು ಆರೋಪ ಹೊರಿಸಿ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದು ಹೇಳಿದ್ದಾರೆ.

ಹಲವು ಬಾರಿ ಹೃದಯಾಘಾತಕ್ಕೆ ಒಳಗಾಗಿರುವುದು ಮತ್ತು ಅವರು ಎದುರಿಸುತ್ತಿರುವ ತೀವ್ರ ಆರೋಗ್ಯ ಸಮಸ್ಯೆಗಳನ್ನು ಅರ್ಜಿಯಲ್ಲಿ ಉಲ್ಲೇಖಿಸಿ, 'ನಿರಂತರ ಜೈಲುವಾಸವು ಸಂವಿಧಾನದ 14, 19 ಮತ್ತು 21ನೇ ವಿಧಿಗಳ ಅಡಿಯಲ್ಲಿ ಅವರ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ' ಎಂದಿದೆ.

'ಜೈಲಿನಲ್ಲಿ ಕಳೆಯುವ ಪ್ರತಿಯೊಂದು ದಿನವೂ ಅವರ ಆರೋಗ್ಯ ಮತ್ತು ಘನತೆಯನ್ನು ಕುಗ್ಗಿಸುತ್ತದೆ. ಅವರು ಈಗಾಗಲೇ 11 ವರ್ಷಗಳನ್ನು ಜೈಲಿನಲ್ಲಿ ಕಳೆದಿದ್ದಾರೆ. ಇನ್ನಷ್ಟು ದಿನ ಜೈಲಿನಲ್ಲಿದ್ದರೆ, ಬಾಕಿ ಉಳಿದಿರುವ ಅರ್ಜಿಗಳ ವಿಚಾರಣೆ ಎದುರಿಸಲು ಅವರು ಬದುಕಿರಲಾರರು' ಎಂದೂ ಹೇಳಿದೆ.

ಮುಟ್ಟಿನ ಅವಧಿಯ ನೈರ್ಮಲ್ಯ: ಸೂಚನೆ

ನವದೆಹಲಿ: ಶಾಲೆಗೆ ಹೋಗುವ ಹೆಣ್ಣುಮಕ್ಕಳ ಮುಟ್ಟಿನ ಅವಧಿಯ ನೈರ್ಮಲ್ಯ ಕುರಿತ ನೀತಿಯಲ್ಲಿ ಎದ್ದುಕಾಣುವಂತಹ ದೋಷಗಳಿವೆ, ವಾಸ್ತವ ಗಮನಿಸದೆಯೇ ನೀತಿಯನ್ನು ರೂಪಿಸಲಾಗಿದೆ ಎಂಬ ಆರೋಪದ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಜಯಾ ಠಾಕೂರ್ ಸಲ್ಲಿಸಿರುವ ಅರ್ಜಿ ಪರಿಶೀಲಿಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ವಿಭಾಗೀಯ ಪೀಠವು, ಸ್ಪಷ್ಟನೆ ನೀಡುವಂತೆ ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರಿಗೆ ಸೂಚನೆ ನೀಡಿತು.

ನೀತಿಯನ್ನು ಕೇಂದ್ರ ಸರ್ಕಾರ ರೂಪಿಸಿದೆಯಾದರೂ, ಅದರ ಪರಿಣಾಮಕಾರಿ ಅನುಷ್ಠಾನಕ್ಕೆ ಬಹಳಷ್ಟು ಕೆಲಸಗಳು ಆಗಬೇಕಿವೆ ಎಂದು ಐಶ್ವರ್ಯಾ ಅವರು ತಿಳಿಸಿದರು.

ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ತಮ್ಮ ಕ್ರಿಯಾಯೋಜನೆ ಸಿದ್ಧಪಡಿಸಲು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ನೆರವಾಗಲಿದೆ. ಇದರಿಂದಾಗಿ ನೀತಿಯನ್ನು ಸರ್ಕಾರಿ ಶಾಲೆಗಳಲ್ಲಿ ಹಾಗೂ ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಆಗುತ್ತದೆ ಎಂದು ಐಶ್ವರ್ಯಾ ಹೇಳಿದರು.

'ಬಿಕ್ಕಟ್ಟು ತಿಳಿಗೊಳಿಸಲು ಗಮನಹರಿಸಬೇಕು'

ನವದೆಹಲಿ (ಪಿಟಿಐ): ಚೀನಾ ಜೊತೆಗಿನ 'ಸಮಸ್ಯೆ'ಯ ಭಾಗವಾಗಿದ್ದ, ಪೂರ್ವ ಲಡಾಖ್‌ನ ವಾಸ್ತವ ಗಡಿ ನಿಯಂತ್ರಣ ರೇಖೆಯಲ್ಲಿದ್ದ (ಎಲ್‌ಎಸಿ) ಸೇನಾಪಡೆಗಳ ವಾಪಸಾತಿಯ ಪ್ರಶ್ನೆ ಬಗೆಹರಿದಿದೆ. ಈಗ ಬಿಕ್ಕಟ್ಟನ್ನು ತಿಳಿಗೊಳಿಸುವ ಕಡೆ ಗಮನ ಹರಿಸಬೇಕು ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದರು.

ಸೇನಾ ಪಡೆಗಳ ವಾಪಸಾತಿ ನಂತರ ಭಾರತ ಮತ್ತು ಚೀನಾ ನಡುವಿನ ಸಂಬಂಧದಲ್ಲಿ ಒಂದಿಷ್ಟು ಸುಧಾರಣೆಗಳು ಆಗುತ್ತವೆ ಎಂಬ ನಿರೀಕ್ಷೆ ಹೊಂದುವುದು ಸಕಾರಣದ್ದಾಗಿದೆ ಎಂದು ಹೇಳಿದ ಜೈಶಂಕರ್, ಸಂಬಂಧದಲ್ಲಿ ಹೊಸ ಶಕೆ ಶುರುವಾಗಬಹುದು ಎಂಬ ಮಾತು ಆಡಲಿಲ್ಲ.

'ನಾನು ಸೇನಾ ಪಡೆಗಳ ವಾಪಸಾತಿಯನ್ನು, ವಾಪಸಾತಿ ಎಂದಷ್ಟೇ ಗ್ರಹಿಸುತ್ತೇನೆ' ಎಂದು ಅವರು 'ಎಚ್‌ಟಿ ನಾಯಕತ್ವ ಶೃಂಗ'ದಲ್ಲಿ ಹೇಳಿದರು. ಎರಡೂ ದೇಶಗಳ ಸೈನಿಕರ ವಾಪಸಾತಿಯು, ದೇಶಗಳ ನಡುವಿನ ಸಂಬಂಧದಲ್ಲಿ ಹೊಸ ಆರಂಭವೊಂದನ್ನು ಹೇಳುತ್ತಿದೆಯೇ ಎಂಬ ಪ್ರಶ್ನೆಗೆ ಉತ್ತರವಾಗಿ ಜೈಶಂಕರ್ ಹೀಗೆ ಹೇಳಿದರು.

ಭಾರತ ಮತ್ತು ಚೀನಾ ನಡುವಿನ ಸಂಬಂಧದ ವಿಚಾರವಾಗಿ ಹಲವು ಅಂಶಗಳನ್ನು ಪ್ರಸ್ತಾಪಿಸಿದ ಜೈಶಂಕರ್, ಈ ಸಂಬಂಧವು ಬಹಳ ಸಂಕೀರ್ಣವಾಗಿದೆ ಎಂದು ತಿಳಿಸಿದರು.

ಚಂದ್ರಬಾಬು ತಮ್ಮ ರಾಮಮೂರ್ತಿ ನಿಧನ

ಹೈದರಾಬಾದ್ (ಪಿಟಿಐ): ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರ ತಮ್ಮ ಹಾಗೂ ಮಾಜಿ ಶಾಸಕ ಎನ್. ರಾಮಮೂರ್ತಿ ನಾಯ್ಡು (72) ಅವರು ಶನಿವಾರ ನಿಧನರಾದರು.

ರಾಮಮೂರ್ತಿ ಅವರಿಗೆ ನ. 14ರಂದು ಹೃದಯ ಸ್ತಂಭನವಾಗಿತ್ತು. ಕೂಡಲೇ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಯಿತು. ಆದರೆ ಕಡಿಮೆ ರಕ್ತದೊತ್ತಡ ಹಾಗೂ ಇತರ ಸಮಸ್ಯೆಗಳಿಂದ ಅವರ ಆರೋಗ್ಯದಲ್ಲಿ ಚೇತರಿಕೆ ಕಾಣಲಿಲ್ಲ. ಅವರು ಶನಿವಾರ ಮಧ್ಯಾಹ್ನ 12.45ಕ್ಕೆ ಮೃತಪಟ್ಟರು ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

1994ರಿಂದ 1999ರವರೆಗೆ ರಾಮಮೂರ್ತಿ ಅವರು ಆಂಧ್ರಪ್ರದೇಶದ ಚಂದ್ರಗಿರಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದರು.

ಅವರ ಪುತ್ರ ನಾರಾ ರೋಹಿತ್ ತೆಲುಗಿನ ಖ್ಯಾತ ನಟರಾಗಿದ್ದಾರೆ.

ದರ್ಶನ... ಶಬರಿಮಲೆಯ ಅಯ್ಯಪ್ಪ ದೇವಸ್ಥಾನದ ಗರ್ಭಗುಡಿಯ ಬಾಗಿಲನ್ನು ಶುಕ್ರವಾರ ತೆರೆಯಲಾಯಿತು. ಈ ಸಂದರ್ಭದಲ್ಲಿ ಮುಖ್ಯ ಅರ್ಚಕ ಕಂಡರಾರು ರಾಜೀವರು ಉಪಸ್ಥಿತರಿದ್ದರು ಪಿಟಿಐ ಚಿತ್ರ

ಸಿದ್ದೀಕಿ ಕೊಲೆ ಗಿಲ್ ಬಂಧನ

ಮುಂಬೈ (ಪಿಟಿಐ): ಎನ್‌ಸಿಪಿ ಮುಖಂಡ ಹಾಗೂ ಮಾಜಿ ಸಚಿವ ಬಾಬಾ ಸಿದ್ದೀಕಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಪಂಜಾಬ್‌ನ ಆಕಾಶ್‌ದೀಪ್ ಕರಜ್‌ಸಿಂಗ್ ಗಿಲ್‌ನನ್ನು (22) ಮುಂಬೈ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ದರೋಡೆಕೋರರ ವಿರೋಧಿ ಕಾರ್ಯಪಡೆಯ ಸಹಕಾರದೊಂದಿಗೆ ಮುಂಬೈ ಪೊಲೀಸ್ ಅಪರಾಧ ವಿಭಾಗವು ಫಾಜಿಲ್ಕಾ ಜಿಲ್ಲೆಯ ಪಕ್ಕಾ ಚಿಸ್ತಿ ಗ್ರಾಮದ ಗಿಲ್‌ನನ್ನು ಬಂಧಿಸಿದೆ.

ಮಾಜಿ ಸಚಿವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾದ 24ನೇ ಆರೋಪಿ ಈತ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಾಲತಾಣದಲ್ಲಿ ಹರಿದಾಡಿದ ಫೋಟೊ, ವಿಡಿಯೊ

ಆರೋಪಿಗೆ ತುಲಾಭಾರ!

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಮೊರ್ಬಿ ತೂಗು ಸೇತುವೆ ಕುಸಿದ ಪ್ರಕರಣದ ಪ್ರಮುಖ ಆರೋಪಿ ಕೈಗಾರಿಕೋದ್ಯಮಿ ಜಯಸುಖ್ ಪಟೇಲ್ ಅವರು ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ತುಲಾಭಾರ ಮಾಡಿಸಿಕೊಂಡಿದ್ದು ಹೊಸ ವಿವಾದಕ್ಕೆ ಕಾರಣವಾಗಿದೆ.

ಹೂವಿನಿಂದ ಅಲಂಕೃತವಾಗಿರುವ ತಕ್ಕಡಿಯ ಒಂದು ಭಾಗದಲ್ಲಿ ಪಟೇಲ್ ಮತ್ತೊಂದು ಭಾಗದಲ್ಲಿ ಮೋದಕಗಳು ಇರುವ ಫೋಟೊ, ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಕಾರ್ಯಕ್ರಮದ ಆಯೋಜಕರು, ಮೋದಕವನ್ನು ಪಾಟೀದಾರ್ ಕುಟುಂಬಗಳಿಗೆ ಪ್ರಸಾದವಾಗಿ ವಿತರಿಸಲಾಗುವುದು ಎಂದು ತಿಳಿಸಿದ್ದಾರೆ.

ಪಟೇಲ್ ಅವರು ಗಡಿಯಾರ ತಯಾರಿಕಾ ಕಂಪನಿ ಒರೆವಾ ಸಮೂಹದ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ಕಡವಾ ಪಾಟೀದಾರ್ ಕನ್ಯಾ ಕೇಲವಾಣಿ ಮಂಡಲ ಆಯೋಜಿಸಿದ್ದ ಧಾರ್ಮಿಕ ಕಾರ್ಯಕ್ರಮದಲ್ಲಿ ಪಟೇಲ್ ಪಾಲ್ಗೊಂಡಿದ್ದರು.

ಮೊರ್ಬಿ ಜಿಲ್ಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜೈಸುಖ್ ಪಟೇಲ್ ಅವರ ತುಲಾಭಾರ ನಡೆಯಿತು

ನವೆಂಬರ್ 13ರಿಂದ 15 ನಡುವೆ ಕಾರ್ಯಕ್ರಮ ನಡೆದಿದೆ.

ಟ್ರಸ್ಟ್‌ನ ಮುಖ್ಯಸ್ಥ ಎ.ಕೆ.ಪಟೇಲ್ ಅವರು, 'ಜಯಸುಖ್ ಅವರ ತಂದೆ ಒಆರ್ ಪಟೇಲ್ ಅವರು ಈ ಭೂಮಿಯನ್ನು ₹80,000ಕ್ಕೆ ನೀಡಿದ್ದರು. ಇದೀಗ ಮೂರರಿಂದ ನಾಲ್ಕು ಕೋಟಿ ಬೆಲೆಬಾಳುತ್ತದೆ. ಇಲ್ಲಿ ಕಾರ್ಯಕ್ರಮ ಆಯೋಜಿಸಿದಾಗ ಅವರ ಕುಟುಂಬಕ್ಕೆ ಆಹ್ವಾನ ನೀಡಬಾರದೇ? ದುರಂತ ನಡೆದಿದ್ದಕ್ಕೆ ಬೇಸರವಿದೆ. ಹಾಗಂತ ಅವರ ಕುಟುಂಬವನ್ನು ಸ್ಮರಿಸುವುದು ತಪ್ಪೇ. ಅವರು ಸೌರಾಷ್ಟ್ರದ ಉದ್ದಕ್ಕೂ ಶಾಲೆಗಳನ್ನು ಸ್ಥಾಪಿಸಿದ್ದಾರೆ, ಅಲ್ಲಿ ಎಲ್ಲ ಸಮುದಾಯದ ಮಕ್ಕಳೂ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಜಯಸುಖ್ ನ್ಯಾಯಾಲಯದಿಂದ ಒಪ್ಪಿಗೆ ಪಡೆದೇ ಇಲ್ಲಿಗೆ ಬಂದಿದ್ದರು' ಎಂದು ಸಮರ್ಥಿಸಿಕೊಂಡಿದ್ದಾರೆ.

ಜಯಸುಖ್ ಪಟೇಲ್ ಜಾಮೀನಿನ ಮೇಲೆ ಹೊರಗಿದ್ದಾರೆ. ಮೊರ್ಬಿ ಜಿಲ್ಲೆ ಪ್ರವೇಶಿಸಲು ಅವರಿಗೆ ನಿರ್ಬಂಧ ಹೇರಲಾಗಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದ ಅವರು ಮೊರ್ಬಿ ಪ್ರವೇಶಿಸಲು ಸ್ಥಳೀಯ ನ್ಯಾಯಾಲಯದಿಂದ ಅನುಮತಿ ಪಡೆದಿದ್ದರು. ಈ ಸಂದರ್ಭದಲ್ಲಿ ಅವರು ಸಂಘದ ಟ್ರಸ್ಟಿ ಎಂದು ಪ್ರತಿಪಾದಿಸಿದ್ದರು. ಇದಕ್ಕೆ ರಾಜ್ಯ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿತ್ತು.

ಐವರು ನಕ್ಸಲರ ಹತ್ಯೆ

ರಾಯಪುರ (ಪಿಟಿಐ): ಛತ್ತೀಸಗಢದ ಬಸ್ತರ್ ಪ್ರದೇಶದಲ್ಲಿ ಶನಿವಾರ ಭದ್ರತಾ ಪಡೆಗಳು ನಡೆಸಿದ ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ಐವರು ನಕ್ಸಲರು ಹತರಾಗಿದ್ದು, ಇಬ್ಬರು ಭದ್ರತಾ ಸಿಬ್ಬಂದಿ ಗಾಯಗೊಂಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದರು.

ಗಡಿ ಭದ್ರತಾ ಪಡೆ, ಜಿಲ್ಲಾ ಮೀಸಲು ಪಡೆ ಹಾಗೂ ವಿಶೇಷ ಕಾರ್ಯಪಡೆಗಳು, ನಾರಾಯಣಪುರ ಮತ್ತು ಕಾಂಕೇರ್ ಜಿಲ್ಲೆಗಳ ಗಡಿಯಲ್ಲಿರುವ ಅರಣ್ಯ ಪ್ರದೇಶದಲ್ಲಿ ಶನಿವಾರ ಬೆಳಿಗ್ಗೆ ಎಂಟು ಗಂಟೆಗೆ ಜಂಟಿ ಕಾರ್ಯಾಚರಣೆ ನಡೆಸಿದವು.

ಈ ವೇಳೆ ನಕ್ಸಲರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಗಾಯಗೊಂಡ ಇಬ್ಬರು ಭದ್ರತಾ ಸಿಬ್ಬಂದಿಯನ್ನು ಚಿಕಿತ್ಸೆಗಾಗಿ ರಾಯಪುರದಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸ್ಥಳದಲ್ಲಿದ್ದ ಬಂದೂಕುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಶೋಧ ಕಾರ್ಯಾಚರಣೆ ಮುಂದುವರಿದಿದೆ ಎಂದು ಅವರು ತಿಳಿಸಿದರು.

ಏಳು ಜಿಲ್ಲೆಗಳನ್ನು ಒಳಗೊಂಡಿರುವ ಬಸ್ತರ್ ಪ್ರದೇಶದಲ್ಲಿ ಈ ವರ್ಷದಲ್ಲಿ ಇದುವರೆಗೆ 197 ನಕ್ಸಲರನ್ನು ಹತ್ಯೆ ಮಾಡಲಾಗಿದೆ.

ಮೃತದೇಹ ಪತ್ತೆ: ಮಣಿಪುರ ಉದ್ವಿಗ್ನ

ಒಂದನೇ ಪುಟದಿಂದ...

ಕುಕಿಗಳ ಪ್ರತಿಭಟನೆ: 'ಮೃತದೇಹಗಳನ್ನು ನಮಗೆ ಹಸ್ತಾಂತರಿಸಿ' ಎಂದು ಆಗ್ರಹಿಸಿ ಕುಕಿ ಬುಡಕಟ್ಟು ಸಮುದಾಯದವರು ಎನ್ನಲಾದ 11 ಮಂದಿ ಶಂಕಿತ ಉಗ್ರರ ಕುಟುಂಬಸ್ಥರು ಹಾಗೂ ಸಮುದಾಯದ ನೂರಾರು ಮಂದಿ ಅಸ್ಸಾಂನ 'ಸಿಲ್‌ಚರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ'ಯ ಎದುರು ಶನಿವಾರ ಬೆಳಿಗ್ಗೆ ಪ್ರತಿಭಟನೆ ನಡೆಸಿದರು.

ಜಿರೀಬಾಮ್ ಜಿಲ್ಲೆಯ ಬೊರುಬೆಕ್ರಾ ಪ್ರದೇಶದಲ್ಲಿ ಭದ್ರತಾ ಪಡೆಗಳು ಹಾಗೂ ಶಂಕಿತ ಉಗ್ರರ ನಡುವೆ ಸೋಮವಾರ ನಡೆದಿದ್ದ ಗುಂಡಿನ ದಾಳಿಯಲ್ಲಿ 11 ಮಂದಿ ಶಂಕಿತ ಉಗ್ರರ ಮೃತಪಟ್ಟಿದ್ದರು.

'ಮೃತದೇಹಗಳನ್ನು ಮಣಿಪುರ ಪೊಲೀಸರಿಗೆ ಹಸ್ತಾಂತರಿಸಲಾಗುವುದು' ಎಂದು ಅಸ್ಸಾಂ ಪೊಲೀಸರು ಮನವಿ ಮಾಡಿದರೂ ಪ್ರತಿಭಟನಕಾರರು ಪ್ರತಿಭಟನೆ ಕೈಬಿಡಲಿಲ್ಲ.

ಆಕ್ರೋಶಗೊಂಡ ಪ್ರತಿಭಟನಕಾರರು ಪೊಲೀಸರ ಮೇಲೆ ಕಲ್ಲು ತೂರಿದರು. ಪರಿಸ್ಥಿತಿ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಪೊಲೀಸರು ಲಾಠಿ ಬೀಸಿದರು.

ಮೃತದೇಹಗಳ ಹಸ್ತಾಂತರ ಕುರಿತು ಪೊಲೀಸರು ಕುಟುಂಬಸ್ಥರಿಗೆ ಮತ್ತೊಮ್ಮೆ ತಿಳಿ ಹೇಳಿದ ಬಳಿಕ, ಪ್ರತಿಭಟನಕಾರರು ಪ್ರತಿಭಟನೆಯನ್ನು ಹಿಂಪಡೆದರು. ಶನಿವಾರ ಮಧ್ಯಾಹ್ನದ ವೇಳೆಗೆ 11 ಮಂದಿ ಶಂಕಿತ ಉಗ್ರರ ಮೃತದೇಹಗಳನ್ನು ಹೆಲಿಕಾಪ್ಟರ್ ಮೂಲಕ ಚುರಾಚಾಂದ್‌ಪುರಕ್ಕೆ ರವಾನಿಸಲಾಗಿದೆ.

'ಅವರು ಗ್ರಾಮ ಸ್ವಯಂರಕ್ಷಕರು': 11 ಮಂದಿ ಶಂಕಿತ ಉಗ್ರರರನ್ನು ಕುಕಿ-ಜೊ ಬುಡಕಟ್ಟು ಸಮುದಾಯಗಳ ಸಂಘಟನೆಯೊಂದು 'ಗ್ರಾಮ ಸ್ವಯಂ ರಕ್ಷಕರು' ಎಂದು ಕರೆದಿದ್ದಾರೆ. 'ಇವರು ಕುಕಿ ಸಮುದಾಯದ ಒಳಪಂಗಡವಾದ ಹಮರ್ ಸಮುದಾಯಕ್ಕೆ ಸೇರಿದವರು. ಮೈತೇಯಿಗಳಿಂದ ಉಂಟಾಗಬಹುದಾದ ದಾಳಿಯಿಂದ ಗ್ರಾಮಸ್ಥರನ್ನು ರಕ್ಷಿಸಲು ಅವರು ಕೆಲಸ ಮಾಡುತ್ತಿದ್ದರು. ಮೈತೇಯಿ ಸಮುದಾಯದ ತೀವ್ರಗಾಮಿ ಗುಂಪು 'ಅರಂಬಿ ಥೆನ್‌ಗೋಲ್'ನ ಶಸ್ತ್ರಧಾರಿಗಳು ಪೊಲೀಸ್ ಠಾಣೆಯೊಳಗೆ ನುಗ್ಗಿದ್ದಾರೆ ಎಂಬ ಮಾಹಿತಿ ಬಂದಿತ್ತು. ಆದ್ದರಿಂದ ಅವರು ಠಾಣೆ ಮೇಲೆ ದಾಳಿ ನಡೆಸಿದರು' ಎಂದು ಸಂಘಟನೆ ಹೇಳಿದೆ.

ಭದ್ರತೆ ಬಿಗಿಗೊಳಿಸಿ

'ಕಳೆದ ಕೆಲವು ದಿನಗಳಿಂದ ಮಣಿಪುರದ ಭದ್ರತಾ ವ್ಯವಸ್ಥೆಯು 'ದುರ್ಬಲ'ಗೊಂಡಿರುವುದನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ರಾಜ್ಯದಲ್ಲಿ ಶಾಂತಿ ನೆಲೆಸಿ, ಕಾನೂನು ಸುವ್ಯವಸ್ಥೆ ಮರುಸ್ಥಾಪನೆಗೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಗೃಹ ಸಚಿವಾಲಯವು ಭದ್ರತಾ ಪಡೆಗಳಿಗೆ ಶನಿವಾರ ನಿರ್ದೇಶನ ನೀಡಿದೆ.

'ಮಣಿಪುರದಲ್ಲಿ ಎರಡೂ ಸಮುದಾಯಗಳ ದುಷ್ಕರ್ಮಿಗಳು ಹಿಂಸೆಯನ್ನು ಉದ್ದೀಪಿಸುತ್ತಿದ್ದಾರೆ. ಸಾರ್ವಜನಿಕರು ವದಂತಿಗಳನ್ನು ಯಾವುದೇ ಕಾರಣಕ್ಕೂ ನಂಬಬಾರದು. ಜೊತೆಗೆ, ಶಾಂತಿ ಸ್ಥಾಪನೆಗಾಗಿ ಜನರು ಭದ್ರತಾ ಪಡೆಗಳೊಂದಿಗೆ ಸಹಕರಿಸಿ' ಎಂದು ಸಚಿವಾಲಯ ಮನವಿ ಮಾಡಿದೆ. 'ಹಿಂಸೆಯಲ್ಲಿ ತೊಡಗಿರುವ ಯಾರೇ ಆಗಲಿ, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದೂ ಭರವಸೆ ನೀಡಿದೆ.

ಮೈತೇಯಿಗಳ ಪ್ರತಿಭಟನೆ

ಆರು ಮೃತದೇಹಗಳು ಪತ್ತೆಯಾದ ಸುದ್ದಿ ಎಲ್ಲೆಡೆ ಹಬ್ಬುತ್ತಿದ್ದಂತೆಯೇ ಮೈತೇಯಿ ಸಮುದಾಯದ ನೂರಾರು ಮಂದಿ ಇಂಫಾಲದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಲ್ಲಿ ಮಹಿಳೆಯರ ಸಂಖ್ಯೆಯೇ ಅಧಿಕವಾಗಿತ್ತು. ಮೂವರು ಸಚಿವರು, ಆರು ಶಾಸಕನ ಮನೆಗಳ ಮೇಲೆಯೂ ಪ್ರತಿಭಟನಕಾರರು ದಾಳಿ ನಡೆಸಿದರು. ಅಂಗಡಿಗಳು ಬಂದಾಗಿದ್ದವು. ಮುಂಜಾಗ್ರತಾ ಕ್ರಮವಾಗಿ ಶನಿವಾರ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು. ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಅಶ್ರುವಾಯು ಸಿಡಿಸಿದರು.

'ಆರು ಮಂದಿಯನ್ನು ಅಪಹರಿಸಿ ಹತ್ಯೆ ಮಾಡಿದ 'ಕುಕಿ ನುಸುಳುಕೋರ'ರ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಬೇಕು. ಅಪಹರಿಸಲಾಗಿದ್ದ ಆರು ಮಂದಿಯನ್ನು ರಕ್ಷಿಸುವಲ್ಲಿ ರಾಜ್ಯ ಸರ್ಕಾರ ಹಾಗೂ ಭದ್ರತಾ ಪಡೆಗಳು ಸೋತಿವೆ. ನಮಗೆ ನ್ಯಾಯ ಬೇಕು' ಎಂದು ಆಗ್ರಹಿಸಿದ ಪ್ರತಿಭಟನಕಾರರು ರಸ್ತೆ ತಡೆ ನಡೆಸಿ, ಟೈರ್‌ಗಳನ್ನು ಸುಟ್ಟರು.

ಪ್ರತಿಭಟನೆಯು ತೀವ್ರ ಸ್ವರೂಪ ಪಡೆದುಕೊಂಡಿದ್ದರಿಂದ ಇಂಫಾಲದಲ್ಲಿ ಶನಿವಾರ ಸಂಜೆ 4.30ರಿಂದ ಕರ್ಫ್ಯೂ ಜಾರಿ ಮಾಡಲಾಯಿತು. 'ಮುಂದಿನ ಆದೇಶದವರೆಗೂ ಕರ್ಫ್ಯೂ ಜಾರಿಯಲ್ಲಿರಲಿದೆ' ಎಂದು ಅಧಿಕಾರಿಗಳು ತಿಳಿಸಿದರು. ಜೊತೆಗೆ, ಹಿಂಸಾಚಾರ ಪೀಡಿತ ಕೆಲವು ಜಿಲ್ಲೆಗಳಲ್ಲಿ ಶನಿವಾರ ಅಂತರ್ಜಾಲ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು.

'ಇಂಫಾಲದಲ್ಲಿ ಪ್ರತಿಭಟನೆಗಳು ತೀವ್ರಗೊಳ್ಳುತ್ತಿದ್ದಂತೆಯೇ, ಆರು ಪೊಲೀಸ್ ಠಾಣೆಗಳನ್ನು 'ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ, 1958 (ಆಫ್‌ಸ್ಪಾ)' ವ್ಯಾಪ್ತಿಗೆ ತಂದಿರುವುದರ ಕುರಿತು ಮರುಪರಿಶೀಲಿಸಿ' ಎಂದು ಗೃಹ ಸಚಿವಾಲಯಕ್ಕೆ ರಾಜ್ಯ ಸರ್ಕಾರವು ಮನವಿ ಮಾಡಿದೆ.

- ತಮಗೆ ನ್ಯಾಯ ದೊರಕಿಸಲು ಸೋತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಕಾರರು, ಆರೋಗ್ಯ ಸಚಿವ ಸಪಮ್ ರಂಜನ್ ಹಾಗೂ ಗ್ರಾಹಕ ವ್ಯವಹಾರ ಹಾಗೂ ಸಾರ್ವಜನಿಕ ವಿತರಣಾ ಸಚಿವ ಎಲ್. ಸುಸಿಂದ್ರೊ ಸಿಂಗ್ ಅವರ ಮನೆ ಮೇಲೆ ದಾಳಿ ನಡೆಸಿದರು
- ಬಿಜೆಪಿ ಶಾಸಕ ಹಾಗೂ ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರ ಅಳಿಯ ಆರ್.ಕೆ. ಇಮೊ ಅವರ ನಿವಾಸದ ಮೇಲೆಯೂ ದಾಳಿ ಮಾಡಲಾಗಿದೆ. '24 ಗಂಟೆಗಳ ಒಳಗೆ ತಪ್ಪಿತಸ್ಥರನ್ನು ಬಂಧಿಸಿ' ಎಂದು ಪ್ರತಿಭಟನಕಾರರು ಘೋಷಣೆಗಳನ್ನು ಕೂಗಿದರು
- ಇಂಫಾಲದ ಕೈಶಂಥೊಂಗ್ ವಿಧಾನಸಭಾ ಕ್ಷೇತ್ರದ ಪಕ್ಷೇತರ ಶಾಸಕ ಸಪಮ್ ನಿಶಿಕಾಂತ್ ಸಿಂಗ್ ಅವರನ್ನು ಭೇಟಿ ಮಾಡಲು ಪ್ರತಿಭಟನಕಾರರು ತೆರಳಿದ್ದರು. ಈ ವೇಳೆ ಅವರು ಮನೆಯಲ್ಲಿ ಇರಲಿಲ್ಲ. ಇದರಿಂದ ಆಕ್ರೋಶಗೊಂಡ ಪ್ರತಿಭಟನಕಾರರು ಅವರ ಮನೆ ಮೇಲೆ ದಾಳಿ ನಡೆಸಿದರು. ಅವರ ನೇತೃತ್ವದ ಪತ್ರಿಕೆಯ ಕಚೇರಿ ಮೇಲೆಯೂ ದಾಳಿ ನಡೆಸಿದ್ದಾರೆ

ವೈದ್ಯಕೀಯ ಶಿಕ್ಷಣ ಮಹಾ ನಿರ್ದೇಶಕರ ನೇತೃತ್ವದಲ್ಲಿ ಸಮಿತಿ

10 ಶಿಶುಗಳ ಸಾವು: ಮೂರು ಹಂತದ ತನಿಖೆ

ಲಖನೌ/ಝಾನ್ಸಿ (ಪಿಟಿಐ): ಉತ್ತರ ಪ್ರದೇಶದ ಝಾನ್ಸಿಯ ಮಹಾರಾಣಿ ಲಕ್ಷ್ಮೀಬಾಯಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವಾರ್ಡ್‌ನಲ್ಲಿ ಬೆಂಕಿ ಹೊತ್ತಿಕೊಂಡು 10 ಶಿಶುಗಳು ಮೃತಪಟ್ಟ ಪ್ರಕರಣ ಕುರಿತು ಮೂರು ಹಂತದ ತನಿಖೆ ನಡೆಸುವಂತೆ ರಾಜ್ಯ ಸರ್ಕಾರ ಶನಿವಾರ ಆದೇಶಿಸಿದೆ.

ವೈದ್ಯಕೀಯ ಶಿಕ್ಷಣ ಮತ್ತು ತರಬೇತಿಯ ಮಹಾ ನಿರ್ದೇಶಕರ ನೇತೃತ್ವದಲ್ಲಿ ನಾಲ್ವರ ಸಮಿತಿಯನ್ನು ರಚಿಸಲಾಗಿದೆ. ಬೆಂಕಿ ಅವಘಡಕ್ಕೆ ಕಾರಣವನ್ನು ತಿಳಿಯಲು ಹಾಗೂ ಘಟನೆಯ ಹಿಂದೆ ನಿರ್ಲಕ್ಷ್ಯವಿದೆಯೇ ಎಂಬ ಕುರಿತು ತನಿಖೆ ನಡೆಸಿ ಏಳು ದಿನಗಳ ಒಳಗೆ ವರದಿ ಸಲ್ಲಿಸುವಂತೆ ಸಮಿತಿಗೆ ಸೂಚಿಸಲಾಗಿದೆ.

ಅಗ್ನಿಶಾಮಕ ದಳವೂ ಘಟನೆಯ ಕಾರಣಗಳ ಕುರಿತು ಪರಿಶೀಲನೆ ನಡೆಸಲಿದೆ. ಇದರೊಂದಿಗೆ ಮ್ಯಾಜಿಸ್ಟ್ರೇಟ್ ತನಿಖೆಗೂ ಸೂಚಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಬ್ರಿಜೇಶ್ ಪಾಠಕ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಘಟನೆ ಕುರಿತು 12 ಗಂಟೆಯ ಒಳಗೆ ವರದಿ ನೀಡುವಂತೆ ಈಗಾಗಲೇ ಅಧಿಕಾರಿಗಳಿಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೂಚಿಸಿದ್ದರು.

ಬೆಂಕಿ ಹೊತ್ತಿಕೊಂಡಿದ್ದ ವೇಳೆ ವಾರ್ಡ್‌ನಿಂದ ರಕ್ಷಿಸಲ್ಪಟ್ಟ ಶಿಶುಗಳು ಪಿಟಿಐ ಚಿತ್ರ

ಬುಂದೇಲ್‌ಖಂಡ ಪ್ರದೇಶದಲ್ಲಿರುವ, ರಾಜ್ಯದ ಅತಿದೊಡ್ಡ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದಾದ ಲಕ್ಷ್ಮೀಬಾಯಿ ವೈದ್ಯಕೀಯ ಕಾಲೇಜಿನ 'ನವಜಾತ ಶಿಶುಗಳ ತೀವ್ರ ನಿಗಾ ಘಟಕ'ದಲ್ಲಿ (ಎನ್‌ಐಸಿಯು) ಶುಕ್ರವಾರ ರಾತ್ರಿ 10.45ರ ಸುಮಾರಿಗೆ ಬೆಂಕಿ ಹೊತ್ತಿಕೊಂಡಿತ್ತು. ಶಾರ್ಟ್ ಸರ್ಕಿಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡಿರಬಹುದು ಎಂದು ಅಂದಾಜಿಸಲಾಗಿದೆ.

ಘಟನೆ ನಡೆದ ವೇಳೆ 52ರಿಂದ 54 ಶಿಶುಗಳು ವಾರ್ಡ್‌ನಲ್ಲಿದ್ದವು. ಈ ಪೈಕಿ 10 ಶಿಶುಗಳು ಮೃತಪಟ್ಟಿದ್ದರೆ, ಗಾಯಗೊಂಡಿರುವ 16 ಶಿಶುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಉಳಿದ ಶಿಶುಗಳನ್ನು ರಕ್ಷಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

> ರಾಜ್ಯದಲ್ಲಿ ಒಂದಾದ ಮೇಲೆ ಒಂದರಂತೆ ಇಂತಹ ಘಟನೆಗಳು ನಡೆಯುತ್ತಲೇ ಇವೆ. ಇದಕ್ಕೆ ಆಡಳಿತದ ನಿರ್ಲಕ್ಷ್ಯವೇ ಕಾರಣ
>
> **ರಾಹುಲ್ ಗಾಂಧಿ**
> ಲೋಕಸಭೆಯ ವಿರೋಧ ಪಕ್ಷದ ನಾಯಕ

> ಚುನಾವಣಾ ಪ್ರಚಾರ ಬಿಟ್ಟು ರಾಜ್ಯದ ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಸುಧಾರಿಸುವತ್ತ ಮುಖ್ಯಮಂತ್ರಿ ಗಮನಹರಿಸಬೇಕು
>
> **ಅಖಿಲೇಶ್ ಯಾದವ್**
> ಸಮಾಜವಾದಿ ಪಕ್ಷದ ಮುಖ್ಯಸ್ಥ

ನೀರೂರಿಸುವ ನಾನ್ ವೆಜ್ ರೆಸಿಪಿಗಳು

ಫ್ರೀಡಂ ಆರೋಗ್ಯಕರ ಅಡುಗೆ ಎಣ್ಣೆಯಿಂದ ಪ್ರಸ್ತುತಪಡಿಸಲಿರುವ 'ಕರುನಾಡ ಸವಿಯೂಟ ಸೀಸನ್ -3'ರ ಪಾಕಪದ್ಧತಿಗಳ ಪ್ರದರ್ಶನಕ್ಕೆ ಶ್ರೀ ಕೃಷ್ಣ ಶುದ್ಧ ಹಸುವಿನ ತುಪ್ಪ ಸಹಯೋಗ ನೀಡಲಿದೆ. ಟಿವಿ ನಿರೂಪಕ ಮತ್ತು ಬಾಣಸಿಗ ಒಗ್ಗರಣೆ ಡಬ್ಬಿ ಮುರಳಿ ಅವರ ಕೈಚಳಕದಲ್ಲಿ ಮೂಡಿಬರಲಿರುವ ಬಾಯಲ್ಲಿ ನೀರೂರಿಸುವ ನಾನ್ ವೆಜ್ ರೆಸಿಪಿಗಳ ಸಂಭ್ರಮಕ್ಕೆ ನಿಮ್ಮ ಬಂಧುಗಳನ್ನು ಮತ್ತು ಗೆಳೆಯರನ್ನು ಆಹ್ವಾನಿಸುವ ಇಚ್ಛೆ ಇದ್ದಲ್ಲಿ ಕೂಡಲೇ ತಯಾರು ನಡೆಸಿ.

ಮಟನ್ ಚಾಪ್ಸ್ ಕರಿ

ಬೇಕಾದ ಪದಾರ್ಥಗಳು: ಅರ್ಧ ಕಿಲೋ ಚಾಪ್ಸ್ ಮಟನ್ (ದೊಡ್ಡ ತುಂಡುಗಳು), ಉಪ್ಪು, ಒಂದು ಚಮಚ ಅರಿಶಿನ ಪುಡಿ, ಮುಕ್ಕಾಲು ಕಪ್ ತಾಜಾ ತೆಂಗಿನಕಾಯಿ ಮತ್ತು ಮುಕ್ಕಾಲು ಕಪ್ ತೆಂಗಿನ ತುರಿ, ಸ್ವಲ್ಪ ನಿಂಬೆಹಣ್ಣಿನ ರಸ, ಒಂದು ಹಿಡಿ ಸಣ್ಣಗೆ ಕತ್ತರಿಸಿದ ಕೊತ್ತಂಬರಿ ಸೊಪ್ಪು.

ಮಸಾಲ ಪದಾರ್ಥಗಳು: ಗಸಗಸೆ 3 ಚಮಚ, 10 ರಿಂದ 12 ಒಣಮೆಣಸಿನಕಾಯಿ, 2 ಚಮಚ ದನಿಯಾ, ಸೋಂಪು ಒಂದೂವರೆ ಚಮಚ, ಜೀರಿಗೆ 2 ಚಮಚ, ಶುಂಠಿ ಒಂದಿಂಚು, ಬೆಳ್ಳುಳ್ಳಿ 10 ಎಸಳು. ತೆಂಗಿನಎಣ್ಣೆ ಕಾಲು ಕಪ್, ದಾಲ್ಚಿನ್ನಿ 1 ಚೂರು, ಪುಡಿಮಾಡಿದ 6 ಏಲಕ್ಕಿ, ಲವಂಗ 6, ಸ್ಟಾರ್ ಅನಿಸೆ ಒಂದು, ಸಣ್ಣಗೆ ಕತ್ತರಿಸಿದ ಒಂದು ದೊಡ್ಡ ಈರುಳ್ಳಿ.

ಮಾಡುವ ವಿಧಾನ: ಮೊದಲು ಮಸಾಲ ಪದಾರ್ಥಗಳನ್ನು ಮಿಕ್ಸಿಗೆ ಹಾಕಿ ನುಣ್ಣಗೆ ರುಬ್ಬಿಟ್ಟುಕೊಳ್ಳಿ. ನಂತರ ತೆಂಗಿನಕಾಯಿ ಹಾಲು ಮಾಡಿಕೊಳ್ಳಿ. ಉಳಿದ ಮುಕ್ಕಾಲು ಕಪ್ ತೆಂಗಿನತುರಿ ಚೆನ್ನಾಗಿ ರುಬ್ಬಿಕೊಂಡು ಅದಕ್ಕೆ ರುಬ್ಬಿಟ್ಟ ಮಸಾಲೆ ಪೇಸ್ಟ್ ಸೇರಿಸಿ ಮತ್ತಷ್ಟು ನುಣ್ಣಗೆ ಮಾಡಿ. ಪ್ರೆಶ್ಶರ್ ಕುಕ್ಕರ್‌ನಲ್ಲಿ ಮಾಂಸದ ತುಂಡುಗಳನ್ನು ಹಾಕಿ ಅದರ ಮೇಲೆ ಮಸಾಲೆ ಪೇಸ್ಟ್, ತೆಂಗಿನಹಾಲು, ಸ್ವಲ್ಪ ಉಪ್ಪು, ಅರಿಶಿನ ಪುಡಿ ಉದುರಿಸಿ ಕಲೆಸಿ. ಮುಚ್ಚಳ ಮುಚ್ಚಿ ಬೇಯಲು ಇಡಿ. ಕುಕ್ಕರ್ 10 ವಿಸಿಲ್ ಕೂಗಿದ ನಂತರ ಸಣ್ಣ ಉರಿಯಲ್ಲಿ 15 ನಿಮಿಷ ಬೇಯಿಸಿ. ಕುಕ್ಕರ್ ತಣ್ಣಗಾಗುವವರೆಗೆ ಕಾಯಿರಿ.

ಬಾಣಲೆಗೆ ಸ್ವಲ್ಪ ಎಣ್ಣೆ ಹಾಕಿ ಬಿಸಿಯಾದ ನಂತರ ಎಲ್ಲ ಮಸಾಲೆ ಪದಾರ್ಥಗಳನ್ನು ಹಾಕಿ ಬಾಡಿಸಿ, ಅದಕ್ಕೆ ಕತ್ತರಿಸಿಟ್ಟ ಈರುಳ್ಳಿ ಬೆರೆಸಿ, ಕಂದು ಬಣ್ಣ ಬರೋವರೆಗೂ ಹುರಿದುಕೊಳ್ಳಿ. ನಂತರ ಎಲ್ಲವನ್ನೂ ಮಟನ್ ಚಾಪ್ಸ್ ಕರಿಗೆ ಸೇರಿಸಿ. ಎಣ್ಣೆ ಬಿಡುವವರೆಗೆ ಬೇಯಿಸಿ. ಬೆಂದ ನಂತರ ಕೊತ್ತಂಬರಿ ಸೊಪ್ಪು ಮತ್ತು ಸ್ವಲ್ಪ ನಿಂಬೆರಸ ಹಾಕಿ ಕಲೆಸಿದರೆ ಚಾಪ್ಸ್ ಕರಿ ತಯಾರು.

ಬೋನ್‌ಲೆಸ್ ಚಿಕನ್ ಸ್ಪೆಷಲ್ ಫ್ರೈ

ಬೇಕಾದ ಪದಾರ್ಥಗಳು: 100 ಗ್ರಾಂ ಕೋಳಿ ತೊಡೆ ಮಾಂಸ, ಸಣ್ಣಗೆ ಕತ್ತರಿಸಿದ ಒಂದು ಈರುಳ್ಳಿ ಮತ್ತು ಒಂದು ಟೊಮೆಟೊ, 2 ಚಮಚ ಶುಂಠಿ-ಬೆಳ್ಳುಳ್ಳಿ ಪೇಸ್ಟ್, 1 ಚಮಚ ಹಸಿಮೆಣಸಿನಕಾಯಿ ಪೇಸ್ಟ್, 1 ಚಮಚ ಜೀರಿಗೆ, 1 ಪುಲಾವ್ ಎಲೆ, ಚಕ್ಕೆ ಸಣ್ಣ ಚೂರು, 1 ಏಲಕ್ಕಿ, 2-3 ಲವಂಗ, 2-3 ಕಾಳುಮೆಣಸು, ಉಪ್ಪು. ಮ್ಯಾರಿನೇಷನ್ ಪದಾರ್ಥಗಳು: 2 ಚಮಚ ಚಿಕನ್ ಮಸಾಲ ಪುಡಿ, 2 ಚಮಚ ನಿಂಬೆ ರಸ.

Freedom Healthy Cooking Oils presents ಕರುನಾಡ ಸವಿಯೂಟ ಆವೃತ್ತಿ 3 Powered by Sri Krishna

ಫ್ರೈಗೆ ಬೇಕಾದ ಮಸಾಲೆ ಪದಾರ್ಥಗಳು: 2 ಚಮಚ ದನಿಯಾ, 1-2 ಒಣಮೆಣಸಿನಕಾಯಿ, 2-3 ಕರಿಮೆಣಸಿನಕಾಳು, ಚಕ್ಕೆ ಒಂದು ಸಣ್ಣ ಚೂರು, ಫ್ರೈ ಮಾಡಲು ಬೇಕಾದಷ್ಟು ಎಣ್ಣೆ.

ಮಾಡುವ ವಿಧಾನ: ಒಂದು ಪ್ಯಾನ್ ತೆಗೆದುಕೊಂಡು ಕೊತ್ತಂಬರಿ ಬೀಜಗಳು, ಒಣ ಮೆಣಸಿನಕಾಯಿ, ಚಕ್ಕೆ ಮತ್ತು ಕರಿಮೆಣಸು ಹಾಕಿ 2-3 ನಿಮಿಷ ಹುರಿದುಕೊಳ್ಳಿ. ತಣ್ಣಗಾದ ಮೇಲೆ ಮಿಕ್ಸಿಗೆ ಸೇರಿಸಿ ನುಣ್ಣಗಿನ ಪುಡಿ ಮಾಡಿಕೊಳ್ಳಿ. ನಂತರ ಕೋಳಿ ಮಾಂಸದ ತುಂಡುಗಳ ಮೇಲೆ ಚಿಕನ್ ಫ್ರೈ ಮಸಾಲೆ ಪುಡಿ ಹಾಗೂ ನಿಂಬೆಹಣ್ಣಿನ ರಸ ಹಾಕಿ ಚೆನ್ನಾಗಿ ಕಲೆಸಿ. 15 ನಿಮಿಷಗಳು ಮ್ಯಾರಿನೇಟ್ ಮಾಡಿ.

ಮತ್ತೊಂದು ಕಡಾಯಿಯಲ್ಲಿ ಎರಡು ಚಮಚ ಎಣ್ಣೆ ಹಾಕಿ, ಬಿಸಿಯಾದ ನಂತರ ಜೀರಿಗೆ ಕಾಳು, ಪುಲಾವ್ ಎಲೆ, ಏಲಕ್ಕಿ, ಕರಿಮೆಣಸು ಕಾಳು, ಲವಂಗ ಹಾಗೂ ಚಕ್ಕೆ ತುಂಡು ಹಾಕಿ ಸ್ವಲ್ಪ ಬಾಡಿಸಿ. ಕತ್ತರಿಸಿಟ್ಟ ಈರುಳ್ಳಿ ಸೇರಿಸಿ ಮತ್ತೆರಡು ನಿಮಿಷ ಬಾಡಿಸಿ. ಮ್ಯಾರಿನೇಟ್ ಮಾಡಿದ ಚಿಕನ್ ಪೀಸ್‌ಗಳನ್ನು ಹಾಕಿ ಎರಡು ನಿಮಿಷ ಬೇಯಿಸಿ. ನಂತರ ಶುಂಠಿ ಬೆಳ್ಳುಳ್ಳಿ ಪೇಸ್ಟ್ ಮತ್ತು ಹಸಿಮೆಣಸಿನಕಾಯಿ ಪೇಸ್ಟ್ ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. 2 ನಿಮಿಷ ಬೇಯಿಸಿ. ಚಿಕನ್ ಫ್ರೈ ಮಸಾಲ ಪೌಡರ್ ಸೇರಿಸಿ ಪುನಃ 4-5 ನಿಮಿಷ ಬೇಯಲು ಇಡಿ. ಈಗ ಕತ್ತರಿಸಿಟ್ಟ ಟೊಮೆಟೊ ಹಾಕಿ, ಮಾಂಸದಿಂದ ಎಣ್ಣೆ ಬೇರ್ಪಡುವವರೆಗೆ ಕಾಯಿದ್ದು, ರುಚಿಗೆ ತಕ್ಕಷ್ಟು ಉಪ್ಪು ಬೆರೆಸಿದರೆ ಬಾಯಲ್ಲಿ ನೀರೂರಿಸುವ ಬೋನ್‌ಲೆಸ್ ಚಿಕನ್ ಫ್ರೈ ಮಸಾಲ ರೆಡಿ. ಬಿಸಿ ಚಪಾತಿ ಜತೆ ಚಿಕನ್ ಫ್ರೈ ಮಜಾನೇ ಬೇರೆ.

ಮಟನ್ ನಲ್ಲಿ ಫ್ರೈ

ಬೇಯಿಸಲು ಬೇಕಾದ ಪದಾರ್ಥಗಳು: ನಲ್ಲಿ (ಮೂಳೆ) ಮಾಂಸ 800-900 ಗ್ರಾಂ, 1 ಚಮಚ ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಕಾಲು ಚಮಚ ಅರಿಶಿನ, ಅರ್ಧ ಚಮಚ ಒಣಮೆಣಸಿನ ಪುಡಿ, ನೀರು ಒಂದೂವರೆ ಕಪ್ ಅಥವಾ ಮಟನ್ ಪೀಸ್‌ಗಳು ಅರ್ಧ ಮುಳುಗುವಷ್ಟು.

50 ಮಿ.ಲೀ. ಎಣ್ಣೆ, ಒಂದು ಚಮಚ ತುಪ್ಪ, ಒಂದು ಚಮಚ ಸೋಂಪು, ಕಾಲು ಚಮಚ ಕಾಳುಮೆಣಸು, 30 ತುಂಡುಗಳ ಸಣ್ಣ ಈರುಳ್ಳಿ, ಸ್ವಲ್ಪ ಕರಿಬೇವು, ಒಂದೂವರೆ ಚಮಚ ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಕಾಲು ಚಮಚ ಅರಿಶಿನ ಪುಡಿ, 1 ಚಮಚ ದನಿಯಾ ಪುಡಿ, ಅರ್ಧ ಚಮಚ ಜೀರಿಗೆ ಪುಡಿ, ಒಂದೂವರೆ ಚಮಚ ಗರಂ ಮಸಾಲ, ಬೇಯಿಸಿಟ್ಟ ನಲ್ಲಿ ಮಟನ್ ಸಾರ, ಒಂದೂವರೆ ಚಮಚ ಕಾಳುಮೆಣಸಿನ ಪುಡಿ, ರುಚಿಗೆ ತಕ್ಕಷ್ಟು ಉಪ್ಪು ಮತ್ತು ಕೊತ್ತಂಬರಿ ಸೊಪ್ಪು.

ಮಾಡುವ ವಿಧಾನ: ಪ್ರೆಷರ್ ಕುಕ್ಕರ್‌ಗೆ ನಲ್ಲಿ ಮಟನ್ ಹಾಕಿ. ಅರಿಶಿನ ಪುಡಿ, ಮೆಣಸಿನಪುಡಿ, ಉಪ್ಪು ಉದುರಿಸಿ ಮಿಕ್ಸ್ ಮಾಡಿ. ಮೂಳೆ ತುಂಡುಗಳು ಮುಳುಗುವವರೆಗೆ ನೀರು ಬೆರೆಸಿ ಮುಚ್ಚಳ ಮುಚ್ಚಿ ಚೆನ್ನಾಗಿ ಬೇಯಿಸಿ. ನಂತರ ಸ್ಟೌವ್ ಮೇಲೆ ಬಾಣಲೆಯಿಟ್ಟು ಬಿಸಿಯಾದ ನಂತರ ಸ್ವಲ್ಪ ಎಣ್ಣೆ ಹಾಗೂ ತುಪ್ಪ ಹಾಕಿ ಸೋಂಪು ಕಾಳು ಮತ್ತು ಕಾಳುಮೆಣಸು ಹುರಿದುಕೊಳ್ಳಿ. ಅದಕ್ಕೆ ಈರುಳ್ಳಿ ಸೇರಿಸಿ ಪಾರದರ್ಶಕ ವಾಗುವವರೆಗೆ ಬಾಡಿಸಿ. ಜತೆಗೆ ಕರಿಬೇವು ಸೇರಿಸಿಕೊಳ್ಳಿ. ಅದಕ್ಕೆ ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಹಾಕಿ ಪರಿಮಳ ಬರುವವರೆಗೆ ಕೈಯಾಡಿಸುತ್ತಿರಿ. ಅರಿಶಿನ, ದನಿಯಾ ಹಾಗೂ ಜೀರಿಗೆ ಪುಡಿ ಉದುರಿಸಿ ಎಲ್ಲವನ್ನೂ ಕಲೆಸಿ. ರುಚಿಗೆ ತಕ್ಕಷ್ಟು ಉಪ್ಪು ಉದುರಿಸಿ ಮತ್ತೆ ಮಿಕ್ಸ್ ಮಾಡಿ. ಈಗ ಅದರಲ್ಲಿ ಮಾಂಸದ ಸಾರವನ್ನು ಮಾತ್ರ ಸುರಿದು, ಕಲೆಸಿ ಬೇಯಲು ಇಡಿ. ಮಸಾಲೆ ಪದಾರ್ಥಗಳೆಲ್ಲ ಬೆಂದು ನಲ್ಲಿ ಮಾಂಸದ ತುಂಡುಗಳಲ್ಲಿ ಸೇರಿಕೊಂಡ ನಂತರ ಪೆಪ್ಪರ್ ಪೌಡರ್ ಹಾಕಿ ಮತ್ತೊಮ್ಮೆ ಮಿಕ್ಸ್ ಮಾಡಿ.

ಕೊನೆ ಹಂತದಲ್ಲಿ ಬೆಂದಿರುವ ನಲ್ಲಿ ಮಟನ್ ಪೀಸ್‌ಗಳನ್ನು ಮಸಾಲೆಯಿಂದ ತೆಗೆದು ಪ್ಯಾನ್ ಮೇಲೆ ಹಾಕಿ, ಕಡಿಮೆ ಉರಿಯಲ್ಲಿ ರೋಸ್ಟ್ ಆಗುವವರೆಗೆ ಹುರಿಯಿರಿ. ಒಮ್ಮೆ ಚೆನ್ನಾಗಿ ರೋಸ್ಟ್ ಆದ ನಂತರ ಸ್ಟೌವ್ ಮೇಲಿಂದ ಇಳಿಸಿ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿದರೆ ಮಟನ್ ನಲ್ಲಿ ಫ್ರೈ ಸವಿಯಲು ರೆಡಿ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

LPG Partner: Indane | Hygiene Partner: EXO | Special Partner: KSDA | Associate Sponsors: PHILIPS, Preethi, SSP HING, Vencobb | Rice Partner: INDIA GATE | Supported by: Sujay

ಕರುನಾಡ ಸವಿಯೂಟಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಲೆಕ್ಕ ಪರಿಶೋಧಕರಿಗೆ ಸಿಎಜಿ ಗಿರೀಶ್ ಚಂದ್ರ ಮುರ್ಮು ಸಲಹೆ

‘ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಿ’

ನವದೆಹಲಿ (ಪಿಟಿಐ): ‘ಲೆಕ್ಕ ಪರಿಶೋಧಕ ಅಧಿಕಾರಿಗಳು ಸಾಂಪ್ರದಾಯಿಕ ವಿಧಾನಕ್ಕೆ ಕಟ್ಟುಬೀಳದೆ ಸೃಜನಾತ್ಮಕವಾಗಿ ಚಿಂತಿಸಬೇಕು. ಕೆಲಸದಲ್ಲಿ ಹೊಸ ತಂತ್ರಗಳನ್ನು ಪ್ರಯೋಗಿಸಬೇಕು. ಆ ಮೂಲಕ ಬದಲಾಗುತ್ತಿರುವ ತಾಂತ್ರಿಕ ಹಾಗೂ ಆಡಳಿತ ವ್ಯವಸ್ಥೆಗೆ ಹೊಂದಿಕೊಳ್ಳಬೇಕು’ ಎಂದು ಮಹಾ ಲೆಕ್ಕ ಪರಿಶೋಧಕ ಮತ್ತು ಮಹಾಲೇಖಪಾಲ (ಸಿಎಜಿ) ಗಿರೀಶ್ ಚಂದ್ರ ಮುರ್ಮು ಸಲಹೆ ನೀಡಿದ್ದಾರೆ.

ಇಲ್ಲಿ ಶನಿವಾರ ನಡೆದ 4ನೇ ಆಡಿಟ್ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮತ್ತಷ್ಟು ಪರಿಣಾಮಕಾರಿಯಾಗಿ ಲೆಕ್ಕ ಪರಿಶೋಧನೆಯನ್ನು ನಿರ್ವಹಿಸಬೇಕಿದೆ. ಹಾಗಾಗಿ, ಅಧಿಕಾರಿಗಳು ಹೊಸ ತಂತ್ರಜ್ಞಾನದ ಅಳವಡಿಕೆಗೆ ಮುಂದಾಗಬೇಕು ಎಂದು ಹೇಳಿದರು.

ಸರ್ಕಾರದ ಆದಾಯ ಮತ್ತು ವೆಚ್ಚಗಳ ಲೆಕ್ಕ ಪರಿಶೋಧನೆಯ ಗುಣಮಟ್ಟ ಸುಧಾರಿಸಬೇಕಿದೆ. ಕೆಲವೊಮ್ಮೆ ಗೋಪ್ಯತೆಯ ಉಲ್ಲಂಘನೆ, ಪಕ್ಷಪಾತ ನಡೆಯುತ್ತವೆ. ಈ ಬೆಳವಣಿಗೆ ಬಗ್ಗೆ ಸಂಸ್ಥೆಗೆ ಅರಿವು ಇದೆ. ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆಯ ಪರಿಣಾಮಕಾರಿ ನಿರ್ವಹಣೆಗಾಗಿ ಹೊಸ ತಂತ್ರಜ್ಞಾನದ ಬಳಕೆಗೆ ಮುಂದಾಗಿದ್ದೇವೆ ಎಂದು ಹೇಳಿದರು.

ಹೊಸ ತಂತ್ರಜ್ಞಾನವು ಕಾರ್ಯ ವಿಧಾನದಲ್ಲಿ ಸೃಜನಶೀಲತೆ ವೃದ್ಧಿಗೆ ನೆರವಾಗುತ್ತದೆ. ಆರ್ಥಿಕತೆ ಹೆಚ್ಚಳ ಹಾಗೂ ಉತ್ತಮ ಕಾರ್ಯ ನಿರ್ವಹಣೆಗೆ ಸಹಕಾರಿಯಾಗಲಿದೆ ಎಂದರು.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಮಾತನಾಡಿ, ‘ಮಹಾ ಲೆಕ್ಕ ಪರಿಶೋಧಕ ಮತ್ತು ಮಹಾಲೇಖಪಾಲ ಸಂಸ್ಥೆಯು ಶ್ರೀಮಂತ ಪರಂಪರೆಯನ್ನು ಹೊಂದಿದೆ. ತನ್ನ ವಿಶ್ವಾಸಾರ್ಹತೆಯಿಂದಾಗಿ ಜಾಗತಿಕ ಮಟ್ಟದಲ್ಲಿ ಒಳ್ಳೆಯ ಹೆಸರು ಪಡೆದಿದೆ’ ಎಂದರು.

ಸಂಸ್ಥೆಯು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಸೇರಿ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿದೆ. ಇದರಿಂದ ಲೆಕ್ಕ ಪರಿಶೋಧನೆ ಪ್ರಕ್ರಿಯೆಗಳು ಸದೃಢಗೊಳ್ಳಲಿವೆ. ಜೊತೆಗೆ, ಕೆಲಸದಲ್ಲಿ ಪಾರದರ್ಶಕತೆ ಹೆಚ್ಚಿಸಿದೆ ಎಂದು ಶ್ಲಾಘಿಸಿದರು.

ಸಂಸದೀಯ ಸಮಿತಿಗಳ ಅಧ್ಯಕ್ಷರಾಗಿರುವ ವಿಪಕ್ಷಗಳ ಹಿರಿಯ ಸದಸ್ಯರು ಸಿಎಜಿ ವರದಿಗಳನ್ನು ಕೂಲಂಕಷವಾಗಿ ಪರಿಶೀಲಿಸುತ್ತಾರೆ. ಬಳಿಕ ಅಧಿವೇಶನಗಳಲ್ಲಿ ಚರ್ಚಿಸುತ್ತಾರೆ. ಇದು ಆರ್ಥಿಕ ಹೊಣೆಗಾರಿಕೆಯನ್ನು ಹೆಚ್ಚಿಸಲು ನೆರವಾಗಲಿದೆ ಎಂದರು.

ನವದೆಹಲಿಯಲ್ಲಿ ಶನಿವಾರ ನಡೆದ 4ನೇ ಆಡಿಟ್ ದಿನದ ಕಾರ್ಯಕ್ರಮದಲ್ಲಿ ಸಿಎಜಿ ಗಿರೀಶ್ ಚಂದ್ರ ಮುರ್ಮು ಅವರು, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಅಭಿನಂದಿಸಿದರು ಪಿಟಿಐ ಚಿತ್ರ

ಬೆಳಗಾವಿ: ಮಳೆಯಿಂದ ಫಸಲು ಹಾನಿ– ಮಾರುಕಟ್ಟೆಗೆ ಆವಕ ಇಳಿಕೆ

ಸಿಹಿ ಗೆಣಸಿಗೆ ಬಂಪರ್ ಬೆಲೆ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಇಳುವರಿ ಕುಸಿತದಿಂದಾಗಿ ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ (ಎಪಿಎಂಸಿ) ಸಿಹಿ ಗೆಣಸಿನ ಆವಕ ಪ್ರಮಾಣದಲ್ಲಿ ಇಳಿಕೆಯಾಗಿರುವುದರಿಂದ ಧಾರಣೆ ಏರಿಕೆಯಾಗಿದೆ.

ಶನಿವಾರ ಸಿಹಿ ಗೆಣಸು ಕ್ವಿಂಟಲ್‌ಗೆ ₹1,500ರಿಂದ ₹2 ಸಾವಿರಕ್ಕೆ ಮಾರಾಟವಾಗಿದೆ. ಗುಣಮಟ್ಟದ ಗೆಣಸಿಗೆ ಕ್ವಿಂಟಲ್‌ಗೆ ₹2,300 ದರ ಸಿಕ್ಕಿದೆ. ಕಳೆದ ವರ್ಷದ ನವೆಂಬರ್‌ನಲ್ಲಿ ಕ್ವಿಂಟಲ್‌ಗೆ ₹500ರಿಂದ ₹1,200 ದರಕ್ಕೆ ಮಾರಾಟವಾಗಿತ್ತು.

ಬೆಳಗಾವಿ ತಾಲ್ಲೂಕಿನ ಪಶ್ಚಿಮ ಭಾಗ ಮತ್ತು ಮಹಾರಾಷ್ಟ್ರದ ಚಂದಗಢ ತಾಲ್ಲೂಕಿನಲ್ಲಿ ಹೆಚ್ಚು ಗೆಣಸು ಬೆಳೆಯಲಾಗುತ್ತದೆ. ಈ ಗೆಣಸನ್ನು ದೆಹಲಿ, ಗೋವಾ, ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರಕ್ಕೆ ಪೂರೈಸಲಾಗುತ್ತದೆ.

2023-24ರಲ್ಲಿ ಬೆಳಗಾವಿ ಎಪಿಎಂಸಿಗೆ 3,68,396 ಕ್ವಿಂಟಲ್ ಗೆಣಸು ಆವಕವಾಗಿತ್ತು. ಕ್ವಿಂಟಲ್‌ಗೆ ₹300ರಿಂದ ₹3,900 ದರದಲ್ಲಿ ಮಾರಾಟವಾಗಿತ್ತು. ಇದೇ ವರ್ಷದ ಏಪ್ರಿಲ್ 1ರಿಂದ ಅಕ್ಟೋಬರ್ 31ರ ವರೆಗೆ 40,064 ಕ್ವಿಂಟಲ್ ಆವಕವಾಗಿದ್ದು, ₹700ರಿಂದ ₹4,200 ದರದಲ್ಲಿ ಮಾರಾಟವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಈ ಬಾರಿ ದರ ಹೆಚ್ಚಿರುವುದು ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿಸಿದೆ.

‘ಸತತ ಮಳೆಯಿಂದ ಗೆಣಸಿನ ಇಳುವರಿ ಕುಸಿದಿದೆ. ಮತ್ತೊಂದೆಡೆ ಉತ್ತರ ಭಾರತದ ರಾಜ್ಯಗಳಲ್ಲಿ ಗೆಣಸಿಗೆ ಬೇಡಿಕೆ ಹೆಚ್ಚಿದೆ. ಅದಕ್ಕೆ ತಕ್ಕಂತೆ ಸರಕು ಮಾರುಕಟ್ಟೆಗೆ ಬಾರದ್ದರಿಂದ ದರ ಹೆಚ್ಚಿದೆ’ ಎಂದು ವ್ಯಾಪಾರಿ ಅಶೋಕ ಗಾವಡಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ನವೆಂಬರ್ 13ರಂದು ಕ್ವಿಂಟಲ್‌ಗೆ ₹2,800ರವರೆಗೆ ಮಾರಾಟವಾಗಿತ್ತು. ಪ್ರತಿದಿನ ದರದಲ್ಲಿ ವ್ಯತ್ಯಾಸ ಆಗುತ್ತದೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ದರ ಏರಿಕೆಯಾಗಬಹುದು’ ಎಂದು ಹೇಳಿದರು.

‘4 ಎಕರೆಯಲ್ಲಿ ಗೆಣಸು ಬೆಳೆದಿದ್ದೇನೆ. ಪ್ರತಿ ಎಕರೆಯಲ್ಲಿ 120 ಚೀಲ (ತಲಾ 60 ಕೆ.ಜಿ) ಇಳುವರಿ ಬರುತ್ತಿತ್ತು. ಈ ಬಾರಿ 70ರಿಂದ 80 ಚೀಲ ಇಳುವರಿ ಬಂದಿದೆ. ಸತತ ಮಳೆಯಿಂದ ಬೆಳೆ ಹಾನಿಯಾಗಿದೆ. ಆದರೆ, ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಸಿಗುತ್ತಿರುವುದು ಸಮಾಧಾನ ತಂದಿದೆ’ ಎಂದು ಬೆಳಗಾವಿ ತಾಲ್ಲೂಕಿನ ಬಡಸ (ಇನಾಮು) ಗ್ರಾಮದ ರೈತ ರಾಮು ಪಾಟೀಲ ತಿಳಿಸಿದರು.

ಉತ್ತರ ಭಾರತದಲ್ಲಿ ನಮ್ಮ ಭಾಗದ ಗೆಣಸಿಗೆ ಬೇಡಿಕೆ ಹೆಚ್ಚಿದೆ. ಕೆಲವೊಮ್ಮೆ ಕ್ವಿಂಟಲ್‌ಗೆ ₹3 ಸಾವಿರದವರೆಗೂ ಮಾರಾಟವಾಗುತ್ತದೆ

ಕೆ.ಎಚ್. ಗುರುಪ್ರಸಾದ ಕಾರ್ಯದರ್ಶಿ, ಎಪಿಎಂಸಿ, ಬೆಳಗಾವಿ

ಬೆಳಗಾವಿಯ ಕೃಷಿ ಉತ್ಪನ್ನ ಮಾರುಕಟ್ಟೆಗೆ ರೈತರು ಮಾರಾಟಕ್ಕೆ ತಂದಿರುವ ಸಿಹಿ ಗೆಣಸು ಪ್ರಜಾವಾಣಿ ಚಿತ್ರ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಪುಣ್ಯಸ್ಮರಣೆ

ಶ್ರೀ. ಬಿ.ವಿ. ಪದ್ಮನಾಭಯ್ಯ

(ಸ್ಟ್ಯಾಂಪ್ ವೆಂಡರ್ ಮತ್ತು ಪತ್ರ ಬರಹಗಾರರು)

ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಚ್ಚ ಹಸಿರು. ನಿಮ್ಮ ನಡೆ, ನುಡಿ ಮತ್ತು ತತ್ವಗಳು ನಮಗೆ ದಾರಿ ದೀಪ ಹಾಗೂ ಎಂದೆಂದಿಗೂ ಆದರ್ಶಪ್ರಾಯ.

ಪತ್ನಿ ಶ್ರೀಮತಿ ಶಾಂತಪದ್ಮನಾಭ ಮತ್ತು ಮಕ್ಕಳು.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹410-604

ದ್ವಿತಳಿ (ಬಿ.ವಿ) ₹245-718

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹178

ಆರ್‌ಎಸ್‌ಎಸ್-5 ₹172

ಗುಡ್ ಲಾಟ್ ₹168

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ಜಿಇಎಂ: ₹3 ಲಕ್ಷ ಕೋಟಿ ವಹಿವಾಟು

ನವದೆಹಲಿ (ಪಿಟಿಐ): ಸರ್ಕಾರದ ಇ-ಮಾರುಕಟ್ಟೆ ಪೋರ್ಟಲ್ ಆದ ‘ಜಿಇಎಂ’ನಡಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇಲ್ಲಿಯವರೆಗೆ ₹3 ಲಕ್ಷ ಕೋಟಿ ವಹಿವಾಟು ನಡೆದಿದೆ.

ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳಿಂದ ಹೆಚ್ಚಿನ ಖರೀದಿ ನಡೆದಿರುವುದರಿಂದ ಇಷ್ಟು ಮೊತ್ತದ ವಹಿವಾಟು ನಡೆದಿದೆ. 2023–24ನೇ ಆರ್ಥಿಕ ವರ್ಷದಲ್ಲಿ ₹4 ಲಕ್ಷ ಕೋಟಿ ವಹಿವಾಟು ನಡೆದಿತ್ತು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

2016ರ ಆಗಸ್ಟ್ 9ರಂದು ಈ ಪೋರ್ಟಲ್ ಕಾರ್ಯಾರಂಭ ಮಾಡಿತು. ಸರ್ಕಾರಿ ಕಚೇರಿಗಳು, ಸಾರ್ವಜನಿಕ ವಲಯದ ಉದ್ದಿಮೆಗಳು, ಸರಕು ಮತ್ತು ಸೇವೆ ಪಡೆಯಲು ಈ ಆನ್‌ಲೈನ್ ವೇದಿಕೆಯು ನೆರವಾಗಲಿದೆ.

ಈ ವೇದಿಕೆಯಡಿ ವಹಿವಾಟು ನಡೆಸುವುದಕ್ಕೆ ಸಂಬಂಧಿಸಿದಂತೆ ಅಕ್ಟೋಬರ್‌ನಲ್ಲಿ ಜಿಇಎಂ ಜೊತೆಗೆ ಸಿಕ್ಕಿಂ ರಾಜ್ಯವು ಒಡಂಬಡಿಕೆ ಮಾಡಿಕೊಂಡಿದೆ.

ಹಾಗಾಗಿ, ದೇಶದ ಎಲ್ಲಾ ರಾಜ್ಯಗಳು ಈ ವೇದಿಕೆಯಡಿ ಬಂದಿವೆ ಎಂದು ತಿಳಿಸಿದೆ.

ಸರ್ಕಾರದ ದೊಡ್ಡ ಏಜೆನ್ಸಿಗಳನ್ನು ಹೊರತುಪಡಿಸಿ ಪಂಚಾಯಿತಿಗಳು ಮತ್ತು ಸಹಕಾರ ಸಂಘಗಳು ಈ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿವೆ. ಅಕ್ಟೋಬರ್‌ನಲ್ಲಿ ₹30,264 ಕೋಟಿ ವಹಿವಾಟು ನಡೆದಿದೆ ಎಂದು ವಿವರಿಸಿದೆ.

9.7 ಲಕ್ಷ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು ಈ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿವೆ. ಒಟ್ಟಾರೆ ₹4.9 ಲಕ್ಷ ಕೋಟಿ ಆರ್ಡರ್‌ಗಳನ್ನು ಪಡೆದಿವೆ ಎಂದು ಹೇಳಿದೆ.

ರ‍್ಯಾಪಿಡೊಗೆ ₹370 ಕೋಟಿ ನಷ್ಟ

ನವದೆಹಲಿ (ಪಿಟಿಐ): ಬೆಂಗಳೂರು ಮೂಲದ ರ‍್ಯಾಪಿಡೊ ಕಂಪನಿಯು 2023–24ನೇ ಆರ್ಥಿಕ ವರ್ಷದಲ್ಲಿ ₹370 ಕೋಟಿ ನಷ್ಟ ಅನುಭವಿಸಿದೆ.

2022-23ರಲ್ಲಿ ₹675 ಕೋಟಿ ಹಾಗೂ 2021–22ರಲ್ಲಿ ₹440 ಕೋಟಿ ನಷ್ಟವಾಗಿತ್ತು. ಸತತ ಮೂರು ವರ್ಷದಿಂದ ಕಂಪನಿಯು ನಷ್ಟದ ಹಾದಿಯಲ್ಲಿದೆ ಎಂದು ಪ್ರಕಟಣೆ ತಿಳಿಸಿದೆ.

2022–23ರಲ್ಲಿ ಕಂಪನಿಯು ₹443 ಕೋಟಿ ವರಮಾನ ಗಳಿಸಿತ್ತು. 2023–24ರಲ್ಲಿ ₹648 ಕೋಟಿ ಗಳಿಸಿದೆ. ಒಟ್ಟಾರೆ ವರಮಾನದಲ್ಲಿ ಶೇ 46.3ರಷ್ಟು ಏರಿಕೆಯಾಗಿದೆ.

ಪ್ರಸಕ್ತ ಆರ್ಥಿಕ ವರ್ಷದ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಕಂಪನಿಯು ₹17 ಕೋಟಿ ನಷ್ಟ ಅನುಭವಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹74 ಕೋಟಿ ನಷ್ಟ ಕಂಡಿತ್ತು.

ವಿದೇಶಿ ಆದಾಯ ಘೋಷಿಸದ ತೆರಿಗೆದಾರರಿಗೆ ಸಂದೇಶ ರವಾನೆ

ನವದೆಹಲಿ (ಪಿಟಿಐ): 2024–25ನೇ ಮೌಲ್ಯಮಾಪನ ವರ್ಷದಲ್ಲಿ ಸಲ್ಲಿಸಿರುವ ಐಟಿಆರ್‌ಗಳಲ್ಲಿ ವಿದೇಶಿ ಆದಾಯ ಅಥವಾ ಸ್ವತ್ತುಗಳ ಬಗ್ಗೆ ಘೋಷಣೆ ಮಾಡದಿರುವ ತೆರಿಗೆದಾರರಿಗೆ ಸಂದೇಶ ರವಾನಿಸಲು ಅಭಿಯಾನ ಆರಂಭಿಸಲಾಗಿದೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯಿಂದ ಈ ಅಭಿಯಾನ ನಡೆಯುತ್ತಿದೆ. ವಿದೇಶದಲ್ಲಿ ಇರುವ ಸ್ವತ್ತುಗಳು ಮತ್ತು ಆದಾಯದ ಮೂಲಗಳ ಬಗ್ಗೆ ಐಟಿಆರ್‌ಗಳಲ್ಲಿ ಘೋಷಿಸಿಲ್ಲ. ಇದಕ್ಕೆ ಸಂಬಂಧಿಸಿದಂತೆ ಈ ಅಭಿಯಾನದಡಿ ಅಗತ್ಯ ನೆರವು ನೀಡುವ ಜೊತೆಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದೆ.

ಈಗಾಗಲೇ, ಐಟಿಆರ್ ಸಲ್ಲಿಸಿರುವ ತೆರಿಗೆದಾರರಿಗೆ ಎಸ್‌ಎಂಎಸ್ ಹಾಗೂ ಇ-ಮೇಲ್ ಮೂಲಕ ಸಂದೇಶ ರವಾನಿಸಲಾಗುತ್ತಿದೆ ಎಂದು ತಿಳಿಸಿದೆ.

ವಿದೇಶಿ ಖಾತೆಗಳು ಅಥವಾ ಸ್ವತ್ತು ಹೊಂದಿರುವುದು ಅಥವಾ ಆದಾಯ ಪಡೆಯುತ್ತಿರುವ ವ್ಯಕ್ತಿಗಳ ಬಗ್ಗೆ ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಒಪ್ಪಂದದ ಅಡಿಯಲ್ಲಿ ಮಾಹಿತಿ ಸಂಗ್ರಹಿಸಲಾಗಿದೆ. ಇದರ ಆಧಾರದ ಮೇಲೆ ಅಂತಹವರಿಗೆ ಸಂದೇಶ ರವಾನಿಸಲಾಗುತ್ತಿದೆ ಎಂದು ಹೇಳಿದೆ.

ಬ್ರಿಟನ್ ಸಂಸದ ಕಾನಿಷ್ಕ ನಾರಾಯಣ್ ಭಾರತಕ್ಕೆ ಭೇಟಿ

ಲಂಡನ್ (ಪಿಟಿಐ): ಬ್ರಿಟನ್‌ನ ಸಂಸತ್ತಿಗೆ ವೇಲ್ಸ್‌ನಿಂದ ಆಯ್ಕೆಯಾಗಿರುವ ಭಾರತ ಮೂಲದ ಮೊದಲಿಗರಾದ ಕಾನಿಷ್ಕ ನಾರಾಯಣ್ ಶೀಘ್ರದಲ್ಲಿಯೇ ದೆಹಲಿಗೆ ಭೇಟಿ ನೀಡಲಿದ್ದಾರೆ.

ಪರಿಸರ ನೀತಿ ಕುರಿತ ವಿಚಾರ ವಿನಿಮಯ ಉದ್ದೇಶದಿಂದ ನಿಯೋಗದ ಭೇಟಿ ಭಾಗವಾಗಿ ಅವರು ವಾರಾಂತ್ಯದಲ್ಲಿ ಭಾರತಕ್ಕೆ ಆಗಮಿಸಲಿದ್ದಾರೆ. ಇವರು ಬಿಹಾರ ಮೂಲದವರು. ಇವರು ಬಾಲಕರಾಗಿದ್ದಾಗಲೇ ಇವರ ಕುಟುಂಬ ವಲಸೆ ಹೋಗಿತ್ತು.

‘ವೈಯಕ್ತಿಕ ಮತ್ತು ವೃತ್ತಿಯಿಂದ ಭಾರತದ ಜೊತೆಗೆ ಬಾಂಧವ್ಯವಿದೆ. ಭಾರತದ ಸಂಸದರೊಂದಿಗೆ ಪರಿಸರ ನೀತಿ ಕುರಿತ ವಿಚಾರ ವಿನಿಮಯಕ್ಕೆ ಉತ್ಸುಕನಾಗಿದ್ದೇನೆ’ ಎಂದು ಹೇಳಿದ್ದಾರೆ.

ಆಯಕಟ್ಟಿನ ಸ್ಥಾನಗಳಿಗೆ ಆಪ್ತರ ನೇಮಕ

ಆಡಳಿತ ಯಂತ್ರ ಸಜ್ಜುಗೊಳಿಸುತ್ತಿರುವ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎ.ಪಿ): ಅಮೆರಿಕದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಡೊನಾಲ್ಡ್ ಟ್ರಂಪ್, ಆಡಳಿತ ಯಂತ್ರವನ್ನು ಸಜ್ಜುಗೊಳಿಸುವ ಪ್ರಕ್ರಿಯೆಯನ್ನು ಚುರುಕುಗೊಳಿಸಿದ್ದು, ಮತ್ತಷ್ಟು ಆಯಕಟ್ಟಿನ ಸ್ಥಳಗಳಿಗೆ ನೇಮಕವನ್ನು ಮಾಡಿದ್ದಾರೆ.

ಶ್ವೇತಭವನದ ಸಂವಹನ ನಿರ್ದೇಶಕರಾಗಿ ಸ್ಟೀವನ್ ಚೆಯಂಗ್, ಆಪ್ತ ಕಚೇರಿ ಉಸ್ತುವಾರಿಯಾಗಿ ಸೆರ್ಗಿಯೊ ಗೊರ್ ಅವರನ್ನು ನೇಮಿಸಲಾಗಿದೆ ಎಂದೂ ಶನಿವಾರ ಪ್ರಕಟಿಸಿದ್ದಾರೆ.

ಈ ಇಬ್ಬರು 2016ನೇ ಸಾಲಿನ ಚುನಾವಣಾ ಪ್ರಚಾರದ ಅವಧಿಯಿಂದಲೂ ಟ್ರಂಪ್ ಅವರಿಗೆ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಂವಹನ ಹೊಣೆ ಮತ್ತು ಅಧ್ಯಕ್ಷೀಯ ಕಚೇರಿಯ ಸಿಬ್ಬಂದಿ ನೇಮಕದಲ್ಲಿ ಅವರ ಆಪ್ತ ಕಚೇರಿಯ ಕಾರ್ಯ ಪ್ರಮುಖವಾದುದಾಗಿದೆ.

‘ಈ ಇಬ್ಬರೂ ನಂಬಿಕಸ್ಥ ಸಲಹೆಗಾರರು. ಶ್ವೇತಭವನದಲ್ಲಿ ಈ ಇಬ್ಬರನ್ನು ಹೊಂದಲು ನನಗೆ ಖುಷಿಯಾಗುತ್ತದೆ’ ಎಂದು ಟ್ರಂಪ್ ಈ ಕುರಿತ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಡೊನಾಲ್ಡ್ ಟ್ರಂಪ್

ಶ್ವೇತಭವನದ ಪತ್ರಿಕಾ ಕಾರ್ಯದರ್ಶಿಯಾಗಿ, 27 ವರ್ಷದ ಕರೋಲಿನ್ ಲೀವಿಟ್ ಅವರನ್ನು ನೇಮಿಸಿದ್ದಾರೆ. ಟ್ರಂಪ್ ಅಧಿಕಾರ ಸ್ವೀಕರಿಸಲಿರುವ ಜನವರಿ 20ರಿಂದಲೇ ಇವರ ಕಾರ್ಯವೂ ಆರಂಭವಾಗಲಿದೆ.

ಟ್ರಂಪ್ ಅವರ ಪ್ರಚಾರ ಕುರಿತ ರಾಷ್ಟ್ರೀಯ ಪತ್ರಿಕಾ ಕಾರ್ಯದರ್ಶಿಯಾಗಿದ್ದ ಕರೋಲಿನ್, ಟ್ರಂಪ್ ಹಿಂದೆ ಅಧ್ಯಕ್ಷರಾಗಿದ್ದಾಗ ಸಹಾಯಕ ಪತ್ರಿಕಾ ಕಾರ್ಯದರ್ಶಿಯಾಗಿದ್ದರು.

‘ಚುನಾವಣಾ ಪ್ರಚಾರದಲ್ಲಿ ಲೀವಿಟ್ ಗಮನಾರ್ಹ ಕೆಲಸ ಮಾಡಿದ್ದಾರೆ. ಸಂವಹನವನ್ನು ಅವರು ಪರಿಣಾಮಕಾರಿಯಾಗಿ ನಿಭಾಯಿಸುತ್ತಾರೆ’ ಎಂದು ಟ್ರಂಪ್ ಅವರು ಶ್ಲಾಘಿಸಿದ್ದಾರೆ.

ಒಳಾಡಳಿತ ಇಲಾಖೆ, ಇಂಧನ ಮಂಡಳಿ ಮುಖ್ಯಸ್ಥರಾಗಿ ಡೌಗ್ ಬರ್ಗಮ್

ವಾಷಿಂಗ್ಟನ್ (ಎ.ಪಿ): ಒಳಾಡಳಿತ ಇಲಾಖೆಯ ಮುಖ್ಯಸ್ಥರಾಗಿ ನಾರ್ಥ್ ಡಕೋಟದ ಗವರ್ನರ್ ಡೌಗ್ ಬರ್ಗಮ್ ಅವರನ್ನು ಟ್ರಂಪ್ ನೇಮಿಸಿದ್ದಾರೆ. ಜೊತೆಗೆ ನೂತನ ರಾಷ್ಟ್ರೀಯ ಇಂಧನ ಮಂಡಳಿ ಮುಖ್ಯಸ್ಥರಾಗಿಯೂ ಬರ್ಗಮ್ ಕಾರ್ಯ ನಿರ್ವಹಿಸುವರು.

ಇಂಧನ ಉತ್ಪಾದನೆ, ವಿತರಣೆ, ನಿಯಂತ್ರಣ ಸರಬರಾಜು ವ್ಯವಸ್ಥೆಯ ಒಟ್ಟು ಮೇಲುಸ್ತುವಾರಿ ನಿಭಾಯಿಸುವರು. ರಾಷ್ಟ್ರೀಯ ಇಂಧನ ಮಂಡಳಿ ಅಧ್ಯಕ್ಷರಾಗಿ ಅವರು ರಾಷ್ಟ್ರೀಯ ಭದ್ರತಾ ಮಂಡಳಿ ಸದಸ್ಯರಾಗಿಯೂ ಇರುತ್ತಾರೆ ಎಂದು ಟ್ರಂಪ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರಕ್ಷಣಾ ಮುಖ್ಯಸ್ಥರ ನೇಮಕಕ್ಕೆ ಆಕ್ಷೇಪ

ವಾಷಿಂಗ್ಟನ್ (ಎ.ಪಿ): ರಕ್ಷಣಾ ಇಲಾಖೆಯ ಮುಖ್ಯಸ್ಥರಾಗಿ ಅಮೆರಿಕದ ಆರ್ಮಿ ನ್ಯಾಷನಲ್ ಗಾರ್ಡ್‌ನ ಮಾಜಿ ಸದಸ್ಯ ಪೀಟ್ ಹೆಗ್‌ಸೆತ್ ಆಯ್ಕೆಗೆ ಆಕ್ಷೇಪ ವ್ಯಕ್ತವಾಗಿದೆ. ಹೆಗ್‌ಸೆತ್ ತಮ್ಮ ತೋಳಿನಲ್ಲಿ ಎಕ್ಸ್ ಗುರುತಿನ ಹಚ್ಚೆ ಹಾಕಿಸಿಕೊಂಡಿದ್ದಾರೆ. ಇದು, ಬಿಳಿಯ ಮೂಲಭೂತವಾದಿಗಳ ಸಮೂಹದ ಸೂಚಕ. ಅವರು ‘ಆಡಳಿತದೊಳಗಿನ ತೊಡಕು’ ಆಗಲಿದ್ದಾರೆ ಎಂದು ಆಕ್ಷೇಪಿಸಲಾಗಿದೆ. ಆರ್ಮಿ ನ್ಯಾಷನಲ್ ಗಾರ್ಡ್‌ನ ಮಾಜಿ ಭದ್ರತಾ ವ್ಯವಸ್ಥಾಪಕರು ಆಕ್ಷೇಪ ಕುರಿತ ಇ–ಮೇಲ್ ಅನ್ನು ಸುದ್ದಿಸಂಸ್ಥೆಗೆ ಕಳುಹಿಸಿದ್ದಾರೆ. ಟ್ರಂಪ್ ಪರವಾದ ತಂಡ ಇದಕ್ಕೆ ಪ್ರತಿಕ್ರಿಯಿಸಿಲ್ಲ.

ಶ್ರೀಲಂಕಾ: ನಾಳೆ ಹೊಸ ಪ್ರಧಾನಿ ಸಚಿವರ ನೇಮಕ

ಕೊಲಂಬೊ (ಪಿಟಿಐ): ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ಡಿಸ್ಸಾನಾಯಕೆ ಅವರು ಸೋಮವಾರ (ನ.18) ನೂತನ ಪ್ರಧಾನಿ, ಸಚಿವರನ್ನು ನೇಮಕ ಮಾಡಲಿದ್ದಾರೆ.

ಡಿಸ್ಸಾನಾಯಕೆ ನೇತೃತ್ವದ ನ್ಯಾಷನಲ್ ಪೀಪಲ್ಸ್ ಪವರ್ (ಎನ್‌ಪಿಪಿ) ಪಕ್ಷವು ಸಂಸತ್‌ಗೆ ಈಚೆಗೆ ನಡೆದ ಚುನಾವಣೆಯಲ್ಲಿ ಭರ್ಜರಿ ಬಹುಮತ ಗಳಿಸಿತ್ತು. ಸಂಸತ್ತಿನ 225 ಸ್ಥಾನಗಳಲ್ಲಿ 159 ಸ್ಥಾನಗಳನ್ನು ಎನ್‌ಪಿಪಿ ಗೆದ್ದುಕೊಂಡಿದೆ. ತಮಿಳರು ಪ್ರಾಬಲ್ಯ ಹೊಂದಿರುವ ಜಾಫ್ನಾದಲ್ಲಿಯೂ ಎನ್‌ಪಿಪಿ ಅಭೂತಪೂರ್ವ ಗೆಲುವು ಪಡೆದಿತ್ತು.

‘ಹೊಸ ಸಂಪುಟವನ್ನು ಸೋಮವಾರ ನೇಮಿಸಲಿದ್ದೇವೆ. ಸಂಪುಟ ಸದಸ್ಯರ ಬಲ ಗರಿಷ್ಠ 25 ಆಗಿರಲಿದೆ’ ಎಂದು ಎನ್‌ಪಿಪಿ ಹಿರಿಯ ವಕ್ತಾರ ಟಿಲ್ವಿನ್ ಸಿಲ್ವಾ ಮಾಹಿತಿ ನೀಡಿದರು.

ಗರಿಷ್ಠ 30 ಸಚಿವರ ನೇಮಕಕ್ಕೆ ಶ್ರೀಲಂಕಾ ಸಂವಿಧಾನದಲ್ಲಿ ಅವಕಾಶವಿದೆ. ಸಹಾಯಕ ಸಚಿವರನ್ನು ಸೇರಿಸಿದರೆ, 40ಕ್ಕೂ ಹೆಚ್ಚು ಸದಸ್ಯರನ್ನು ನೇಮಿಸಬಹುದು.

ತಾಪಮಾನ ಬದಲಾವಣೆ ತಡೆಗೆ ಸಲಹೆ

ಬಾಕು (ಪಿಟಿಐ): ‘ಹವಾಮಾನ ಬದಲಾವಣೆ ತಡೆಗೆ ಕೈಗೊಂಡಿರುವ ನಿರ್ಧಾರಗಳು ‘ಜಿ–20 ರಾಷ್ಟ್ರಗಳ ಆರ್ಥಿಕತೆ ಸ್ವಯಂರಕ್ಷಣೆ’ ಕ್ರಮಗಳೇ ಆಗಿವೆ’ ಎಂದು ವಿಶ್ವಸಂಸ್ಥೆಯ ಹವಾಮಾನ ಬದಲಾವಣೆಯ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಸೈಮನ್ ಸ್ಟಿಯೆಲ್ ಪ್ರತಿಪಾದಿಸಿದರು.

‘ಹವಾಮಾನ ಆಧರಿತ ಆರ್ಥಿಕ ಹಾನಿ ತಡೆಯಲು ಮಾಲಿನ್ಯಕ್ಕೆ ತ್ವರಿತ ನಿಯಂತ್ರಣ ಹೇರಬೇಕು’ ಎಂದು ಈ ವೇಳೆ ಜಿ–20 ರಾಷ್ಟ್ರಗಳ ಮುಖ್ಯಸ್ಥರಿಗೆ ಅವರು ಆಗ್ರಹಿಸಿದ್ದಾರೆ.

ತಾಪಮಾನ ಬದಲಾವಣೆ ಕುರಿತಂತೆ ಅಜೈರ್‌ಬೈಜಾನ್‌ನ ರಾಜಧಾನಿ ಬಾಕುವಿನಲ್ಲಿ ನಡೆದ ‘ಸಿಒಪಿ29’ ಶೃಂಗಸಭೆಯಲ್ಲಿ ಅವರು ಈ ವಿಷಯ ಪ್ರಸ್ತಾಪಿಸಿದರು.

‘ಹವಾಮಾನ ಬದಲಾವಣೆ ತಡೆಗೆ ಜಿ–20 ರಾಷ್ಟ್ರಗಳೂ ಪರಿಹಾರ ಕಂಡುಕೊಳ್ಳಬೇಕು. ಒಂದು ರಾಷ್ಟ್ರ, ಕೆಲವೇ ರಾಷ್ಟ್ರಗಳಿಂದ ಮಾತ್ರ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಸಾಧ್ಯವಿಲ್ಲ. ಹೀಗಾಗಿ, ಮುಂದಿನ ವಾರ ರಿಯೊದಲ್ಲಿ ನಡೆಯುವ ಶೃಂಗ ಸಭೆಯಲ್ಲಿ ಜಾಗತಿಕ ತಾಪಮಾನ ಬದಲಾವಣೆ ವಿಷಯವೇ ಮೊದಲ ಆದ್ಯತೆಯಾಗಿರ ಬೇಕು’ ಎಂದು ಒತ್ತಿ ಹೇಳಿದರು.

ನವೆಂಬರ್ 18–19ರಂದು ಜಿ–20 ಸಮಾವೇಶವು ಬ್ರೆಜಿಲ್‌ನ ರಿಯೊ ಡ– ಜನೈರೊದಲ್ಲಿ ನಡೆಯಲಿದೆ. ಇದರಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಹಾಗೂ ಅಮೆರಿಕ ಅಧ್ಯಕ್ಷ ಜೋ ಬೈಡನ್ ಸೇರಿ ಹಲವು ಪ್ರಮುಖರು ಭಾಗವಹಿಸುವರು.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಶ್ರೀಮಂತ ರಾಷ್ಟ್ರಗಳು ಹವಾಮಾನ ಆರ್ಥಿಕ ನೆರವು ಒದಗಿಸಬೇಕು ಎಂದು ಒತ್ತಾಯಿಸಿ ಅಜೈರ್‌ಬೈಜಾನ್‌ನ ರಾಜಧಾನಿ ಬಾಕುವಿನಲ್ಲಿ ‘ಸಿಒಪಿ29’ ಶೃಂಗಸಭೆ ಆವರಣದಲ್ಲಿ ಪರಿಸರ ಹೋರಾಟಗಾರರು ಪ್ರತಿಭಟಿಸಿದರು ಎಎಫ್‌ಪಿ ಚಿತ್ರ

ಡಿಒಜಿಇ ಉಸ್ತುವಾರಿ ವಿವೇಕ್ ರಾಮಸ್ವಾಮಿ ಸುಳಿವು

ಬೃಹತ್ ಪ್ರಮಾಣದಲ್ಲಿ ಉದ್ಯೋಗ ಕಡಿತ?

ವಾಷಿಂಗ್ಟನ್ (ಪಿಟಿಐ): ಅಮೆರಿಕದಲ್ಲಿ ಸರ್ಕಾರಿ ಉದ್ಯೋಗಗಳಲ್ಲಿ ಬೃಹತ್ ಪ್ರಮಾಣದಲ್ಲಿ ಕಡಿತಗೊಳಿಸುವ ಸುಳಿವನ್ನು ಕಾರ್ಯದಕ್ಷತಾ ಇಲಾಖೆ (ಡಿಒಜಿಇ) ಉಸ್ತುವಾರಿಯಾಗಿ ನೇಮಕ ಆಗಿರುವ ಭಾರತ ಮೂಲದ ಉದ್ಯಮಿ ವಿವೇಕ್ ರಾಮಸ್ವಾಮಿ ನೀಡಿದ್ದಾರೆ.

ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿವೇಕ್ ಜೊತೆಗೆ ಟೆಸ್ಲಾ ಮಾಲೀಕ ಇಲಾನ್ ಮಸ್ಕ್ ಅವರನ್ನೂ ಡಿಒಜಿಇ ಉಸ್ತುವಾರಿಯಾಗಿ ನೇಮಿಸಿದ್ದಾರೆ.

‘ಮಸ್ಕ್ ಹಾಗೂ ನಾನು ಡಿಒಜಿಇ ಜವಾಬ್ದಾರಿ ವಹಿಸಿಕೊಂಡ ನಂತರ, ಸರ್ಕಾರದಲ್ಲಿ ನೇರವಾಗಿ ಆಯ್ಕೆಯಾಗದ ನೌಕರರನ್ನುಸಾಮೂಹಿಕವಾಗಿತೆಗೆಯಲುಕ್ರಮ ಕೈಗೊಳ್ಳುತ್ತೇವೆ. ಇದು ನಾವು ದೇಶ ರಕ್ಷಣೆಗೆ ಕೈಗೊಳ್ಳುವ ಕ್ರಮವಾಗಿದೆ’ ಎಂದು ತಿಳಿಸಿದ್ದಾರೆ.

ಫ್ಲಾರಿಡಾದ ಮರ್–ಅ– ಲಾಗೊದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು,‘ನಾಲ್ಕು ವರ್ಷಗಳಲ್ಲಿ ದೇಶ ಸಾಕಷ್ಟು ಹಿನ್ನಡೆ ಅನುಭವಿಸಿದೆ. ನಾವೆಲ್ಲರೂ ಇದರ ವಿರುದ್ಧ ಹೋರಾಡಬೇಕಿದೆ. ದೇಶವು ಹಿನ್ನಡೆ ಅನುಭವಿಸುವಾಗ ಸುಮ್ಮನಿರಲು ಸಾಧ್ಯವಿಲ್ಲ. ದೇಶಕ್ಕೆ ಮುಂದಿನ ದಿನಗಳು ಒಳ್ಳೆಯ ದಿನವಾಗಿರಲಿವೆ’ ಎಂದು ರಾಮಸ್ವಾಮಿ ಪ್ರತಿಪಾದಿಸಿದರು.

ಕೆಲಸದ ಪ್ರಗತಿ– ನೇರಪ್ರಸಾರ: ‘ಅಮೆರಿಕ ಸರ್ಕಾರದ ಕಾರ್ಯದಕ್ಷತಾ ಇಲಾಖೆಯಲ್ಲಿ ಸಾಧಿಸಿದ ಪ್ರಗತಿಯ ಕುರಿತಂತೆ ಅಮೆರಿಕದ ಜನರಿಗೆ ಮಾಹಿತಿ ನೀಡುವ ದೃಷ್ಟಿಯಿಂದ ಪ್ರತಿ ವಾರವೂ ನೇರ ಪ್ರಸಾರ ಮಾಡಲಾಗುವುದು’ ಎಂದರು.

1,440 ಪ್ರಾಚೀನ ವಸ್ತುಗಳು ಭಾರತದ ವಶಕ್ಕೆ

ನ್ಯೂಯಾರ್ಕ್ (ಪಿಟಿಐ): ಭಾರತದ ವಿವಿಧೆಡೆ ವಿವಿಧ ಸಂದರ್ಭಗಳಲ್ಲಿ ದರೋಡೆ, ಲೂಟಿ ಮಾಡಿ ಕಳ್ಳಸಾಗಣೆ ಮಾಡಲಾಗಿದ್ದ ಅಂದಾಜು ₹84.47 ಕೋಟಿ ಮೌಲ್ಯದ 1,440 ಪ್ರಾಚೀನ ವಸ್ತುಗಳನ್ನು ಅಮೆರಿಕ ಶನಿವಾರ ಭಾರತದ ವಶಕ್ಕೆ ಒಪ್ಪಿಸಿದೆ.

1980ರಲ್ಲಿ ಮಧ್ಯಪ್ರದೇಶದಿಂದ ದರೋಡೆ ಮಾಡಲಾಗಿದ್ದ ಕಲ್ಲಿನ ಮೂರ್ತಿ, 1960ರ ದಶಕದಲ್ಲಿ ರಾಜಸ್ಥಾನದಲ್ಲಿ ಲೂಟಿ ಮಾಡಿದ್ದ ಹಸಿರು ಪದರ ಶಿಲೆ ಇದರಲ್ಲಿ ಸೇರಿವೆ.

ಅಲ್ಲದೆ, ದೇಶದಿಂದ ಲೂಟಿ ಮಾಡಲಾದ 600ಕ್ಕೂ ಅಧಿಕ ಪ್ರಾಚೀನ ವಸ್ತುಗಳನ್ನು ಮುಂದಿನ ತಿಂಗಳಲ್ಲಿ ಮರಳಿ ತರಲು ಕ್ರಮ ಕೈಗೊಳ್ಳಲಾಗಿದೆ.

‘ಭಾರತದ ಕಾನ್ಸುಲೇಟ್ ಜನರಲ್ ಮನೀಶ್ ಕುಲ್ಹರಿ. ನ್ಯೂಯಾರ್ಕ್ ಹೋಮ್ ಲ್ಯಾಂಡ್ ಸೆಕ್ಯುರಿಟಿ ವಿಭಾಗದ ಮೇಲುಸ್ತುವಾರಿ ಅಲೆಕ್ಸಾಂಡ್ರಾ ಡೆ ಅರ್ಮಾಸ್ ಅವರು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಈ ವಸ್ತುಗಳನ್ನು ಭಾರತಕ್ಕೆ ಹಸ್ತಾಂತರಿಸಲಾಯಿತು’ ಎಂದು ಮ್ಯಾನ್‌ಹಟನ್ ಡಿಸ್ಟ್ರಿಕ್ಟ್ ಅಟರ್ನಿ ಅಲ್ವಿನ್ ಎಲ್. ಬ್ರಾಗ್ ತಿಳಿಸಿದರು.



‘ಈ ವರ್ಷ ಭಾರತದಿಂದ ಲೂಟಿ ಆಗಿದ್ದ 600 ಪ್ರಾಚೀನ ವಸ್ತುಗಳು ಸೇರಿ ವಿಶ್ವದ 1 ಸಾವಿರಕ್ಕೂ ವಸ್ತುಗಳನ್ನು ವಶಕ್ಕೆ ಪಡೆಯಲಾಗಿತ್ತು. ಮುಂದಿನ ಕೆಲ ತಿಂಗಳಲ್ಲಿ ಆಯಾ ದೇಶಗಳಿಗೆ ಹಸ್ತಾಂತರಿಸಲಾಗುವುದು’ ಎಂದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Out-Station

ತೆಂಗಿನತೋಟದ ಜಮೀನು ಮಾರಾಟಕ್ಕಿದೆ. 2 ಎಕರೆ. ಬೋರೆವೆಲ್ ಇದೆ. 1 ಎಕರೆಗೆ 15 ಲಕ್ಷ. ಸ್ಥಳ: ಹುಲಿಕುಂಟೆ, ಚಳ್ಳಕೆರೆ ತಾಲ್ಲೂಕು. ಚಿತ್ರದುರ್ಗ ಜಿಲ್ಲೆ. ಸಂಪರ್ಕಿಸಿ: 9341231487

ಉದ್ಯೋಗಾವಕಾಶ

Engg/ Production Technical

3 -4 ವರ್ಷಗಳ ಅನುಭವ ಹೊಂದಿರುವ ಡಿಪ್ಲೊಮಾ ಸಿವಿಲ್ ಸೈಟ್ ಎಂಜಿನಿಯರ್ ಬೇಕಾಗಿದ್ದಾರೆ. ವೈಟ್‌ಫೀಲ್ಡ್ ಬೆಂಗಳೂರು, ಸಂಪರ್ಕಿಸಿ: 9845079762, ಇ-ಮೇಲ್ anandk122@outlook.com

Marketing & Sales

WANTED HELLOBABY Baby Products Mumbai Two years Experienced SALES REPRESENTATIVE for Bangalore-city Contact: 9487410204/ 7892235307.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಬೆಂಗಳೂರಿನಲ್ಲಿ ಡ್ರೈ ಕ್ಲೀನಿಂಗ್ ಶೋರೂಮ್‌ಗೆ ಶಾಪ್ ಸಹಾಯಕರು ಬೇಕಾಗಿದ್ದಾರೆ: ಕೆಲಸದ ಸಮಯ: ಬೆಳಗ್ಗೆ 9:30 ರಾತ್ರಿ 9.00 ಗಂಟೆಯವರೆಗೆ (ಸೋಮವಾರ ದಿಂದ ಶನಿವಾರ) ಸಂಬಳ: 15,000/- ಸ್ಥಳ: ಜಯನಗರ, ಹುಳಿಮಾವು ಮತ್ತು ಗಾಂಧಿಬಜಾರ್, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ: 8050666007

ವ್ಯಾಪಾರ

Business Offers

General

CONTRACTORS, AGENTS, BROKERS To Arrange Manpower and Manage 100 Vendors Hawkers, Push-Cart Sellers. Door To Door SALES B2B Line SALESMAN CUM DRIVER For Consumer Goods Bangalore City and Rural. Salary Plus Commission 6366936485

ವೈವಾಹಿಕ

Grooms Wanted

Brahmin

ಬ್ರಾಹ್ಮಣ ವಧು, ವಯಸ್ಸು 28, SSLC ಕಲಿತಿರುವ/ ವಯಸ್ಸು 36, PUC ಕಲಿತಿರುವ ವಧುವಿಗೆ ಸೂಕ್ತವಾದ ವರ ಬೇಕಾಗಿದೆ. 9483385177

ಇತರೆ

For Sale

MODULAR FURNITURE FACTORY
Factory with HOMAG, BIESSE, Machinery & Saw Mill at Mangaluru Contact:
+91 9740695328
+91 9448141688

SANITIZERS, ROOM Fresheners, Harpic Whole Sale Are Available at Reduced Prices Contact: 84538 84766

FOR SALE Bath soap factory with licence contact. 7349067147

ಸಮಾಜಸೇವೆ

Old Age Home

ಆಶೀರ್ವಾದ ಹಿರಿಯರ ಹಾರೈಕೆ ಕೇಂದ್ರ ಜನತಾ ಕಾಲೋನಿ 3ನೇ ಕ್ರಾಸ್ ಗಣಪತಿಹಳ್ಳಿ ದೊಡ್ಡಆಲದಮರ ರೋಡ್ ಬೆಂಗಳೂರು 9945202179 / 9945782935

ಪ್ರವಾಸ

Travel

ಸುಸಜ್ಜಿತ ವ್ಯವಸ್ಥೆಯೊಂದಿಗೆ 22.12.2024 20.01.2025 ರಿಂದ 7 ದಿನಗಳ ತಮಿಳುನಾಡು ಕೇರಳ 23.12.2024, 19.01.2025 ರಿಂದ 7 ದಿನಗಳ ಹೈದರಾಬಾದ್ ಮಂತ್ರಾಲಯ ಶ್ರೀಶೈಲಂ 4-12-2024 28-01-2025 ರಿಂದ 17/11/8 ದಿನಗಳ ರಾಜಸ್ಥಾನ್ ಗುಜರಾತ್ ಪ್ರವಾಸಗಳು. 12.12.2024, 04.02.2025, ರಿಂದ 7/11 ದಿನಗಳ ಸಿಂಗಾಪುರ್. ಮಲೇಶಿಯಾ. 19.12.2024 ರಿಂದ5 ದಿನಗಳ ಥೈಲ್ಯಾಂಡ್. 16.01.2025 ರಿಂದ 10ದಿನಗಳ ವಿಯೆಟ್ನಾಮ್, ಕಾಂಬೋಡಿಯ 23.1.2025, 07.02.2025 ರಿಂದ 6ದಿನಗಳ ದುಬೈ, ಅಬುಧಾಬಿ ಪ್ರವಾಸಗಳು ಮಾರ್ಚ್ ತಿಂಗಳಲ್ಲಿ ಕಾಶಿ,ಗಯಾ ಚಾರ್ ದಾಮ್ ಪ್ರವಾಸಗಳಿಗೆ ಆನಂದ್ ವಿಹಾರಿ ಬೆಂಗಳೂರು 23. 080- 23385837, 8088887677

ಪ್ರವಾಸ 17/12/2024 ಗುಜರಾತ್, ಮಧ್ಯಪ್ರದೇಶ ನಾಲ್ಕು ಜ್ಯೋತಿರ್ಲಿಂಗ ಇತರೆ 30/12/2024 ಕಲ್ಕತ್ತಾ, ಪುರಿ ಜಗನ್ನಾಥ 15/1/2025 ಶಿರಡಿ, ಮೂರು ಜ್ಯೋತಿರ್ಲಿಂಗ ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

2.12.2024 ಜೈಪುರ್, ಪುಷ್ಕರ್, ಜೈಸಲ್‌ಮೇರ್, ಜೋದ್‌ಪುರ್, ಉದಯ್‌ಪುರ್, ಮೌಂಟ್‌ಅಬು ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ), 9845035349, 9482435755

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ @50/-* PER WORDS www.dhclassifieds.com ಬುಕ್ ಮಾಡಿ

ಹೆಸರು ಬದಲಾವಣೆ ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

14 ವರ್ಷದೊಳಗಿನವರ ರಾಜ್ಯಮಟ್ಟದ ಅಥ್ಲೆಟಿಕ್ಸ್

ದಕ್ಷಿಣ ಕನ್ನಡ ಜಿಲ್ಲೆಗೆ ಸಮಗ್ರ ಪ್ರಶಸ್ತಿ

● ವೆಂಕಟೇಶ ಜಿ.ಎಚ್

ಶಿವಮೊಗ್ಗ: ಇಲ್ಲಿನ ನೆಹರೂ ಕ್ರೀಡಾಂಗಣದಲ್ಲಿ ಶನಿವಾರ ಮುಕ್ತಾಯವಾದ 14 ವರ್ಷದೊಳಗಿನವರ ರಾಜ್ಯಮಟ್ಟದ ಅಥ್ಲೆಟಿಕ್ಸ್‌ನ ಬಾಲಕ–ಬಾಲಕಿಯರ ವಿಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಸಮಗ್ರ ಚಾಂಪಿಯನ್ ಶ್ರೇಯ ಪಡೆಯಿತು. ಕೂಟದ ಎಲ್ಲ ವಿಭಾಗಗಳಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಕ್ರೀಡಾಪಟುಗಳು ಪಾರಮ್ಯ ಮೆರೆದರು.

ದಕ್ಷಿಣ ಕನ್ನಡ ಜಿಲ್ಲೆ ಚಾಂಪಿಯನ್ ಆದರೆ, ಆತಿಥೇಯ ಶಿವಮೊಗ್ಗ ಜಿಲ್ಲೆ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟಿತು.

ಬಾಲಕರ 100 ಹಾಗೂ 200 ಮೀ. ಓಟದಲ್ಲಿ ಬೆಂಗಳೂರು ದಕ್ಷಿಣ ವಿಭಾಗದ ಬೃಂದಾವನ ಶಾಲೆಯ ಪ್ರೀತಮ್ ಜಾಲವಾದಿ ಹಾಗೂ ಬಾಲಕಿಯರ ವಿಭಾಗದ 100, 200 ಹಾಗೂ 400 ಮೀ. ಓಟದಲ್ಲಿ ಉಡುಪಿಯ ಸೇಂಟ್ ಸಿಸಿಲಿಯಾ ಹೈಸ್ಕೂಲ್‌ನ ಪೂಜಾ ನೂತನ ಕೂಟ ದಾಖಲೆಗಳನ್ನು ಬರೆದರು.

ಫಲಿತಾಂಶಗಳು: ಬಾಲಕಿಯರು: 100 ಮೀ. ಓಟ– ಪೂಜಾ (ಉಡುಪಿ)-1, ಎಸ್.ಖುಷಿ (ಶಿವಮೊಗ್ಗ)-2, ನಿಷ್ಕಾ ಗೌಡ (ಮೈಸೂರು)-3. **200 ಮೀ. ಓಟ:** ಪೂಜಾ-1, ಎಸ್.ಖುಷಿ-2, ಆರ್.ನಿಹಾರಿಕಾ (ಬೆಂಗಳೂರು ಉತ್ತರ)-3. **400 ಮೀ. ಓಟ:** ಪೂಜಾ (ಉಡುಪಿ)-1, ಎ.ಎಚ್.ರಾಣಿ (ಕೂಡಿಗೆ)-2, ಜಯಲಕ್ಷ್ಮೀ (ದಕ್ಷಿಣ ಕನ್ನಡ)-3. **600 ಮೀ. ಓಟ:** ಎಚ್.ಎಸ್. ಅಪೂರ್ವ (ಶಿವಮೊಗ್ಗ)-1, ಪಿ.ಎಸ್.ಅಮೃತ (ದಕ್ಷಿಣ ಕನ್ನಡ)-2, ಶಿವಾನಿ ಶಿಶಿರ್ (ಬೆಳಗಾವಿ)-3. **80 ಮೀ. ಹರ್ಡಲ್ಸ್:** ವಿ.ಅಮೂಲ್ಯ (ದಕ್ಷಿಣ ಕನ್ನಡ)-1, ಸಾತ್ವಿ ಖಂಡ್ರೆ (ಬೆಳಗಾವಿ)-2, ಎಸ್.ಸ್ವರ್ಣರೇಖಾ (ಬೆಂಗಳೂರು ಉತ್ತರ)-3. **ಲಾಂಗ್‌ಜಂಪ್:** ರಿಯಾನಾ ತೆರೇಸಾ (ಬೆಂಗಳೂರು ಉತ್ತರ)-1, ಜ್ಞಾನಶ್ರೀ (ಹಾಸನ)-2, ಆರ್.ವಿ.ಪ್ರಾಪ್ತಿ (ತುಮಕೂರು)-3. **ಹೈಜಂಪ್:** ಪಿ.ಪಿ.ಜೀವನ (ದಕ್ಷಿಣ ಕನ್ನಡ)-1, ಪ್ರಕೃತಿ ಎಲ್.ಗೌಡ (ದಕ್ಷಿಣ ಕನ್ನಡ)-2, ಎಸ್.ವೈಷ್ಣವಿ (ಶಿವಮೊಗ್ಗ)-3. **ಶಾಟ್‌ಪಟ್:** ತೇಜಸ್ವಿನಿ ಜಿ.ರಾವ್ (ಬೆಂಗಳೂರು ಉತ್ತರ)-1, ಅನಿಶಾ ಅರೋಲ್ ಡಿಸೋಜ (ಚಿಕ್ಕಮಗಳೂರು)-2, ಬೋಪಣ್ಣ ವರ್ಣಿಕಾ (ಬಳ್ಳಾರಿ)-3. **ಡಿಸ್ಕಸ್ ಥ್ರೋ:** ಸಾನ್ವಿ (ದಕ್ಷಿಣ ಕನ್ನಡ)-1, ಅನ್ವಿ ಶೆಟ್ಟಿ (ಉಡುಪಿ)-2, ಪೃಥ್ವಿ ಆರ್.ನಾಯಕ್ (ಉತ್ತರ ಕನ್ನಡ)-3. **4x100 ಮೀ. ರಿಲೇ:** ಕೂಡಿಗೆ-1, ದಕ್ಷಿಣ ಕನ್ನಡ-2, ವಿದ್ಯಾನಗರ ಕ್ರೀಡಾ ಶಾಲೆ-3.

ಬಾಲಕರ ವಿಭಾಗ: 100 ಮೀ. ಓಟ– ಪ್ರೀತಮ್ ಎಸ್.ಜಾಲವಾದಿ (ಬೆಂಗಳೂರು ದಕ್ಷಿಣ)-1, ವಿಜಯಾನಂದ ಲಮಾಣಿ (ಬೆಂಗಳೂರು)-2, ಶ್ರೀರಾಜ್ ಶ್ರೀಕಾಂತ್ ಮೋಟಾಳ್ (ಚಿಕ್ಕೋಡಿ)-3. **200 ಮೀ. ಓಟ:** ಪ್ರೀತಮ್ ಎಸ್.ಜಾಲವಾದಿ (ಬೆಂಗಳೂರು ದಕ್ಷಿಣ)-1, ವಿಜಯಾನಂದ ಲಮಾಣಿ (ಬೆಂಗಳೂರು)-2, ಲಕ್ಷ್ಮಣ್ ಅರಕೇರಿ (ಬಾಗಲಕೋಟೆ)-3. **400 ಮೀ. ಓಟ:** ಅಜಯ್ ಪ್ರದೀಪ್ (ಮೈಸೂರು)-1, ಶಿವಕುಮಾರ್-2, ಸಂದೀಪ್ ಪಟ್ಟರ್ (ಧಾರವಾಡ)-3. **600 ಮೀ. ಓಟ:** ಅಜಯ್ ಪ್ರದೀಪ್-1, ಶಿವಕುಮಾರ್-2 ಹಾಗೂ ಸಂದೀಪ್ ಪಟ್ಟರ್-3. **80 ಮೀ. ಹರ್ಡಲ್ಸ್:** ಕೌಶಿಕ್ ವಿ.ಶೆಟ್ಟಿಗಾರ್ (ದಕ್ಷಿಣ ಕನ್ನಡ)-1, ಎಸ್.ಪಿ.ರೋಣ್ (ಶಿವಮೊಗ್ಗ)-2, ಎ.ಆರ್.ಸುಭಾಷ್ (ದಕ್ಷಿಣ ಕನ್ನಡ)-3. **ಲಾಂಗ್‌ಜಂಪ್:** ವೇದಾಂತ್ ರಾಜೇಶ್ ಗುರವ್ (ಬೆಳಗಾವಿ)-1, ವಿವೇಕ್ ಆರ್.ಮಹಾಜ (ಉತ್ತರ ಕನ್ನಡ)-2, ಕೌಶಿಕ್ ಶೆಟ್ಟಿಗಾರ್-3. **ಹೈಜಂಪ್:** ಎನ್.ಪಿ.ಆರೋಣ್-1, ಮನೋಜ್ ಕುಮಾರ್ (ಕೂಡಿಗೆ)-2, ಪವನ್ ಕುಮಾರ್ ನೀಲಗಾರ್ (ಧಾರವಾಡ)-3. **ಶಾಟ್‌ಪಟ್:** ಬಿ.ಸಿ.ಲೋಹಿತ್‌ಗೌಡ (ದಕ್ಷಿಣ ಕನ್ನಡ)-1, ಜಿ.ಆದರ್ಶ (ಹಾಸನ)-2, ಕೆ.ಪಿ. ಹರ್ಷವರ್ಧನ (ಚಿಕ್ಕಮಗಳೂರು)-3. **ಡಿಸ್ಕಸ್ ಥ್ರೋ:** ಜಿ.ಆದರ್ಶ (ಹಾಸನ)-1, ಹೃತೀಶ್ ಎಂ.ನಾಯಕ್ (ಶಿರಸಿ)-2, ಹನುಮಂತ ದೊಡ್ಡಮನಿ (ಬಾಗಲಕೋಟೆ)-3. **4x100 ಮೀ. ರಿಲೇ:** ಬೆಂಗಳೂರು ದಕ್ಷಿಣ-1, ವಿದ್ಯಾನಗರ-2, ಧಾರವಾಡ-3.

ಮುಖ್ಯಾಂಶಗಳು
- ಪೂಜಾ, ಪ್ರೀತಮ್ ವೈಯಕ್ತಿಕ ಚಾಂಪಿಯನ್
- ದಕ್ಷಿಣ ಕನ್ನಡ ಜಿಲ್ಲೆಗೆ 31, ಶಿವಮೊಗ್ಗ ತಂಡಕ್ಕೆ 21 ಅಂಕ

ತೇಜಸ್ವಿನಿ ಜಿ.ರಾವ್

ಶುಭಮನ್ ಗಿಲ್‌ಗೆ ಗಾಯ: ಟೆಸ್ಟ್‌ಗೆ ಅನುಮಾನ

ನವದೆಹಲಿ/ಪರ್ತ್ (ಪಿಟಿಐ): ಭಾರತ ತಂಡದ ಅಗ್ರಕ್ರಮಾಂಕದ ಬ್ಯಾಟರ್ ಶುಭಮನ್ ಗಿಲ್ ಅವರ ಎಡಗೈ ಹೆಬ್ಬೆರಳ ಮೂಳೆ ಮುರಿದಿದೆ. ಇದರಿಂದಾಗಿ ಅವರು ಪರ್ತ್‌ನಲ್ಲಿ ನಡೆಯಲಿರುವ ಆಸ್ಟ್ರೇಲಿಯಾ ಎದುರಿನ ಮೊದಲ ಟೆಸ್ಟ್‌ನಲ್ಲಿ ಆಡುವುದು ಅನುಮಾನವಾಗಿದೆ.

ಗಿಲ್ ಅವರು ಇಂಟ್ರಾಸ್ಕ್ವಾಡ್ ಅಭ್ಯಾಸ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುವ ಸಂದರ್ಭದಲ್ಲಿ ಚೆಂಡು ಹೆಬ್ಬೆರಳಿಗೆ ಬಡಿದು ಗಾಯವಾಯಿತು. ವಿಪರೀತ ನೋವು ಅನುಭವಿಸಿದ ಅವರು ಕೂಡಲೇ ಮೈದಾನ ತೊರೆದರು. ಸ್ಕ್ಯಾನಿಂಗ್‌ಗೆ ಅವರನ್ನು ಕಳಿಸಲಾಯಿತು.

ಹೆಬ್ಬೆರಳಿನ ಮೂಳೆಮುರಿತವು ಗುಣಮುಖವಾಗಲು ಸಾಮಾನ್ಯವಾಗಿ 14 ದಿನ ಸಮಯ ಬೇಕಾಗುತ್ತದೆ. ಅದರ ನಂತರವೇ ಅವರು ನೆಟ್ ಅಭ್ಯಾಸ ಆರಂಭಿಸಬೇಕಾಗುತ್ತದೆ. ಆದ್ದರಿಂದ 22ರಿಂದ ಪರ್ತ್‌ನಲ್ಲಿ ಆರಂಭವಾಲಿರುವ ಮೊದಲ ಟೆಸ್ಟ್‌ಗೆ ಅವರು ಅಲಭ್ಯರಾಗುವುದು ಬಹುತೇಕ ಖಚಿತವಾಗಿದೆ. ಅಡಿಲೇಡ್‌ನಲ್ಲಿ ಮುಂದಿನ ತಿಂಗಳು ನಡೆಯಲಿರುವ ಎರಡನೇ ಟೆಸ್ಟ್‌ಗೆ ಅವರು ಸಿದ್ಧರಾಗಬಹುದು ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಟಿಟಿ: ಸಾಕ್ಷ್ಯಾಗೆ ಕಿರೀಟ

ಬೆಂಗಳೂರು: ಕರ್ನಾಟಕದ ಸಾಕ್ಷ್ಯಾ ಸಂತೋಷ್ ಅವರು ಹರಿಯಾಣದ ಪಂಚಕುಲದಲ್ಲಿ ನಡೆದ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ 11 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಫೈನಲ್ ಪಂದ್ಯದಲ್ಲಿ ಸಾಕ್ಷ್ಯಾ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು 3–1 (5-11, 11-6, 11-5, 11-7)ರಿಂದ ಹರಿಯಾಣದ ಅಣ್ಣಾ ಫುಲಸ್ವಾಲ್ ಅವರನ್ನು ಮಣಿಸಿದರು.

ಪೊಲೀಸ್ ಇಲಾಖೆ
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್, ಜನರಲ್ ಆಫ್ ಪೊಲೀಸ್‌ರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು – 560001.

ಸಂಖ್ಯೆ: 11/ಸಂಗ್ರಹ–6/2023–24 ದಿನಾಂಕ: 14.11.2024

ಇ–ಖರೀದಿ ಟೆಂಡರ್ ನೋಟೀಸ್

ರಾಜ್ಯದ 11 ಪೊಲೀಸ್ ಠಾಣೆಗಳಿಗೆ ಸಿಸಿಟಿವಿ ಕ್ಯಾಮರಾ ಮತ್ತು ಪರಿಕರಗಳನ್ನು ಖರೀದಿಸಿ ಅಳವಡಿಸಲು ಕೆಟಿಪಿಪಿ ಅಧಿನಿಯಮ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ (https://kppp.karnataka.gov.in) ರಲ್ಲಿ ಇ–ಟೆಂಡರ್ ಪ್ರಕ್ರಿಯೆ ಮೂಲಕ ಅರ್ಜಿಗಳನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ. ಸಂ.	ಸಾಮಗ್ರಿಗಳ ವಿವರಗಳು	ಟೆಂಡರ್ ಸಂಖ್ಯೆ	ಅಂದಾಜು ಮೊತ್ತ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ
1	Supply, Installation & Maintenance of CCTV Cameras in 11 Police Stations & 01 Work Station at Various Locations of Karnataka State.	KSP/2024-25/IND0235	41,05,547/-	02.12.2024 ಸಮಯ 17.00 Hrs.

ಮೇಲ್ಕಂಡ ಸಾಮಗ್ರಿಗಳನ್ನು ಒದಗಿಸಲು ಇಚ್ಛಿಸುವವರು ಇ–ಖರೀದಿ 2.0 ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಬೇಕು. ಇ–ಖರೀದಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ–ಖರೀದಿ ಪ್ರೊಕ್ಯೂರ್‌ಮೆಂಟ್ ಸೆಲ್‌ನಲ್ಲಿ ವ್ಯವಸ್ಥೆಗೊಳಿಸುತ್ತಿದ್ದು. ಎಲ್ಲಾ ಬಿಡ್‌ದಾರರು ದೂರವಾಣಿ ಸಂಖ್ಯೆ +91 80 46010000 ಮತ್ತು +91 80 68948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ–ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್‌ದಾರರು ಇ–ಖರೀದಿ 2.0 ಫ್ಲಾಟ್ ಫಾರಂನಲ್ಲಿ ನೊಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.

ಸಹಿ/–
(ಡಾ. ಬಿ.ಆರ್. ರವಿಕಾಂತೇಗೌಡ, ಐ.ಪಿ.ಎಸ್)
ವಾಸಸಂಇ/ಸಿಪಿ/ಎಎಎ/3250/2024–25 ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಪರವಾಗಿ

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಆಯುಕ್ತರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ,
ಪಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು–560024.
ಇ–ಮೇಲ್: commissionerahvs@gmail.com ದೂ: 080–23412767

No: CAH/VMS/LT/Tender/2024-25/241 Date: 15.11.2024

ಟೆಂಡರ್ ನೋಟಿಫಿಕೇಷನ್
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2024–25 ನೇ ಸಾಲಿನಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಾಲಿಕ್ಲಿನಿಕ್ ಗಳಲ್ಲಿ ಲ್ಯಾಬ್ ಟೆಕ್ನಿಷಿಯನ್‌ಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು KPP Portal ನ ಮೂಲಕ ಒಂದು ವರ್ಷದ ಅವಧಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ನ ನಿಗದಿಪಡಿಸಿದ ಮೊತ್ತ ರೂ. 60.00 ಲಕ್ಷಗಳು. ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ : 16.11.2024 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು KPP Portal ನಲ್ಲಿ ದಿನಾಂಕ 16.11. 2024 ರಿಂದ 02.12.2024 ರವರೆಗೆ 17.30 ಗಂಟೆಯೊಳಗೆ ಅಪ್‌ಲೋಡ್ ಮಡಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ KPP Portal ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು, ಪಶುವೈದ್ಯಕೀಯ ಔಷಧಿ ಭಂಡಾರ,
DIPR/CP/3270/Zen/2024-25 ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಛೇರಿ ದೂರವಾಣಿ ಸಂಖ್ಯೆ : 08226–222027
ಇ–ಮೇಲ್ ನಂ.: pwdeechngr@gmail.com

ಮುಂದೂಡಿದ ಪ್ರಕಟಣೆ ದಿನಾಂಕ : 13–11–2024
(ಎರಡು ಲಕೋಟೆ), ಟೆಂಡರ್ ಅಧಿಸೂಚನೆ ಸಂಖ್ಯೆ 12/2024–25
ದಿನಾಂಕ : 30–10–2024 (1 ಮತ್ತು 2ನೇ ಕರೆ)
ವಿಷಯ : ಈ ಕಛೇರಿ ಟೆಂಡರ್ ಅಧಿಸೂಚನೆ ಸಂಖ್ಯೆ 12/2024–25
ದಿನಾಂಕ : 30–10–2024 (1 ಮತ್ತು 2ನೇ ಕರೆ)ಯ ಕಾಮಗಾರಿಯನ್ನು ಮುಂದೂಡಿರುವ ಬಗ್ಗೆ.

KW-4 (ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು Ktpp Act 1999 and Ktpp rule 2000 ರಲ್ಲಿ (ಸಿವಿಲ್) ಗುತ್ತಿಗೆದಾರರುಗಳಿಂದ KW-4 ರಂತೆ ಲೆಕ್ಕ ಶೀರ್ಷಿಕೆ : 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆ ಅಡಿಯಲ್ಲಿ ಕ್ರಮ ಸಂಖ್ಯೆ (1) ರ ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ ರೂ. 230.00 ಲಕ್ಷಗಳ ಕಾಮಗಾರಿಯನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಮುಂದೂಡಲಾಗಿದೆ ಹಾಗೂ ಇನ್ನೂ ಯಾವುದೇ ಬದಲಾವಣೆ ಇರುವುದಿಲ್ಲ ಹಾಗೂ ಈ ನೋಟಿಫಿಕೇಷನ್‌ಗೆ ಸಂಬಂಧಪಟ್ಟ ಬದಲಾವಣೆಗಳನ್ನು ಇ–ಪ್ರಕ್ಯೂರ್‌ಮೆಂಟ್ ಮಾತ್ರ ಪ್ರಕಟಿಸಲಾಗುವುದು.

- ಇ–ಪ್ರಕ್ಯೂರ್‌ಮೆಂಟ್ ರೀತ್ಯಾ ಡೌನ್‌ಲೋಡ್ ಮಾಡಬಹುದಾದ ದಿನಾಂಕ : 30–10–2024 ರಿಂದ 13–11–2024ರ ಬದಲಾಗಿ 13–11–2024 ರಿಂದ 27–11–2024 ಸಮಯ 16.00 ಗಂಟೆಯವರೆಗೆ.
- ಟೆಂಡರ್ ಪೂರ್ವಭಾವಿ ಸಭೆ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿಯ ಸಭಾಂಗಣದಲ್ಲಿ ದಿನಾಂಕ : 04–11–2024ರ ಬದಲಾಗಿ 19–11–2024.
- ಇ–ಪ್ರಕ್ಯೂರ್‌ಮೆಂಟ್ ರೀತ್ಯಾ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ : 13–11–2024 ರ ಬದಲಾಗಿ ದಿ. 27–11–2024 ಸಂಜೆ 16.00 ಗಂಟೆವರೆಗೆ.
- ಇ–ಪ್ರಕ್ಯೂರ್‌ಮೆಂಟ್ ರೀತ್ಯಾ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 15–11–2024 ರ ಬದಲಾಗಿ ದಿ. 29–11–2025 ಸಂಜೆ 16.00 ಗಂಟೆಯ ನಂತರ.
- ಇ–ಪ್ರಕ್ಯೂರ್‌ಮೆಂಟ್ ರೀತ್ಯಾ ಆರ್ಥಿಕ ಬಿಡ್ ತೆರೆಯುವ ದಿನಾಂಕ : 19–11–2024 ರ ಬದಲಾಗಿ ದಿ. 30–11–2024 ಸಂಜೆ 16.00 ಗಂಟೆಯ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ಚಾಮರಾಜನಗರ ವಿಭಾಗ
ಚಾಮರಾಜನಗರ
ಸಂ:ವಾಸಾಸಂಇ:ಚಾನಗರ:405:2024–25

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕನನೀಸ ಮತ್ತು ಒ.ಚ.ಮಂಡಳಿ,
ವಿಭಾಗ ಕಛೇರಿ, ಧಾರವಾಡ, ಜಲಮಂಡಳಿ ಆವರಣ,
ಸರ್.ಎಂ.ವಿಶ್ವೇಶ್ವರಯ್ಯ ರಸ್ತೆ, ಧಾರವಾಡ–580 001
ದೂರವಾಣಿ: 0836–2213836 ಇ–ಮೇಲ್:eedwdm@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ–4ನೇಯ ಕಾಲ್
(ಎಲೆಕ್ಟ್ರಾನಿಕ್ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಈಡೇರಿಸುವ ಸಂಸ್ಥೆ / ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಕೆಳಕಂಡ ಕಾಮಗಾರಿಗಳಿಗೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ.:1383 ದಿನಾಂಕ: 15/11/2024.
ಕುಂದಗೋಳ ಪಟ್ಟಣಕ್ಕೆ 24X7 ನಿರಂತರ ನೀರು ಸರಬರಾಜು ಕಾಮಗಾರಿಯ 12 ತಿಂಗಳ ಅವದಿಗೆ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ.
ಹೆಚ್ಚಿನ ವಿವರಗಳಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚಮಂಡಳಿ, ಧಾರವಾಡ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರು,
ವಾ.ಸಾ.ಇ/ಧಾರವಾಡ/613/ದೇಶಪಾಂಡೆಪಬ್ಲಿಸಿಟಿ/2024–25 ಕನನೀಸ ಮತ್ತು ಒಚಮಂಡಳಿ ವಿಭಾಗ, ಧಾರವಾಡ

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ,
ಮೈಸೂರು ರಸ್ತೆ, ಬೆಂಗಳೂರು–560059. ದೂರವಾಣಿ: 080–28484515 / 28484518
ಸಂಖ್ಯೆ: ಡಿಪಿಎಸ್/ಪಿಯುಆರ್‌ಬಿ/ಟಿಡಿಆರ್‌ಸಿ/10/2024–ಪಿಯುಆರ್/ಸ್ಟ್ರಾ&ಐವರಿ ದಿನಾಂಕ: 16–11–2024

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಸ್ಟ್ರಾಬೋರ್ಡ್ ಮತ್ತು ಐವರಿ ಬೋರ್ಡ್‌ಗಳ ಸಂಗ್ರಹಣೆಗಾಗಿ ದರಗುತ್ತಿಗೆ ವ್ಯವಸ್ಥೆಗಾಗಿ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ. 53.60 ಲಕ್ಷಗಳು** ಹಾಗೂ ಇ.ಎಂ.ಡಿ.ಯು **ರೂ.2.68 ಲಕ್ಷ**ಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: **02–12–2024, 17.30 ಗಂಟೆ.** ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ವಾಸಾಸಂಇ/ವಾ.ಪ್ರ/3267/ಎಂಎಎ/2024–25 ನಿರ್ದೇಶಕರು (ಪ್ರ)

ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಹಾಸನ ಜಿಲ್ಲೆ, ಹಾಸನ
ಸಂ:ಸಶಿಕ/ಲೆ.ಪ.1/ಕೆ.ಜಿ.ಬಿ.ವಿ.(ಟೈಪ್1)/12/2024–25
ದಿನಾಂಕ:15.11.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (3ನೇ ಕರೆ)

2024–25ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಕೆ.ಜಿ.ಬಿ.ವಿ.(ಟೈಪ್–1) ವಸತಿ ಶಾಲೆ ಮತ್ತು ಕೆ.ಜಿ.ಬಿ.ವಿ.(ಟೈಪ್–4) ವಸತಿ ನಿಲಯ ಹಳ್ಳಿಮೈಸೂರು ಇಲ್ಲಿಗೆ ಹೊರಗುತ್ತಿಗೆ ಆಧಾರದಲ್ಲಿ ಶಿಕ್ಷಕ/ಸಿಬ್ಬಂದಿ ಸರಬರಾಜು ಮಾಡುವ ಸಂಬಂಧ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಿದ್ದು, https://kppp.karanataka. gov.in ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಎರಡು ಪ್ರತ್ಯೇಕ ಟೆಂಡರ್ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ದಿನಾಂಕಗಳು ಈ ಕೆಳಕಂಡಂತಿರುತ್ತದೆ. ಟೆಂಡರ್‌ನ ಅಂದಾಜು ಮೊತ್ತ ರೂ.16,21,500/– ಪ್ರಾರಂಭದ ದಿನಾಂಕ: 19.11.2024, ಕೊನೆಯ ದಿನಾಂಕ: 03.12.2024 ರ 5.00.PM. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 05.12.2024 ರ 11.00.AM, ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.12.2024 ರ 11.00.AM. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ :08172–295020 ನ್ನು ಸಂಪರ್ಕಿಸಲು ಕೋರಿದೆ.

ಸಹಿ/– ಉಪನಿರ್ದೇಶಕರು, ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಹಾಸನ.
ವಾಸಾಸಂಇ/ಹಿಸನಿ/ಹಾಸನ/667/ಕೆಎಸ್‌ಎಂಸಿಎ/2024–25

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ,
ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು –560 052.
ದೂರವಾಣಿ: 080–22283366, ಟೆಲಿಫ್ಯಾಕ್ಸ್: 080–22262288

E-128036/KREIS/ADMN/FOOD/294/2024-ADMN Date: 16.11.2024

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ ಕಾಲೇಜುಗಳಿಗೆ ಕ್ರಮವಾಗಿ KREIS/2024-25/IND : ಸಂಖ್ಯೆ: ಬಾಗಲಕೋಟೆ–IND0008, ಬಳ್ಳಾರಿ-IND0009, ಬೆಳಗಾವಿ–IND0010, ಬೆಂಗಳೂರು ಗ್ರಾಮಾಂತರ–IND0011, ಬೆಂಗಳೂರು ನಗರ–IND0012, ಬೀದರ್–IND0013, ಚಾಮರಾಜನಗರ–IND0014, ಚಿಕ್ಕಮಗಳೂರು–IND0015, ದಕ್ಷಿಣ ಕನ್ನಡ–IND0016, ದಾವಣಗೆರೆ–IND0017, ಧಾರವಾಡ–IND0018, ಗದಗ–IND0019, ಹಾಸನ– IND0020, ಹಾವೇರಿ–IND0021, ಕಲಬುರಗಿ– IND0022, ಕೊಡಗು– IND0023, ಕೋಲಾರ–IND0024, ಕೊಪ್ಪಳ–IND0025, ಮಂಡ್ಯ–IND0026, ಮೈಸೂರು–IND0027, ರಾಯಚೂರು–IND0028, ರಾಮನಗರ–IND0029, ಶಿವಮೊಗ್ಗ–IND0030, ತುಮಕೂರು–IND0031, ಉಡುಪಿ–IND0032, ಉತ್ತರ ಕನ್ನಡ–IND0033, ವಿಜಯನಗರ–IND0034, ವಿಜಯಪುರ–IND0035, ಯಾದಗಿರಿ–IND0036 ಜಿಲ್ಲೆಗಳಲ್ಲಿ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು Procurement Portal ಮುಖಾಂತರ ದಿನಾಂಕ: 16–11–2024ರಂದು 29 ಜಿಲ್ಲೆಗಳಲ್ಲಿ ಜಿಲ್ಲಾವಾರು ಟೆಂಡರ್ ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 16–12–2024 ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ನೋಡಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು
DIPR/CP/3273/Zen/2024-25 ಕವಶಿಸಸಂ, ಬೆಂಗಳೂರು

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ).,
ಚಿತ್ರದುರ್ಗ . ಜಿಲ್ಲಾ ಯೋಜನಾ ನಿರ್ವಹಣಾ ಘಟಕ, (ಎನ್.ಹೆಚ್.ಎಂ)
ಜಿಲ್ಲಾ ಪ್ರಯೋಗಾಲಯ ಆವರಣ, ಜಿಲ್ಲಾ ಆಸ್ಪತ್ರೆ ಹಿಂಭಾಗ ಚಿತ್ರದುರ್ಗ.
ಸಂಖ್ಯೆ:–DPMU/NHM/CTA/01/2024-25 Date:- 16.11.2024

ಮರು ಇ–ಟೆಂಡರ್ ಪ್ರಕಟಣೆ

ಜಿಲ್ಲಾಯೋಜನಾ ನಿರ್ವಹಣಾ ಘಟಕ, ಎನ್.ಹೆಚ್.ಎಂ. ಚಿತ್ರದುರ್ಗ ಈ ಕಛೇರಿಗೆ ಕೆಳಕಂಡ ವಿವರಗಳಂತೆ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆಆಧಾರದ ಮೂಲಕ ಒದಗಿಸಲು ಅರ್ಹ ಮಾನವ ಸಂಪನ್ಮೂಲ ಸಂಸ್ಥೆಗಳಿಂದ, ಮರುಇ–ಟೆಂಡರ್ ಆಹ್ವಾನಿಸಿದೆ. **ಪ್ರಕಟಣೆ ಸಂಖ್ಯೆ::–** DHFWS/ 2024-25/SE0785/CALL-2 ಒದಗಿಸಬೇಕಾದ **ಮಾನವ ಸಂಪನ್ಮೂಲ ವಿವರ:–** ಲೆಕ್ಕ ಸಹಾಯಕರು ಮತ್ತು ಡಾಟಾ ಎಂಟ್ರಿ ಆಪರೇಟರ್ಸ್ ಇತರೆ ಸಿಬ್ಬಂದಿ. **ಹುದ್ದೆಗಳ ಸಂಖ್ಯೆ:–** ಒಟ್ಟು 88 ಹುದ್ದೆಗಳು
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:– 30.11.2024
ಹೊರ ಸಂಪನ್ಮೂಲ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ನಿಯಾಮಾನುಸಾರ ಇ–ಟೆಂಡರ್‌ಕರೆಯಲಾಗಿದೆ. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ವೆಬ್‌ಸೈಟ್ https://kppp.karnataka.gov.in ಮೂಲಕ ದಿನಾಂಕ: 16.11.2024 ರಿಂದ ನಿಗಧಿತ ಅವಧಿಯಲ್ಲಿ ಪಡೆಯಬಹುದು (ಡೌನ್‌ಲೋಡ್) ಮೇಲ್ಕಂಡ ಕ್ರ.ಸಂ. 1ರನ್ವಯ ಇ–ಟೆಂಡರ್ ನಿಯಾಮನುಸಾರ ಟೆಂಡರ್ ಸಲ್ಲಿಸುವುದು.

DIPR/CTA/KSMCA/372/2024-25 ಸಹಿ/– ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಆರೋಗ್ಯ ಮತ್ತು ಕು.ಕ. ಸೊಸೈಟಿ(ರಿ) ಚಿತ್ರದುರ್ಗ.

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ: ಮನಪಾ/ಲೋವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇಪ್ರೊ/2024–25/
ದಿನಾಂಕ: 00.00.2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ **ಸನ್ 2024–25ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದಲ್ಲಿ 02 ಕಾಮಗಾರಿಗಳು ಮತ್ತು ಸನ್ 2024–25 ನೇ ಸಾಲಿನ ಮಹಾನಗರ ಪಾಲಿಕೆಯ ಅನುದಾನದಲ್ಲಿ 03 ಕಾಮಗಾರಿಗಳು** ಕೆ.ಪಿ.ಡಬ್ಲ್ಯೂಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.
ಸೂಚನೆ: ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ kppp.karnataka.gov.in ಪೋರ್ಟಲ್‌ನಲ್ಲಿ ನಮೂದಿಸಲಾಗುವುದು.
1. ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 30.11.2024.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/423/ಕೆಎಸ್‌ಎಂಸಿಎ/2024–25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ,
ಕನೀನಿನಿ ಎಂ.ಬಿ.ಸಿ ವಿಭಾಗ ನಂ. 1, ಗದ್ದನಕೇರಿ ಕ್ಯಾಂಪ್ : ಬಾಗಲಕೋಟೆ
ದೂರವಾಣಿ ಸಂ.: 08354–297046, ಇ–ಮೇಲ್: eeknnlbgk@gmail.com

ಸಂ: ಕನೀನಿನಿ/ಎಂ.ಬಿ.ಸಿ/ವಿ–1/ಬಿಜಿಕೆ/ಪಿಬಿ/2024–25/1330
ದಿನಾಂಕ: 16.11.2024

ಟೆಂಡರ ಅಧಿಸೂಚನೆ (ಕಾಲ್–2): (4701)
(LUMPSUM - TURNKEY) (ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ ಎಂ.ಬಿ.ಸಿ ವಿಭಾಗ ನಂ. 1, ಗದ್ದನಕೇರಿ, ಕ್ಯಾಂಪ್: ಬಾಗಲಕೋಟೆ ಕಛೇರಿಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ LUMPSUM - TURNKEY ಆಧಾರದ ಮೇಲೆ ಟೆಂಡರ್ ಕರೆಯಲಾಗಿದ್ದು ಕೆಟಿಪಿಪಿ ಕಾಯ್ದೆಯ ರೂಲ್ 28 ರನ್ವಯ ದ್ವಿ ಲಕೋಟೆ ವಿಧಾನವನ್ನು ಅನುಸರಿಸಿ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರನ್ನು ದ್ವಿ ಲಕೋಟೆ ವಿಧಾನದಲ್ಲಿ ಸಲ್ಲಿಸಬೇಕು.
ಕಾಮಗಾರಿಯ ಹೆಸರು : **"KADARKOPPA LIFT IRRIGATION SCHEME** - Survey, Investigation, Design, Supply, Installation, Testing and Commissioning of Lift Irrigation System (Head Works consisting of construction of Intake Canal, Jack well cum pump house, Vertical Turbine pumps coupled to HT Motors, Power supply including terminal bay, 110 KV Electrical Sub Station, Transmission line, Rising Main and Delivery Chamber) for providing irrigation facility to suffering command from Palkimani Direct Minor to Hanumaneri distributary of GRBC covering an ICA of 8750 Ha in Mudhol, Badami and Bagalkot taluk, Bagalkot District by lifting water from Ghataprabha River near Udagatti Village including Operation and Maintenance for a period of 5 years after successful commissioning of work for **KADARKOPPA LIFT IRRIGATION SCHEME** on Turn-Key Basis." **Indent No. KNNL/2024-25/LI/WORK_INDENT2103 (Recall of Old Indent No. KNNL/2024-25/LI/WORK_INDENT1124).**

ಟೆಂಡರಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ): ರೂ 168.47 ಕೋಟಿಗಳು. ಇ.ಎಂ.ಡಿ ಮೊತ್ತ: ರೂ 168.47 ಲಕ್ಷಗಳು. ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿ: 18 ತಿಂಗಳು (ಮಳೆಗಾಲ ಸೇರಿ)
1) ಮಾನ್ಯ ಮುಖ್ಯ ಇಂಜನೀಯರರು, ಕನೀನಿನಿ, ನೀರಾವರಿ (ಉ) ವಲಯ, ಬೆಳಗಾವಿ ಕಚೇರಿಯಲ್ಲಿ ಪೂರ್ವ ಬಿಡ್ ಸಭೆ ದಿನಾಂಕ: 06.12.2024, 11.00 ಘಂಟೆಗೆ. 2) ಟೆಂಡರ್ ಕುರಿತು ವಿಚಾರಣೆ ನಡೆಸಲು ಕೊನೆಯ ದಿನಾಂಕ: 06.12.2024, 11.00 ಘಂಟೆಯವರೆಗೆ 3) ಟೆಂಡರನ್ನು ದಿನಾಂಕ: 20.12.2024 ರಂದು 16.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.12.2024, 11.00 ಘಂಟೆ 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದನೆ ಪಡೆದ ನಂತರ.

ಗುತ್ತಿಗೆದಾರರ ಅರ್ಹತೆ / ಟೆಂಡರ್ ನಿಯಮಗಳು / ಇಎಂಡಿ/ ಟೆಂಡರ್ ಪ್ರೊಸೆಸಿಂಗ್ ಶುಲ್ಕ ಹಾಗೂ ಟೆಂಡರ್ ಪ್ರಕ್ರಿಯೆಗಳ ದಿನಾಂಕ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ: 08354–297046 ರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯನಿರ್ವಾಹಕ ಇಂಜನೀಯರು,
ಕನೀನಿನಿ, ಎಂ.ಬಿ.ಸಿ ವಿಭಾಗ ನಂ. 1,
ಗದ್ದನಕೇರಿ, ಕ್ಯಾಂಪ್ : ಬಾಗಲಕೋಟೆ
ವಾಸಾಸಂಇ/ಬಾಗಲಕೋಟೆ/334/ಮಣಿಪಾಲ್/2024–25

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ,
ವಿಶ್ವೇಶ್ವರಯ್ಯ ನಾಲಾ ವಿಭಾಗ, ಮಂಡ್ಯ
ದೂ:08232–225046, ಇ–ಮೇಲ್:vcdnmndya@gmail.com

ಟೆಂಡರ್ ಪ್ರಕಟಣೆ ಸಂಖ್ಯೆ:09/2024–25, ದಿ:14.11.2024
ದ್ವಿ–ಲಕೋಟೆ ಪದ್ಧತಿ

ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ:09/2024–25 ದಿನಾಂಕ: 14.11.2024ರಲ್ಲಿ ಒಟ್ಟು 13 ಕಾಮಗಾರಿಗಳಿಗೆ (ಕನಿಷ್ಟ ಮೊತ್ತ 99.99 ಲಕ್ಷ ರೂಪಾಯಿಗಳು ಮತ್ತು ಗರಿಷ್ಠ ಮೊತ್ತ ರೂ 423.25 ಲಕ್ಷ ರೂಪಾಯಿ) ಗಳಿಗೆ ಅರ್ಹ ಕೆಪಿಡಬ್ಲ್ಯೂಡಿ 3ನೇ ದರ್ಜೆ, 2ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಕ್ವಾರೀಸ್/ ಕ್ಲಾರಿಫಿಕೇಷನ್‌ಗಾಗಿ as per e-portal ಇ.ಎಂ.ಡಿ ಮೊತ್ತವನ್ನು e-payment ಮೂಲಕ ಸಂದಾಯ ಮಾಡುವುದು. ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ as per e-portal ಟೆಂಡರ್‌ಗಳನ್ನು ತೆರೆಯುವ ದಿನಾಂಕ as per e-portal ಹೆಚ್ಚಿನ ವಿವರಗಳಿಗೆ http://kppp.karnataka.gov.in ನಲ್ಲಿ ಹಾಗೂ ಈ ಕಛೇರಿಯ ದೂರವಾಣಿ : 08232–225046 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜನಿಯರ್,
ಕಾವೇರಿ ನೀರಾವರಿ ನಿಗಮ (ನಿ), ವಿ.ಸಿ ವಿಭಾಗ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/447/2024–25

ಬಾಲ ಭವನ ಸೊಸೈಟಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ, 1ನೇ ಮಹಡಿ, 3ನೇ ಗೇಟ್, ಬಹು ಮಹಡಿಗಳ ಕಟ್ಟಡ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು – 560001.
ಸಂಖ್ಯೆ: ಬಾಭಸೊ/ಮಆನಿ/ಟೆಂಡರ್/2024–25 ದಿನಾಂಕ: 14–11–2024
INDENT NO: JBBS/2024-25/SE0003

ಅಲ್ಪಾವಧಿ ಟೆಂಡರ್ ಪ್ರಕಟಣೆ

ಬಾಲ ಭವನದ ಆವರಣದಲ್ಲಿ ನಿಗಧಿತ ಜಾಗದಲ್ಲಿ ಮಕ್ಕಳ ಮನರಂಜನಾ ಆಟಿಕೆಗಳಾದ **ಕೊಲಂಬಸ್, ಡ್ರಾಗನ್ ಟ್ರೈನ್, ಬ್ರೇಕ್ ಡ್ಯಾನ್ಸ್, ಟ್ರಾಂಪ್ಲಿನ್, ಜಂಪಿಂಗ್ ಬೌನ್ಸರ್ ಹಾಗೂ ಎಲೆಕ್ಟ್ರಿಕಲ್ / ನಾಣ್ಯ ಚಾಲಿತ ಆಟಿಕೆಗಳನ್ನು** ಅಳವಡಿಸಿ ನಡೆಸಲು ಆಸಕ್ತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮದಂತೆ ವಾರ್ಷಿಕ ಗುತ್ತಿಗೆ ಆಧಾರದಲ್ಲಿ ಮೂರು ವರ್ಷದ ಅವಧಿಗೆ ನಿರ್ವಹಿಸಲು ಅರ್ಹ ಬಿಡ್ಡುದಾರರಿಂದ ತಾಂತ್ರಿಕ ಮತ್ತು ಆರ್ಥಿಕ ಬಿಡ್ ಸಲ್ಲಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ ಕೆಟಿಪಿಪಿ 1999 ನಿಯಮಗಳು 2000 ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕ: **14–11–2024 ರಿಂದ 12–12–2024 ರಂದು ಮಧ್ಯಾಹ್ನ 2.00 ಗಂಟೆವರೆಗೆ.** ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **17–12–2024 ರಂದು ಸಂಜೆ 4.00 ಗಂಟೆಗೆ** ಹಾಗೂ ಆರ್ಥಿಕ ಲಕೋಟೆ ತೆರೆಯುವ ದಿನಾಂಕ: **19–12–2024.** ಹೆಚ್ಚಿನ ಮಾಹಿತಿಯನ್ನು **ಬಾಲ ಭವನ ಸೊಸೈಟಿ, ಕಬ್ಬನ್ ಪಾರ್ಕ್, ಬೆಂಗಳೂರು** ಈ ಕಛೇರಿಯಿಂದ ಪಡೆಯಬಹುದು.

ಸಹಿ/– ಸರ್ಕಾರದ ಉಪ ಕಾರ್ಯದರ್ಶಿಗಳು ಹಾಗೂ
ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿ ಮತ್ತು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ,
ವಾಸಾಸಂಇ/ವಾ.ಪ್ರ/3230/ಅಡ್ವರ್ಟೋರ್/2024–25 ಬೆಂಗಳೂರು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.
ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಸ.ಅ–2/JJM/Aug-works/Ten.Nofi/2024–25/1000 ದಿನಾಂಕ:14.11.2024

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ–2000 ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ರವರು ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ **"Augumentation of MVS for Rural Water Supply of Chellagurki & 7 other villages in Ballari taluk Ballari district"** ಕಾಮಗಾರಿಯನ್ನು, ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು **ದಿನಾಂಕ:14/11/2024** ರಿಂದ **29/11/2024** ರಂದು ಸಂಜೆ 4.00 ರವರೆಗೆ ಸಲ್ಲಿಸ ಬಹುದಾಗಿರುತ್ತದೆ, ತಾಂತ್ರಿಕ ಬಿಡ್ **ದಿನಾಂಕ:30/11/2024** ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು ಹಾಗೂ **ದಿನಾಂಕ: 22/11/2024** ರಂದು ಬೆಳಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು, ಮಾನ್ಯ ಮುಖ್ಯ ಇಂಜಿನಿಯರ್ ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 1ನೇ ಮಹಡಿ, "ಇ" ಬ್ಲಾಕ್, ಕೆ.ಹೆಚ್.ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು ಕಛೇರಿಯಲ್ಲಿ ಕರೆಯಲಾಗಿದೆ. ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು, ದಿ:26/11/2024 ರ ಸಂಜೆ 4.00 ಗಂಟೆಯವರೆಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯೂರಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/604/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ
ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್ ಇಂಜಿನೀಯರಿಂಗ್ ಯೋಜನಾ ವಿಭಾಗ, ಕಲಬುರಗಿ.
ಸಂಖ್ಯೆ: ಕಾನಿಅ/ಪಂರಾಇಂಯೋವಿಕ/ತಾಶಾ/ಟೆಂಡರ/2024–25/684 ದಿನಾಂಕ:15/11/2024

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ
ದ್ವಿ – ಲಕೋಟೆ ಪದ್ಧತಿಯಲ್ಲಿ

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 1) Improvements to road from Savoor village to SH Approach Road in Shahapur taluk. Yadgir dist.(YAD241422358) under KKRDB Micro (General) for the year 2024-25 Indent No. KRRDA/2024-25 /RD/ WORK_INDENT-174. **2) ಲೆಕ್ಕ ಶೀರ್ಷಿಕೆ:** 2024–25ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** Indent No.174 Rs: 98,75,909.37 **4) ಗುತ್ತಿಗೆದಾರರ ಅರ್ಹತೆ:** 3ನೇ ದರ್ಜೆ ಮತ್ತು ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯುವ ದಿನಾಂಕ:** 15–11–2024 ರಿಂದ 22–11–2024 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ:** ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ **7) ಇ.ಎಂ.ಡಿ.:** Indent No.174 Rs:1,68,000.00 **8) ಟೆಂಡರ ಸಲ್ಲಿಸುವ ದಿನಾಂಕ:** 15–11–2024ರಿಂದ 22–11–2024 ಸಾಯಂಕಾಲ 4:00 ಗಂಟೆವರೆಗೆ **9) ಆರ್ಥಿಕ ಬಿಡ್‌ತೆರೆಯುವ ದಿನಾಂಕ:** 25–11–2024 ಬೆಳಿಗ್ಗೆ 4:00 ಗಂಟೆ ನಂತರ **10)ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ :** ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಗ್ರಾಮಿಣಾಭಿವೃದ್ಧಿ ಪಂಚಾಯತ ರಾಜ್ ಇಂಜಿನೀಯರಿಂಗ್ ಯೋಜನಾ ವಿಭಾಗ ಅಂಬೇಡ್ಕರ ವಸತಿ ನಿಲಯದ ಎದುರಿಗೆ ರಾಜಾಪೂರ ರಸ್ತೆ ಕಲಬುರಗಿ E-mail: kn-gul-1@pmgsy.nic.in **11)ಅಂತರಜಾಲ ತಾಣದ ವಿಳಾಸ:** www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಅಭಿವೃದ್ಧಿ ಪಂಚಾಯತರಾಜ್
ವಾ.ಸಾ.ಸಂ.ಇ/ಯಾದಗಿರಿ/292/ಕೆ.ಎಸ್.ಎಂ.ಸಿ.ಎ/2024–25 ಇಂಜಿನೀಯರಿಂಗ್ ಯೋಜನಾ ವಿಭಾಗ ಕಲಬುರಗಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–31/535/2024–25 ದಿನಾಂಕ: 16.11.2024

ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗರದಾರರಿಂದ, ಏಜೆನ್ಸಿಗಳು, ವೈಯಕ್ತಿಕ ಸಂಸ್ಥೆಗಳು, ಸಾರ್ವಜನಿಕ ವಲಯದ ಉದ್ಯಮಗಳು, ಕಂಪನಿಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು : ಕರ್ನಾಟಕದ ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಕೋಚನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ಸ್ ಮ್ಯಾನುಫ್ಯಾಕ್ಚರಿಂಗ್ ಕ್ಲಸ್ಟರ್ (ಇಎಂಸಿ–2.0) ಸ್ಥಾಪನೆ ಮಾಡುವ ಕಾಮಗಾರಿ..
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 19.12.2024 ಸಂಜೆ 4.30 ಗಂಟೆಯವರೆಗೆ
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
DIPR/CP/3226/Zen/2024-25 ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 17 ನವೆಂಬರ್ 2024

ಸ್ಯಾನೆ ಚೆಂದಾಗಿತ್ತು ಸಾಣೇಹಳ್ಳಿ ನಾಟಕೋತ್ಸವ 13

ಹಿಮಾಲಯದ ಸನ್ನಿಧಿಯಲ್ಲಿ ರೋರಿಕ್ ಬಣ್ಣಗಳ ಧ್ಯಾನ 14

ಚಂದ್ರಗುತ್ತಿ ಅನುಭವದ ಬುತ್ತಿ 15

ನಾಗಮ್ಮಜ್ಜಿ ಎಂಬ ಅಲಕ್ಷಿತೆಯ ಕೃಷಿ ಚರಿತ್ರೆ

ಮೊಮ್ಮಗಳನ್ನು ದೇವದಾಸಿ ವಿಮುಕ್ತಳಾಗಿ ಮಾಡಿ, ಕೃಷಿ ಕಾಯಕ ಮಾಡುತ್ತಾ ದೇವದಾಸಿ ತಾಯಂದಿರ ಪ್ರತಿನಿಧಿಯಂತಿರುವ ನಾಗಮ್ಮಜ್ಜಿಯ ಕೃಷಿ ಮತ್ತು ಬದುಕಿನ ಪ್ರೀತಿಯನ್ನು ಗುರುತಿಸಿ ರಾಜ್ಯ ಸರ್ಕಾರ 'ಕರ್ನಾಟಕ ಸುವರ್ಣ ಮಹೋತ್ಸವ ಪ್ರಶಸ್ತಿ' ನೀಡಿದೆ

ಚಿತ್ರ: ಅವಿನಾಶ್

ಮಲ್ಲಿಕಾರ್ಜುನ ಹೊಸಪಾಳ್ಯ

ತನ್ನ ಹದಿನಾಲ್ಕನೆ ವಯಸ್ಸಿಗೇ ದೇವದಾಸಿ ಕೂಪಕ್ಕೆ ಬಿದ್ದ ನಾಗಮ್ಮಜ್ಜಿಗೆ ಈಗ 84 ವರ್ಷ. ಈಕೆಯ ಅಜ್ಜಿ, ಅಮ್ಮನೂ ದೇವದಾಸಿಯಾಗಿ ಬದುಕು ಸವೆಸಿದವರೇ. 70 ವರ್ಷಗಳ ಹಿಂದೆ ಬಳ್ಳಾರಿ ಜಿಲ್ಲೆಯ ತಮ್ಮೂರು ಇಂಗಳಗಿಯಲ್ಲಿ ನಡೆದ ಘಟನೆಗಳು ಇವರ ನೆನಪಿನ ಕೋಶದಲ್ಲಿ ಹಾಗೇ ಇವೆ.

ನಾಗಮ್ಮ ದೊಡ್ಡಮಗಳನ್ನು ಅನಿಷ್ಟ ಪದ್ಧತಿಗೆ ದೂಡಬೇಕಾದ ಒತ್ತಡವನ್ನು ಮೀರಲಾಗಲಿಲ್ಲ. ಸಂಪ್ರದಾಯವನ್ನು ಮುಂದುವರಿಸುವ ಭಾರಕ್ಕೆ ಮಗಳೂ ಹೆಗಲು ನೀಡಬೇಕಾಯಿತು. ಆದರೆ ಮೊಮ್ಮಗಳ ಕಾಲಕ್ಕೆ ಧೈರ್ಯ ಬಂದಿತ್ತು. ಕಾನೂನಿನ ಬೆಂಬಲ, ಸಂಘ-ಸಂಸ್ಥೆಗಳ ತಿಳಿವಳಿಕೆಗಳಿಂದ ನೂರಾರು ವರ್ಷಗಳ ಸರಪಳಿಯನ್ನು ತುಂಡರಿಸಿದರು. ಮೊಮ್ಮಗಳು ಲಕ್ಷ್ಮಿ ದೇವದಾಸಿ ಹಣೆಪಟ್ಟಿಗೆ ಬದಲಾಗಿ ಈಗ ತನ್ನದೇ ಸಮುದಾಯಕ್ಕೆ ಸುಸ್ಥಿರ ಕೃಷಿ ಮಾಹಿತಿ ನೀಡುವ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ.

ಮೊಮ್ಮಗಳನ್ನು ದೇವದಾಸಿಯನ್ನಾಗಿ ಮಾಡದಿರುವ ತೀರ್ಮಾನದಿಂದಾಗಿ ಗ್ರಾಮದಲ್ಲಿ ಕಿರಿಕಿರಿ ಶುರುವಾಯಿತು. ಆಗ ಇಂಗಳಗಿಯನ್ನು ತೊರೆದು ಹೊಸಪೇಟೆ ಬಳಿಯ ಕಾರಿಗನೂರಿಗೆ ಬಂದರು. ಅಲ್ಲಿನ ಬೀಳು ಜಮೀನನ್ನು ಅಭಿವೃದ್ಧಿಪಡಿಸಿ ಬೇಸಾಯ ಮಾಡತೊಡಗಿದರು. ಆದರೆ ಕೆಲವು ವರ್ಷಗಳಲ್ಲಿ ಅರಣ್ಯ ಇಲಾಖೆಯು ಅದು ಸರ್ಕಾರದ ಭೂಮಿ ಎಂದು ವಶಪಡಿಸಿಕೊಂಡು ನೆಡುತೋಪು ಮಾಡಿತು. ಅಲ್ಲಿಂದ ಹೊರಬಿದ್ದ ನಾಗಮ್ಮನ ಕುಟುಂಬ ಹೊಸಕಾರಿಗನೂರಿನಲ್ಲಿ ತನ್ನ ಅಮ್ಮನಿಗೆ ಬಂದಿದ್ದ ಎರಡು ಎಕರೆ ಜಮೀನಿನಲ್ಲಿ ಕೃಷಿ ಆರಂಭಿಸಿತು. ಇಂದಿಗೂ ಅದೇ ಅವರ ಕಾಯಕ ಭೂಮಿ. ಮಕ್ಕಳು, ಮೊಮ್ಮಕ್ಕಳೆಲ್ಲಾ ಸೇರಿ 12 ಜನರ ಕುಟುಂಬವನ್ನು ಕೃಷಿಯೇ ಪೊರೆಯುತ್ತಿದೆ.

ಮಳೆ ಆಶ್ರಯದ ಈ ಮಸಾರಿ ಜಮೀನಿನಲ್ಲಿ ಉಳುಮೆಗೆ ಯೋಗ್ಯವಾಗಿರುವುದು ಒಂದೂವರೆ ಎಕರೆ ಮಾತ್ರ. ಉಳಿದಿದ್ದು ಕಲ್ಲುಬಂಡೆಗಳ ಕುರುಚಲು. ಇದರಲ್ಲಿ ಅಕ್ಕಡಿ ಬೇಸಾಯ ಮಾಡುವ ಮೂಲಕ ಮನೆಗೆ ಬೇಕಾದ ಆಹಾರ ಧಾನ್ಯಗಳನ್ನು ಬೆಳೆದುಕೊಳ್ಳುತ್ತಾರೆ. ಜೋಳ, ಸಜ್ಜೆ, ತೊಗರಿ, ನವಣೆ, ಊದಲು, ಎಳ್ಳು, ಹುರುಳಿ-ಹೀಗೆ ಇವರ ಹೊಲ ವೈವಿಧ್ಯಮಯ ಬೆಳೆಗಳ ತಾಣ. ಎರಡು ಸಾಲು ತೊಗರಿ, ನಾಲ್ಕು ಸಾಲು ಸಿರಿಧಾನ್ಯ, ಮತ್ತೆ ತೊಗರಿ ಹೀಗಿರುತ್ತದೆ ಇವರ ಅಕ್ಕಡಿ ವಿನ್ಯಾಸ. ಬದುಗಳು ಮತ್ತು ಹೊಲದ ತೆಗ್ಗುಗಳಲ್ಲಿ ತರಕಾರಿಗಳನ್ನೂ ಹಾಕುತ್ತಾರೆ. ಹೊಲದ ಬಿತ್ತನೆ, ಕಳೆ, ಕಟಾವು, ರಾಶಿ ಸಮಯ ಬಂದಾಗ ಮನೆಯ ಎಲ್ಲರೂ ಕೈಜೋಡಿಸಿದರೆ ಫಟಾಫಟ್ ಮುಗಿದುಹೋಗುತ್ತವೆ.

ಕೆಲಸ ಇರಲಿ, ಬಿಡಲಿ ನಾಗಮ್ಮಜ್ಜಿ ಪ್ರತಿದಿನ ಹೊಲಕ್ಕೆ ಹೋಗುತ್ತಾರೆ. ಮನೆಯಿಂದ ಎರಡು ಕಿಲೋಮೀಟರ್ ದೂರದ ಹೊಲಕ್ಕೆ ಅಡ್ಡಾಡಲು ಯಾವುದೇ ಆಯಾಸವಿಲ್ಲ. ಬೆಳೆಗೆ ದಾಳಿ ಮಾಡುವ ಹಕ್ಕಿಗಳನ್ನು ಓಡಿಸುತ್ತಲೋ, ಕಳೆ ಕೀಳುತ್ತಲೋ ಹೊತ್ತು ಮುಳುಗಿಸುತ್ತಾರೆ.

ಐದಾರು ವರ್ಷಗಳಿಂದ ಹೊಸಪೇಟೆಯ ಸಖಿ ಸಂಸ್ಥೆ ಇವರಿಗೆ ಬೆಂಬಲವಾಗಿ ನಿಂತಿದೆ. ಈ ಭಾಗದ ಗಣಿಬಾಧಿತ ಗ್ರಾಮಗಳಲ್ಲಿ ಹಾಗೂ ವಿಮುಕ್ತ ದೇವದಾಸಿ ಕುಟುಂಬಗಳಿಗೆ ಸುಸ್ಥಿರ ಬದುಕು ಕಟ್ಟಿಕೊಳ್ಳಲು ಶ್ರಮಿಸುತ್ತಿರುವ ಸಖಿ ನಾಗಮ್ಮಜ್ಜಿಯ ಭೂಮಿ ಅಭಿವೃದ್ಧಿಗೊಳಿಸಲು, ಸುಸ್ಥಿರ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಸಹಾಯ ಮಾಡುತ್ತಿದೆ. ಸಂಸ್ಥೆಯು ಮೊಮ್ಮಗಳು ಲಕ್ಷ್ಮಿಗೆ ಉದ್ಯೋಗ ನೀಡಿದ್ದು ಕುಟುಂಬದ ಸಂತೋಷವನ್ನು ಇಮ್ಮಡಿಗೊಳಿಸಿರುವುದು ಸುಳ್ಳಲ್ಲ. ಸಖಿ ವಿವಿಧ ಬಿತ್ತನೆ ಬೀಜಗಳನ್ನು ನೀಡಿದ ಪರಿಣಾಮ ಮೊದಲಿಗಿಂತ ಹೆಚ್ಚು ವೈವಿಧ್ಯ ಬೆಳೆಗಳು ಇವರ ಹೊಲಕ್ಕೆ ಸೇರ್ಪಡೆಯಾಗಿವೆ. ಮಣ್ಣಿನ ಫಲವತ್ತತೆ ಹೆಚ್ಚಿಸುವ ಸಾವಯವ ಗೊಬ್ಬರಗಳು, ಜೈವಿಕ ಕೀಟ ಮತ್ತು ರೋಗನಾಶಕಗಳ ಬಳಕೆಯಿಂದ ವೆಚ್ಚವೂ ಕಡಿಮೆಯಾಗಿ ವಿಷಮುಕ್ತ ಕೃಷಿಯತ್ತ ಹೊರಳುತ್ತಿದ್ದಾರೆ.

ಬಾಲ್ಯದಲ್ಲಿ ಅಮ್ಮ ಹಾಗೂ ಇತರರು ಅನುಸರಿಸುತ್ತಿದ್ದ ಹಲವು ಕೃಷಿ ಪದ್ಧತಿಗಳು ಈಗಲೂ ಇವರ ನೆನಪಿನಲ್ಲಿವೆ. ಉದಾಹರಣೆಗೆ ಮೆಣಸಿನಕಾಯಿಗೆ ಹುಳ ಬಿದ್ದಾಗ ಕೆಂಪು ಮಣ್ಣನ್ನು ನೀರಿನಲ್ಲಿ ಕಲಸಿಕೊಂಡು ಗಿಡಗಳ ಮೇಲೆ ಎರಚುತ್ತಿದ್ದರಂತೆ. ಇದರಿಂದ ಹುಳ ಸಾಯುತ್ತಿದ್ದವು. ಅಲ್ಲದೆ ತೊಗರಿ ಗಿಡಕ್ಕೆ ಹುಳ ಬಿದ್ದಾಗ ಸುಣ್ಣದ ಪುಡಿಯನ್ನು ಬಿಳಿ ಬಟ್ಟೆಯಲ್ಲಿ ಕಟ್ಟಿಕೊಂಡು ಚಿಮುಕಿಸುತ್ತಿದ್ದ ಪದ್ಧತಿಯನ್ನು ನೆನಪಿಸಿಕೊಳ್ಳುತ್ತಾರೆ. ಇಂತಹ ಹತ್ತಾರು ಕೃಷಿ ವಿಧಾನಗಳ ಕಣಜವೇ ಇವರಲ್ಲಿದೆ. ಈ ಜ್ಞಾನವನ್ನು ಎಳೆಯರಿಗೆ ದಾಟಿಸಲು ಮತ್ತು ದಾಖಲಿಸಲು ಸಖಿ ಪ್ರಯತ್ನಿಸುತ್ತಿದೆ.

'ಅಲಕ್ಷಿತ ಕುಟುಂಬಗಳ ಬದುಕಿನ ಪ್ರೀತಿ ದೊಡ್ಡದು. ಕೃಷಿ ಜ್ಞಾನ ಅಗಾಧವಾದುದು. ಇವರ ಚರಿತ್ರೆಯನ್ನು ಮುಂದಿನ ತಲೆಮಾರುಗಳಿಗೆ ಅರ್ಥ ಮಾಡಿಸುವ ಪುಟ್ಟ ಪ್ರಯತ್ನದಲ್ಲಿ ನಾವಿದ್ದೇವೆ' ಎನ್ನುತ್ತಾರೆ ಸಖಿ ಸಂಸ್ಥೆಯ ಮುಖ್ಯಸ್ಥೆ ಎಂ. ಭಾಗ್ಯಲಕ್ಷ್ಮಿ.

'ಈಗ ಯಾರ್ ತಂಟಿಲ್ಲ, ತಗಾದಿಲ್ಲ. ನಮ್ ದುಡಿಮೆ ನಾವ್ ಮಾಡ್ತೀವಿ ಜೀವ್ನ ನಡೆಸ್ತಿವಿ. ನಮ್ಮಮ್ನನ್ನ ನೂರಾ ನಾಕ್ ವರ್ಷ ಜ್ವಾಪಾನ ಮಾಡಿದ್ದೆ, ಹಂಗೇ ಈ ಭೂಮಿನೂ ಜ್ವಾಪಾನ ಮಾಡಿವ್ನಿ' ಎನ್ನುವ ನಾಲ್ಕು ಮಾತುಗಳಲ್ಲಿ ನಾಗಮ್ಮನ ಎಂಟೂವರೆ ದಶಕಗಳ ಬದುಕಿನ ಸಾರವಿದೆ.

ಕನ್ನಡ-ಮರಾಠಿ ಗಟ್ಟಿ ಪರಂಪರೆ

ಕನ್ನಡ, ಮರಾಠಿ ಭಾಷೆಗಳಾಚೆಗೊಂದು ಬದುಕಿದೆ. ಆ ಬದುಕು ಹಾಗೆ ಅರಳುತ್ತಲೇ ಸಾಗಿದೆ. ಪರಸ್ಪರ ತೊಡಕುಗಳಿಲ್ಲದೆ. ಇದಕ್ಕೆ ಎರಡೂ ಭಾಷಿಕರಲ್ಲಿರುವ ಗಟ್ಟಿ ಪರಂಪರೆಯೇ ಕಾರಣವಾಗಿದ್ದು, ಇಲ್ಲಿ ಅನಾವರಣಗೊಂಡಿದೆ

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಪಟ್ಟಣದ ಗಾಂಧಿ ಮಾರುಕಟ್ಟೆ ಬಳಿ ಇರುವ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಮರಾಠಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಚಿಣ್ಣರು ಜೊತೆಯಾಗಿ ಆಟದಲ್ಲಿ ತೊಡಗಿದ್ದು ಹೀಗೆ. ಚಿತ್ರ: ಚಂದ್ರಶೇಖರ ಚಿನಕೇಕರ

ಡಿ.ಎಸ್. ಚೌಗಲೆ

ಬೆಳಗಾವಿ ಗಡಿ ತಂಟೆ ಎಂಬುದು ಬಿದ್ದು ಹೋದ, ರಾಜಕೀಯ ನೆಲೆಯಲ್ಲಿ ನಿದ್ದೆಗೆ ಜಾರಿದ್ದು ಅದು ಆಗಾಗ ಎದ್ದು ಕೂತು ಬಿಡುತ್ತದೆ. ಮತ್ತೆ ಮಲಗುತ್ತದೆ. ಭಾಷಾವಾರು ಪ್ರಾಂತಗಳು ರಚನೆಯಾಗಿ ಎಪ್ಪತ್ತು ವರ್ಷಗಳಾದವು. ಈ ಅವಧಿಯಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನದಿಗಳಲ್ಲಿ ಸಾಕಷ್ಟು ನೀರು ಹರಿದಿದೆ. ಕೆಲ ಭೂಭಾಗ ನಮಗೆ ದಕ್ಕಬೇಕಾದದ್ದು ದಕ್ಕಲಿಲ್ಲ. ಅವರಿಚ್ಛೆಯಂತೆ ಅವರಿಗೂ ಹಾಗೆಯೇ ಆದದ್ದು. ಮುಖ್ಯವಾಗಿ ಉತ್ತರದಲ್ಲಿ ಸೊಲ್ಲಾಪುರ, ಅಕ್ಕಲಕೋಟ, ಜತ್ತ ಪ್ರದೇಶ. ಕೊಲ್ಲಾಪುರ ಜಿಲ್ಲೆಯ ಗಡಹಿಂಗ್ಲಜ ಪರಿಸರ. ದಕ್ಷಿಣದಲ್ಲಿ ಕಾಸರಗೋಡು, ಹೊಸೂರು, ಕೃಷ್ಣಗಿರಿ-ಇವು ಕನ್ನಡ ನೆಲಕ್ಕೆ ಸೇರಬೇಕಾದ ಪ್ರದೇಶಗಳು. ಇತ್ತ ಮರಾಠಿ ಭಾಷಿಕರ ಹೋರಾಟದ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಬಯಸುವಂತೆ 'ಬೀದರ್, ಭಾಲ್ಕಿ, ನಿಪ್ಪಾಣಿ, ಬೆಳಗಾವಿ, ಕಾರವಾರದವರೆಗೆ ಸಂಯುಕ್ತ ಮಹಾರಾಷ್ಟ್ರ ಆಗಲೇಬೇಕು' ಎನ್ನುವುದು. ಈ ಘೋಷಣೆಯನ್ನು ಕೂಗುತ್ತ ಬಂದಿದ್ದು ಅದೀಗ ಕ್ಷೀಣಗೊಂಡಿದೆ. ತಾರ್ಕಿಕವಾಗಿಯೂ ಸತ್ವಹೀನವಾಗಿದೆ. ಅದು ತನ್ನ ಹುರಿಯನ್ನು ಸಡಿಲುಗೊಳಿಸಿದೆ.

ನವೆಂಬರ್ ಒಂದರ ಕರ್ನಾಟಕ ರಾಜ್ಯೋತ್ಸವದಲ್ಲಿ ಎಲ್ಲ ಭಾಷಿಕರು, ಸಕಲ ಜಾತಿ, ಧರ್ಮ, ಕುಲಾದಿಗಳ ಲಕ್ಷ ಲಕ್ಷ ಸಮೂಹವು ಕನ್ನಡಮಯವಾಗುತ್ತದೆ. ನದಿಯು ಸಾಗರಕ್ಕೆ ರಭಸದಿಂದ ಸೇರಿದಂತೆ ಸಂತೋಷದಿಂದ ಸಕಲರು ಸೇರುತ್ತಾರೆ. ಸ್ವಾರ್ಥಕ್ಕೆ ಬಳಕೆಯಾಗುವ ಎಂಇಎಸ್ ಮಾತ್ರ ಕರಾಳ ದಿನಕ್ಕೆ ಆತುಕೊಂಡಿದೆ. ಅದು ತನ್ನ ಕಪ್ಪುಬಣ್ಣವನ್ನು ಮತ್ತಷ್ಟು ಕಳೆದುಕೊಂಡು ಬಿಳಿಚಿದೆ. ಇತ್ತ ಕಪ್ಪು ಅಲ್ಲದ, ಬಿಳಿಯೂ ಅಲ್ಲದ ಬೂದು ವರ್ಣದಲ್ಲಿ ಸಂತೃಪ್ತಗೊಂಡಿದೆ. ಚುನಾವಣೆಗಳು, ವಿಧಾನಸಭೆಯ ಚಳಿಗಾಲ ಅಧಿವೇಶನ ಮತ್ತು ರಾಜ್ಯೋತ್ಸವ ಸಂದರ್ಭದಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವವರಿಗೆ ಕರಾಳತೆ ಜ್ಞಾಪಕಕ್ಕೆ ಬರುತ್ತದೆ. ಆದರೆ ಅವರಿಗೂ ತುಂಬಾ ಚೆನ್ನಾಗಿಗೊತ್ತು. ಯಥಾಸ್ಥಿತಿಯೇ ವಾಸ್ತವವೆಂಬುದು. ಗಡಿ ತಂಟೆ ಸುಪ್ರೀಂಕೋರ್ಟಿನಲ್ಲಿದೆ ಎಂಬ ತೇಲು ಹೇಳಿಕೆ ನೀಡುತ್ತಲೇ 'ಗಡಿ ತಂಟೆ ಜೀವಂತ' ಎಂಬ ಭ್ರಮೆ ಹುಟ್ಟಿಸುವ ಹುಸಿ ಯತ್ನವನ್ನು ಅವರು ನಡೆಸುತ್ತಲೇ ಬಂದಿರುವರು. ಇದನ್ನು ಎರಡೂ ರಾಜ್ಯಗಳ ಕನ್ನಡಿಗರು, ಮರಾಠಿಗರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಏನೇ ಮಾಡಿದರೂ ಕಾಸರಗೋಡು, ಸೊಲ್ಲಾಪುರ, ಜತ್ತ, ಅಕ್ಕಲಕೋಟಗಳ ಭೂಭಾಗ ನಮಗೆ ಸೇರುವುದಿಲ್ಲ. ಹಾಗೆಯೇ ಬೀದರ್, ಭಾಲ್ಕಿ, ನಿಪ್ಪಾಣಿ, ಬೆಳಗಾವಿ ಕಾರವಾರದ ನೆಲದ ಒಂದಿಂಚೂ ಅವರಿಗೆ ದೊರೆಯುವುದಿಲ್ಲ. ಈ ಸತ್ಯವನ್ನು ಭಾಷಿಕ ಚಳವಳಿಗಾರರು ಅರಿತಿದ್ದಾರೆ. ಈ ವಾಸ್ತವತೆಯನ್ನು ಅರಿತು ಸರ್ಕಾರಗಳು ಭಾಷಿಕ ಅಸ್ಮಿತೆಯನ್ನು ಬಿತ್ತಲು ಬೆಳೆಯಲು; ಆ ನೆಲೆಯಲ್ಲಿ ಸದೃಢ ಕಾರ್ಯಸೂಚಿಗಳನ್ನು ಸಿದ್ಧಗೊಳಿಸಬೇಕು.

ಗಡಿನೆಲದ ಹಕಿಕತ್ತು...

ದೂರದಲ್ಲಿ ಕುಳಿತು ಗಡಿಯ ಆಚೆ ಈಚೆಯ ನೀತಿಗಳನ್ನು ಗಿಳಿ ಪಾಠ ಮಾಡುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಖರೇ ಅರ್ಥದಲ್ಲಿ ಗಡಿನೆಲದ ಹಕಿಕತ್ತನ್ನು ಸ್ಥಳೀಯರೇ ಬಲ್ಲವರು. ಅವರನ್ನು ಒಳಗೊಳ್ಳಬೇಕು. ನಾವುಗಳು- ಅಂದರೆ ಕರ್ನಾಟಕ, ಮಹಾರಾಷ್ಟ್ರಗಳ ಸಾಹಿತಿಗಳು, ಕಲಾವಿದರು, ಹೋರಾಟಗಾರರು, ಬುದ್ಧಿಜೀವಿಗಳು ಉಭಯ ರಾಜ್ಯಗಳ ಮಾನವ ಬದುಕನ್ನು ಅಂದಗೊಳಿಸಬೇಕಿದೆ. ಅದಕ್ಕಾಗಿ ಆಡಳಿತ ವ್ಯವಸ್ಥೆಗೆ ಸಲಹೆ ಸೂಚನೆ ನೀಡಬೇಕು. ಯೋಜನೆಗಳ ಬಗ್ಗೆ ಚಿಂತನ-ಮಂಥನ ನಡೆಸಿ ಸರ್ಕಾರಗಳಿಗೆ ಸೂಚಿಸಬೇಕು. ಆಳುವ ವ್ಯವಸ್ಥೆ ತಪ್ಪು ಎಸಗದಂತೆ ಕಾವಲು ಕಾಯಬೇಕು. ಅಗತ್ಯ ಬಿದ್ದರೆ ಸರ್ಕಾರಗಳ ಕಿವಿ ಹಿಂಡಲೂ ಹಿಂಜರಿಯಬಾರದು.

ನಾನಿರುವ ಗಡಿ ಪ್ರದೇಶದಲ್ಲಿ ಎರಡು ಭಾಷಿಕ ಜನರ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಎರಡೂ ಭಾಷಿಕರು ಅನ್ಯೋನ್ಯತೆಯನ್ನು ಗೌರವಿಸಿ ಕಾಪಾಡಿಕೊಂಡು ತಲೆ ತಲಾಂತರದಿಂದ ಬದುಕುತ್ತ ಬಂದಿದ್ದಾರೆ. ಇವೆರಡೂ ಭಾಷಾ ಸಮುದಾಯಗಳಿಗೆ ಹಸಿವು ಮತ್ತು ಬದುಕು ಪ್ರಧಾನ. ನಂತರ ಭಾಷೆ. ಅದೂ ಸಹ ಪರಸ್ಪರ ಗೌರವದ್ದಾಗಿದೆ. ರಾಜಕಾರಣಿಗಳು ಮತ್ತು ಅವಕಾಶವಾದಿಗಳು ಸ್ವಲಾಭಕ್ಕೆ ಜನರ ಮಧ್ಯೆ ದ್ವೇಷದ ಬೆಂಕಿ ಹಚ್ಚುತ್ತಾರೆ. ಗಡಿ ತಂಟೆಯ ಹೆಸರಲ್ಲಿ ಬಿರುಕು ಸೃಷ್ಟಿಸುತ್ತಾರೆ. ಆ ವಿಷಯ ತಂದು ಅವರ ಭಾವನೆಗಳ ಸಂಗಡ ಚೆಲ್ಲಾಟವಾಡಿ ಅವರನ್ನು ಪ್ರಚೋದನೆಗೆ ಈಡು ಮಾಡುತ್ತಾರೆ. ಪರಸ್ಪರ ಭಾಷಿಕದ್ವಯರಿಗೆ ಮದ್ದನ್ನು ಹಾಕುವ ಕೆಲಸ ಮಾಡುತ್ತಿದ್ದಾರೆ. ನಮ್ಮ ಹಳ್ಳಿಗಳಲ್ಲಿ ಹೇಳುತ್ತಿದ್ದರಲ್ಲ-'ಮದ್ದು ಹಾಕತಾರಪ್ಪ ಜಾಗೃತೆ' ಎಂಬಂತೆ. ಈ ಕುರಿತು ಕನ್ನಡ, ಮರಾಠಿ ಭಾಷಿಕರು ಮದ್ದು ಹಾಕುವವರ ಬಗ್ಗೆ ಎಚ್ಚರಗೊಂಡಿರುವರು. ಅದಕ್ಕೆ ವರ್ತಮಾನದಲ್ಲಿ ಈ ಅವಕಾಶವಾದಿಗಳನ್ನು, ಭಾಷೆ ಇಟ್ಟುಕೊಂಡು ರಾಜಕೀಯ ತಂಟೆ, ದ್ವೇಷ ಮಾಡುವವರನ್ನು ದೂರ ತಳ್ಳಿದ್ದಾರೆ.

ವಿಠ್ಠಲನ ಸ್ಮರಣೆಯಲ್ಲಿ ವಾರಕರಿಗಳು
ಚಿತ್ರ: ತಾಜುದ್ದೀನ್ ಆಜಾದ್

ಕನ್ನಡ ಶಾಲೆಗೆ ಪುಷ್ಟಿ ನೀಡಲಿ

ದಶಕಗಳಿಂದ ನೆರೆಯ ಜತ್ತ, ಅಕ್ಕಲಕೋಟ, ಸೊಲ್ಲಾಪುರ ಭಾಗದಲ್ಲಿಯ ಕನ್ನಡ ಶಾಲೆಗಳು ಮುಚ್ಚುತ್ತಿರುವುದರ ಬಗ್ಗೆ ನಮ್ಮ ಸರ್ಕಾರಕ್ಕೆಷ್ಟು ಮಾಹಿತಿಯಿದೆ? ಅದಕ್ಕೆ ಕ್ರಮವೇನು ಜರುಗಿಸಿದ್ದಾರೆ? ಅಲ್ಲಿಯ ಸರ್ಕಾರದ ಷಡ್ಯಂತ್ರದ ಭಾಗವಾಗಿರಬಹುದಾದ ನೀತಿಗಳಿಗೆ ನಮ್ಮ ಸರ್ಕಾರದ ಪ್ರತಿ ತಂತ್ರಗಳು ಯಾವುವು? ಅಲ್ಲಿಯ ಶಿಕ್ಷಣ ನೀತಿಯೆಂದರೆ, ಕನ್ನಡ ಶಾಲೆಗಳ ಸ್ಥಿತಿಗತಿಗಳನ್ನು ದಯನೀಯಗೊಳಿಸುವುದು. ನಿವೃತ್ತಿಯಾದ ಕನ್ನಡ ಶಾಲೆಯ ಶಿಕ್ಷಕರ ಸ್ಥಾನಕ್ಕೆ ಹೊಸ ನೇಮಕಾತಿ ಮಾಡದೇ ಇರುವುದು. ಇದರಿಂದ ಕನ್ನಡ ಶಿಕ್ಷಕರ ಕೊರತೆ ಸೃಷ್ಟಿಗೊಳ್ಳುತ್ತದೆ. ಆಗ ಸಹಜವಾಗಿ ಕನ್ನಡ ಶಾಲೆಗಳ ಕದ ಮುಚ್ಚುತ್ತದೆ. ಅವು ಮರಾಠಿ ಶಾಲೆಗಳಾಗಿ ಪರಿವರ್ತನೆ ಆಗುತ್ತವೆ. ಇದು ಕನ್ನಡ ಕುಂದುವ ಕಾಡುವ ಭಯ!

ಹೀಗೆ ಕನ್ನಡ ಶಿಕ್ಷಕರಿಲ್ಲದೇ ಕನ್ನಡ ಶಾಲೆಗಳು ಮುಚ್ಚಿ, ಭವಿಷ್ಯತ್ತಿನಲ್ಲಿ ಕನ್ನಡವೇ ಮಾಯವಾಗುವ ಸೂಚನೆಗಳಿವೆ. ಕಾಸರಗೋಡು ಮತ್ತು ಸೊಲ್ಲಾಪುರ ಕನ್ನಡ ಭಾಷಿಕ ಪ್ರದೇಶಗಳ ಶೈಕ್ಷಣಿಕ, ಸಾಂಸ್ಕೃತಿಕ ಅಗತ್ಯಗಳ ಸಮೀಕ್ಷೆ ನಡೆದು ಕ್ರಮ ಜರುಗಿಸುವ ತುರ್ತು ಅಗತ್ಯವಿದೆ. ಈ ಮೂಲಭೂತ ವಿಚಾರಗಳತ್ತ ಸರ್ಕಾರ ಗಮನ ಹರಿಸಲಿ.

ಕರುಳಬಳ್ಳಿ ಸಂಬಂಧ...

'ಕಾನಡಾ ವಿಠ್ಠಲೂ ಕರುನಾಟಕೂ' ಎಂದು ಮರಾಠಿ ಸಂತರು ಹಾಡಿ ಹೊಗಳಿದ ಕನ್ನಡದ ವಿಠ್ಠಲನನ್ನು ಎರಡೂ ಭಾಷಿಕರು ಭಕ್ತಿಯಿಂದ ಪೂಜಿಸುವುದಿಲ್ಲವೇ? ಸಾಮಾನ್ಯ ಕನ್ನಡಿಗನಿಗೆ ಪಂಢರಪುರದ ವಿಠ್ಠಲ ಕರ್ನಾಟಕದವನೇ! ವಿಠ್ಠಲನ 'ವಾರಕರಿ' ಸಂಪ್ರದಾಯದ ಭಕ್ತರ ಕರುಳಬಳ್ಳಿ ಸಂಬಂಧ ಮಹಾರಾಷ್ಟ್ರದಿಂದ ಕರ್ನಾಟಕ, ಆಂಧ್ರಪ್ರದೇಶಕ್ಕೂ ಹಬ್ಬಿದೆ. ಕರ್ನಾಟಕಾಂಧ್ರ ಮಹಾರಾಷ್ಟ್ರ ನಾಗರಿಕ ಬದುಕಲ್ಲಿ ಅನೇಕ ಸಾಮ್ಯತೆಗಳಿವೆ. ಇದನ್ನು ಎರಡೂ ಕಡೆಯ ವಿದ್ವಾಂಸರು ಹೇಳುತ್ತ ಬಂದಿದ್ದಾರೆ. ಇತ್ತೀಚೆಗೆ ಮರಾಠಿ ಭಾಷೆಗೂ ಶಾಸ್ತ್ರೀಯ ಸ್ಥಾನಮಾನ ಲಭಿಸಿದೆ. ಈ ಸಮಿತಿಯ ವಿದ್ವಾಂಸ ಹರಿ ನರಕೆ ಒಮ್ಮೆ ಬೆಳಗಾವಿಯಲ್ಲಿ ಮಾತನಾಡುತ್ತ- 'ಮರಾಠಿ ಭಾಷೆಯು ಕನ್ನಡ, ತೆಲುಗು, ತಮಿಳಿಗೆ ಋಣಿಯಾಗಿರಬೇಕು. ಕಾರಣ, ಇವುಗಳಿಂದ ಸಾಕಷ್ಟು ಮರಾಠಿ ಪಡೆದಿದೆ' ಅಂದಿದ್ದರು.

15ನೇ ಪುಟಕ್ಕೆ...

ಕಸ ವಿಲೇವಾರಿಯ ವೀರಾಗ್ರಣಿ ಆಲ್ಮಿತ್ರಾ ಪಟೇಲ್

ನಾಗೇಶ ಹೆಗಡೆ

ಅಮೆರಿಕದ ಎಂಐಟಿಯಲ್ಲಿ ಓದಿ ಬಂದ ಮೊದಲ ಭಾರತೀಯ ಮಹಿಳಾ ಎಂಜಿನಿಯರ್ ಆಗಿ, ಬೆಂಗಳೂರಿನಲ್ಲಿ ನೆಲೆಸಿರುವ 87 ವರ್ಷದ ಆಲ್ಮಿತ್ರಾ ಪಟೇಲ್ ಅವರಿಗೆ ಈಚೆಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ನಗರಗಳ ಕಸ ರಕ್ಕಸನನ್ನು ಮಟ್ಟ ಹಾಕಲು ಬೇಕಾದ ಕಾನೂನಿನ ಪರಿಕರಗಳನ್ನು ದೇಶದ ಪ್ರಜೆಗಳಿಗೆ ಒದಗಿಸಿ 'ವೇಸ್ಟ್ ವಾರಿಯರ್' ಎಂದೇ ಖ್ಯಾತಿ ಪಡೆದ ಮಹಿಳೆ ಇವರು.

ಪರಿಸರ ಚಳವಳಿಗಳು ಅದೇ ತಾನೆ ಆರಂಭವಾಗುತ್ತಿದ್ದ 1980ರ ದಶಕದಲ್ಲಿ ನಾವು ಕೆಲವರು- ಅಂದರೆ ಎಚ್.ಎಸ್.ದೊರೆಸ್ವಾಮಿ, ಪ್ರೊ.ಎಂ.ಡಿ. ನಂಜುಂಡಸ್ವಾಮಿ, ಅಪರೂಪಕ್ಕೆ ಪ್ರೊ.ಮಾಧವ ಗಾಡ್ಗೀಳ್, ರಾಮಚಂದ್ರ ಗುಹಾ, ಸುರೇಶ್ ಹೆಬ್ಳೀಕರ್ ಎಲ್ಲ ಬೆಂಗಳೂರಿನ ಗಾಂಧೀ ಭವನದಲ್ಲಿ ತಿಂಗಳಿಗೊಮ್ಮೆ ಸೇರುತ್ತಿದ್ದೆವು. ಭೋಪಾಲ್, ಚರ್ನೊಬಿಲ್ ದುರಂತಗಳ ಚರ್ಚೆ ನಡೆಯುತ್ತಿತ್ತು. ಪರಿಸರ ಚಳವಳಿಗಳ ಮುಂದಿನ ರೂಪರೇಷೆಗಳ ಸಮಾಲೋಚನೆ ನಡೆಯುತ್ತಿದ್ದ ಅಂಥ ಸಭೆಗೆ ಸ್ಕರ್ಟ್ ತೊಟ್ಟ ಮಹಿಳೆಯೊಬ್ಬರು ಆಗೀಗ ಬರುತ್ತಿದ್ದರು. ಏನನ್ನೂ ಮಾತನಾಡದ ಈಕೆ, ಸಭೆ ಮುಗಿಯುವ ವೇಳೆಗೆ ನಮ್ಮ ಸಂಘಟನೆಗೆ ಧಾರಾಳ ಚಂದಾ ನೀಡಿ ಹೋಗುತ್ತಿದ್ದರು. ತಾವೇ ಖರೀದಿಸಿದ ಸೋಲಾರ್ ದೀಪಗಳನ್ನೂ ಕೆಲವರಿಗೆ ಆಗಾಗ ಹಸ್ತಾಂತರಿಸುತ್ತಿದ್ದರು.

ಇವರ ಹೆಸರು ಆಲ್ಮಿತ್ರಾ ಪಟೇಲ್ ಎಂಬುದು ನಮ್ಮ ಮನಸ್ಸಿನಲ್ಲಿ ಅಚ್ಚೊತ್ತುವ ಹೊತ್ತಿಗೆ ಚಳವಳಿಗಳ ಕಾವು ಇಳಿದಿತ್ತು. ಜಾಗತೀಕರಣ, ಸೋವಿಯತ್ ವಿಘಟನೆ, ಐಟಿ ಬೂಮ್ ಎಲ್ಲ ಬಂದು ಯುವಕರು ಹೊಸ ಬೆಳಕಿನ, ಹೊಸ ಗಾಳಿಯ ಬೆಂಬತ್ತಿದ್ದರು. ಎಲ್ಲ ಚಳವಳಿಗಳ ಹಾಗೆ ಪರಿಸರ ಚಳವಳಿಯೂ ಕ್ರಮೇಣ ನೆಲ ಕಚ್ಚಿತ್ತು. ಗಾಂಧೀ ಭವನದ ಮಾಸಿಕ ಪರಿಸರ ಮಂಥನ ಸಭೆಯೂ ಮಾಸುತ್ತ ಇತಿಹಾಸಕ್ಕೆ ಸೇರಿಹೋಯಿತು. ಆಲ್ಮಿತ್ರಾ ಪಟೇಲ್ ಮರೆತೂ ಹೋದರು. ಈ ಮೊದಲೇ ಅವರು ಟ್ರೀ ವಾರ್ಡನ್ ಎಂಬ ಗೌರವ ಉಪಾಧಿ ಪಡೆದು, 'ಸ್ವಾಭಿಮಾನ' ಸಂಸ್ಥೆಯ ಸ್ಥಾಪನಾ ಸದಸ್ಯೆಯಾಗಿ, ವಿಶ್ವ ವನ್ಯಜೀವಿ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ಕೆಲಸ ಮಾಡುತ್ತಿದ್ದ ಅವರು ನಗರದ ಹೊರ ವಲಯದಲ್ಲಿ, ಬಾಗಲೂರು ಬಳಿಯ ಫಾರ್ಮ್‌ಹೌಸ್‌ನಲ್ಲಿ ಕೋಳಿಫಾರ್ಮ್ ನಡೆಸುತ್ತಿದ್ದರು. ಪತಿ ಹೊಶಾಂಗ್ ಪಟೇಲ್ ಸ್ಥಾಪಿಸಿದ್ದ ಪಿಂಗಾಣಿ ಉದ್ಯಮಕ್ಕೂ ನೆರವಾಗುತ್ತ ಸಮೀಪದ ಹಳ್ಳಿಯ ಮಕ್ಕಳಿಗೆ, ಹೆಣ್ಮಕ್ಕಳಿಗೆ ಕೈಲಾದ ಸಹಾಯ ಮಾಡುತ್ತಿದ್ದರು. ನಗರದಲ್ಲಿ ಕೊಳ್ಳುಬಾಕ ಸಂಸ್ಕೃತಿ ಹೆಚ್ಚುತ್ತಿದ್ದ ಹಾಗೆ ಕಸದ ಲಾರಿಗಳು ಅವರ ರಸ್ತೆಯ ಮೂಲಕ ಸಾಗಿ ಹಳ್ಳಕೊಳ್ಳ ತಗ್ಗುದಿನ್ನೆ ಕಂಡಲ್ಲೆಲ್ಲ ತಿಪ್ಪೆಯನ್ನು ಸುರಿಯತೊಡಗಿದ್ದವು. ದುರ್ವಾಸನೆ, ಹದ್ದು ನಾಯಿಗಳ ಕಾಟದಿಂದ ರೈತರು ಕಂಗಾಲಾಗಿದ್ದರು. ಹೀಗೆ ಕೊಳೆ ಪೇರಿಸುವುದು ಅಲ್ಲಿನ ಜಲಮೂಲಗಳ ಮೇಲೆ, ಜಲಜೀವಿಗಳ ಮೇಲಿನ ಅತ್ಯಾಚಾರ ಎನಿಸಿದರೂ ಅದನ್ನು ನಿಯಂತ್ರಿಸಲು ಕಾನೂನುಗಳೇ ಇಲ್ಲವಲ್ಲ ಎಂದು ಚಿಂತಿಸುತ್ತಿದ್ದರು.

'ವೇಸ್ಟ್ ವಾರಿಯರ್' ಎಂದೇ ಖ್ಯಾತಿ ಪಡೆದ ಮಹಿಳೆ ಇವರು.

ಆಲ್ಮಿತ್ರಾ ಪಟೇಲ್

ದೇಶದ ವಿವಿಧ ನಗರಗಳ ಪರಿಸರ ತಜ್ಞರನ್ನು ಸಂಪರ್ಕಿಸಿ, ಯೋಜನಾ ಆಯೋಗದ ದಾಖಲೆಗಳನ್ನೆಲ್ಲ ಪರಿಶೀಲಿಸಿ, ಕಾನೂನು ಪಂಡಿತರ ಸಲಹೆ ಪಡೆದು, ಆಲ್ಮಿತ್ರಾ ಪಟೇಲ್ 1996ರಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ಒಂದು ದಾವೆ ಹೂಡಿದರು. ಭಾರತದ ಎಲ್ಲ ರಾಜ್ಯಗಳ ವಿರುದ್ಧ ಹೂಡಿದ ಆ 'ಸಾರ್ವಜನಿಕ ಹಿತಾಸಕ್ತಿ ಖಟ್ಲೆ' ದೊಡ್ಡ ಸಂಚಲನವನ್ನೇ ಮೂಡಿಸಿತು. ಸರ್ವೋಚ್ಚ ನ್ಯಾಯಾಲಯ ಅಷ್ಟೇ ತೀವ್ರವಾಗಿ ಸ್ಪಂದಿಸಿತು. ಕಾನೂನುಗಳೇ ಇಲ್ಲದ ಕ್ಷೇತ್ರದಲ್ಲಿ ನ್ಯಾಯ ನಿರ್ಣಯ ಮಾಡುವುದು ಹೇಗೆ? ಕಸ ವಿಲೇವಾರಿಗೆ ಮಾನದಂಡ ಹೇಗಿರಬೇಕು? ವಿಲೇವಾರಿಯ ವಿಧಿವಿಧಾನಗಳು ಹೇಗಿರಬೇಕು? ಎಲ್ಲಾದರೂ ಮಾದರಿ ಕಸ ವಿಲೇವಾರಿ ನಡೆಯುತ್ತಿದೆಯೆ ಎಂಬ ಸಮೀಕ್ಷೆಗೆ ಒಂದು ಸಮಿತಿ ನೇಮಕ ಮಾಡಿ, ಅದರಲ್ಲಿ ಆಲ್ಮಿತ್ರಾ ಹೆಸರನ್ನೂ ಸೇರ್ಪಡೆ ಮಾಡಿತು. ಇವರು ದೇಶದ ಅನೇಕ ನಗರಗಳನ್ನು ಸುತ್ತಿ ಕಸದ ತಿಪ್ಪೆಗಳ ಸಮೀಕ್ಷೆ ನಡೆಸಿದ್ದೂ ಅಲ್ಲದೆ, ವಿದೇಶಗಳಲ್ಲೂ ಸುತ್ತಾಡಿ ಕಸ ವಿಲೇವಾರಿಯ ಆದರ್ಶ ವ್ಯವಸ್ಥೆಯ ಅಧ್ಯಯನವನ್ನೂ ಕೈಗೊಂಡರು. ಕಸವನ್ನು ಹೇಗೆ ವಿಂಗಡಿಸಿ ಮರುಬಳಕೆ ಮಾಡಬಹುದು ಎಂಬ ಬಗ್ಗೆ ಎಂಜಿನಿಯರಿಂಗ್ ಸೊಲ್ಯೂಶನ್ ಹುಡುಕುತ್ತ, ಕಾನೂನು ಸಂಹಿತೆಗಳನ್ನು ಚರ್ಚಿಸುತ್ತಾ ನಿಯಮಗಳನ್ನು ರೂಪಿಸುವಲ್ಲಿ 16 ವರ್ಷಗಳು ಶ್ರಮಿಸಿ ಅದಕ್ಕೆ ಸರ್ವೋಚ್ಚ ನ್ಯಾಯಾಲಯದ ಅಂಕಿತಮುದ್ರೆಯನ್ನು ಪಡೆದರು.

ಅಲ್ಲಿಗೇ ಆಲ್ಮಿತ್ರಾ ಪಟೇಲ್ ವಿರಮಿಸಲಿಲ್ಲ. ಖುದ್ದಾಗಿ ಕಸದ ಬೆಟ್ಟಗಳಲ್ಲಿ ಓಡಾಡಿ, ಒದ್ದೆ ಕಸವನ್ನು ಸಾಲಾಗಿ ಪಾತಿಯಂತೆ ವಿಂಗಡಿಸಿ, ಅದು ಒಣಗಿದ ಬಳಿಕ ಸಾವಯವ ವಸ್ತುಗಳನ್ನು ವಿಂಗಡಿಸಿ ಎರೆಗೊಬ್ಬರ ತಯಾರಿಸುವ ಪ್ರಾತ್ಯಕ್ಷಿಕೆಯನ್ನೂ ನಡೆಸಿ, ಕೈಪಿಡಿಯನ್ನೂ ಬರೆದರು. ಒಣಕಸವನ್ನು ಉರಿಸಿ ವಿದ್ಯುತ್ ಉತ್ಪಾದಿಸುವ ಕುರಿತೂ ಉದ್ಯಮಿಗಳಿಗೆ ಪ್ರೇರಣೆ ನೀಡಿದರು. ಪಾಕಿಸ್ತಾನದ ಮೊದಲ ಕಸ ವಿಲೇವಾರಿ ಘಟಕದ ಸ್ಥಾಪನೆಗೂ ಇವರ ಸಲಹೆಯೇ ಬೇಕಾಯಿತು! ಈ ಮಧ್ಯೆ ಕನ್ನಡ ಚೆನ್ನಾಗಿ ಕಲಿತರು. 'ಸತ್ತವರ ನೆರಳು' ನಾಟಕದ 300ಕ್ಕೂ ಹೆಚ್ಚು ಶೋಗಳಲ್ಲಿ ಅಭಿನಯಿಸಿದರು. ಬಿಡುವಿನ ವೇಳೆಯಲ್ಲಿ ಊರೂರು ಸುತ್ತುತ್ತ ಪ್ರಾಚ್ಯವಸ್ತುಗಳ ಅಧ್ಯಯನ ನಡೆಸಿದರು.

ಭೋಗವಸ್ತುಗಳ ಬಳಕೆ ಹೆಚ್ಚಿದಂತೆಲ್ಲ ಹೊಸ ಹೊಸ ತ್ಯಾಜ್ಯವಸ್ತುಗಳೂ ಹೆಚ್ಚುತ್ತವೆ. ಪ್ಯಾಕಿಂಗ್ ಮಾಡಲು ಬಳಸುವ ಪಾಲಿವಿನೈಲ್ ಪ್ಲಾಸ್ಟಿಕ್, ಥರ್ಮೊಕೊಲ್ ಮತ್ತು ಫ್ಲೆಕ್ಸ್ ಪರದೆಗಳಂಥ ತ್ಯಾಜ್ಯವಸ್ತುಗಳನ್ನು ಯಾರೋ ಬೆಂಕಿ ಇಟ್ಟು ಸುಟ್ಟರೆ ಅದರ ಹೊಗೆಯಿಂದ ಹೊಮ್ಮುವ ವಿಷಕಣಗಳ ಮೇಲೆ ನಿಗಾ ಇಟ್ಟು, ತಪ್ಪಿತಸ್ಥರನ್ನು ಶಿಕ್ಷಿಸುವಂತೆ ಸರ್ವೋಚ್ಚ ನ್ಯಾಯಾಲಯ ರಾಜ್ಯಗಳಿಗೆ ನಿರ್ದೇಶನ ನೀಡಬೇಕು ಎಂದು ಮತ್ತೆ ಆಲ್ಮಿತ್ರಾ ಪಟೇಲ್ ಕೋರಿದರು. ಅದಕ್ಕೆಂದೇ ಮತ್ತೆ ಎರಡು ವರ್ಷಗಳ ಅಲೆದಾಟದ ನಂತರ 2016ರಲ್ಲಿ ರಾಷ್ಟ್ರೀಯ ಹಸಿರು ನ್ಯಾಯಪೀಠ ಆಲ್ಮಿತ್ರಾ ಪಟೇಲರ ವಿನಂತಿಯನ್ನು ಮನ್ನಿಸಿ ಹೊಸದೊಂದು ಆಜ್ಞೆಯನ್ನು ಹೊರಡಿಸಿತು: "ತ್ಯಾಜ್ಯವಸ್ತುಗಳ ಎರ್‍ರಾಬಿರ್‍ರಿ ಎಸೆದರೆ ಕ್ರಮ ಕೈಗೊಳ್ಳದ ಅಧಿಕಾರಿಗಳ ಮೇಲೂ ಪ್ರಕರಣ ದಾಖಲಿಸಬಹುದು" ಎಂದು ಹಸಿರು ನ್ಯಾಯಪೀಠ ಆದೇಶ ನೀಡಿತು.

ನಿಮ್ಮೂರಿನಲ್ಲಿ ಕಸ ವಿಲೇವಾರಿ ಸರಿಯಾಗಿ ನಡೆಯದಿದ್ದರೆ ನೀವು ಅಧಿಕಾರಿಯ ಮೇಲೆ ದಾವೆ ಹೂಡಬಹುದು.

13ನೇ ಪುಟಕ್ಕೆ...

'ತುಲಾಭಾರ' ನಾಟಕದ ದೃಶ್ಯ

ಸ್ಯಾನೆ ಚೆಂದಾಗಿತ್ತು ಸಾಣೇಹಳ್ಳಿ ನಾಟಕೋತ್ಸವ

ಎಂ.ಎನ್.ಯೋಗೇಶ್

ಕಾರ್ತೀಕ ಮಾಸದ ಚುಮುಚುಮು ಚಳಿಯ ನಡುವೆಯೂ ಸಾಣೇಹಳ್ಳಿಯ ಶಿವಕುಮಾರ ಬಯಲು ರಂಗಮಂದಿರ ಪ್ರೇಕ್ಷಕರಿಂದ ತುಂಬಿ ತುಳುಕಿತ್ತು. ಬಸ್ ಸಂಚಾರವೇ ಇಲ್ಲದ ಈ ಪುಟ್ಟ ಹಳ್ಳಿ ಮಧ್ಯ ಕರ್ನಾಟಕದ ಹಲವು ಜಿಲ್ಲೆಗಳ ರಂಗಪ್ರೇಮಿಗಳನ್ನು ತನ್ನತ್ತ ಸೆಳೆದುಕೊಂಡಿತ್ತು. ಉತ್ತರ-ದಕ್ಷಿಣದ ನಡುವಣ ಬೆಸುಗೆಯಾಗಿರುವ ತರಳಬಾಳು ಶಾಖಾ ಮಠದ ಆವರಣ ರಂಗಮಂಚವಾಗಿ ಅನಾವರಣಗೊಂಡಿತ್ತು.

ಚಿತ್ರದುರ್ಗ ಜಿಲ್ಲೆ ಸಾಣೇಹಳ್ಳಿಯ ತರಳಬಾಳು ಶಾಖಾ ಮಠದ ಆವರಣದಲ್ಲಿ ನಡೆದ ರಾಷ್ಟ್ರೀಯ ನಾಟಕೋತ್ಸವವು ಹಲವು ಕಾರಣಗಳಿಂದ ಗಮನ ಸೆಳೆಯಿತು. ಇದು ಉತ್ತರ-ದಕ್ಷಿಣ ಕರ್ನಾಟಕದ ಬೆಸುಗೆಯಾಗಿಯೂ ಕಂಡಬಂದಿತು.

ಶಿವಕುಮಾರ ಕಲಾಸಂಘದ ವತಿಯಿಂದ ನ.4ರಿಂದ ನ.9ರವರೆಗೆ ನಡೆದ ರಾಷ್ಟ್ರೀಯ ನಾಟಕೋತ್ಸವ ಹಲವು ಹೊಸತುಗಳಿಗೆ ಸಾಕ್ಷಿಯಾಯಿತು. ಸ್ಥಳೀಯ ಗ್ರಾಮಸ್ಥರು, ರೈತರು, ಮಠದ ಭಕ್ತರ ಜೊತೆಗೆ ರಾಜ್ಯದ ವಿವಿಧೆಡೆಯಿಂದ, ಹೊರರಾಜ್ಯಗಳಿಂದ ಬಂದಿದ್ದ ರಂಗಪ್ರೇಮಿಗಳು, ಸಾಹಿತಿಗಳು, ಕಲಾವಿದರು, ವಿದ್ಯಾರ್ಥಿಗಳು ಸುಂದರ ಪ್ರಕೃತಿಯ ಮಡಿಲಲ್ಲಿ ರಂಗಾನುಭೂತಿ ಪಡೆದರು.

ಮಠದ ಪ್ರವಾಸಿ ಮಂದಿರ, ಹಾಸ್ಟೆಲ್‌ಗಳಲ್ಲಿ ತಂಗಿದ್ದ ರಂಗಪ್ರಿಯರು ವಾರಪೂರ್ತಿ ನಾಟಕ ವೀಕ್ಷಣೆ ಜೊತೆಗೆ ಮಠದ ದಾಸೋಹ ಸವಿಯನ್ನೂ ಸವಿದರು. ನಾಟಕಗಳಷ್ಟೇ ಅಲ್ಲ, ಸಾಮೂಹಿಕ ಪ್ರಾರ್ಥನೆ, ಯೋಗ, ಧ್ಯಾನ, ವಚನ ಗಾಯನ, ಜನಪದ ಸಂಭ್ರಮ, ನೃತ್ಯ ರೂಪಕ, ವಿಚಾರ ಸಂಕಿರಣ, ಕಮ್ಮಟ ಚಿಂತನ-ಮಂಥನಗಳು ಎಲ್ಲರನ್ನೂ ಆವರಿಸಿಕೊಂಡವು.

ಶಿವ ಸಂಚಾರ ರೆಪರ್ಟರಿಯ ಮೂರು ವಿಶಿಷ್ಟ ನಾಟಕಗಳೂ ಸೇರಿದಂತೆ ಹೊರಗಿನಿಂದ ಬಂದಿದ್ದ ಒಟ್ಟು ಹನ್ನೊಂದು ರಂಗ ಪ್ರಯೋಗಗಳು ಪ್ರೇಕ್ಷಕರನ್ನು ಚಿಂತನೆಗೆ ಹಚ್ಚಿದವು, ವರ್ತಮಾನಕ್ಕೆ ಕನ್ನಡಿ ಹಿಡಿದವು, ಸಾಮರಸ್ಯದ ಪಾಠ ಹೇಳಿದವು. ಮೌಲ್ಯಗಳು ಅವನತಿಯತ್ತ ಸಾಗುತ್ತಿವೆ ಎಂಬ ಆತಂಕದ ಹೊತ್ತಿನಲ್ಲಿ ಒಳಿತಿನ ಮರುಹುಟ್ಟಿನ ಭರವಸೆ ಮೂಡಿಸಿದವು.

ನಾಟಕೋತ್ಸವದ ಪರದೆ ತೆರೆದುಕೊಳ್ಳುತ್ತಿದ್ದಂತೆ ಶಿವ ಸಂಚಾರದ ಕಲಾವಿದರು ಅಭಿನಯಿಸಿದ 'ತುಲಾಭಾರ' ಕತ್ತಲು ಕವಿದಿರುವ ಸಮಾಜದಲ್ಲಿ ಜ್ಞಾನದ ದೀವಿಗೆ ಹಚ್ಚುವ ಶಿಕ್ಷಕನೊಬ್ಬನ ಸೇವೆಯ ಸಂಗತಿ ಸಾರಿತು. ಈಗಂತೂ ಗುರು-ಶಿಷ್ಯರ ಸಮ್ಮಿಲನ ಸಮಾರಂಭಗಳು ಸಾಮಾನ್ಯವಾಗುತ್ತಿವೆ. ಶಿಕ್ಷಣ ಕೊಟ್ಟು ಬಡವರ ಬದುಕು ಬದಲಿಸಿದ ಗುರು 'ಮೈನುದ್ದೀನ್ ಖಾಜಿಗೆ ತುಲಾಭಾರ ಸೇವೆ' ಎಂಬ ಪರಿಕಲ್ಪನೆಯೇ ಸಾಮರಸ್ಯದ ಸಂದೇಶ ಸಾರುವಲ್ಲಿ ಯಶಸ್ವಿಯಾಯಿತು. ದೇವದಾಸಿಯರಿಗೆ ರಾತ್ರಿ ಪಾಠ, ವಯಸ್ಕರ ಶಿಕ್ಷಣ ಮುಂತಾದ ಚಿತ್ರಣಗಳು ಬದಲಾವಣೆಯ ಹಾದಿ ತೋರಿದವು. ಆಕಾಶವಾಣಿ ನಾಟಕವಾಗಿ ಪ್ರಸಿದ್ಧಿ ಪಡೆದಿದ್ದ ಬಿ.ಆರ್. ಪೊಲೀಸ್ ಪಾಟೀಲ್ ಅವರ 'ತುಲಾಭಾರ' ಈಗ ವಿಶ್ವೇಶ್ವರಿ ಹಿರೇಮಠ ಅವರಿಂದ ರಂಗರೂಪ ಪಡೆದು ಪ್ರೇಕ್ಷಕರಿಗೆ ಆಪ್ತ ಎನಿಸಿತು.

ವರನಟ ಡಾ.ರಾಜ್‌ಕುಮಾರ್ ಅಭಿನಯದ 'ಬಂಗಾರದ ಮನುಷ್ಯ' ಸಿನಿಮಾ ಆ ದಿನಗಳಲ್ಲಿ ಸಂಚಲನವನ್ನೇ ಸೃಷ್ಟಿಸಿತ್ತು. ದೇಶದ ಬೆನ್ನೆಲುಬು ಕೃಷಿಕನಿಗೆ ದೈವೀಕ ರೂಪ ಕೊಟ್ಟ ಈ ಸಿನಿಮಾ ಸಮಾಜದಲ್ಲಿ ಹಲವು ಬದಲಾವಣೆಗೆ ಕಾರಣವಾಗಿತ್ತು. ಸಿನಿಮಾಕ್ಕೆ ಹೊರತಾಗಿ ಟಿ.ಕೆ.ರಾಮರಾವ್ ಅವರ ಕಾಬಂಬರಿ ಆಧಾರಿತ 'ಬಂಗಾರದ ಮನುಷ್ಯ' ರಂಗರೂಪ ನಾಟಕೋತ್ಸವದಲ್ಲಿ ಭಿನ್ನವಾಗಿ ಕಂಡಿತು. ಆದರೂ ಗ್ರಾಮೀಣ ರೈತರು, ಪ್ರೇಕ್ಷಕರು ಸಿನಿಮಾ ನೆರಳಿನಲ್ಲೇ ನಾಟಕ ನೋಡಿದರು.

ಸಾಣೇಹಳ್ಳಿ ತರಳಬಾಳು ಶಾಖಾ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಪೀಠಾಧಿಪತಿಯಷ್ಟೇ ಅಲ್ಲ, ರಂಗಕರ್ಮಿಯೂ ಹೌದು. ಅನ್ನ, ಅಕ್ಷರ ದಾಸೋಹದ ಜೊತೆಯಲ್ಲೇ ರಂಗ ಕಾಯಕದಲ್ಲೂ ತೊಡಗಿಸಿಕೊಂಡವರು. ರಾಷ್ಟ್ರೀಯ ನಾಟಕೋತ್ಸವದಲ್ಲಿ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳ ವಿರಚಿತ 'ಕೋಳೂರು ಕೊಡಗೂಸು' ಹಾಗೂ 'ಅಕ್ಕ ನಾಗಲಾಂಬಿಕೆ' ನಾಟಕಗಳು ಪ್ರದರ್ಶನಗೊಂಡವು. ಪೌರಾಣಿಕ ಕತೆಯಾಧಾರಿತವಾದ ಎರಡೂ ನಾಟಕಗಳನ್ನು ಸ್ವಾಮೀಜಿ ವರ್ತಮಾನದ ದನಿಯಾಗಿಸಿದ್ದರು.

ಕಾಡಿದ ಕಾಲಚಕ್ರ

ಮಂಚಿಕೇರಿಯ ರಂಗಸಮೂಹ ಕಲಾವಿದರು ಪ್ರದರ್ಶಿಸಿದ ಹುಲುಗಪ್ಪ ಕಟ್ಟೀಮನಿ ನಿರ್ದೇಶನದ 'ಕಾಲಚಕ್ರ' ಪ್ರೇಕ್ಷಕರ ಮನಸ್ಸು ಕಲಕಿತು. ಆಧುನಿಕ ಕಾಲದ ಓಟದಲ್ಲಿ ವೃದ್ಧ ಪೋಷಕರನ್ನು ಸಲಹಲು ಮಕ್ಕಳಿಗೆ ಸಮಯವಿಲ್ಲ. ಮಕ್ಕಳು, ಮೊಮ್ಮಕ್ಕಳ ಪ್ರೀತಿಯ ಜೊತೆ ಬದುಕಬೇಕಾದ ಹಿರಿಯರು ವೃದ್ಧಾಶ್ರಮಗಳ ಗೋಡೆಗಳ ನಡುವೆ ಬಂಧಿಯಾದ ಚಿತ್ರಣ ಪ್ರಸ್ತುತ ಜೀವನ ಶೈಲಿಯ ಮೇಲೆ ಬೆಳಕು ಚೆಲ್ಲಿತು.

ಮಕ್ಕಳಿಲ್ಲದ ತಂದೆ-ತಾಯಿ ಮಗುವನ್ನು ದತ್ತು ಪಡೆಯುತ್ತಾರೆ. ಆದರೆ 'ತಂದೆ-ತಾಯಿಯನ್ನು ಕಳೆದುಕೊಂಡ ಮಕ್ಕಳು ವೃದ್ಧರನ್ನೇಕೆ ದತ್ತು ಪಡೆಯಬಾರದು' ಎಂಬ ಪ್ರಶ್ನೆಯ ಸುತ್ತ ನಾಟಕ ಪ್ರೇಕ್ಷಕರ ಮನಸೂರೆಗೊಂಡಿತು. ರಕ್ತ ಸಂಬಂಧಕ್ಕಿಂತಲೂ ಮಾನವ ಸಂಬಂಧ ಬಲು ದೊಡ್ಡದೆಂಬ ಸಂದೇಶ ಸಾರಿತು.

ಭಾಷೆಗಿಂತ ಭಾವನೆ ದೊಡ್ಡದು ಎಂಬ ಧ್ವನಿ ತಮಿಳಿನ 'ನಡಪಾವಾಡೈ' ರಂಗಪ್ರಯೋಗದ ಮೂಲಕ ವ್ಯಕ್ತವಾಯಿತು. ಪುದುಚೆರಿ ಕೇಂದ್ರಾಡಳಿತ ಪ್ರದೇಶದ ಹಳ್ಳಿಯೊಂದರಲ್ಲಿ ಹಿರಿಯರು ನಿಧನರಾದಾಗ ಮಹಿಳೆಯರೇ ಅವರ ಅಂತ್ಯಸಂಸ್ಕಾರ, ಅಪರ ಕರ್ಮಾದಿಗಳನ್ನು ನೆರವೇರಿಸುತ್ತಾರೆ. ವಾಸ್ತವದ ಕತೆಯೊಂದಿಗೆ ಸಂಶೋಧನೆಯ ಮೂಲಕ ಕಟ್ಟಲಾದ ಈ ನಾಟಕ ಪ್ರೇಕ್ಷಕರನ್ನು ಸಮಕಾಲೀನ ಸಾಮಾಜಿಕ ಸಂಪ್ರದಾಯಗಳತ್ತ ಕೊಂಡೊಯ್ಯುತ್ತದೆ. ಇಂದಿಗೂ ಸಮಾಜದಲ್ಲಿ ಜೀವಂತಿಕೆಯಾಗಿರುವ ಲಿಂಗ ಸಂವೇದನೆಯ ಪ್ರತಿರೂಪವಾಗಿ ನಿಲ್ಲುತ್ತದೆ. ತಮಿಳಿನ ನಾಟಕವಾದರೂ ಅಭಿನಯದ ಮೂಲಕವೇ 'ವೆಲಿಪ್ಪಡೈ ಥಿಯೇಟರ್ ಮೂವ್‌ಮೆಂಟ್' ಕಲಾವಿದರು ಪ್ರೇಕ್ಷಕರಲ್ಲಿ ಹೊಸ ಭಾವ ಅರಳಿಸುವಲ್ಲಿ ಯಶಸ್ವಿಯಾದರು.

ಶ್ರೀಕೃಷ್ಣ ಆಲನಹಳ್ಳಿ ಅವರ ಕಾದಂಬರಿಯಾಧಾರಿತ 'ಪರಸಂಗದ ಗೆಂಡೆತಿಮ್ಮ' ನಾಟಕ ಸಿನಿಮಾ ನೆರಳಿನಲ್ಲೇ ಸಾಗಿದರೂ ಬೆಂಗಳೂರಿನ 'ರೂಪಾಂತರ' ತಂಡದ ಕಲಾವಿದರ ಉತ್ಸಾಹದ ಅಭಿನಯ ಪ್ರೇಕ್ಷಕರಿಗೆ ಮುದ ನೀಡಿತು. ಶಿವಕುಮಾರ ಕಲಾಸಂಘದ ಹಿರಿಯ ಕಲಾವಿದರು ಅಭಿನಯಿಸಿದ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಜೀವನಾಧಾರಿತ 'ಮಹಾಬೆಳಗು' ನಾಟಕ ಪ್ರೇಕ್ಷಕರಲ್ಲಿ ಭಕ್ತಿ ಭಾವ ಮೂಡಿಸಿತು. ❖

ಲಾರಿ ಏರಿ ಬಂದರು...

ಸಾಣೇಹಳ್ಳಿಯ ಸುಂದರ ಪರಿಸರದಲ್ಲಿ ನಾಟಕ ನೋಡುವುದೇ ಕೆಲವರಿಗೆ ಜೀವನ ಪ್ರೀತಿಯ ಸಂಕೇತವಾಗಿದ್ದು ರಾಜ್ಯದ ವಿವಿಧೆಡೆಯಿಂದ ಅಲ್ಲಿಗೆ ಬಂದಿದ್ದರು. ಆದರೆ ಹೊಸದುರ್ಗ ತಾಲ್ಲೂಕಿನ ಗಡಿಯಲ್ಲಿರುವ ಸಾಣೇಹಳ್ಳಿಗೆ ಬಸ್ ಸಂಪರ್ಕವಿಲ್ಲ. ಕಡೂರು ಬಸ್ ಹತ್ತಿ, ಸಾಣೇಹಳ್ಳಿ ಗೇಟ್‌ನಲ್ಲಿ ಇಳಿದು ಮೂರು ಕಿಲೊಮೀಟರ್ ಸಾಗಬೇಕು.

ಗಣ್ಯರನ್ನು ಗೇಟ್‌ನಿಂದ ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿತ್ತು. ಸಾಮಾನ್ಯ ಪ್ರೇಕ್ಷಕರು ಗೇಟ್‌ನಿಂದ ಲಾರಿ, ಆಪೆ ಆಟೊ ಸೇರಿದಂತೆ ಸಿಕ್ಕಸಿಕ್ಕ ವಾಹನ ಹತ್ತಿ ಸಾಣೇಹಳ್ಳಿ ತಲುಪಿದರು. ಪ್ರಯಾಣದ ಕಷ್ಟದ ನಡುವೆಯೂ ನಾಟಕ ಪ್ರೀತಿ ಅನಾವರಣಗೊಳಿಸಿದರು. ರಾತ್ರಿ 9.30ಕ್ಕೆ ನಾಟಕ ಆರಂಭವಾಗಿ ಮಧ್ಯರಾತ್ರಿ 12 ಗಂಟೆಗೆ ಮುಗಿಯುತ್ತಿತ್ತು.

ಮನೆ ಮನಕೆ ಅಂಬೇಡ್ಕರ್–100

ಅರುಣ್ ಜೋಳದಕೂಡ್ಲಿಗಿ

ಆ ದಿನ ರಾತ್ರಿ ಹಳ್ಳಿಯೊಂದರ ರಸ್ತೆ ಬದಿಯ ಗೋಡೆಗೆ ಬ್ಯಾನರ್ ಕಟ್ಟಲಾಗಿತ್ತು. ಕುರ್ಚಿ ಮೇಲೆ ಅಂಬೇಡ್ಕರ್ ಭಾವಚಿತ್ರ. ಅಲ್ಲಿ ಪುರುಷರಿಗಿಂತ ಮಹಿಳೆಯರು ಮತ್ತು ಮಕ್ಕಳ ಹಾಜರಿಯೇ ಹೆಚ್ಚು. ಸಂಪನ್ಮೂಲ ವ್ಯಕ್ತಿ ಮೈಕ್ ಹಿಡಿದು ಬಾಬಾ ಸಾಹೇಬ್ ಅಂಬೇಡ್ಕರ್ ಕುರಿತು ಮಾತನಾಡುತ್ತಿದ್ದರು. ಎಲ್ಲರೂ ಅದಕ್ಕೆ ಕಿವಿಯಾಗಿದ್ದರು. ಇಂತಹದೇ ದೃಶ್ಯಗಳನ್ನು ರಾಯಚೂರು ಜಿಲ್ಲೆಯ ಹಳ್ಳಿ ಹಳ್ಳಿಗಳ ಗಲ್ಲಿಗಳಲ್ಲಿ, ಕೇರಿಗಳಲ್ಲಿ, ಬಯಲಲ್ಲಿ, ಗುಡಿಸಲುಗಳ ಮುಂದೆ ಮೂರು ವರ್ಷಗಳಿಂದ ಕಾಣಬಹುದು.

ರಾಯಚೂರು ಜಿಲ್ಲೆಯಲ್ಲಿ ಹೀಗೆ ನಡೆಯುತ್ತಿರುವ ಅಂಬೇಡ್ಕರ್ ಕುರಿತಾದ ಅರಿವು ಕಾರ್ಯಕ್ರಮದ ಹಿಂದಣ ಕಥೆ ಏನು ಎಂದು ಹುಡುಕಿದರೆ, 'ಮನೆ ಮನೆಗೆ ಅಂಬೇಡ್ಕರ್' ಎನ್ನುವ ಪುಟ್ಟ ಕಾರ್ಯಕ್ರಮ ಅನಾವರಣಗೊಂಡಿತು. ಇದರಿಂದಾಗಿ ರಾಯಚೂರು ಜಿಲ್ಲೆಯಾದ್ಯಾಂತ ಅಂಬೇಡ್ಕರ್ ಕುರಿತು ಮಾತನಾಡುವ ಹತ್ತಾರು ಸಂಪನ್ಮೂಲ ವ್ಯಕ್ತಿಗಳು ರೂಪುಗೊಂಡಿದ್ದಾರೆ. ವಿಶೇಷವಾಗಿ ದಲಿತ ಹೋರಾಟಗಳಲ್ಲಿ, ಹೊರಗಡೆ ಆಯೋಜಿಸುವ ಕಾರ್ಯಕ್ರಮಗಳಲ್ಲಿ, ಅಂಬೇಡ್ಕರ್ ಜಯಂತಿಗಳಲ್ಲಿ ಬಹುತೇಕ ಗಂಡಸರು ಮಾತ್ರ ಪಾಲ್ಗೊಳ್ಳುತ್ತಾರೆ. ಮನೆ ಮನೆಗೆ ಅಂಬೇಡ್ಕರ್ ಕಾರ್ಯಕ್ರಮದಲ್ಲಿ ಮಹಿಳೆಯರು ಮತ್ತು ಮಕ್ಕಳು ಹೆಚ್ಚು ಪಾಲ್ಗೊಳ್ಳುತ್ತಿದ್ದಾರೆ. ಇದರಿಂದಾಗಿ ಕಲಿಯುವ ಮಕ್ಕಳಲ್ಲಿ ಅಂಬೇಡ್ಕರ್ ಬಗೆಗೆ ಕುತೂಹಲ ಮೂಡುತ್ತಿದೆ. ಮಹಿಳೆಯರಲ್ಲಿಯೂ ಬಾಬಾ ಸಾಹೇಬರ ವಿಚಾರಗಳು ಬಿತ್ತನೆ ಆಗುತ್ತಿದೆ. ಮಹಿಳೆಯರೂ ಬಾಬಾ ಸಾಹೇಬರ ಕುರಿತು ಮಾತನಾಡುವಂತಾಗಿದೆ. ಕೆಲವು ವೇದಿಕೆಗಳಿಗೆ ಸೀಮಿತವಾಗಿದ್ದ ಅಂಬೇಡ್ಕರ್ ಈಗ ಮನೆ ಮನೆಗೆ ತಲುಪುತ್ತಿದ್ದಾರೆ. ಅಂತೆಯೇ ಅಂಬೇಡ್ಕರ್ ದಲಿತರಿಗೆ ಮಾತ್ರ ಎನ್ನುವ ನಂಬಿಕೆಯೂ ಬದಲಾಗಿ ಮುಸ್ಲಿಮರ ಮನೆಗಳನ್ನೂ ಒಳಗೊಂಡಂತೆ ಅಸ್ಪೃಶ್ಯ ಸಮುದಾಯಗಳನ್ನು ಹೊರತುಪಡಿಸಿ ಪರಿಶಿಷ್ಟ ಪಂಗಡದವರ, ಹಿಂದುಳಿದ ಸಮುದಾಯಗಳು ಈ ಕಾರ್ಯಕ್ರಮ ಮಾಡಲು ಮುಂದೆ ಬರುತ್ತಿವೆ.

ಏನಿದು 'ಮನೆ ಮನೆಗೆ ಅಂಬೇಡ್ಕರ್'?

ಅಂಬೇಡ್ಕರ್ ಬಗೆಗೆ ಪ್ರೀತಿ ಅಭಿಮಾನ ಇರುವ, ಅಂಬೇಡ್ಕರ್ ಬಗ್ಗೆ ತಿಳಿದುಕೊಳ್ಳಬೇಕು ಎನ್ನುವ ಕುತೂಹಲ ಇರುವವರು ತಮ್ಮ ಮನೆಯಲ್ಲಿ ಈ ಕಾರ್ಯಕ್ರಮ ಮಾಡುವುದಾಗಿ ಕೋರುತ್ತಾರೆ. ಮನೆಯವರೇ ಅಂಬೇಡ್ಕರ್ ಬಗ್ಗೆ ಮಾತನಾಡಬಹುದು, ಇದು ಸಾಧ್ಯವಾಗದೇ ಇದ್ದರೆ ಆಯೋಜಕರೇ ಸಂಪನ್ಮೂಲ ವ್ಯಕ್ತಿಯೊಬ್ಬರನ್ನು ಗುರುತು ಮಾಡುತ್ತಾರೆ. ಚಾಲನೆಗೊಬ್ಬ ಹಿರಿಯರ ಗೊತ್ತು ಮಾಡುತ್ತಾರೆ. ಸೋಷಿಯಲ್ ಮೀಡಿಯಾಗಳಲ್ಲಿ ಪ್ರಚಾರ ಮಾಡುತ್ತಾರೆ. ವೇದಿಕೆ ಶಿಷ್ಟಾಚಾರಗಳಿಲ್ಲದೆ ಸರಳವಾಗಿ ಮಾತು-ಚರ್ಚೆ ನಡೆಯುತ್ತವೆ. ಆ ದಿನ ಮನೆಯವರ ಸರಳ ಆತಿಥ್ಯ ಸ್ವೀಕರಿಸಿ, ನೆನಪಿಗೆ ಅಂಬೇಡ್ಕರ್ ಭಾವಚಿತ್ರವನ್ನು ನೀಡಿ ಎಲ್ಲರೂ ಮರಳುತ್ತಾರೆ. ಇದಿಷ್ಟು ಮನೆ ಮನೆಗೆ ಅಂಬೇಡ್ಕರ್ ಕಾರ್ಯಕ್ರಮದ ಸ್ವರೂಪ. ವಾರಕ್ಕೊಂದು ಮನೆಯಂತೆ ಮನೆ ಅಂಗಳದಲ್ಲಿ ಸಂಜೆ 6.30 ಕ್ಕೆ ಆರಂಭವಾಗಿ 8.30 ಕ್ಕೆ ಕಾರ್ಯಕ್ರಮ ಮುಗಿಯುತ್ತದೆ.

> “ ಮನೆಗಳಲ್ಲಿರುವ ಹೆಣ್ಣುಮಕ್ಕಳಿಗೆ ಅಂಬೇಡ್ಕರ್ ತಲುಪಬೇಕು. ಅಂಬೇಡ್ಕರ್ ಅವರ ಚಿಂತನೆಯ ಶಕ್ತಿ ಮಹಿಳಾ ನಾಯಕಿಯರನ್ನು ಬೆಳೆಸುತ್ತದೆ ”
>
> ರೂಪ ಶ್ರೀನಿವಾಸ ನಾಯಕ
>
> ರೈತ ನಾಯಕಿ ರಾಯಚೂರು

ಮನೆ ಮನೆಗೆ ಅಂಬೇಡ್ಕರ್ ಕಾರ್ಯಕ್ರಮ

ಜನವರಿ 26, 2022ರ ಗಣರಾಜ್ಯೋತ್ಸವ ದಿನದಂದು ಪರಿಶಿಷ್ಟ ಪಂಗಡದ ಬಸವರಾಜ ನಾಯಕ ಅವರ ಮನೆಯಲ್ಲಿ ಮೊದಲ ಕಾರ್ಯಕ್ರಮ ನಡೆಯಿತು. ಹೀಗೆ ಶುರುವಾದ ಅಭಿಯಾನ ಮೂರನೆ ವರ್ಷದಲ್ಲಿ ನವಂಬರ್ 10ರಂದು ನೂರನೇ ಮನೆಗೆ ಅಂಬೇಡ್ಕರ್ ಪ್ರವೇಶಿಸಿದರು. ನೂರನೆ ವಿಶೇಷ ಕಾರ್ಯಕ್ರಮದಲ್ಲಿ ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಭಾಗಹಿಸಿದ್ದರು.

'ಬುದ್ಧನ ಮತ್ತು ಬೌದ್ಧದಮ್ಮದ ಅರಿವನ್ನು ಮನೆ ಮನೆಗೆ ತಲುಪಿಸುವ 'ಧಮ್ಮದೀಪ' ಎನ್ನುವ ಕಾರ್ಯಕ್ರಮವನ್ನು ಹಿಂದೆ ಮಾಡುತ್ತಿದ್ದೆವು. ಈ ಮಾದರಿಯಲ್ಲಿ 'ಮನೆ ಮನೆಗೆ ಅಂಬೇಡ್ಕರ್' ರೂಪಿಸಿದೆವು. ಯಾರಿಗೂ ಹೊರೆಯಾಗದಂತೆ, ಖರ್ಚಿಲ್ಲದೆ ಅಂಬೇಡ್ಕರ್ ಚಿಂತನೆಯನ್ನು ಮಹಿಳೆಯರು ಮತ್ತು ಮಕ್ಕಳಿಗೆ ತಲುಪಿಸಿ ವಿಸ್ತರಿಸುವ ಕನಸೊತ್ತು ಆರಂಭಿಸಿದೆವು' ಎನ್ನುತ್ತಾರೆ ಆಯೋಜಕರಲ್ಲಿ ಒಬ್ಬರಾದ ಎಂ.ಆರ್.ಭೇರಿ.

ಇಂತಹದ್ದೊಂದು ಕನಸೊತ್ತು ರಾಯಚೂರಿನ ಜೆ.ಶರಣಪ್ಪ ಬಲ್ಲಟಗಿ, ಎಂ.ಆರ್.ಭೇರಿ ಅವರ ಮುಂದಾಳತ್ವದಲ್ಲಿ ಶಿವಪ್ಪ ನಾಯಕ, ಮೋದಿನ್ ಸಾಬ್ ಮೊದಲಾದ ಸಂಗಾತಿಗಳು ಸೇರಿಕೊಂಡು, 'ಬಹುಜನ ಸಂಘರ್ಷ ಸಮಿತಿ' ರಚಿಸಿ, ಮೊದಲ ಹಂತದಲ್ಲಿ ರಾಯಚೂರು ಜಿಲ್ಲೆಯಲ್ಲಿ 'ಮನೆ ಮನೆಗೆ ಅಂಬೇಡ್ಕರ್' ಕಾರ್ಯಕ್ರಮ ರೂಪಿಸಿದರು. 'ಅಂಬೇಡ್ಕರ್ ಜಾತಿ ಮತ ಮೀರಿ ಎಲ್ಲರ ಮನೆಗಳಿಗೂ ತಲುಪಬೇಕೆಂಬ ಆಶಯದಲ್ಲಿ 'ಬಹುಜನ ಸಂಘರ್ಷ ಸಮಿತಿ' ಎಂದು ಹೆಸರಿಸಲಾಯಿತೇ ಹೊರತು ರಾಜಕೀಯ ಪಕ್ಷ 'ಬಹುಜನ ಸಮಾಜ ಪಕ್ಷ'ಕ್ಕೂ ನಮಗೂ ಸಂಬಂಧವಿಲ್ಲ. ಮೊದಲಿಗೆ ಬಹುಜನ ಸಮಾಜ ಪಕ್ಷದವರಿಂದಲೂ, ನಂತರ ದಲಿತ ಸಂಘಟನೆಗಳ ಮುಖಂಡರುಗಳಿಂದಲೂ ಸ್ವಲ್ಪ ಮಟ್ಟಿನ ವಿರೋಧ ಬಂತು. ಈಗ ಈ ಕಾರ್ಯಕ್ರಮವನ್ನು ನೋಡಿ ಎಲ್ಲರೂ ಮೆಚ್ಚಿಕೊಂಡಿದ್ದಾರೆ' ಎನ್ನುತ್ತಾರೆ ಶರಣಪ್ಪ ಬಲ್ಲಟಗಿ. ಇದೀಗ ಈ ಕಾರ್ಯಕ್ರಮ ಆಯೋಜನೆಯ ತಾಲ್ಲೂಕು ಘಟಕಗಳನ್ನು ಮಾಡಿ ಜವಾಬ್ದಾರಿಗಳನ್ನು ಬೇರೆ ಬೇರೆಯವರಿಗೂ ಹಂಚಲಾಗಿದೆ. ಈ ಯೋಜನೆಯನ್ನು ಇತರೆ ಜಿಲ್ಲೆಗಳನ್ನು ಒಳಗೊಂಡಂತೆ ರಾಜ್ಯವ್ಯಾಪಿ ವಿಸ್ತರಿಸುವ ಕನಸು ಈ ಸಂಘಟಕರದು.

ಸಿರವಾರ ತಾಲ್ಲೂಕಿನ ಮಾಚನೂರಿನ ಶಿಕ್ಷಕರಾದ ಮೋದೀನ್ ಸಾಬ್ 'ಅಂಬೇಡ್ಕರ್ ಎಸ್ಸಿ ಎಸ್ಟಿಗೆ ಸೀಮಿತ ಅಲ್ಲ. ಅವರನ್ನು ಒಂದು ಜಾತಿ, ಧರ್ಮಕ್ಕೆ ಸೀಮಿತ ಮಾಡಬಾರದು. ಶಾಲೆಯಲ್ಲಿ ನಾವು ಮಕ್ಕಳಿಗೆ ಪಾಠ ಇದ್ರೂ ಅಂಬೇಡ್ಕರ್ ಬಗ್ಗೆ ಹೆಚ್ಚಾಗಿ ಹೇಳಿಕೊಡಲ್ಲ, ಮನೆಗಳಲ್ಲಿ ಅಂಬೇಡ್ಕರ್ ಬಗ್ಗೆ ಹೆಚ್ಚೆಚ್ಚು ಮಾತಾಡಿದರೆ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತೆ, ಮತ್ತದೇ ಮಕ್ಕಳು ಶಾಲೆಯಲ್ಲೂ ಅಂಬೇಡ್ಕರ್ ಬಗ್ಗೆ ಮಾತಾಡೋಕೆ ಶುರು ಮಾಡ್ತಾರೆ' ಎನ್ನುತ್ತಾರೆ.

ಒಂದೆಡೆ ಚಿಂತಕರಾದ ಆಕಾಶ್ ಸಿಂಗ್ ರಾಥೋರ್, ಸೂರಜ್ ಯಂಗ್ಡೆ, ಅಶೋಕ್ ಗೋಪಾಲ್, ಆನಂದ ತೇಲ್ತುಂಬ್ಡೆ, ಸುಖದೇವ್ ಥೋರಟ್, ಕ್ರಿಸ್ಟಫರ್ ಜಫರಲೆಟ್, ಅರುಂಧತಿ ರಾಯ್ ಮೊದಲಾದವರ ಬರಹಗಳು ಜಾಗತಿಕವಾಗಿ ಅಂಬೇಡ್ಕರ್ ಬದುಕು ಮತ್ತು ಚಿಂತನೆಯನ್ನು ಭಿನ್ನವಾಗಿ ಪರಿಚಯಿಸುತ್ತಿವೆ. ಮತ್ತೊಂದೆಡೆ ಹಳ್ಳಿ ಹಳ್ಳಿಗಳಲ್ಲಿ ಮನೆ ಮನೆಗಳಿಗೆ ಅಂಬೇಡ್ಕರ್ ಅವರನ್ನು ತಲುಪಿಸುವ 'ಮನೆ ಮನೆಗೆ ಅಂಬೇಡ್ಕರ್' ತರಹದ ಕಾರ್ಯಕ್ರಮಗಳೂ ಅಂಬೇಡ್ಕರ್ ಅರಿವನ್ನು ವಿಸ್ತರಿಸುವ ಅರ್ಥಪೂರ್ಣ ಪ್ರಯತ್ನವಾಗಿದೆ. ❖

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ರೂಪಾಗ್ನಿರಾಶಿ

ಕುವೆಂಪು ಅವರು ಬ್ರಹ್ಮಶಿಲ್ಪಿಯ ಅನನ್ಯ ಕೃತಿ ಹೆಣ್ಣನ್ನು 'ರೂಪಾಗ್ನಿರಾಶಿ' ರೂಪಕದಲ್ಲಿ ಚಿತ್ರಿಸಿದ್ದಾರೆ. ಆ ಪದ ಹೊಸತಾಗಿದೆ. ಆ 'ರೂಪಾಗ್ನಿರಾಶಿ'ಗೆ ಕವಿಯ ಕಣ್ಣು ಪತಂಗದಂತೆ ಮೃತ್ಯುಮಾಧುರ್ಯಕ್ಕೆ ಮನಸೋತು ಓಡೋಡಿ ಮುನ್ನುಗ್ಗುತ್ತಿದೆ ಎಂದು ಬಣ್ಣಿಸಿದ್ದಾರೆ. ಅದು ಹೆಣ್ಣಿನ ಆಕಾರ ಚೆಲುವು ಬಣ್ಣದ ಮಧುರತೆಗೆ ಗಂಡು ಆಕರ್ಷಿತನಾಗಿ ಬಂಧಿಯಾಗುವುದನ್ನು ಧ್ವನಿಸಿದೆ. ಅವರು ಇಲ್ಲಿ ಪ್ರಯೋಗಿಸಿರುವ 'ಮೃತ್ಯು ಮಾಧುರ್ಯ' ವಿಶಿಷ್ಟ ಪದವಾಗಿದ್ದು - ಸೌಂದರ್ಯಾಕರ್ಷಣೆ ಮೀರಿ ಆಧ್ಯಾತ್ಮ ಭಾವಾಲಿಂಗನಕ್ಕೂ ಒಳಗಾಗುತ್ತದೆ.

'ಕಬ್ಬಿಗನ ಕಣ್ಣು
ರೂಪಾಗ್ನಿರಾಶಿಗೆ ಪತಂಗದಂದದೊಳೋಡಿ
ಮುನ್ನುಗುತಿದೆ, ಮೃತ್ಯು ಮಾಧುರ್ಯಕ್ಕೆ ಮನಸೋತು.'
(ಹೆಣ್ಣು – ಕೃತ್ತಿಕೆ)

ಸಂತೆಗಣ್ಣು

ಗುಂಪುಸೇರಿ ವ್ಯಾಪಾರ ಮಾಡುವ ಸ್ಥಳ ಸಂತೆ. ಅದು ಅನೇಕ ಬಗೆಯ ವಸ್ತುಗಳ ಪ್ರದರ್ಶನ, ಮನರಂಜನೆಗಳಿಂದ ಕೂಡಿದ ನೆರವಿ (ಸಮೂಹ). ಅಲ್ಲಿ ಸಮುದಾಯವು ತನ್ನ ಉಪಯೋಗ, ಅನುಕೂಲಕ್ಕೆ ತಕ್ಕಂತೆ ಸಾಮಾನ್ಯವಾದ ವಸ್ತು ಸಂಗತಿಗಳತ್ತ ಗಮನಹರಿಸುತ್ತದೆ. ಅಂತಹ ಸಂತೆ ಮಂದಿಯ ಕಣ್ಣುಗಳ ಲಕ್ಷಣವನ್ನು ಕುವೆಂಪು 'ಸಂತೆಗಣ್ಣು' ಎಂಬ ಪದ ಸೃಷ್ಟಿಸಿ ಕಾವ್ಯದಲ್ಲಿ ಪ್ರಯೋಗಿಸಿದ್ದಾರೆ. ಅದಕ್ಕೆ ಸೂಕ್ಷ್ಮವಾಗಿ ವಸ್ತು ವಿಶೇಷವನ್ನು, ವ್ಯಕ್ತಿತ್ವದ ಘನತೆಯನ್ನು ಅವಲೋಕಿಸುವ ಸಮಾಧಾನದ, ಶಾಂತಚಿತ್ತದ ಗುಣಲಕ್ಷಣಗಳಿರುವುದಿಲ್ಲ.

ಅಂತಹ 'ಸಂತೆಗಣ್ಣು'ಗಳಿಗೆ ಕಾಣದೆ ಇದ್ದ ತಪಸ್ವಿ ಊರ್ಮಿಳೆ ಯನ್ನು ಕುವೆಂಪು ಒಂದು ಸಾನೆಟ್‌ನಲ್ಲಿ ಹೀಗೆ ಚಿತ್ರಿಸಿದ್ದಾರೆ.

'ರಾಮಾಯಣದ ಮಹಾರತ್ನವೇದಿಯ ಮೇಲೆ
ಮೂಲೆಯಲಿ, ನಿಂತಿರುವುದೊಂದಮೃತ ಶಿಲ್ಪಕೃತಿ,
ನಾಣ್ಚಿ, ಕಾಣದೆ ಸಂತೆಗಣ್ಗಳಿಗೆ: ಪೂರ್ಣಸತಿ,
ಊರ್ಮಿಳಾದೇವಿ, ಲಕ್ಷ್ಮಣ ಚಿರ ತಪಶ್ಶೀಲೆ!'
(ಊರ್ಮಿಳಾದೇವಿ - ಕೃತ್ತಿಕೆ)

ಕಸ ವಿಲೇವಾರಿಯ ವೀರಾಗ್ರಣಿ...

12ನೇ ಪುಟದಿಂದ...

ಅವರ ಮೇಲೆ ನ್ಯಾಯನಿಂದನೆ ಖಟ್ಲೆ ಹಾಕಬಹುದು. ಅಂತೂ ಹೊಣೆಗೇಡಿ ಅಧಿಕಾರಿಗಳನ್ನು ಸರಿದಾರಿಗೆ ತರಬಲ್ಲ ಮಹಾ ಅಸ್ತ್ರವೊಂದನ್ನು ಜನಸಾಮಾನ್ಯರಿಗೆ ಕೊಡಿಸಿದ ಶ್ರೇಯ ಆಲ್ಮಿತ್ರಾ ಪಟೇಲರಿಗೆ ಸಂದಿದೆ.

ನಾವು ಈ ಅಸ್ತ್ರವನ್ನು ಹೇಗೆ ಬಳಸುತ್ತೇವೆ, ಅಥವಾ ಕಡೆಗಣಿಸಿ ಕೊಳಕು ರಸ್ತೆಯಲ್ಲೇ ಸಾಗುತ್ತೇವೆ ಅನ್ನೋದು ಬೇರೆ ವಿಚಾರ. ನ್ಯಾಯವಾದಿಗಳು ಇತ್ತ ಆಸಕ್ತಿ ವಹಿಸುತ್ತಾರೊ ಅದೂ ಬೇರೆ ವಿಚಾರ. ಆದರೆ ಒಬ್ಬ ಮಹಿಳೆ, ಆಲ್ಮೋಸ್ಟ್ ಏಕಾಂಗಿಯಾಗಿ ಹೋರಾಡಿ, ತನ್ನ ಶ್ರಮ, ಹಣ ಮತ್ತು ಛಲದಿಂದಾಗಿ ಇಡೀ ದೇಶದ ಜನಾರೋಗ್ಯವನ್ನೂ ಮರ್ಯಾದೆಯನ್ನೂ ಕಾಪಾಡಬಲ್ಲಂಥ ಕಾನೂನುಗಳಿಗೆ ಕಾರಣರಾದರಲ್ಲ-ಅದು ತೀರ ಅಪರೂಪ ಘಟನೆ.

ಅವರೇನೂ ನ್ಯಾಯವಾದಿಯಲ್ಲ, ಕಾನೂನು ತಜ್ಞರಲ್ಲ, ಕೆಮಿಕಲ್ ವಿಜ್ಞಾನಿಯಲ್ಲ, ಪರಿಸರ ವಿಜ್ಞಾನದ ಪದವೀಧರೆ ಅಲ್ಲ, ಸಾರ್ವಜನಿಕ ಆರೋಗ್ಯ ಕ್ಷೇಮಚಿಂತನೆ ಮಾಡಬೇಕಾದ ಡಾಕ್ಟರ್ ಕೂಡ ಅಲ್ಲ; ಬೀದಿಗಿಳಿದು ಹೋರಾಡುವ ಧೀರ ಸಾಹಸಿಯೂ ಅಲ್ಲ. ಆದರೂ-ಅವರೆಲ್ಲರ ಪಾತ್ರವನ್ನು ತಾನೇ ನಿರ್ವಹಿಸಿದ ಧೀರೆ ಇವರು. ಆಲ್ಮಿತ್ರಾ ಎಂದರೆ ಪಾರ್ಸಿ ಭಾಷೆಯ 'ಸರ್ವರಿಗೂ ಪ್ರಿಯ' ಎಂಬರ್ಥವನ್ನು ಸಾರ್ಥಕ ಗೊಳಿಸಿಕೊಂಡವರು. ❖

ಮುನ್ನೋಟ 17-11-2024 ರಿಂದ 23-11-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ನಿಮ್ಮಲ್ಲಿ ಸಾಕಷ್ಟು ಆಲಸ್ಯ ಇರುತ್ತದೆ. ಆದಾಯವು ಉತ್ತಮವಾಗಿರುತ್ತದೆ. ಹಲವು ಮೂಲಗಳಿಂದ ಆದಾಯ ಬರುವ ಸಾಧ್ಯತೆ ಇದೆ. ನಿಮ್ಮ ಕಾರ್ಯಗಳಿಗೆ ಹಿರಿಯರು ಅಡ್ಡಿ ಬರುವ ಸಾಧ್ಯತೆ ಇದೆ. ಆಸ್ತಿ ಸಂಬಂಧಿಸಿದ ವಿಚಾರದಲ್ಲಿ ಮುಂದುವರೆಯಬಹುದು. ಸ್ವಂತ ಕುಟುಂಬದಲ್ಲಿ ಕಲಹಗಳಿರುತ್ತವೆ. ಮಕ್ಕಳು ನಿಮ್ಮ ವಿರುದ್ಧ ಮಾತನಾಡಬಹುದು. ವಿದ್ಯಾರ್ಥಿಗಳಿಗೆ ಪ್ರಯತ್ನದಷ್ಟೇ ಯಶಸ್ಸು ಇರುತ್ತದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ಮನಸ್ಸಿನಲ್ಲಿ ಬಹಳ ಆನಂದವಿರುತ್ತದೆ. ಕೈಹಾಕಿದ ಕೆಲಸಗಳಲ್ಲೆಲ್ಲ ಯಶಸ್ಸು ದೊರಕುತ್ತದೆ. ಆದಾಯ ನಿಮ್ಮ ಅಪೇಕ್ಷೆಯಂತೆ ಇರುತ್ತದೆ. ಒಡಹುಟ್ಟಿದವರೊಡನೆ ಬಾಂಧವ್ಯ ಹೆಚ್ಚುತ್ತದೆ. ವ್ಯವಹಾರಗಳಲ್ಲಿ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಇರುತ್ತದೆ. ಸಂಗಾತಿ ಜೊತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ನಿಮ್ಮ ನಿರ್ಧಾರಗಳಲ್ಲಿ ದ್ವಂದ್ವ ಇರುತ್ತದೆ. ಕೃಷಿಯಿಂದ ಅಧಿಕ ಲಾಭವಿರುತ್ತದೆ. ಒಡಹುಟ್ಟಿದವರಿಂದ ನಿರೀಕ್ಷಿತ ಸಹಕಾರ ದೊರೆಯುವುದಿಲ್ಲ. ಆಸ್ತಿ ವಿಚಾರದಲ್ಲಿ ಮುಂದುವರಿಯುವುದು ಬೇಡ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ರಕ್ತ ಸಂಬಂಧಿ ಕಾಯಿಲೆಗಳು ಮತ್ತು ಕಣ್ಣಿನ ತೊಂದರೆ ಇರುವವರು ಎಚ್ಚರ ವಹಿಸಿ. ಸಂಗಾತಿಯಿಂದ ನಿಮಗೆ ಸಾಕಷ್ಟು ಅನುಕೂಲವಿರುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ಮನಸ್ಸಿನಲ್ಲಿ ಸಾಕಷ್ಟು ಧೈರ್ಯವಿದ್ದರೂ ಅದನ್ನು ತೋರಿಸುವ ಸಾಮರ್ಥ್ಯ ಇರುವುದಿಲ್ಲ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪಬಹುದು. ನಿಮ್ಮ ಧರ್ಮಕಾರ್ಯಗಳಿಗೆ ಹಿರಿಯರ ಸಹಾಯ ಸಿಗುತ್ತದೆ. ಸ್ಥಿರಾಸ್ತಿಯನ್ನು ಕೊಳ್ಳುವ ವಿಚಾರದಲ್ಲಿ ಸರಿಯಾಗಿ ಆಲೋಚನೆ ಮಾಡಿ. ವಿದ್ಯಾರ್ಥಿಗಳಿಗೆ ಸ್ವಲ್ಪ ಕಡಿಮೆ ಯಶಸ್ಸು ಸಿಗಬಹುದು. ಹಣಕಾಸಿನ ವ್ಯವಹಾರಗಳಲ್ಲಿ ಸಾಕಷ್ಟು ವ್ಯತ್ಯಾಸಗಳಾಗಬಹುದು.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಕೆಲವೊಂದು ಪ್ರಯತ್ನಗಳು ಯಶಸ್ವಿಯಾಗಿ ನಿಮಗೆ ಸಂತೋಷವಾಗುತ್ತದೆ. ಆದಾಯವು ಸಾಮಾನ್ಯವಾಗಿರುತ್ತದೆ. ನಿಮ್ಮೆಲ್ಲ ಕೆಲಸ ಕಾರ್ಯಗಳಿಗೆ ಹಿರಿಯರ ಸಹಕಾರ ದೊರೆಯುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಲಾಭ ಇರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿದೆ. ಮೂಳೆ ಸಂಬಂಧಿ ರೋಗಗಳಿರುವವರು ಎಚ್ಚರ ವಹಿಸಿ. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಲಾಭ ಹೆಚ್ಚುತ್ತದೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ವಿಪರೀತವಾದ ಆಲಸ್ಯ ನಿಮ್ಮಲ್ಲಿ ಇರುತ್ತದೆ. ಇದರಿಂದ ಹೊರಗೆ ಬರುವುದು ಬಹಳ ಉತ್ತಮ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಹಣಕಾಸಿನ ವ್ಯವಹಾರ ಮಾಡುವವರಿಗೂ ಸ್ವಲ್ಪ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಯಶಸ್ಸು ಬಹಳ ಕಡಿಮೆ. ಉಸಿರಾಟದ ತೊಂದರೆ ಹಾಗೂ ಶ್ವಾಸಕೋಶದ ತೊಂದರೆಗಳಿರುವವರು ಎಚ್ಚರವಹಿಸಿ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**

ಸರ್ಕಾರದಿಂದ ಬರಬೇಕಾಗಿದ್ದ ಹಣ ಬರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಮಹಿಳೆಯರು ಸಹಕಾರ ನೀಡುವರು. ಭೂಮಿ ವ್ಯವಹಾರಗಳಲ್ಲಿ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದಷ್ಟು ಯಶಸ್ಸು ಇರುವುದಿಲ್ಲ. ಸ್ನಾಯು ಸೆಳೆತ ಇರುವವರು ಎಚ್ಚರವಹಿಸಿ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಸೂಕ್ತ ಅವಕಾಶಗಳು ದೊರೆಯುತ್ತವೆ. ತಂದೆಯಿಂದ ವ್ಯವಹಾರಕ್ಕೆ ಆರ್ಥಿಕ ಸಹಾಯ ಸಿಗುತ್ತದೆ.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**

ಆದಾಯವು ಉತ್ತಮವಾಗಿರುತ್ತದೆ. ಶತ್ರುಗಳು ನಿಮ್ಮ ತಂಟೆಗೆ ಬರುವುದನ್ನು ನಿಲ್ಲಿಸುವರು. ಕೃಷಿಭೂಮಿ ಮಾರುವವರಿಗೆ ಲಾಭವಿರುತ್ತದೆ. ಆಸ್ತಿ ಕೊಳ್ಳಲು ಹೆಚ್ಚು ಹಣ ಹೂಡುವುದು ಬೇಡ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಸೂಕ್ತ ಅವಕಾಶಗಳು ದೊರೆಯುತ್ತವೆ. ಗುಪ್ತಾಂಗದ ಸಮಸ್ಯೆಗಳಿರುವವರು ಎಚ್ಚರ ವಹಿಸಿ. ಇದಕ್ಕಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. ಸಂಗಾತಿಯಿಂದ ಸಾಕಷ್ಟು ಅನುಕೂಲಗಳು ಒದಗಿ ಬರುತ್ತವೆ.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**

ನಿಮ್ಮ ಆಲೋಚನೆಗಳು ಸಾಕಷ್ಟು ತರ್ಕಬದ್ಧವಾಗಿರುತ್ತವೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಶತ್ರುಗಳು ನಿಮ್ಮ ನಡವಳಿಕೆಯನ್ನು ನೋಡಿ ಗಾಬರಿ ಬಿದ್ದು ಹಿಂದೆ ಸರಿಯುವರು. ವಿದೇಶದಲ್ಲಿರುವವರು ಸ್ಥಿರಾಸ್ತಿಗಳನ್ನು ಮಾಡಿಕೊಳ್ಳಲು ಅನುಕೂಲಕರವಾದ ಕಾಲ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ಶೀತಬಾಧೆ ಇರುವವರು ಎಚ್ಚರ ವಹಿಸಿ. ವ್ಯಾಪಾರ, ವ್ಯವಹಾರಗಳಲ್ಲಿ ಏಳಿಗೆ ಇರುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ಶ್ರದ್ಧೆಯಿಂದ ಕೆಲಸ ಮಾಡಿ ಹೆಸರು ಗಳಿಸುವಿರಿ. ನಿಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವತ್ತ ಗಮನಹರಿಸುವಿರಿ. ವಿದೇಶದಲ್ಲಿರುವವರಿಗೆ ಸ್ಥಳೀಯರ ಸಹಕಾರ ದೊರೆಯುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಲಾಭ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಫಲಿತಾಂಶ ದೊರೆಯುವ ಸಾಧ್ಯತೆಯಿದೆ. ತಲೆನೋವು ಕೆಲವರನ್ನು ಕಾಡಬಹುದು. ಸಂಗಾತಿಯಿಂದ ಜಮೀನು ದೊರೆಯುವ ಸಾಧ್ಯತೆಯಿದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಹಿರಿಯರ ಶಾಂತ ಸ್ವಭಾವ ಅವರಿಗೆ ಗೌರವವನ್ನು ತರುತ್ತದೆ. ತಾಳ್ಮೆಯಿಂದ ಅವರು ಎಲ್ಲವನ್ನೂ ಪರಿಹರಿಸಿಕೊಳ್ಳುವರು. ವಿದೇಶಿ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಭೂಮಿ ವ್ಯವಹಾರವನ್ನು ಮಾಡುವವರಿಗೆ ಹೆಚ್ಚಿನ ಲಾಭ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಸಂಗಾತಿಯ ಸಹಾಯದಿಂದ ಸರ್ಕಾರಿ ಕೆಲಸ ಕಾರ್ಯಗಳು ಶೀಘ್ರಗತಿಯಲ್ಲಿ ಆಗುತ್ತವೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ನಿಮ್ಮಲ್ಲಿ ಸಾಕಷ್ಟು ಅಸಹನೆ ತುಂಬಿರುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಬಂಧುಗಳ ಸಹಕಾರವು ಸ್ವಲ್ಪ ಮಟ್ಟಿಗೆ ದೊರೆಯುತ್ತದೆ. ಸ್ಥಿರಾಸ್ತಿಯನ್ನು ಕೊಳ್ಳಲು ಕಾಲ ಪಕ್ವವಾಗಿದೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ಸಂಗಾತಿಯು ನಿಮ್ಮ ಕಡೆಗೆ ಗಮನಹರಿಸುತ್ತಿಲ್ಲವೆಂಬ ಕೊರಗಿರುತ್ತದೆ. ವೃತ್ತಿಯಲ್ಲಿ ಹಿರಿಯ ಅಧಿಕಾರಿಗಳನ್ನು ಎದುರು ಹಾಕಿಕೊಳ್ಳುವುದು ಬೇಡ.

ಪದಬಂಧ 2866



ಮೇಲಿನಿಂದ ಕೆಳಕ್ಕೆ

1. ವಿಸ್ಮಯವನ್ನು ಕಂಡಾಗ ಮನಸ್ಸಿಗೆ ಒದಗುವ ಸ್ಥಿತಿ 3
2. ಭೀಕರತೆಯ ಕಪ್ಪು ಛಾಯೆ 3
3. ಮರ್ಯಾದೆಯೇ ದೊಡ್ಡದೆಂದು ನಂಬಿರುವ ಮಾನಿನಿ 4
4. ಇದು ಗಟ್ಟಿಯಾಗಿದ್ದರೆ ಮನೆ ಭದ್ರವಾಗಿರುತ್ತದೆ 4
7. ಸಂಕ್ರಾಂತಿಯಂದು ಸೂರ್ಯ ಮುಟ್ಟುವ ಗುಂಪು 3
8. ಒಂದು ಸಾವಿರ ಹೆಸರುಗಳನ್ನು ಹೇಳುವ ಪೂಜಾ ಕೈಂಕರ್ಯ 5
9. ಆಗ ತಾನೇ ಜನ್ಮತಾಳಿದ್ದು 4
10. ಗುರುಪೀಠದ ವ್ಯವಸ್ಥೆಯ ಒಡೆಯ 4
12. ಹಾಲಿನ ಗಟ್ಟಿತನವನ್ನು ಅಳೆಯುವ ಸಾಧನ 3
13. ಕರಟಕನ ಜೊತೆ ಸೇರಿ ಹತ್ತಿಕ್ಕುವ ಬುದ್ಧಿಯ ಪಂಚತಂತ್ರದ ನರಿ 4
14. ದೇಶದ ರಕ್ಷಣೆಗೆ ಮೀಸಲಾದ ಸೇನೆ 4
15. ಒಂದು ಹಾಳೆಯಲ್ಲಿ ಸುದ್ದಿ ಹಂಚುವ ಓಲೆ 3
16. ಸಮಯಕ್ಕೆ ಸರಿಯಾಗಿ ಸವಲತ್ತುಗಳನ್ನು ನೀಡುವ ಸರ್ಕಾರದ ಯೋಜನೆ 3

ಎಡದಿಂದ ಬಲಕ್ಕೆ

1. ಗಾಲಿಯ ಜೋಡುಹಕ್ಕಿ ರಾಗವೇ ಇದು? 4
3. ನಾಲ್ಕು ಮೊಳ ದೂರದಿಂದ ಬೀಸುವ ಗಾಳಿ 3
5. ರಾಜೀಸೂತ್ರಕ್ಕೆ ಹೆಸರಾದ ಕಮಲದ ಕಣ್ಣಿನವ 6
6. ಅಡಿಯಿಂದ ಕುದಿಯುವ ಸಂಕಟ 4
8. ಗುಪ್ತಗಾಮಿನಿಯಾಗಿ ಹರಿಯುವ ಜ್ಞಾನದೇವತೆಯ ಹೊಳೆ 6
10. ವೃಕ್ಷಗಳ ಗುಂಪು 5
11. ದೇಹದ ತಂತುಗಳು ತುಡಿಯುವ ರೀತಿ 5
13. ತಂದೆಯ ಹೆಸರಿನೊಂದಿಗೆ ಸೀತಾಪತಿಯನ್ನು ನೆನೆಯಿರಿ 6
15. ಕೆಣಕಿ ನಗುವ ಪರಿ ಇದು 4
17. ತಪ್ಪಿಸಿಕೊಂಡು ಓಡಿಹೋಗಲು ಇದೊಂದೇ ಮಂತ್ರ 6
18. ಜೋತಿಷ್ಯ ಮತ್ತು ಆಟದಲ್ಲಿ ಕುಲುಕಿ ಹಾಕುವ ಸಾಗರೋತ್ಪನ್ನ 3
19. ಎಲ್ಲರ ಬದುಕಿನಲ್ಲೂ ಬರುವ ಕಾರ್ಪಣ್ಯದ ಸಮಯ 4

ಪದಬಂಧ ಉತ್ತರ -2865

ಮೇಲಿಂದ ಕೆಳಕ್ಕೆ

1.ಸಡಗರ 2.ಜನಮನ 3.ಚಾರಧಾಮ 4.ಸತ್ಯಸಾಯಿ 7.ಸಮಯಸ್ಫೂರ್ತಿ 8.ಕಲಾಮಂಟಪ 9.ಮನೆಮುರುಕ 10.ಮಧುರಸ್ಮೃತಿ 15.ಕಾಮರೂಪ 16.ದೀಪಾವಳಿ 18.ಲಾಭಕರ 19.ಕೆಳಜಲ

ಎಡದಿಂದ ಬಲಕ್ಕೆ

1.ಸರ್ಪರಾಜ 3.ಚಾತುರ್ಮಾಸ 5.ನರಕಾಸುರ 6.ರಸಪಾನಕ 9.ಮಮತಾಮಯಿ 11.ಲಾಲನೆ 12.ಯಲತ್ರಾಮಂ 13.ಮುಜುಗರ 14.ಟಗರು 15.ಕಾರ್ತಿಕದೀಪ 17.ಕಲಾವಂತಿಕೆ 20.ವನಿತಾಲೋಕ 21.ಪದಾವಳಿ 22.ರಜಾಕಾಲ

ನಿಕೋಲಸ್ ರೋರಿಕ್ ಭಾರತೀಯ ಚಿತ್ರಕಲಾ ಪರಂಪರೆಯ ನವರತ್ನಗಳಲ್ಲಿ ಒಬ್ಬರಾಗಿದ್ದವರು. ಬೆಂಗಳೂರಿನಲ್ಲಿ ತಮ್ಮ ಜೀವ ಸವೆಸಿದ ಈ ಕಲಾವಿದನ 150ನೇ ಜಯಂತಿಯ ಪ್ರಯುಕ್ತ ಚಿತ್ರಕಲಾ ಪರಿಷತ್, 2024–25ನೇ ಸಾಲನ್ನು ರೋರಿಕ್ ವರ್ಷ ಎಂದು ಆಚರಿಸಲು ನಿರ್ಣಯಿಸಿದೆ. ಮೊದಲ ಹೆಜ್ಜೆಯೇ ಅವರ ಹಿಮಾಲಯ ಸರಣಿಯ ಕಲಾಕೃತಿಗಳ ಪ್ರದರ್ಶನ.




ನಿಕೋಲಸ್ ರೋರಿಕ್ ಅವರ ಕಲಾಕೃತಿಗಳು -ಚಿತ್ರಗಳು: ರಂಜು ಪಿ.

ಹಿಮಾಲಯದ ಸನ್ನಿಧಿಯಲ್ಲಿ ರೋರಿಕ್ ಬಣ್ಣಗಳ ಧ್ಯಾನ

ರಶ್ಮಿ ಎಸ್

ಪರ್ವತಗಳು ಎಲ್ಲೆಡೆಯೂ ಪರ್ವತಗಳೆ; ನೀರು ಎಲ್ಲೆಡೆಯೂ ನೀರು; ಮನುಷ್ಯರೂ ಎಲ್ಲೆಡೆ ಮನುಷ್ಯರೇ, ಆದರೆ ಅಲ್ಪ್ ಪರ್ವತ ಸಾಲಿನ ಮುಂದೆ ಕುಳಿತು, ಹಿಮಾಲಯವನ್ನು ಚಿತ್ರಿಸಿದರೆ... ಏನೋ ಕೊರತೆ ಕಾಡತೊಡಗುತ್ತದೆ.

– ನಿಕೋಲಸ್ ರೋರಿಕ್

ಹಿಮಾಲಯ ಪರ್ವತ ಶ್ರೇಣಿಗಳ ಮುಂದೆಯೇ ಒಂದಿಡೀ ಜನುಮವ ಕಳೆದಂತೆ 36 ಫ್ರೇಮುಗಳು. ಪ್ರತಿ ಫ್ರೇಮೂ ಒಂದೊಂದು ಕಥನ ಹೇಳುವಂತೆ. ಬೆಳಗಿನ ಹೊಂಬಣ್ಣದಲ್ಲಿ ಹೊಳೆಯುವ ಹಿಮಾಲಯ, ಸಂಜೆಯ ಕೆಂಬಣ್ಣದವರೆಗೂ ತಾಳುವ ವೈವಿಧ್ಯಮಯ ರೂಪಗಳು ವರ್ಣಚಿತ್ರದಲ್ಲಿ ಮೈದಳೆದಿವೆ.

ನಿಕೋಲಸ್ ರೋರಿಕ್ ರಷ್ಯನ್ ಮೂಲದ ಕಲಾವಿದ, ಭಾರತೀಯ ನವರತ್ನ ಕಲಾವಿದರ ಸಾಲಿನಲ್ಲಿ ರವೀಂದ್ರನಾಥ್ ಟ್ಯಾಗೋರ್ ಅವರೊಂದಿಗೆ ಸ್ಥಾನ ಪಡೆದರು. ಭಾರತೀಯ ಅಧ್ಯಾತ್ಮ ದರ್ಶನದ ಸೆಳೆತಕ್ಕೆ ಒಳಗಾದವರು ನೆಲೆ ನಿಂತಿದ್ದು ಬೆಂಗಳೂರಿನ ತಾತಗುಣಿ ಎಸ್ಟೇಟ್‌ನಲ್ಲಿ.

ಅವರ ಹಿಮಾಲಯದ ಭೇಟಿಯಲ್ಲಿ 1920ರ ಸಾಲಿನಲ್ಲಿ ತಾವು ಕಂಡ ಪರ್ವತಶ್ರೇಣಿಯನ್ನು ತಮ್ಮ ರಟ್ಟಿನ ಡಬ್ಬಿಯ ರಟ್ಟುಗಳನ್ನೇ ಕ್ಯಾನ್ವಾಸ್ ಮಾಡಿಕೊಂಡು ಚಿತ್ರಿಸಿದ್ದಾರೆ.

ಶುಭ್ರ ನೀಲಾಕಾಶದಿಂದ ಹಿಡಿದು, ಕಗ್ಗತ್ತಲೆಯ ಆಕಾಶ, ಬಿರುಬಿಸಿಲಿನ ನಡುಮಧ್ಯಾಹ್ನದ ಕಾಂಚನಗಂಗೆ, ಬೆಳ್ನನೆಯ ಬೆಳದಿಂಗಳಲ್ಲಿ ಕಂಗೊಳಿಸುವ ಎಲ್ಲ ಚಿತ್ರಣವನ್ನೂ ಇಲ್ಲಿ ಚಿತ್ರಿಸಿಕೊಂಡಿದ್ದಾರೆ. ಈ ದೃಶ್ಯ ಮಾದರಿಗಳನ್ನು ಆಧರಿಸಿ, ಮುಂದೆ ದೊಡ್ಡ ದೊಡ್ಡ ಚಿತ್ರಗಳನ್ನು ಸೃಷ್ಟಿಸುವ ಯೋಜನೆ ಅವರದ್ದಾಗಿತ್ತು.

ಸಣ್ಣ ಸಣ್ಣ ಫ್ರೇಮುಗಳಲ್ಲಿ 3ಡಿ ಮಾದರಿಯಲ್ಲಿ ಕಾಣುವಂತೆ, ಪರ್ವತವೊಂದನ್ನು ಪೂರ್ವಾಭಿಮುಖವಾಗಿ, ಉತ್ತರಾಭಿಮುಖವಾಗಿ ನೋಡಿದಾಗ, ಬೆಳಕಿನ ಆಟವನ್ನೂ ಸಮರ್ಥವಾಗಿ ಹಿಡಿದಿಟ್ಟಿರುವುದು ಕಾಣಿಸುತ್ತದೆ.

ನೀಲಿ, ಬಿಳಿ ಮತ್ತು ಬೂದು ಬಣ್ಣಗಳಲ್ಲಿಯೇ ತಮ್ಮ ಪ್ರಯೋಗ ಮುಂದುವರಿಸಿದ ರೋರಿಕ್ ನಂತರ ಹಳದಿ, ಗುಲಾಬಿ ಹಾಗೂ ನೇರಳೆ ಬಣ್ಣಗಳಲ್ಲಿ ಸಂಜೆಯ ಕೆಂಬಣ್ಣವನ್ನೂ, ಮಂಜುಮುಸುಕಿದ ಮುಂಜಾವಿದ ಬೂದು ಬಣ್ಣದ ಆಗಸವನ್ನೂ ಹಿಡಿದಿಟ್ಟಿದ್ದಾರೆ. ಒಂದಿಡೀ ಋತುಮಾನದಲ್ಲಿ ಕುಳಿತು ಅವಲೋಕಿಸಿದಂತೆ ಈ ಚಿತ್ರ ಸರಣಿ ಮೂಡಿ ಬಂದಿದೆ.

ಆಗಸದಲ್ಲಿ ಸೂರ್ಯಾಸ್ತದ ಹೊತ್ತಿನಲ್ಲಿ ಚೆಲ್ಲುವ ರಂಗೋಲಿಯ ಚಿತ್ತಾರ ತಿಳಿಗುಲಾಬಿ ಬಣ್ಣದಲ್ಲಿ ಮೂಡಿದ್ದರೆ, ಸೂರ್ಯೋದಯದ ಮುಂಚಿನ ಆಕಾಶ, ನಂತರದ ಬಂಗಾರ ಬಣ್ಣದ ಬಾನು, ಮೋಡ ಮುಸುಕಿದ, ಅಲ್ಲಲ್ಲಿ ಹತ್ತಿ ಹಿಂಜಿ ಬಿಟ್ಟಂತಹ ಮೋಡಗಳ ಚೆಲ್ಲಾಟ, ಬರಿದೇ ಬರಿದಾಗಿರುವ ಗುಡ್ಡಬೆಟ್ಟಗಳ ಸಾಲು, ಪರ್ವತದ ನೆರಳಿನಲ್ಲಿ ಕಾಡುವ ಕಡುಗಪ್ಪು, ಎಲ್ಲವೂ ನೂರು ವರ್ಷ ಹಳತೆನಿಸುವುದೇ ಇಲ್ಲ.

ನೂರು ವರ್ಷಗಳ ಹಿಂದೆಯೇ 3ಡಿ ಆಯಾಮದಲ್ಲಿ ಕಾಣುವಂತೆ ಚಿತ್ರಿಸಿದ ರೋರಿಕ್ ಅವರ ನೈಪುಣ್ಯ ಈ ದೃಶ್ಯ ಕಲಾವೈಭವದಲ್ಲಿ ಕಾಣಿಸಿಕೊಳ್ಳುತ್ತಿದೆ. ಅವರು ಒಟ್ಟು ಕಲಾಕೃತಿಗಳಲ್ಲಿ 36 ಕಲಾಕೃತಿಗಳನ್ನು ಅವರ ಪುತ್ರ ಸ್ವೆಟೊಸ್ಲಾವ್ ರೋರಿಕ್ ತಮ್ಮದೂ 63 ಕಲಾಕೃತಿಗಳನ್ನು ಸೇರಿಸಿ, ಚಿತ್ರಕಲಾ ಪರಿಷತ್‌ನ ಸುಪರ್ದಿಗೆ ಒಪ್ಪಿಸಿದ್ದರು. ಅವೆಲ್ಲವನ್ನೂ ಸಮ ತಾಪಮಾನದ ಪರಿಸ್ಥಿತಿಯಲ್ಲಿ ಸಂರಕ್ಷಿಸಿ ಇಡಲಾಗಿದೆ ಎಂದರು ಈ ಪ್ರದರ್ಶನದ ಜವಾಬ್ದಾರಿ ಹೊತ್ತಿರುವ ಡಾ. ವಿಜಯಶ್ರೀ.

ಮೊಟ್ಟೆಯ ಹಳದಿ ಭಾಗದೊಂದಿಗೆ ವರ್ಣವನ್ನು ಬೆರೆಸಿ ಬಳಸುತ್ತಿದ್ದರಿಂದ ಅವರ ಬಣ್ಣ ಮಿಶ್ರಣದ ತಂತ್ರಗಾರಿಕೆಯಿಂದಲೇ ಈಗಲೂ ತಾಜಾ ಎನಿಸುವಂತೆ ಕಾಣುತ್ತವೆ. ರೋರಿಕ್ ಅವರು ಬಳಸಿದ ಕೊಬಾಲ್ಟ್ ನೀಲಿ ಬಣ್ಣದ ಟಿನ್ನಿನ ಡಬ್ಬಿಯೂ, ಆ ಡಬ್ಬದಲ್ಲಿ ತುಸುವೆನಿಸುವಷ್ಟು ಬಣ್ಣವೂ ಬಾಕಿ ಇದೆ. ಅದನ್ನು, ಸ್ವೆಟೊಸ್ಲಾವ್ ತಮ್ಮ ಡೈರಿಯಲ್ಲಿ ತಂದೆ ನಿಕೊಲಾಸ್ ರೋರಿಕ್ ಅವರ ಚಿತ್ರಗಳ ವಿವರ ಬರೆದಿರುವ ಡೈರಿಯ ಪುಟವೂ, ಅವರ ಬಗ್ಗೆ ಲಿಟರೇಚರ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಲೇಖನದ ಮೂಲಪ್ರತಿಯೂ ಮತ್ತು ಪೋಸ್ಟ್‌ಕಾರ್ಡ್‌ಗಳು, ಕ್ಯಾಲೆಂಡರ್‌ಗೆ ಚಿತ್ರಿಸಿದ ಚಿತ್ರಗಳ ಪ್ರತಿಗಳೂ ಈ ಚಿತ್ರ ಪ್ರದರ್ಶನದಲ್ಲಿ ಇರಿಸಲಾಗಿದೆ.

ಶಾಂತಿ ಇದ್ದಲ್ಲಿ ಸಂಸ್ಕೃತಿಯೂ, ಸಂಸ್ಕೃತಿ ಇದ್ದಲ್ಲಿ ಶಾಂತಿಯೂ ನೆಲೆಸಿರುತ್ತದೆ ಎಂಬುದು ರೋರಿಕ್ ಅವರ ವಿಶ್ವಾಸವಾಗಿತ್ತು, ಘೋಷವಾಕ್ಯವಾಗಿತ್ತು. ಪುರಾತತ್ವ ತಜ್ಞ, ತತ್ವಜ್ಞಾನಿಯೂ, ಕಲಾವಿದನೂ ಆಗಿದ್ದ ಅವರು, ವಿಶ್ವ ಶಾಂತಿಯಲ್ಲಿ ನಂಬಿಕೆ ಇರಿಸಿದ್ದರು. ಮೊದಲ ವಿಶ್ವ ಯುದ್ಧದ ನಂತರ ಆದ ಸಾಂಸ್ಕೃತಿಕ ಹಾನಿಯಿಂದಾಗಿ ಅವರು ಕನಲಿ ಹೋಗಿದ್ದರು. ಯುದ್ಧಗಳು ಕೇವಲ ಮನುಷ್ಯರ ಬಲಿ ಕೇಳುವುದಿಲ್ಲ. ಸಾಂಸ್ಕೃತಿಕ ಪರಂಪರೆಯೂ ನಾಶವಾಗುತ್ತದೆ ಎಂಬ ಆತಂಕದಲ್ಲಿದ್ದವರು, 21 ರಾಷ್ಟ್ರಗಳು ರೋರಿಕ್ ಒಪ್ಪಂದಕ್ಕೆ ಸಹಿ ಹಾಕುವಂತೆ ಮಾಡಿದ್ದರು.

ಈ ಒಪ್ಪಂದದ ಪ್ರಕಾರ ಯಾವುದೇ ದೇಶಗಳ ಕಲೆ, ಪರಂಪರೆಗಳು ನಾಶವಾಗಬಾರದು, ನಾಶ ಮಾಡಬಾರದು ಎಂಬ ಮುಖ್ಯ ಧ್ಯೇಯೋದ್ದೇಶವನ್ನಿರಿಸಿಕೊಂಡು ಹಲವಾರು ನಿಯಮಗಳನ್ನು ಅಂತಿಮಗೊಳಿಸಿದ್ದರು. ಜಾರ್ಜ್ ಬರ್ನಾರ್ಡ್ ಶಾ, ಅಲ್ಬರ್ಟ್ ಐನ್‌ಸ್ಟೈನ್, ಎಚ್.ಜಿ. ವೆಲ್ಸ್, ರವೀಂದ್ರನಾಥ್ ಟ್ಯಾಗೋರ್ ಇವರೆಲ್ಲರೂ ಈ ಒಪ್ಪಂದಕ್ಕೆ ಅನುಮೋದನೆ ನೀಡಿದ್ದರು. ಶಾಂತಿ ಸಂದೇಶವು ಕಲೆಯ ಮೂಲಕ ಸಾಧಿಸಬೇಕು ಎನ್ನುವುದೂ ಅವರ ವಿಶ್ವಾಸವಾಗಿತ್ತು.

ರಷ್ಯನ್ ಕಲಾವಿದರೊಬ್ಬರು ಭಾರತದ ಮಣ್ಣಲ್ಲಿ ಮಣ್ಣಾದರು. ನಗ್ಗಾರ್‌ನಲ್ಲಿ ಕೊನೆಯುಸಿರೆಳೆದ ರೋರಿಕ್ ಅವರ 150ನೆಯ ಜಯಂತಿಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಅವರ ಕಲಾಕೃತಿಗಳು ಇದ್ದಲ್ಲೆಲ್ಲ ಪ್ರದರ್ಶನವನ್ನು ಏರ್ಪಡಿಸಲಾಗುತ್ತಿದೆ. ಅವರ ವಿಚಾರಧಾರೆ, ಕಲೆ, ಅಧ್ಯಾತ್ಮಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದವನ್ನೂ ಏರ್ಪಡಿಸಲಾಗುತ್ತಿದೆ. ನಮ್ಮಲ್ಲಿಯೂ ಚಿತ್ರಕಲಾ ಪರಿಷತ್ ಈ ನಿಟ್ಟಿನಲ್ಲಿ ಹೊಸ ಹೊಸ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ.

ರೋರಿಕ್ ಕುರಿತು ಸಂಶೋಧನೆ ಕೈಗೊಂಡು ಡಾಕ್ಟರೇಟ್ ಪಡೆದಿರುವ ಪುಷ್ಪಾ ದ್ರಾವಿಡ್ (ರಾಹುಲ್ ದ್ರಾವಿಡ್ ಅವರ ತಾಯಿ) ಈ ನಿಟ್ಟಿನಲ್ಲಿ ಚಿತ್ರಕಲಾ ಪರಿಷತ್‌ನೊಂದಿಗೆ ಕೈ ಜೋಡಿಸಿದ್ದಾರೆ. ಅವರ ಸಂಶೋಧನಾ ಗ್ರಂಥದಲ್ಲಿ ಬಳಸಿರುವ ಮಾಹಿತಿಯನ್ನು ಮಕ್ಕಳೊಟ್ಟಿಗೆ ಹಂಚಿಕೊಂಡಿದ್ದಾರೆ.

ಮಕ್ಕಳೇನು ಕಾಣುತ್ತಾರೆ!

ಈ ಪ್ರದರ್ಶನಕ್ಕೆ ಬರುತ್ತಿರುವ ವಿವಿಧ ಶಾಲಾ ಮಕ್ಕಳಿಗೆ ಚಟುವಟಿಕೆಗಳ ಮೂಲಕ ಈ ಅನನ್ಯ ಸಂಗ್ರಹದ ಕುರಿತು ಮಾಹಿತಿ ನೀಡಲಾಗುತ್ತಿದೆ. ಶಾಲಾ ವಿದ್ಯಾರ್ಥಿಗಳಿಗೆ ಗುಂಪುಗಳಾಗಿ ರಚಿಸಿ, ಒಂದೊಂದು ಗುಂಪಿಗೂ ಒಂದೊಂದು ಚಿತ್ರವನ್ನು ದಿಟ್ಟಿಸಿ, ಒಂದುತ್ತು ನಿಮಿಷ ಅದನ್ನೇ ನಿರುಕಿಸಿ, ನೋಡಿ, ತಾವು ಅವಲೋಕಿಸಿದ್ದನ್ನು ಬರೆಯಲು ತಿಳಿಸಲಾಗುತ್ತಿದೆ. ಪ್ರತಿ ಮಗುವೂ ಒಂದೊಂದು ಆಯಾಮದಲ್ಲಿ ಚಿತ್ರವನ್ನು ವಿಶ್ಲೇಷಿಸುತ್ತಿದೆ. ಕಲಾವಿದರು ಯಾವ ದಿಕ್ಕಿನಲ್ಲಿ ನಿಂತಿದ್ದರು, ಯಾವ ಸಮಯವನ್ನು ಚಿತ್ರಿಸಿದ್ದಾರೆ, ವರ್ಣ ಸಂಯೋಜನೆ ಹೀಗೆ ಹತ್ತು ಹಲವಾರು ವಿಷಯಗಳನ್ನು ಚರ್ಚಿಸುತ್ತಿದ್ದಾರೆ. ಮಕ್ಕಳ ಮನದೊಳಗೆ ರೋರಿಕ್ ಕುಡಿಯನ್ನು ಬೆಳಗಿಸುವ ಕೆಲಸ ನಡೆದಿದೆ. ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ರೋರಿಕ್ ಅವರ ಕಲಾಕೃತಿಗಳ ಪ್ರದರ್ಶನ ನ.18ರಂದು ಕೊನೆಗೊಳ್ಳಲಿದೆ.

ಕಲಾಸ್ವಾದನೆಯಲ್ಲಿ...

ದಾಸ ಸಾಹಿತ್ಯ ಪರಿಚಾರಕ ಅರಳುಮಲ್ಲಿಗೆ

ಶಾ.ಮಂ. ಕೃಷ್ಣರಾಯ



ಅರಳುಮಲ್ಲಿಗೆ ಪಾರ್ಥಸಾರಥಿ

ಬೆಂಗಳೂರಿನ ಕತ್ರಿಗುಪ್ಪೆಯ ಶ್ರೀಕೃಷ್ಣ ಶಿಕ್ಷಣ ಸಂಸ್ಥೆಗಳ ಸಭಾಂಗಣದಲ್ಲಿ ನ. 17 ಮತ್ತು 18 ರಂದು ಅಖಿಲ ಭಾರತ ದಾಸ ಸಾಹಿತ್ಯ ಸಮ್ಮೇಳನ ನಡೆಯಲಿದೆ. ಸಮ್ಮೇಳನದ ಅಧ್ಯಕ್ಷತೆಯನ್ನು ಅರಳುಮಲ್ಲಿಗೆ ಪಾರ್ಥಸಾರಥಿ ವಹಿಸಿದ್ದಾರೆ.

ಬೆಂಗಳೂರಿನ ಮಲ್ಲೇಶ್ವರದ 17ನೆಯ ಕ್ರಾಸಿನಲ್ಲಿ ಒಂದು ಹೋಟೆಲ್ ಇತ್ತು. ಅಲ್ಲಿ ಸೂರ್ಯನಾರಾಯಣ ಚಡಗರು ಇರುತ್ತಿದ್ದರು. ಅವರು ಆ ಕಾಲದಲ್ಲಿ ಪ್ರಸಿದ್ಧ ಕಾದಂಬರಿಕಾರ, ಸಂಘಟಕ. ಅವರನ್ನು ಹುಡುಕಿಕೊಂಡು ಹಲವರು ಬರುತ್ತಿದ್ದರು. ಚಡಗರು ಸಾಕಷ್ಟು ಓದಿಕೊಂಡಿದ್ದರು. ಎಳೆಯರನ್ನು ಪ್ರೋತ್ಸಾಹಿಸುವ ಸಹೃದಯ. ನಾನು, ಮಾವಿನಕೆರೆ ರಂಗನಾಥ, ಕಲ್ಯಾಣಪುರ, ಎ.ಎಸ್. ಭಟ್ಟ, ಅರಳುಮಲ್ಲಿಗೆ ಪಾರ್ಥಸಾರಥಿ ಮೊದಲಾದವರೆಲ್ಲ 'ಚಡಗರ ಚಾವಡಿ'ಯ ಕಾಯಂ ಸದಸ್ಯರಾಗಿದ್ದೆವು. ಅಲ್ಲಿ ನಡೆಯುತ್ತಿದ್ದದ್ದು ನಿಯಮಬದ್ಧ ಚರ್ಚೆಯಲ್ಲ, ಒಂದು ಬಗೆಯ ಹರಟೆ. ಹರಟೆಯಾದರೂ ಕಾಡುಹರಟೆಯಲ್ಲ, ಸಾಹಿತ್ಯ ಸಾಗಿರುವ, ಸಾಗುತ್ತಿರುವ ದಾರಿಯ ಸಿಂಹಾವಲೋಕನ.

ಅರಳುಮಲ್ಲಿಗೆ ಆಗಿನ್ನೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿ. ಅರಳು ಹುರಿದಂತೆ ಮಾತು, ತರ್ಕ-ವಿತರ್ಕ, ಸೂಕ್ಷ್ಮಾತಿ ಸೂಕ್ಷ್ಮಗ್ರಹಿಕೆ, ನಗುಮುಖ, ಎಲ್ಲರಿಗೂ ಅಂಟಿಕೊಳ್ಳುವ ಸ್ವಭಾವ. ಸಾಹಿತ್ಯ, ಸಂಗೀತ, ನಾಟಕ, ಕನ್ನಡದ ಕೆಲಸಗಳಲ್ಲಿ ಆಸಕ್ತಿ ನಮ್ಮಿಬ್ಬರನ್ನು ಹತ್ತಿರ ಸೇರಿಸಿದ್ದವು. ವಾಣಿಜ್ಯ ವಿದ್ಯಾರ್ಥಿಯಾದ ಅವರು ಸಣ್ಣಪುಟ್ಟ ಬರಹ, ಕತೆ, ಕವನ ಬರೆಯುತ್ತಿದ್ದರು. ಆ ಬರಹಗಳಲ್ಲಿ ಒಂದು ಶಿಸ್ತು ಇತ್ತು, ಅಚ್ಚುಕಟ್ಟುತನವಿರುತ್ತಿತ್ತು. ಒಂದು ಬಗೆಯ ತುಡಿತ, ಆಕರ್ಷಣೆಯಿರುತ್ತಿತ್ತು. ಪಾರ್ಥಸಾರಥಿ ಈಗ ಅರಳಿದ ಮಲ್ಲಿಗೆ.

ಜಗತ್ತಿನ ವಿವಿಧ ದೇಶಗಳಲ್ಲಿ ಜ್ಞಾನ ಹಂಚುವ, ಜ್ಞಾನ ಸಂಪಾದಿಸುವ, ದಾಸ ಸಾಹಿತ್ಯದ ಮಾಹಿತಿ ಸಾರುವ, ಕನ್ನಡ ಸಂಸ್ಕೃತಿಯ ಗರಿಮೆ ಬಿತ್ತುವ, ಜಾನಪದ ಸಾಹಿತ್ಯದ ಶ್ರೀಮಂತಿಕೆ ಎತ್ತರಿಸುವ ಕೈಂಕರ್ಯ ಅವರದು.

ಪದವಿ ಓದುತ್ತಿರುವಾಗಲೇ ಹಿಂದಿ ವಿರೋಧಿ ಚಳವಳಿ ಆರಂಭವಾಗಿತ್ತು. ಪಾರ್ಥಸಾರಥಿ ಈ ಚಳವಳಿಯ ಮುಂದಾಳುತ್ವ ವಹಿಸಿಕೊಂಡರು. 1964-65ರಲ್ಲಿ ಅ.ನ. ಕೃಷ್ಣರಾಯರ ನೇತೃತ್ವದಲ್ಲಿ ನಡೆದ ಕನ್ನಡ ಚಳವಳಿ ಸೇರಿಕೊಂಡರು. ಅ.ನ.ಕೃ ಅವರ ಅಸ್ಖಲಿತ ಭಾಷಣ ಶೈಲಿ ಮತ್ತು ಎಂ. ರಾಮಮೂರ್ತಿಯವರ ಸಿಂಹಗರ್ಜನೆಯ ಭಾಷಣಗಳನ್ನು ಕೇಳಿ ಕನ್ನಡ ಪ್ರೇಮ ಬೆಳೆಸಿಕೊಂಡಿದ್ದಲ್ಲದೆ ಕೃಷ್ಣರಾಯರ ಹಾಗೆ ತಾನೊಬ್ಬ ಭಾಷಣಕಾರನಾಗಬೇಕೆಂದು ಸಂಕಲ್ಪಿಸಿದರು. ಅದೇ ಕಾಲಕ್ಕೆ ಬೇಂದ್ರೆಯವರ ಭಾಷಣ ಕೇಳುವ ಅವಕಾಶವೂ ಲಭ್ಯವಾಯಿತು. ಇವೆಲ್ಲ ಪಾರ್ಥಸಾರಥಿಯವರಿಗೆ ತನ್ನ ಭಾಷೆ ಹದ ಮಾಡಿಕೊಳ್ಳಲು ಅನುವು ಮಾಡಿಕೊಟ್ಟಿತು.

ಎಂ.ಕಾಂ. ಮುಗಿಸಿ ಮಲ್ಲೇಶ್ವರದ ಎಂ.ಇ.ಎಸ್. ಕಾಲೇಜಿನಲ್ಲಿ ಅಧ್ಯಾಪಕರಾದರು. ಅವರು ಕಾಲೇಜಿನಲ್ಲಿ ಕೇವಲ ಪಠ್ಯ ಬೋಧಿಸಲಿಲ್ಲ. ಜೊತೆಗೆ ವಿದ್ಯಾರ್ಥಿಗಳಲ್ಲಿ ಸಾಹಿತ್ಯ, ಸಂಗೀತ, ನಾಟಕಗಳ ಬಗ್ಗೆ ಆಸಕ್ತಿ ಹುಟ್ಟಿಸಿದರು. ವಾಣಿಜ್ಯ ವಿದ್ಯಾರ್ಥಿಗಳ ಅಗತ್ಯಗಳನ್ನು ಗಮನಿಸಿ ವಾಣಿಜ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಇಂಗ್ಲಿಷಿನಲ್ಲಿ ಬರೆದರು. ಯುವಕರ ಮನೋವಿಕಾಸಕ್ಕೆ 'ಪವರ್‌ಫುಲ್ ಪರ್ಸನಾಲಿಟಿ ಡೆವೆಲಪ್‌ಮೆಂಟ್', 'ಗ್ರೇಟ್ ವ್ಯಾಲ್ಯೂಸ್ ಫಾರ್ ಗ್ರೇಟ್ ಫ್ಯೂಚರ್' ಮತ್ತು 'ಸಿಕ್ರೆಟ್ ಆಫ್ ಸೂಪರ್ ಸಕ್ಸೆಸ್' ಧ್ವನಿಸುರುಳಿಗಳ ಮೂಲಕ ಮಾರ್ಗದರ್ಶನ ಮಾಡಿದರು. ಈ ಮಧ್ಯೆ ಇವರು ನಾಟಕ ಕ್ಷೇತ್ರದಲ್ಲೂ, ಚಲನಚಿತ್ರ ರಂಗದಲ್ಲೂ ದುಡಿದರು. ಕೆಲವು ಚಿತ್ರಗಳ ಕಥೆ, ಸಂಭಾಷಣೆ ಬರೆದರು.

1971ರಿಂದ ನಿರಂತರವಾಗಿ ದಾಸ ಸಾಹಿತ್ಯದ ಆಳವಾದ ಅಧ್ಯಯನ ಮಾಡಿದರು. ಅದಕ್ಕೆ ಸಂವಾದಿಯಾದ ಭಾರತೀಯ ಸಂತ ಸಾಹಿತ್ಯವನ್ನು, ಸಂಲಗ್ನವಾದ ಇತರ ಭಾಷೆಯ ಸಾಹಿತ್ಯವನ್ನು ತುಲನಾತ್ಮಕವಾಗಿ ಓದಿ ದಾಸ ಸಾಹಿತ್ಯದ ಹಿರಿಮೆ-ಗರಿಮೆಗಳನ್ನು ನಿರ್ಧರಿಸಿದರು.

ಇವರ ಓದು ಮತ್ತು ಓಡಾಟದ ಫಲವನ್ನು ಪುರಂದರ, ಶ್ರೀ ಪಾದರಾಜ, ವ್ಯಾಸರಾಜ, ವಾದಿರಾಜ, ದಾಸ ಸಾಹಿತ್ಯ, ಸಂಪುಟಗಳಲ್ಲಿ ಮತ್ತು ರಾಘವೇಂದ್ರ ಸಂಪುಟ, ಹರಿದಾಸ ಝೇಂಕಾರ ತರಂಗಿಣಿ, ದಾಸ ಸಾಹಿತ್ಯ ವಾಹಿನಿ, ಸಂಸ್ಕೃತಿ ಪುರುಷರು, ಮಧ್ವಾಚಾರ್ಯರು, ನಮ್ಮ ಮೆಚ್ಚಿನ ಕರ್ನಾಟಕ, ಧೀಮಂತ ಕರ್ನಾಟಕ, ಹರಿದಾಸರ ಉಗಾಭೋಗ ಸಂಪುಟಗಳಲ್ಲಿ ಕಾಣಬಹುದು. ಅವರು ಸಂಗ್ರಹಿಸಿ ಸಂಪಾದಿಸಿದ ಹರಿದಾಸರ 4,500 ಹಾಡುಗಳು ಕನ್ನಡ ಸಾಹಿತ್ಯ ಅಭ್ಯಾಸಿಗಳಿಗೊಂದು ಕಲ್ಪವೃಕ್ಷ. ಇದಲ್ಲದೆ ಸಂಶೋಧನೆ, ವಿಮರ್ಶೆ, ವಿಚಕ್ಷಣೆಗೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಅವರು ಬರೆದಿದ್ದಾರೆ. ಇವರ ಹರಿದಾಸರ 10,000 ಹಾಡುಗಳ ಬೃಹತ್ ಗ್ರಂಥ ಶತಮಾನ ಗ್ರಂಥವೆಂದೇ ಪ್ರಸಿದ್ಧವಾಗಿದೆ. 'ಭಜನ ಸಂಪುಟ', 'ಹರಿದಾಸ ಸಾಹಿತ್ಯ ಸೌರಭ', 'ವೈಕುಂಠ ವರ್ಣನ', 'ದಾಸ ಸಾಹಿತ್ಯ ಭರವಸೆಯ ಬೆಳಕು', 'ಉಗಾಭೋಗ ಸಂಪುಟ' ಇವೆಲ್ಲಾ ದಾಸ ಸಾಹಿತ್ಯಕ್ಕೆ ಹೊಸ ಆಯಾಮ ನೀಡಿದ ಗ್ರಂಥಗಳೆನಿಸಿದವು. ಇವರ 'ಪುರಂದರ ಮಹಾಸಂಪುಟ' ಒಂದು ಸಾವಿರ ಪುಟಗಳ ವಿಶಿಷ್ಟ ಗ್ರಂಥ.

ಅವರು ಹೊರ ತಂದಿರುವ ಭಾಗವತ, ರಾಮಾಯಣ, ಭಗವದ್ಗೀತಾ, ಗುರುರಾಘವೇಂದ್ರ ನಮನ, ವಾದಿರಾಜ ನಮನ, ಕನಕದಾಸ ನಮನ, ವಿಜಯದಾಸ ನಮನ, ಪುರಂದರ ನಮನ, ವಿಷ್ಣುಸಹಸ್ರನಾಮ ಧ್ವನಿಸುರುಳಿಗಳು ಅವರ ವಿದ್ವತ್ತಿಗೆ ಹಿಡಿದ ಕನ್ನಡಿಗಳು.

ಇದೆಲ್ಲ ಕೇವಲ ಓದಿನಿಂದ, ಅನುಭವದಿಂದಷ್ಟೇ ಪಾರ್ಥಸಾರಥಿಗೆ ಬಂದದ್ದಲ್ಲ ಎಂಬ ಭಾವನೆ ಮೂಡುತ್ತದೆ. ಜ್ಞಾನವಿದ್ದವರಿಗೆಲ್ಲ ಹೀಗೆ ಅಸ್ಖಲಿತವಾಗಿ ಮಾತಾಡಲು ಬರುತ್ತದೆಯೆಂದಿಲ್ಲ. ಮಾತಾಡುವವರೆಲ್ಲ ಜ್ಞಾನಿಗಳೆಂದು ಭ್ರಮಿಸಬೇಕಾಗಿಲ್ಲ. ಇವರು 600 ಪುಟಗಳಲ್ಲಿ ಬರೆದ ವಿಷ್ಣುಸಹಸ್ರನಾಮ ಎಂಬ ಇಂಗ್ಲಿಷ್ ಗ್ರಂಥ 14 ದೇಶಗಳಲ್ಲಿ ಬಿಡುಗಡೆಯಾಗಿ ಜನಪ್ರಿಯಗೊಂಡಿತು. ಇವರ ಪುರಂದರದಾಸರ ಜೀವನ ಚಿತ್ರಣವನ್ನು ವೈದ್ಯರಾಗಿರುವ ವಿಶ್ವಂಭರನಾಥ ಮತ್ತು ಸತ್ಯವರ್ತಿಯವರು ಇಂಗ್ಲಿಷಿಗೆ ತರ್ಜುಮೆ ಮಾಡಿದ್ದಾರೆ. ಹಾಗೆಯೇ ಇವರ 'ವಾದಿರಾಜ ಸಂಪುಟ'ವನ್ನು ಆಸ್ಟ್ರೇಲಿಯಾದ ಶ್ರೀಪ್ರಿಯಾ ಅವರು ಇಂಗ್ಲಿಷಿನಲ್ಲಿ ಅನುವಾದ ಮಾಡಿದ್ದಾರೆ. 'ವಾದಿರಾಜ ಸಂಪುಟ' ಗ್ರಂಥ ಇಂಗ್ಲಿಷಿಗೆ ಅನುವಾದವಾಗಿದೆ. 'ಶ್ರೀಪಾದರಾಜ ಸಂಪುಟ' ಗ್ರಂಥವನ್ನು ಸಿಂಗಪುರದ ಪರಿಮಳ ರಾಘವೇಂದ್ರ ಪ್ರಕಟಿಸಿದ್ದಾರೆ. ಇವರ 'ಮಧ್ವಾಚಾರ್ಯರು' ಪುಸ್ತಕವನ್ನು ಪದ್ಮಾ ಶ್ರೀನಿವಾಸನ್ ತಮಿಳಿಗೆ ಅನುವಾದಿಸಿದ್ದಾರೆ. 'ಪುರಂದರ ಸಂಪುಟ' ಗ್ರಂಥವನ್ನು ತಮಿಳಿಗೆ ಗೋಪಿನಾಥ್ ಅನುವಾದಿಸಿದ್ದಾರೆ. ಪಾರ್ಥಸಾರಥಿಯವರು ದಾಸ ಸಾಹಿತ್ಯದ ಪ್ರಕಟಣೆ, ದಾಸರ ಜನ್ಮೋತ್ಸವಗಳನ್ನು, ವಿವಿಧ ಮಠಾಧೀಶರ ಚಾತುರ್ಮಾಸ್ಯ ಉತ್ಸವಗಳು, ವ್ಯಾಸ-ದಾಸ ಮಹಾಸಮ್ಮೇಳನಗಳು, ಅನೇಕ ಸನ್ಮಾನ ಸಮಾರಂಭಗಳನ್ನು ಸಂಘಟಿಸಿ ತಾವೊಬ್ಬ ಸಮರ್ಥ ಸಂಘಟಕರೆಂದು ತೋರಿಸಿಕೊಂಡಿದ್ದಾರೆ.

ದಾಸ ಸಾಹಿತ್ಯದ ಪ್ರಚಾರಕ್ಕಾಗಿ, ಸಂಶೋಧನೆಗಾಗಿ, ಉಪನ್ಯಾಸಗಳಿಗಾಗಿ ದೇಶ–ವಿದೇಶದ ಅನೇಕ ನಗರ-ಹಳ್ಳಿಗಳನ್ನು ಸಂದರ್ಶಿಸಿದ್ದಾರೆ. ಈಗಾಗಲೇ 65 ಹೆಚ್ಚು ಗ್ರಂಥಗಳನ್ನು ಬರೆದಿರುವ, 40ಕ್ಕೂ ಹೆಚ್ಚು ಧ್ವನಿಮುದ್ರಿಕೆಗಳನ್ನು ಹೊರತಂದಿರುವ ಪಾರ್ಥಸಾರಥಿಯವರು ಸದಾ ಕ್ರಿಯಾಶೀಲರು.

ವಿಷ್ಣುಸಹಸ್ರನಾಮದ ರಂಗೋತ್ತುಂಗ ತರಂಗ ಮಂಗಳಕರವಾದ ನಾಮಸ್ಮರಣೆಯನ್ನು ಜಗತ್ತಿನ ನಾನಾ ರಾಷ್ಟ್ರಗಳಲ್ಲಿ ನಿರಂತರವಾಗಿ ಮಾಡಿಸುತ್ತಿರುವ ಅರಳುಮಲ್ಲಿಗೆಯವರು 'ಗ್ಲೋಬಲ್ ವಿಷ್ಣುಸಹಸ್ರನಾಮ ಸತ್ಸಂಗ ಫೆಡರೇಶನ್' ಎಂಬ ಜಾಗತಿಕ ಸಂಸ್ಥೆಯ ಸಂಸ್ಥಾಪಕರಾಗಿದ್ದಾರೆ.

ದಾಸ ಸಾಹಿತ್ಯ ಕ್ಷೇತ್ರಕ್ಕೆ ಜಾಗತಿಕ ಮನ್ನಣೆ ದೊರಕಿಸಿಕೊಟ್ಟಿದ್ದಾರೆ. ಕನ್ನಡದ ದಾಸ ಸಾಹಿತ್ಯವೆಂಬುದು ಭಕ್ತಿ, ಜ್ಞಾನ, ವೈರಾಗ್ಯಗಳ ಸಂಗಮ ಎಂದು ಸಾರಿದ್ದಾರೆ. ದಾಸ ಸಾಹಿತ್ಯ ಪರಂಪರೆಯಲ್ಲಿ ಬಂದ ದಾಸ ಶ್ರೇಷ್ಠರ ಮನೋಗತ ಮತ್ತು ಸಂದೇಶ ಹಂಚಿ ತನ್ಮೂಲಕ ಕನ್ನಡ ಸಾಹಿತ್ಯದತ್ತ ಜನ ಆಕರ್ಷಿತರಾಗುವಂತೆ ಮಾಡಿದ್ದಾರೆ.

ಮೊದಲ ಓದು

ರೇಷ್ಮೆ ಹಾದಿಯ ಆಸಕ್ತಿಕರ ಕಥನ

ರೇಷ್ಮೆ ಬಟ್ಟೆ ಹುಟ್ಟಿದ ಬಗೆ, ಭಾರತಕ್ಕೆ ನಡೆದು ಬಂದ ಬಗೆಯನ್ನು ಆಸಕ್ತಿಕರವಾಗಿ ಹೇಳಿರುವ ಕಾದಂಬರಿ ಇದು. ಈ ಕಾದಂಬರಿಯ ಪ್ರತಿ ಅಧ್ಯಾಯಗಳೂ ಬದುಕಿನ ಹೊಸ ಹೊಳಹನ್ನು ನೀಡುತ್ತ ಹೋಗುತ್ತವೆ. ಕಾನ್‌ಫ್ಯೂಶಿಯಸ್ ಮತ್ತು ಬೌದ್ಧ ಧರ್ಮ, ಪಾರ್ಸಿ ಧರ್ಮಗಳ ನವನೀತ ನೀಡಿದಂತೆ ಒಳಿತನ್ನು ಮಾತ್ರ ತರ್ಕಕ್ಕೆ ಒಡ್ಡುತ್ತ, ಒಳಿತನ್ನೇ ನೀಡುತ್ತ ಹೋಗುತ್ತದೆ. ಕೆಲವೊಮ್ಮೆ ಮೂಲ ಕಥೆಯ ಪಾತ್ರವನ್ನೇ ಮರೆತು ಈ ಪಾಠಗಳಲ್ಲಿ ಓದುಗ ಕಳೆದುಹೋಗುವಷ್ಟು ಆಳವಾಗಿ ಅವುಗಳನ್ನು ವಿಶ್ಲೇಷಿಸಲಾಗಿದೆ.

ಆಹಾರ ಸಂಸ್ಕೃತಿ, ಕಲೆ, ಚಿತ್ರಕಲೆ ಮತ್ತು ಕಸೂತಿ ಕಲೆಗಳೊಂದಿಗೆ ತನುತಣಿಸುವ ಉದ್ಯೋಗ ಬೆಳೆದು ಬಂದ ಬಗೆಯನ್ನೂ ವಿವರಿಸುತ್ತದೆ. ಎರಡನೆಯ ಶತಮಾನದಿಂದ ಆರಂಭವಾಗುವ ಈ ಕಥನದಲ್ಲಿ ಹಲವಾರು ಗಡಿಮೀರಿ ಅಥವಾ ಕಾದಂಬರಿಯ ಭಾಷೆಯಲ್ಲಿಯೇ ಹೇಳುವುದಾದರೆ ಹದ್ದು ಮೀರಿ ಕತೆ ಸಾಗುತ್ತದೆ.

ಆ ಕಾಲದ ಬದುಕಿನ ಚಿತ್ರಣವನ್ನು ನೀಡುತ್ತಲೇ ಸಾರ್ವಕಾಲಿಕ ಸತ್ಯವೆನಿಸುವ ಧಾರ್ಮಿಕ ಹೊಳಹುಗಳನ್ನು ಲೇಖಕರು ಇಲ್ಲಿ ಚರ್ಚಿಸಿದ್ದಾರೆ. ಸಮಣರ ಕಾಮ, ಮಿತ್ರವಂದಕನ ಪ್ರೇಮ, ಮಧುಮಾಯಾಳ ತ್ಯಾಗ, ಹವಿನೇಮನ ಬಲಿದಾನ, ಸಗನೇಮಿಯ ಮಹತ್ವಾಕಾಂಕ್ಷೆ, ಕಥೆಯ ಹಿನ್ನೆಲೆಯಲ್ಲಿಯೇ ಪಾತ್ರದಂತೆ ಗೋಚರಿಸುವ ಆ ಕಾಲದ ರಾಜಕಾರಣ ಓದುಗರ ಸಮಯವನ್ನು ಬೇಡುತ್ತದೆ. ನಂತರ ಮನ ಕಲಕಿ ಕಾಡುತ್ತದೆ. ಕೆಲವೊಂದೆಡೆ ಕಥೆ ಹಿಂದೆ ಸರಿದು, ಈ ಉಪದೇಶಗಳೇ ಮೇಲುಗೈ ಸಾಧಿಸಿದಂತೆ ಎನಿಸುತ್ತವೆ. ಸಂಯಮದ ಓದನ್ನು ಬೇಡುವ ಈ ಕಾದಂಬರಿ ಮುಗಿಸಿದಾಗ ರೇಷ್ಮೆಯ ನುಣುಪಿಗೆ ರೋಮಾಂಚನವಾದಂತೆಯೇ, ಹುಳುಗಳ ಸಾವಿಗೆ ಎದೆ ಝಲ್ಲೆನ್ನುತ್ತದೆ.



ಪು: 472
₹450

ರೇಷ್ಮೆ ಬಟ್ಟೆ
ಲೇ:ವಸುಧೇಂದ್ರ
ಪ್ರ: ಛಂದ ಪುಸ್ತಕ
ಸಂ: 9844422782

ಚಿಂಪಾಂಜಿಗಳ ರಾಜಕೀಯ ಲೋಕ



ಪು: 120
₹180

ನರ ವಾನರ
ಲೇ:ಡಾ.ಪ್ರದೀಪ್ ಕೆಂಜಿಗೆ
ಪ್ರ: ಪುಸ್ತಕ ಪ್ರಕಾಶನ
ಸಂ: 08212545774

ಚಿಂಪಾಂಜಿಗಳ ಗುಂಪಿನಲ್ಲಿ ನಡೆಯುವ ರಾಜಕೀಯವನ್ನು ಕುತೂಹಲಕಾರಿ ಕಥನವಾಗಿ ಕಟ್ಟಿಕೊಡುವ ಕೃತಿ 'ನರ ವಾನರ'. ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಜೊತೆಗೆ ಸಹ ಲೇಖಕರಾಗಿ ಗುರುತಿಸಿಕೊಂಡು, ಜಗತ್ತಿನ ವಿಸ್ಮಯಗಳ ಕುರಿತೇ ಹೆಚ್ಚು ಬರೆದಿರುವ ಲೇಖಕ ಪ್ರದೀಪ್ ಕೆಂಜಿಗೆ ಈ ಕೃತಿಯೊಂದಿಗೆ ಓದುಗರನ್ನು ಹೊಸಲೋಕಕ್ಕೆ ಕರೆದುಕೊಂಡು ಹೋಗುತ್ತಾರೆ.

ಮನುಷ್ಯ ಲೋಕದಲ್ಲಿ ರಾಜಕೀಯ ಸಾಮಾನ್ಯವಾದ ಪದ. ಜಗತ್ತಿನಲ್ಲಿ ರಾಜಕೀಯವೇ ಇಲ್ಲದ ಯಾವ ಜಾಗವೂ ಸಿಗಲಿಕ್ಕಿಲ್ಲ. ಆದರೆ ವನ್ಯಜೀವಿಗಳ ಜಗತ್ತಿನಲ್ಲಿಯೂ ರಾಜಕಾರಣ ಜೋರಾಗಿದೆ ಎಂಬುದನ್ನು ಸಾರುವ ಕೃತಿಯಿದು. ಹಾಗಂತ ಇದು ಕಾಲ್ಪನಿಕ ಕಥನವಲ್ಲ. ಸಂಶೋಧನೆ ಆಧಾರಿತವಾಗಿದೆ. ಜೀವ ವಿಜ್ಞಾನಿ ಫ್ರಾನ್ಸ್ ಡಿ ವಾಲ್ ಅವರ 'ಚಿಂಪಾಂಜಿ ಪಾಲಿಟಿಕ್ಸ್' ಈ ಪುಸ್ತಕಕ್ಕೆ ಮೂಲ ಆಧಾರ ಎಂದು ಲೇಖಕ ಮುನ್ನುಡಿಯಲ್ಲಿ ಹೇಳಿದ್ದಾರೆ. ಆದರೆ ಇದು ಆ ಪುಸ್ತಕದ ಸಂಪೂರ್ಣ ಭಾಷಾಂತರವಲ್ಲ.

ಮನುಷ್ಯನ ರಾಜಕಾರಣದೊಂದಿಗೆ ಚಿಂಪಾಂಜಿಗಳ ರಾಜಕೀಯವನ್ನು ಹೋಲಿಸುತ್ತ ಹೋಗುತ್ತಾರೆ. ಒಟ್ಟು 13 ಲೇಖನಗಳಿದ್ದು, ನಿರೂಪಣೆ ಅತ್ಯಂತ ಸರಳವಾಗಿದೆ. ಜೊತೆಗೆ ವಾನರ ಪ್ರಪಂಚದಲ್ಲಿನ ಒಂದಷ್ಟು ವಿಸ್ಮಯಕಾರಿ ಅಂಶಗಳನ್ನು ಹೇಳಿದ್ದಾರೆ. 'ನಾಯಕತ್ವಕ್ಕೆ ಪೈಪೋಟಿ, ಕುರ್ಚಿಗಾಗಿ ಪಕ್ಷಾಂತರ, ಭಿನ್ನಮತ, ಚಮಚಾಗಿರಿ, ಕದ್ದಾಲಿಕೆ ಈ ಎಲ್ಲ ರಾಜಕೀಯ ಮೇಲಾಟಗಳು ಮನುಷ್ಯರಲ್ಲಷ್ಟೇ ಅಲ್ಲ, ಚಿಂಪಾಂಜಿಗಳ ಜಗತ್ತಿನಲ್ಲೂ ಹಾಸುಹೊಕ್ಕಾಗಿವೆ ಎಂಬುದನ್ನು ಮನೋಜ್ಞವಾಗಿ ತಿಳಿಸುವ ಕೃತಿ ಇದು' ಎಂದು ನಾಗೇಶ್ ಹೆಗಡೆ ಪುಸ್ತಕದ ಬೆನ್ನುಡಿಯಲ್ಲಿ ಬರೆದಿದ್ದಾರೆ.

ಪ್ರತಿಕ್ರಿಯೆ

'ಆರೋಪ ನಿರಾಧಾರ'

ನ.10 ರ 'ಭಾನುವಾರದ ಪುರವಣಿ'ಯಲ್ಲಿ ಪ್ರಕಟವಾದ ನಟರಾಜ್ ಹುಳಿಯಾರ್ ಅವರ ಲೇಖನ 'ಕನ್ನಡ ಸಾಹಿತ್ಯ ಕೃತಿಗಳ ಪರಕಾಯ ಪ್ರವೇಶ' ದಲ್ಲಿ ನನ್ನ ತಂದೆ ಯು.ಆರ್ ಅನಂತಮೂರ್ತಿಯವರ ಬಗ್ಗೆ ಆರೋಪ ಮಾಡಲಾಗಿದೆ.

ನೊಬೆಲ್ ಹಂಬಲದಿಂದ ಸ್ವೀಡಿಶ್ ಭಾಷೆಗೂ ಅವರ ಕಾದಂಬರಿ ಅನುವಾದವಾಯಿತೆಂದು ಬರೆದಿರುವುದರ ಹಿಂದೆ ಯಾವ ಆಧಾರವಿದೆಯೋ ಗೊತ್ತಿಲ್ಲ. ಸಾಹಿತ್ಯ ವಿಮರ್ಶಕರಾದ ಹುಳಿಯಾರ್ ಅವರಿಗೆ ನೊಬೆಲ್ ನಂತಹ ಬಹುಮಾನ ಪಡೆಯಲು ಕೃತಿಗಳು ಸ್ವೀಡಿಶ್ ಭಾಷೆಗೆ ಅನುವಾದಗೊಳ್ಳಬೇಕಾಗಿಲ್ಲ ಎಂಬ ಪ್ರಾಥಮಿಕ ತಿಳವಳಿಕೆ ಇದ್ದಂತಿಲ್ಲ. ಹತ್ತು ಭಾರತೀಯ ಭಾಷೆಯ ಕೃತಿಗಳು ಸ್ವೀಡಿಶ್‌ಗೆ ಒಟ್ಟಿಗೆ ಅನುವಾದಗೊಂಡಾಗ ಆ ಯೋಜನೆಯಲ್ಲಿ ಸಂಸ್ಕಾರ ಕೂಡ ಒಂದಾಗಿತ್ತು. ಹುಳಿಯಾರ್ ಅವರ ಪ್ರಕಾರ ಉಳಿದ ಒಂಬತ್ತು ಲೇಖಕರ ಮೇಲೆಯೂ ನೊಬೆಲ್ ಹಂಬಲದ ಆರೋಪವನ್ನು ಹೊರಿಸಬೇಕಾಗುತ್ತದೆ. ಆಧಾರವಿಲ್ಲದ ಇಂತಹ ಅಭಿಪ್ರಾಯಗಳು ಈ ಲೇಖನದಲ್ಲಿವೆ. ಉದಾಹರಣೆಗೆ, ಶ್ರೀನಿವಾಸಗೌಡರು ಮಾಡಿದ ಕುವೆಂಪು ಕಾದಂಬರಿಯ ಇಂಗ್ಲಿಷ್ ಅನುವಾದ ಪ್ರಕಟವಾಗಿಲ್ಲ ಎನ್ನುವುದು ತಪ್ಪು ಮಾಹಿತಿ. ಅದು ಪ್ರಕಟವಾಗಿದೆ.

ಅನುವಾದದ ಅಗತ್ಯವನ್ನು ಸಮರ್ಥಿಸಿ ಬರೆದಿರುವುದರಿಂದ ಕಾರ್ನಾಡ ಹಾಗೂ ಅನಂತಮೂರ್ತಿಯವರ ಕೃತಿಗಳು ಉತ್ತಮವಾಗಿ ಅನುವಾದವಾಗಿರುವುದು ಇವರಿಗೆ ಸಂತೋಷವನ್ನೇ ಉಂಟುಮಾಡಿದೆಯೆಂದು ಭಾವಿಸುತ್ತೇನೆ.

ಅನುರಾಧ ಅನಂತಮೂರ್ತಿ, ಬೆಂಗಳೂರು

'ಕಾದಂಬರಿ ಪ್ರಕಟವಾಗಿದೆ'

ನಟರಾಜ್ ಹುಳಿಯಾರ್ ಅವರು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಅನುವಾದದ ಬಗ್ಗೆ ಬರೆಯುತ್ತಾ, ಹತ್ತು ವರ್ಷದ ಕೆಳಗೆ ಕೆ.ಎಂ. ಶ್ರೀನಿವಾಸಗೌಡ ಈ ಕಾದಂಬರಿಯನ್ನು ಇಂಗ್ಲಿಷಿಗೆ ಅನುವಾದಿಸಿದರು. ಅದು ಪ್ರಕಟವಾಗಲಿಲ್ಲ ಎಂದು ಬರೆದಿದ್ದಾರೆ. ಈ ಕಾದಂಬರಿ 2022ರಲ್ಲಿಯೇ 'The Bride in the Rainy Mountains' ಹೆಸರಿನಲ್ಲಿ ಪ್ರಕಟವಾಗಿದೆ. ಕುಪ್ಪಳಿ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನವು ಐಬಿಹೆಚ್ ಪ್ರಕಾಶನದ ಸಹಯೋಗದಲ್ಲಿ ಪ್ರಕಟಿಸಿದೆ. ಬೆಂಗಳೂರಿನ ಗಾಂಧಿಭವನದಲ್ಲಿ ಬಿಡುಗಡೆಯೂ ಆಗಿತ್ತು. ಇತ್ತೀಚಿನ ಮಾಹಿತಿಯ ಪ್ರಕಾರ, ಕಾದಂಬರಿಯ ಎರಡನೆಯ ಮುದ್ರಣಕ್ಕೆ ಸಿದ್ಧತೆಗಳು ನಡೆಯುತ್ತಿವೆ.

ಬಿ.ಆರ್. ಸತ್ಯನಾರಾಯಣ, ಬೆಂಗಳೂರು

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in

ದೀಪಾವಳಿ ಕಥೆ ಸ್ಪರ್ಧೆ 2024
ಮೆಚ್ಚುಗೆ ಪಡೆದ ಕಥೆ-'ಅಗ್ನಿ' ಬಿದ್ದದ್ದು..!



ಟಿ. ಗೋವಿಂದರಾಜು

ದೊಡ್ಡಬಳ್ಳಾಪುರದ ಚನ್ನಾದೇವಿ ಅಗ್ರಹಾರದರು. ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಕನ್ನಡ ಉಪನ್ಯಾಸಕ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಜಾನಪದ ಅಕಾಡೆಮಿ, ಬಯಲಾಟ ಅಕಾಡೆಮಿಗಳ ಸದಸ್ಯರಾಗಿದ್ದರು. ಹಲವಾರು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಕಥೆ, ಕವನವಲ್ಲದೇ ಸಾಕಷ್ಟು ಕೃತಿಗಳನ್ನು ರಚಿಸಿದ್ದಾರೆ.

ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ದೀಪಾವಳಿ ಕವನ ಸ್ಪರ್ಧೆ 2024
ಮೆಚ್ಚುಗೆ ಪಡೆದ ಕವನ-ನದಿ ಹಾದಿ ತಪ್ಪಿದ್ದರೆ....!?

ಅಕ್ಷತಾ ಕೃಷ್ಣಮೂರ್ತಿ

ಉತ್ತರಕನ್ನಡ ಜಿಲ್ಲೆಯ ಶಿಕ್ಷಕಿ. ಗಡಿ ಭಾಗದ ಪ್ರಾಥಮಿಕ ಶಾಲೆಗಳ ಮಹತ್ವ ಸಾರುವ 'ಇಸ್ಕೂಲು' ಅಂಕಣದ ಮೂಲಕ ಜನಪ್ರಿಯ. ಕಥೆ, ಕವನ, ವಿಮರ್ಶೆ, ಸಂಪಾದಿತ ಕೃತಿಗಳನ್ನು ರಚಿಸಿದ್ದಾರೆ. ಮಯೂರವರ್ಮ ಪ್ರಶಸ್ತಿ, ಕಡೆಂಗೋಡ್ಲು ಕಾವ್ಯ ಪ್ರಶಸ್ತಿಗಳು ಲಭಿಸಿವೆ.

ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನಲ್ಲಿರುವ ಚಂದ್ರಗುತ್ತಿ ಕೋಟೆಗೆ ಚಂದ್ರಗುಪ್ತಪುರ ಎಂಬ ಹೆಸರೂ ಇತ್ತಂತೆ. ವಿಶೇಷವಾದ ಮಾಹಿತಿ, ವಿಶಿಷ್ಟ ಅನುಭವ ನೀಡುವ ಈ ಕೋಟೆಗೊಂದು ಚಾರಣ



ಚಂದ್ರಗುತ್ತಿ ಅನುಭವದ ಬುತ್ತಿ

ಪ್ರವಾಸ

ಸುರೇಂದ್ರ ಪೈ

ದೀಪಾವಳಿಯ ಹಬ್ಬಕ್ಕೆಂದು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರಕ್ಕೆ ಹೋಗಿದ್ದೆ. ಬಹಳ ದಿನಗಳ ಬಳಿಕ ಗೆಳೆಯರೆಲ್ಲರೂ ಬೆಳಕಿನ ಹಬ್ಬದ ಜೊತೆಯಲ್ಲಿ ಪ್ರಕೃತಿಯ ಸೊಬಗನ್ನು ಸವಿಯಲು ಚಾರಣಕ್ಕೆ ಹೊರಡುವ ಆಸೆಯನ್ನು ಮುಂದಿಟ್ಟರು. ಎಲ್ಲಿಗೆ ಹೋಗುವುದು ಎಂದು ಯೋಚಿಸುತ್ತಿರುವಾಗಲೇ ಹೊಳೆದದ್ದು ಹತ್ತಿರವೇ ಇದ್ದ ಐತಿಹಾಸಿಕ ತಾಣ 'ಚಂದ್ರಗುತ್ತಿ ಕೋಟೆ'.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನಲ್ಲಿರುವ ಚಂದ್ರಗುತ್ತಿ ಎಂದಾಕ್ಷಣ ನೆನಪಾಗುವುದೇ ರೇಣುಕಾಂಬೆ ದೇವಿ. ಪುರಾಣ ಪ್ರಸಿದ್ಧ ಈ ಸ್ಥಳವು ವರದಾ ನದಿಯ ಸಮೀಪದಲ್ಲಿದೆ. ಸಿದ್ದಾಪುರದಿಂದ ಹೊರಟ ನಮ್ಮ ತಂಡವು ಬೆಳಿಗ್ಗೆ 5:45ಕ್ಕೆ ಸರಿಯಾಗಿ ಚಂದ್ರಗುತ್ತಿಯನ್ನು ತಲುಪಿತು.

ಚಾರಣವನ್ನು ಪ್ರಾರಂಭಿಸಬೇಕಾದರೆ ಬೆಟ್ಟದ ಕೆಳಗಿರುವ ರೇಣುಕಾಂಬೆಯ ದೇವಸ್ಥಾನವನ್ನು ದಾಟಿ ಪಕ್ಕದ ಕಿರುದಾರಿಯಿಂದ ಸಾಗಬೇಕಿತ್ತು. ಮೆಟ್ಟಿಲುಗಳನ್ನು ಹತ್ತಿ ದೇವಸ್ಥಾನಕ್ಕೆ ಹೋಗಬೇಕು. ದೇವಸ್ಥಾನದ ಮೇಲಿರುವ ಆಮೆಯಾಕೃತಿಯ ವಿಶಾಲ ಬಂಡೆಯನ್ನು ನೋಡಿ ಆ ಸ್ಥಳದ ಬಗ್ಗೆ ಮತ್ತಷ್ಟು ತಿಳಿಯುವ ಕುತೂಹಲ ಮೂಡಿತು. ಆದರೆ ಅಷ್ಟು ಮುಂಜಾನೆ ದೇವಳದ ಬಾಗಿಲು ತೆರೆದಿರಲಿಲ್ಲ. ಹಾಗಾಗಿ ನಾವು ಚಾರಣವನ್ನು ಪ್ರಾರಂಭಿಸಿದೆವು. ನಮ್ಮ ಗೆಳೆಯರ ಬಳಗದ ಬಹಳಷ್ಟು ಸ್ನೇಹಿತರಿಗೆ ಈ ಸ್ಥಳ, ಕೋಟೆ ಮತ್ತು ಕ್ರಮಿಸುವ ಮಾರ್ಗದ ಬಗ್ಗೆ ತಿಳಿದಿರಲಿಲ್ಲ. ಆದರೆ ಸಿದ್ದಾಪುರದ ಗೆಳೆಯರೊಬ್ಬರ ನೇತೃತ್ವದಲ್ಲಿ ಚಾರಣ ಪ್ರಾರಂಭವಾಯಿತು.

ಸುತ್ತಲೂ ದಟ್ಟವಾದ ಕಾಡು. ಪ್ರಶಾಂತವಾದ ವಾತಾವರಣ. ಎಲೆಯ ಮೇಲೆ ಇಬ್ಬನಿಗಳ ಮೇಳ. ಹಕ್ಕಿಯ ಚಿಲಿಪಿಲಿ ನಾದ ಕೇಳಿದಾಗ ಬೆಟ್ಟ ಹತ್ತುವ ಉತ್ಸಾಹ ಇನ್ನಷ್ಟು ಗರಿಗೆದರಿತು. ಕೋಟೆಯು ಸುಮಾರು 848 ಮೀಟರ್ ಎತ್ತರದಲ್ಲಿದೆ. ಚಾರಣಕ್ಕೆ ಹೆಜ್ಜೆ ಹಾಕುತ್ತಾ ಸಾಗುತ್ತಿರುವಾಗ ಮಾರ್ಗ ಮಧ್ಯದಲ್ಲಿ 'ಚಂದ್ರಗುತ್ತಿ ಕೋಟೆಯು ಪ್ರಾಚೀನ ಕಾಲದಲ್ಲಿ ಚಂದ್ರಗುಪ್ತಪುರ ಎಂದು ಕರೆಯಲ್ಪಡುತ್ತಿತ್ತು. ಇದು ಕ್ರಿ.ಶ. 3ರಿಂದ 6ನೇ ಶತಮಾನದವರೆಗೆ ಬನವಾಸಿ ಕದಂಬರ ಕಾಲದ ಪ್ರಸಿದ್ಧ ಪಟ್ಟಣವಾಗಿತ್ತು. ವಿಜಯನಗರದ ರಾಜ ವೀರ ಹರಿಹರನ (1377-1404) ಕಾಲದಲ್ಲಿ ಬಾಚಣ್ಣ ಎಂಬ ಸ್ಥಳೀಯ ನಾಯಕ ಚಂದ್ರಗುತ್ತಿ ಮತ್ತು ಇತರ ಪ್ರದೇಶಗಳನ್ನು ಆಳುತ್ತಿದ್ದುದಾಗಿ ಕ್ರಿ.ಶ.1396ರ ಒಂದು ಶಾಸನದಿಂದ ತಿಳಿದುಬರುತ್ತದೆ. ಆನಂತರ ಈ ಸ್ಥಳವು ಕೆಳದಿ ನಾಯಕರ ಆಳ್ವಿಕೆಗೆ ಒಳಪಟ್ಟಿತು' ಎಂದು ಕೋಟೆಯ ಕಥೆ ಹಾಗೂ ಇತಿಹಾಸದ ಬಗ್ಗೆ ವಿನಾಯಕ ಶಾಸ್ತ್ರಿ ಹೇಳುತ್ತಾ ಸಾಗಿದರು.



ಬೆಟ್ಟವನ್ನು ಹತ್ತಲು ಕೆಲವು ಕಡೆ ಕಲ್ಲಿನಹಾಸು ಇದ್ದು, ಅಲ್ಲಲ್ಲಿ ಬಿದ್ದ ಫಿರಂಗಿಗಳು, ಮಂಟಪದ ಕಂಬಗಳು, ಕುಸಿದ ಗೋಡೆಗಳು, ಮುರಿದು ಬಿದ್ದ ಕಲ್ಲಿನ ದ್ವಾರಗಳು, ಕೋಟೆಯ ಸುತ್ತಲೂ ಆವರಿಸಿರುವ ಸಸ್ಯಗಳನ್ನೆಲ್ಲಾ ನೋಡುತ್ತಿದ್ದಂತೆ ಬಹಳ ವರ್ಷಗಳಿಂದ ಸರಿಯಾದ ನಿರ್ವಹಣೆಯಾಗದ ಕಾರಣ ಕೋಟೆಯ ಚಿತ್ರಣವೇ ಬದಲಾಗಿ ಹೋಗಿರುವ ಅನುಭವವಾಯಿತು. ಈ ಕೋಟೆಗೆ ಎರಡು ಕಡೆಯಿಂದ ಪ್ರವೇಶ ದ್ವಾರಗಳಿದ್ದು, ಪ್ರಾರಂಭದಲ್ಲೇ ಒಂದು ವಿಶಾಲವಾದ ಕೊಳ ಸಿಗುತ್ತದೆ. ಇನ್ನು ಕೋಟೆಯ ಒಳಗೆ ಕುದುರೆಗಳಿಗೆ, ಸೈನಿಕರಿಗೆ ಮದ್ದುಗುಂಡು ಸಾಗಿಸುವ ಸಲುವಾಗಿ ಪ್ರತ್ಯೇಕ ಮಾರ್ಗವಿದ್ದಂತೆ ಕಾಣಿಸಿತು. ಕೋಟೆಯ ಸುತ್ತ ಗಿಡಗಂಟಿಗಳು ಬೆಳೆದ ಕಾರಣ ಸ್ಪಷ್ಟವಾಗಿ ದಾರಿ ಕಾಣುತ್ತಿರಲಿಲ್ಲ. ನಮ್ಮಂತೆ ಚಾರಣಕ್ಕೆಂದು ಬಂದ ಪ್ರವಾಸಿಗರು ನಿರ್ಮಿಸಿದ ಕಾಲುದಾರಿಯನ್ನೇ ಆಶ್ರಯಿಸುತ್ತಾ, ಬಂಡೆಗಳ ಮಧ್ಯದಿಂದ ಹರಿಯುತ್ತಿರುವ ನೀರಿನ ಝುಳು ಝುಳು ನಿನಾದವನ್ನು ಕೇಳುತ್ತಾ, ಒಂದಿಷ್ಟು ಫೋಟೊ, ಸೆಲ್ಫೀ ತೆಗೆದುಕೊಳ್ಳುತ್ತಾ 7:15ಕ್ಕೆ ಸರಿಯಾಗಿ ಬೆಟ್ಟದ ಮೇಲೆ ತಲುಪಿದೆವು.

ಮುಂಜಾನೆಯ ಸೂರ್ಯೋದಯದ ವಿಹಂಗಮ ನೋಟವನ್ನು ಕಣ್ತುಂಬಿಕೊಂಡು ಪುಳಕಿತಗೊಂಡೆವು. ಬೆಟ್ಟದ ಮೇಲೆ ನಿಂತು ಸುತ್ತಲೂ ಇರುವ ಸುಂದರ ಪ್ರಕೃತಿಯ ಸೌಂದರ್ಯ ಸವಿಯುತ್ತಾ ಕೆಲ ಕಾಲ ವಿಶ್ರಾಂತಿ ಪಡೆದೆವು.

ಎಲ್ಲಿದೆ ಈ ಸ್ಥಳ?

ಸೊರಬದಿಂದ 20 ಕಿಲೊಮೀಟರ್ ಸಿದ್ದಾಪುರದಿಂದ 14 ಕಿಲೊಮೀಟರ್ ಹಾಗೂ ಅತ್ತ ಶಿರಸಿಯ ಬನವಾಸಿಯಿಂದ ಬರುವುದಾದರೆ 18 ಕಿಲೊಮೀಟರ್ ದೂರದಲ್ಲಿದೆ.

ಮೇಲ್ಭಾಗದಲ್ಲಿ ಕೋಟೆ ಬಾವಿ, ಎಣ್ಣೆ ಬಾವಿಗಳು ಇದ್ದವು. ಅಲ್ಲೇ ಉತ್ತರ ಭಾಗದಲ್ಲಿರುವ ದುರ್ಗಿ ದಿಬ್ಬವು ಕೋಟೆಯ ಎತ್ತರದ ಸ್ಥಳವಾಗಿತ್ತು. ಅಲ್ಲಿ ಸೈನಿಕರಿಗೆ ವಾಸಿಸಲು ಅನುಕೂಲವಾಗುವಂತಹ ನಾಲ್ಕು ಗುಹೆಗಳಿದ್ದವು. ಅವುಗಳಲ್ಲಿ ಒಂದು ಸುಸ್ಥಿತಿಯಲ್ಲಿದ್ದರೆ ಉಳಿದವೆಲ್ಲಾ ಪಾಳು ಬಿದ್ದಿದ್ದವು. ಅವೆಲ್ಲವನ್ನು ವೀಕ್ಷಿಸುತ್ತಾ, ಬಂದ ದಾರಿಯಲ್ಲೇ ನಿಧಾನವಾಗಿ ಕೆಳಗಿದು ದೇವಸ್ಥಾನ ತಲುಪಿದೆವು.

'ಮಹಾವಿಷ್ಣುವಿನ ದಶಾವತಾರಗಳಲ್ಲಿ ಒಂದೆನಿಸಿದ ಪರಶುರಾಮರು ತಮ್ಮ ತಾಯಿ ರೇಣುಕಾಂಬೆಯ ತಲೆ ಕಡಿದ ಸ್ಥಳವೇ ಈ ಚಂದ್ರಗುತ್ತಿ'ಯಾಗಿದ್ದು, ಸ್ಥಳ ಪುರಾಣಗಳ ಪ್ರಕಾರ ಶ್ರೀ ಕೃಷ್ಣ ಮತ್ತು ಜರಾಸಂಧರು ಇಲ್ಲಿ ಪರಸ್ಪರ ಯುದ್ಧ ಮಾಡುತ್ತಿರುವಾಗ, ಶ್ರೀ ಕೃಷ್ಣನು ಇಲ್ಲಿಯ ಬೆಟ್ಟದ ಮೇಲಿರುವ ಒಂದು ಗುಹೆಯಲ್ಲಿ ಅವಿತುಕೊಳ್ಳುತ್ತಾನೆ. ಆತನನ್ನು ಹುಡುಕಿ ಸೋತ ಜರಾಸಂಧನು, ಪೂರ್ತಿ ಬೆಟ್ಟವನ್ನೇ ಎತ್ತಲು ಪ್ರಾರಂಭಿಸಿದಾಗ ಅದನ್ನು ನೋಡಿ ಚಂದ್ರನು ನಕ್ಕಿದ್ದರಿಂದ ಈ ಊರಿಗೆ 'ಚಂದ್ರಗುತ್ತಿ' ಎಂಬ ಹೆಸರು ಬಂತು ಎಂದು ಅರ್ಚಕರಾದ ರಾಮ ಭಟ್ ವಿವರಿಸಿದರು. ಮಾರ್ಚ್ ತಿಂಗಳಲ್ಲಿ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ ಹಾಗೂ ಸಾವಿರಾರು ಭಕ್ತರು ದೇವಿಯ ದರ್ಶನ ಪಡೆದು ತಮ್ಮ ಹರಕೆಯನ್ನು ತೀರಿಸುತ್ತಾರೆ. ಉತ್ತರ ಕರ್ನಾಟಕದ ಮಂದಿ ಪಾದಯಾತ್ರೆಯ ಮೂಲಕ ಇಲ್ಲಿ ಆಗಮಿಸುತ್ತಾರೆ. ಹೀಗಾಗಿ ಈ ಪವಿತ್ರ ಕ್ಷೇತ್ರವನ್ನು 'ಕರ್ನಾಟಕದ ಎರಡನೇಯ ಸವದತ್ತಿ' ಎಂದು ಕರೆಯಲಾಗುತ್ತದೆ.

ನಮ್ಮ ಚಾರಣವು ಇಷ್ಟೆಲ್ಲಾ ವಿಶೇಷವಾದ ಮಾಹಿತಿ ಹಾಗೂ ವಿಶಿಷ್ಟ ಅನುಭವ ನೀಡುತ್ತದೆ ಎಂದು ನಾವ್ಯಾರು ಅಂದುಕೊಂಡಿರಲಿಲ್ಲ. ಇಲ್ಲಿ ಚಾರಣಕ್ಕೆ ಮಕ್ಕಳು ಹಾಗೂ ಮಹಿಳೆಯರು ಬರುವುದು ಸೂಕ್ತವಲ್ಲ. ಇನ್ನು ಪುರುಷರು ಕೋಟೆ ದಾರಿ ತಿಳಿದವರೊಂದಿಗೆ ಚಾರಣಕ್ಕೆ ಬರುವುದು ಒಳ್ಳೆಯದು. ❖

...ಗಟ್ಟಿ ಪರಂಪರೆ

12ನೇ ಪುಟದಿಂದ...

ರೈತರ ರಾಜ, ಮಹಿಳೆಯರನ್ನು ಅಪಾರವಾಗಿ ಗೌರವಿಸಿದ ಶಿವಾಜಿ ಮಹಾರಾಜರನ್ನು ಕನ್ನಡಿಗರೂ ಗೌರವ ನೀಡಿ ಅವರ ಕೊಡುಗೆಯನ್ನು ನೆನೆಯುತ್ತಾರೆ. ಇಂದು ಮಹಾರಾಷ್ಟ್ರದಲ್ಲಿರುವ ಮಂಗಳವೇಡೆ 12 ಶತಮಾನದಲ್ಲಿ ಬಸವಣ್ಣ ನಡೆದಾಡುವ ನೆಲವಾಗಿತ್ತು. ಮರಾಠಿಗರ ಆರಾಧ್ಯ ದೈವ ಸಂತ ಜ್ಞಾನೇಶ್ವರರಿಗೆ ಕನ್ನಡ ಭಾಷೆ ಗೊತ್ತಿತ್ತು. ಅವರ ಓವಿಗಳ ಮೇಲೆ ಕನ್ನಡ ಭಾಷೆಯ ಪ್ರಭಾವವಿದೆ ಎಂಬುದನ್ನು ವಿದ್ವಾಂಸ ರಂಶಾ ಲೋಕಾಪುರ ತಮ್ಮ 'ಹಳಗನ್ನಡ ಮತ್ತು ಮರಾಠಿ' ಎಂಬ ಭಾಷಾ ಶಾಸ್ತ್ರ ಕೃತಿಯಲ್ಲಿ ದಾಖಲಿಸಿದ್ದಾರೆ. ಸಂತ ತುಕಾರಾಮನಿಗೆ ಕನ್ನಡ ಗೊತ್ತಿತ್ತು ಎನ್ನಲು ಅವನ ಅಭಂಗವೊಂದೇ ಸಾಕು. ತೆಲುಗಿನ ಭಾಗವತ ಪರಂಪರೆಯ ಕೃಷ್ಣ ಪಾರಿಜಾತ ಕಾವ್ಯದ ಹೊಳವು ರಾಯಚೂರಿನ ಅಪರಾಳ ತಮ್ಮಣ್ಣನಿಂದ ಬೆಳಗಾವಿಯ ಕುಲಗೋಡ ತಮ್ಮಣ್ಣನ ತನಕ ಹರಿದು ಬಂದು, ಅವನ ಕೈಯಲ್ಲಿ ಶ್ರೀ ಕೃಷ್ಣ ಪಾರಿಜಾತ ಸಣ್ಣಾಟವಾಗಿ ಮರಾಠಿ ತಮಾಶಾದ ಗೊಲ್ಲತಿ ಪ್ರಕರಣವನ್ನು ತನ್ನೊಡಲೊಳಗೆ ಗರ್ಭೀಕರಣಗೊಳಿಸಿತು. ಇಂಥ ಭ್ರಾತೃತ್ವದ ಪರಂಪರೆಯು ಅಷ್ಟು ಸುಲಭವಾಗಿ ಬಿರುಕು ಬಿಡುವುದಲ್ಲ!



ಗ್ರಾಮ ಸಂರಚನೆಯ ಪರಂಪರೆ ವಿಶಿಷ್ಟ! ಗಡಿಯಲ್ಲಿ ಒಂದು ಹಳ್ಳಿ ಮರಾಠಿ ಭಾಷೆಯ ದಟ್ಟ ಪ್ರಭಾವ ಹೊಂದಿದ್ದರೆ, ಪಕ್ಕದ ಊರು ಅಚ್ಚಗನ್ನಡದ್ದು. ಇನ್ನೊಂದು ಎರಡನ್ನು ಸಮಬಲದಲ್ಲಿ ಹೊಂದಿರುವಂಥದ್ದು. ಹೀಗೆ ಕನ್ನಡ-ಮರಾಠಿ ಜನ ಸಮುದಾಯಗಳಲ್ಲಿ ಗಟ್ಟಿ ನೆಲೆಗೊಂಡ ಒಂದು ಪರಂಪರೆಯೇ ಇದೆ. ಇದು ಮಹಾಜನ ವರದಿಯ ಅಧ್ಯಯನಕ್ಕೆ ಪೂರಕ ವಸ್ತುಸ್ಥಿತಿಯ ಕಟುಸತ್ಯವು ಆಗಿರಲೂ ಸಾಕು.

ಬೆಳಗಾವಿಯನ್ನು ಎರಡನೆಯ ರಾಜಧಾನಿಯೆಂದು ಕರೆದು ಒಂದು ಭವ್ಯ, ಎತ್ತರದ ವಿಧಾನಸೌಧ ಕಟ್ಟಿದರೆ ಸಾಲದು. ಅಷ್ಟೇ ಭವ್ಯ, ದಿವ್ಯ ಎತ್ತರದ ಸವಾಲುಗಳು, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಸರ್ಕಾರದ ಆದ್ಯತೆ ಆಗಬೇಕು. ಸಮಕಾಲೀನದಲ್ಲಿ ಅಲ್ಲಲ್ಲಿ ಚದುರಿದ ಭಾಷಿಕ ಜನರಿಗೆ ಭಾಷೆ, ಶಿಕ್ಷಣ, ಲಲಿತ ಕಲೆ, ಸಾಹಿತ್ಯ, ನೀರು, ರಸ್ತೆ, ಗ್ರಂಥಾಲಯ- ಮುಂತಾದ ಮೂಲಸೌಲಭ್ಯಗಳನ್ನು ಒದಗಿಸುವ ಹೊಣೆಗಾರಿಕೆಯನ್ನು ಆಯಾ ರಾಜ್ಯಗಳ ಸರ್ಕಾರಗಳು ಹೊತ್ತುಕೊಳ್ಳುತ್ತಿರುವುದರ ಕುರಿತು ನಿರಂತರ ಕಣ್ಣಿಡುವುದು ಮುಖ್ಯ. ಕಡೆಗಣನೆಯ ಶಾಪ ವಿಮುಕ್ತಿಯ ಬಗ್ಗೆ ಸರ್ಕಾರ ಯೋಚಿಸಲಿ. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಣ್ಣ ಚಿಕ್ಕು ಕೇಶ್ರಷ್ಟು ಕಥೆಯ — ಜೀವ ತಳೆದ ಕುದುರೆ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ಮ	ಘ	ಚಿ	ತಿ
ಗ	ಶ	ಚಿ	ಉ
ಮ	ಪ	ಶಂ	ಡ

1

	ಗು	ರು
	ಗು	ರು

2

	ಕ	ರ
	ಕ	ರ

3

	ಲ	ಕ
	ಲ	ಕ

4

	ರು	ಕ
	ರು	ಕ

5

	ಬ	ರಿ
	ಬ	ರಿ

6

	ರ	ಡಿ
	ರ	ಡಿ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಅನುಸ್ವಾರ(0) ಹಾಗೂ ಒಂದಕ್ಷರಕ್ಕೆ ನೀವು ಎರಡಕ್ಷರ ತುಂಬಿ ಅರ್ಥಬದ್ಧ ಪದ ಮಾಡಬೇಕು. ನೀವು ತುಂಬುವ ಎರಡೂ ಅಕ್ಷರಗಳೂ 'ಕ'ಕಾರ ಬಳ್ಳಿಯವೇ ಆಗಿರುವುದು ಕಡ್ಡಾಯ. ಪ್ರಯತ್ನಿಸಿ.

1		೦		ಮ
2		೦		ಳ
3		೦		ಣೆ
4		೦		ರ
5		೦		ಣ
6		೦		ರ್ಯ

ಮೋಜಿನ ಗುಣಾಕಾರ

ಇಲ್ಲಿನ ಗುಣಾಕಾರ ಮಾಡಿನೋಡಿ. ಇಂದಿನ ದಿನಾಂಕವೇ ಬರುತ್ತದೆ.

1901336
x9 =



ಕನ್ನಡ ಕಂದನ ಕನವರಿಕೆ

ಕನ್ನಡ ನಾಡ ನೋಡ್ತೀನಿ-ನಾ
ಕನ್ನಡ ಹಾಡ ಹಾಡ್ತೀನಿ
ಕನ್ನಡ ಕಂಪ ಹೀರ್ತೀನಿ-ನಾ
ಕನ್ನಡ ಗುಂಪ ಸೇರ್ತೀನಿ

ಕನ್ನಡವೆಂದರೆ ಬಲುಇಷ್ಟ
ಅನ್ಯರ ಭಾಷೆ ಕಡು-ಕಷ್ಟ
ಕನ್ನಡದಲ್ಲೇ ಕಲಿತೀನಿ-ನಾ
ಕನ್ನಡದಲ್ಲೇ ನಲಿತೀನಿ

ಕನ್ನಡ ಸತ್ವ ಅರಿತೇನಿ-ನಾ
ಕನ್ನಡ ಮಹತ್ವ ಸಾರ್ತೀನಿ
ಕನ್ನಡ ತಿರುಳ ತಿಳಿತೀನಿ-ನಾ
ಕನ್ನಡದಲ್ಲೇ ಬೆಳಿತೀನಿ

ಬೇಂದ್ರೆ ಪದ್ಯ ಹಾಡ್ತೀನಿ-ನಾ
ಕುವೆಂಪು ಗದ್ಯ ಓದ್ತೀನಿ
ಕಾರಂತಲೋಕ ನೋಡ್ತೀನಿ-ನಾ
'ಮಾಸ್ತಿ-ಆಸ್ತಿ' ಅಂತೀನಿ.

ಪದ-ಶೋಧ

ಇಲ್ಲಿ ಕೊಟ್ಟಿರುವ ಪದಗಳಲ್ಲಿ ಒಂದು ಕ್ರಮದಲ್ಲಿ ಹುಡುಕಿದರೆ ನೀರಿನಿಂದ ಬಾರಿಸುವ ಒಂದು ಜಲವಾದ್ಯದ ಹೆಸರು ಸಿಗುತ್ತದೆ. ಹುಡುಕಿ.

1.ಹಿಂದಿನರಾಜ
2.ದಾರದಲಡಿ
3.ಪರ್ವತಶ್ರೇಣಿ
4.ತರಂಗದೂರ
5.ಗಣಿತಜ್ಞಾನ

ಉತ್ತರ =

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಭವಾನಿ-ಶಿವಾನಿ 2.ಸಂಯಮ-ನಿಯಮ 3.ನಾಲಿಗೆ-ಸಲಿಗೆ 4.ಅಜೀವ-ಸಜೀವ 5.ಬಿರುಕು-ಹುರುಕು 6.ನಂದನ-ಚಂದನ

ಜಾಣಪದ ಆಟ: 1.ಅಕ್ಷರ 2.ಉತ್ತರ 3.ಎಕ್ಕಡ 4.ಚಕ್ಕಡಿ 5.ಉದ್ದರಿ 6.ಬಳ್ಳಾರಿ 7.ಬೆತ್ತಲೆ 8.ಬೆಳ್ಳುಳ್ಳಿ 9.ಹೆಗ್ಗಣ 10.ಗಜ್ಜರಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಯುವರಾಜ್ ಸಿ.ಎನ್.
ವಿಜಯನಗರ

ಸನ್ಮಿತ ವಿ.
ಬೆಂಗಳೂರು

ಅಭಿಮನ್ಯು ಎಸ್.ಜಿ.
ಬನ್ನೇರುಘಟ್ಟ

ಎಂ.ಗೌತಮ್
ವಿಜಯಪುರ

ಶ್ರೇಷ್ಠ ನವೀನ್
ಬೆಂಗಳೂರು

ವೇದಶ್ರೀ ಜೋಡಟ್ಟಿ
ಬೆಳಗಾವಿ

ಭಾರತಕ್ಕೆ ಶರಣಾದ ಚೀನಾ

ಮಿಂಚಿದ ಸಲೀಮಾ, ದೀಪಿಕಾ: ಒಲಿಂಪಿಕ್ಸ್ ಬೆಳ್ಳಿ ವಿಜೇತ ತಂಡಕ್ಕೆ ಮುಖಭಂಗ

ಚೀನಾ ಎದುರಿನ ಪಂದ್ಯದಲ್ಲಿ ಜಯಿಸಿದ ಭಾರತ ತಂಡದ ಆಟಗಾರ್ತಿಯರು ಸಂಭ್ರಮಿಸಿದರು –ಪಿಟಿಐ ಚಿತ್ರ

ರಾಜಗೀರ್, ಬಿಹಾರ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ಚೀನಾ ತಂಡಕ್ಕೆ ಸೋಲಿನ ಕಹಿ ಉಣಿಸಿತು.

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 3–0ಯಿಂದ ಚೀನಾ ತಂಡವನ್ನು ಸದೆಬಡಿಯಿತು.

ಭಾರತ ತಂಡದ ಸಂಗಿತಾ ಕುಮಾರಿ (32ನೇ ನಿಮಿಷ) ಮತ್ತು ನಾಯಕಿ ಸಲೀಮಾ ಟೆಟೆ (37ನೇ ನಿ) ಅವರು ತಲಾ ಒಂದು ಫೀಲ್ಡ್ ಗೋಲು ಹೊಡೆದರು. ಟೂರ್ನಿಯಲ್ಲಿ ಅತಿ ಹೆಚ್ಚು ಗೋಲು ಗಳಿಸಿರುವ ದೀಪಿಕಾ (60ನೇ ನಿ) ಪಂದ್ಯದ ಕೊನೆಯ ಕ್ಷಣದಲ್ಲಿ ಪೆನಾಲ್ಟಿ ಕಾರ್ನರ್ ಮೂಲಕ ಗೋಲು ಗಳಿಸಿದರು.

ವಿಶ್ವ ರ‍್ಯಾಂಕಿಂಗ್ ನಲ್ಲಿ 6ನೇ ಸ್ಥಾನದಲ್ಲಿರುವ ಚೀನಾ ವಿರುದ್ಧ ಜಯಿಸುವ ಮೂಲಕ ಸಲೀಮಾ ಬಳಗವು ಈ ಟೂರ್ನಿಯಲ್ಲಿ ಅಜೇಯವಾಗಿ ಉಳಿದಿದೆ. ಆಡಿದ ನಾಲ್ಕು ಪಂದ್ಯಗಳಲ್ಲಿಯೂ ಜಯಿಸಿ ಎಂಟು ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಚೀನಾ ಎರಡನೇ ಸ್ಥಾನಕ್ಕೆ ಇಳಿಯಿತು. ಭಾನುವಾರ ನಡೆಯುವ ಪಂದ್ಯದಲ್ಲಿ ಭಾರತವು ಜಪಾನ್ ವಿರುದ್ಧ ಆಡಲಿದೆ.

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ

ರೌಂಡ್ ರಾಬಿನ್ ಲೀಗ್‌ನಲ್ಲಿ ಆರು ತಂಡಗಳಿದ್ದು ಮೊದಲ ನಾಲ್ಕು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಗಿಟ್ಟಿಸಲಿವೆ.

ಬಲಿಷ್ಠ ಚೀನಾ ತಂಡದ ಎದುರಿನ ಪಂದ್ಯದಲ್ಲಿ ಭಾರತದ ಆಟಗಾರ್ತಿಯರು ಆರಂಭದಿಂದಲೇ ಚುರುಕಾದ ಆಟವಾಡಿದರು. ಕೆಲವು ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ಗಳಿಸುವ ಅವಕಾಶಗಳನ್ನು ಕೈಚೆಲ್ಲಿದರೂ ಎದುರಾಳಿಗಳಿಗೆ ಯಶಸ್ಸು ಸಿಗಲು ಬಿಡಲಿಲ್ಲ. ಭಾರತದ ರಕ್ಷಣಾ ಪಡೆ ಉತ್ತಮವಾಗಿ ಕಾರ್ಯನಿರ್ವಹಿಸಿತು.

ದಿನದ ಇನ್ನುಳಿದ ಪಂದ್ಯಗಳಲ್ಲಿ ಜಪಾನ್ 2–1ರಿಂದ ಮಲೇಷ್ಯಾ ವಿರುದ್ಧ; ದಕ್ಷಿಣ ಕೊರಿಯಾ 4–0ಯಿಂದ ಥಾಯ್ಲೆಂಡ್ ವಿರುದ್ಧ ಜಯಿಸಿದವು.

ಅಭಿನವ್, ಮನೀಷ್ ಉತ್ತಮ ಬ್ಯಾಟಿಂಗ್ • ಶ್ರೇಯಸ್‌ಗೆ ಐದು ವಿಕೆಟ್

ಮಯಂಕ್ ಬಳಗಕ್ಕೆ ಮೂರು ಅಂಕ

ಅಭಿನವ್ ಮನೋಹರ್

ಶ್ರೇಯಸ್

ಲಖನೌ: ಆತಿಥೇಯ ಉತ್ತರಪ್ರದೇಶ ಎದುರು ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಮುನ್ನಡೆ ಪಡೆದ ಕರ್ನಾಟಕ ಎರಡನೇ ಇನಿಂಗ್ಸ್‌ನಲ್ಲಿ ಅಧಿಕಾರಯುತವಾಗಿ ಆಡದ ಕಾರಣ ಗೆಲುವು ಕೈತಪ್ಪಿತು. ಡ್ರಾ ಆದ ಪಂದ್ಯದಲ್ಲಿ 3 ಅಂಕ ಪಡೆದಿದ್ದಷ್ಟೇ ಮಯಂಕ್ ಅಗರವಾಲ್ ಬಳಗದ ಸಾಧನೆ.

ಏಕನಾ ಕ್ರೀಡಾಂಗಣದಲ್ಲಿ ಶನಿವಾರ ಮುಕ್ತಾಯವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ನಾಲ್ಕನೇ ಪಂದ್ಯದಲ್ಲಿ ಕರ್ನಾಟಕ ತಂಡಕ್ಕೆ ಉತ್ತರಪ್ರದೇಶವು 261 ರನ್‌ಗಳ ಗೆಲುವಿನ ಗುರಿ ಒಡ್ಡಿತ್ತು. ಊಟಕ್ಕಿಂತ ಮುನ್ನವೇ ಬ್ಯಾಟಿಂಗ್ ಆರಂಭಿಸಿದ ಕರ್ನಾಟಕ ತಂಡಕ್ಕೆ ಸಂಜೆಯವರಿಗೂ ಸಮಯವೂ ಇತ್ತು. ನಿಕಿನ್ ಜೋಸ್ (48; 84ಎ) ಮತ್ತು ಮಯಂಕ್ ಅಗರವಾಲ್ (37; 46ಎ) ಉತ್ತಮ ಆರಂಭ ನೀಡಿದರು. ಆದರೆ ದೀರ್ಘ ಇನಿಂಗ್ಸ್ ಆಡುವಲ್ಲಿ ಯಶಸ್ವಿಯಾಗಲಿಲ್ಲ. ಸ್ಮರಣ್ ಆರ್ ಮತ್ತು ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ಕೃಷ್ಣನ್ ಶ್ರೀಜಿತ್ ಕೂಡ ಬೇಗನೆ ನಿರ್ಗಮಿಸಿದರು. ಕ್ರಮಾಂಕದಲ್ಲಿ ಬಡ್ತಿ ಪಡೆದು ಬಂದ ಶ್ರೇಯಸ್ ಗೋಪಾಲ್ ಕೂಡ 1 ರನ್ ಗಳಿಸಿ ಔಟಾದರು.

ಇದರಿಂದಾಗಿ ಗೆಲುವಿನ ಅವಕಾಶ ದೂರ ಸರಿಯಿತು. ಆತಿಥೇಯ ಬೌಲರ್‌ಗಳು ನಿರಂತರವಾಗಿ ಉತ್ತಮ ದಾಳಿ ಸಂಘಟಿಸಿ ಒತ್ತಡ ಹೇರಿದರು. ವಿಪ್ರಜ್ ನಿಗಮ್ ಎರಡು ವಿಕೆಟ್ ಕೂಡ ಕಿತ್ತರು. ಇದರಿಂದಾಗಿ ಕ್ರೀಸ್‌ನಲ್ಲಿ ಇದ್ದ ಮನೀಷ್ ಪಾಂಡೆ (ಔಟಾಗದೇ 36; 78ಎ) ಮತ್ತು ಅಭಿನವ್ ಮನೋಹರ್ (ಔಟಾಗದೇ 31; 72ಎ) ಅವರು ವಿಕೆಟ್ ಪತನಕ್ಕೆ ತಡೆಯೊಡ್ಡಿದರು. ಅಭಿನವ್ ಉತ್ತಮ ಎಸೆತಗಳನ್ನು ಗೌರವಿಸಿದರು. ಬೌನ್ಸರ್‌ಗಳಿಂದ ತಪ್ಪಿಸಿಕೊಂಡರು. ಅವಕಾಶ ಸಿಕ್ಕಾಗಲೆಲ್ಲ ಚೆಂಡನ್ನು ಬೌಂಡರಿಗೆರೆ ದಾಟಿಸಲೂ ಹಿಂಜರಿಯಲಿಲ್ಲ. ಇನ್ನೊಂದೆಡೆ ಮನೀಷ್ ಕೂಡ ಇದೇ ನೀತಿ ಅನುಸರಿಸಿದರು. ಹೀಗಾಗಿ ಕರ್ನಾಟಕ 59 ಓವರ್‌ಗಳಲ್ಲಿ 5 ವಿಕೆಟ್‌ಗೆ 178 ರನ್ ಗಳಿಸಿ ಸೋಲಿನಿಂದ ತಪ್ಪಿಸಿಕೊಂಡಿತು. ಉತ್ತರಪ್ರದೇಶ ಕೂಡ ನಿರುಮ್ಮಳವಾಯಿತು.

ಆತಿಥೇಯ ತಂಡವು ಎರಡನೇ ಇನಿಂಗ್ಸ್‌ನಲ್ಲಿ ಸಂಪೂರ್ಣವಾಗಿ ಪಾರಮ್ಯ ಮೆರೆಯಿತು. ಮೊದಲ ಇನಿಂಗ್ಸ್‌ನಲ್ಲಿ ಕೇವಲ 89 ರನ್ ಗಳಿಸಿದ್ದ ತಂಡವು 2ನೇ ಇನಿಂಗ್ಸ್‌ನಲ್ಲಿ 134 ಓವರ್‌ಗಳಲ್ಲಿ 446 ರನ್ ಗಳಿಸಿತು. ಕೊನೆಯ ದಿನದಾಟದ ಬೆಳಿಗ್ಗೆ ಸೌರಭ್ ಕುಮಾರ್ (54 ರನ್) ಅರ್ಧಶತಕ ಗಳಿಸಿದರು. ಆದಿತ್ಯ (41 ರನ್) ಮತ್ತು ವಿಪ್ರಜ್ ನಿಗಮ್ (26 ರನ್) ಕೂಡ ಉತ್ತಮವಾಗಿ ಬ್ಯಾಟ್ ಮಾಡಿದರು. ಶುಕ್ರವಾರ ಮಾಧವ್ ಕೌಶಿಕ್ ಮತ್ತು ಆರ್ಯನ್ ಜುಯಾಲ್ ಶತಕ ದಾಖಲಿಸಿದ್ದರು. ಇದರಿಂದಾಗಿ ಕರ್ನಾಟಕದ ಬೌಲರ್‌ಗಳೂ ಬಸವಳಿದರು. ಈ ನಡುವೆಯೂ ಶ್ರೇಯಸ್ ಗೋಪಾಲ್ 122ಕ್ಕೆ5 ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು. ಕರ್ನಾಟಕ ತಂಡಕ್ಕೆ ಈಗ ನಾಕೌಟ್ ಹಾದಿಯೂ ಸರಳವಾಗಿಲ್ಲ. ಕರ್ನಾಟಕದ ಮೊದಲೆರಡು ಪಂದ್ಯಗಳು ಮಳೆಗೆ ಕೊಚ್ಚಿಹೋಗಿದ್ದವು. ಮೂರನೇಯದ್ದರಲ್ಲಿ ಬಿಹಾರ ವಿರುದ್ಧ ಜಯಿಸಿತ್ತು. ಬಂಗಾಳ ವಿರುದ್ಧ ಡ್ರಾ ಮಾಡಿಕೊಂಡು 1 ಅಂಕ ಪಡೆದಿತ್ತು. ಆದರೆ ಇಲ್ಲಿ ಗೆಲುವಿನ ಅವಕಾಶವನ್ನು ಕೈಚೆಲ್ಲಿತು.

ಇನ್ನುಳಿದಿರುವ ಎರಡು ಪಂದ್ಯಗಳಲ್ಲಿ ಪಂಜಾಬ್ ಮತ್ತು ಹರಿಯಾಣ ತಂಡಗಳನ್ನು ಎದುರಿಸಬೇಕಿದೆ. ಹರಿಯಾಣ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಪಂಜಾಬ್ 11 ಅಂಕಗಳೊಂದಿಗೆ ಐದನೇ ಸ್ಥಾನದಲ್ಲಿದೆ. ಈ ಎರಡೂ ಪಂದ್ಯಗಳು 2025ರ ಜನವರಿ–ಫೆಬ್ರುವರಿಯಲ್ಲಿ ನಡೆಯಲಿವೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಉತ್ತರಪ್ರದೇಶ 89. ಕರ್ನಾಟಕ 275. ಎರಡನೇ ಇನಿಂಗ್ಸ್: ಉತ್ತರಪ್ರದೇಶ: 134 ಓವರ್‌ಗಳಲ್ಲಿ 446 (ಆದಿತ್ಯ 41, ಸೌರಭ್ ಕುಮಾರ್ 54; ವಿದ್ಯಾಧರ್ ಪಾಟೀಲ 111ಕ್ಕೆ 2, ಮೊಹಸಿನ್ ಖಾನ್ 93ಕ್ಕೆ 2, ಶ್ರೇಯಸ್ ಗೋಪಾಲ್ 122ಕ್ಕೆ 5). ಕರ್ನಾಟಕ 59 ಓವರ್‌ಗಳಲ್ಲಿ 5ಕ್ಕೆ 178 (ನಿಕಿನ್ ಜೋಸ್ 48, ಮಯಂಕ್ ಅಗರವಾಲ್ 37, ಮನೀಷ್ ಪಾಂಡೆ ಔಟಾಗದೇ 36, ಅಭಿನವ್ ಔಟಾಗದೇ 31; ವಿಪ್ರಜ್ ನಿಗಮ್ 62ಕ್ಕೆ 2). ಫಲಿತಾಂಶ: ಪಂದ್ಯ ಡ್ರಾ. ಕರ್ನಾಟಕಕ್ಕೆ 3, ಉತ್ತರಪ್ರದೇಶಕ್ಕೆ 1 ಅಂಕ. ಪಂದ್ಯದ ಆಟಗಾರ: ಕೃಷ್ಣನ್ ಶ್ರೀಜಿತ್

ಬಾಕ್ಸಿಂಗ್ ದಿಗ್ಗಜ ಮೈಕ್ ಟೈಸನ್ (ಬಲ) ಅವರಿಗೆ ಪಂಚ್ ಮಾಡಿದ ಯೂಟ್ಯೂಬರ್ ಜೇಕ್ ಪಾಲ್ –ಎಎಫ್‌ಪಿ ಚಿತ್ರ

ಟೈಸನ್ ಸವಾಲ್ ಗೆದ್ದ ಪಾಲ್

ಆರ್ಲಿಂಗ್ಟನ್, ಅಮೆರಿಕ (ಎಎಫ್‌ಪಿ): ದಿಗ್ಗಜ ಮೈಕ್ ಟೈಸನ್ ಅವರು ಶುಕ್ರವಾರ ನಡೆದ ಹೈವೋಲ್ಟೇಜ್ ಬಾಕ್ಸಿಂಗ್ ಹಣಾಹಣಿಯಲ್ಲಿ ಯೂಟ್ಯೂಬರ್ ಜೇಕ್ ಪಾಲ್ ವಿರುದ್ಧ ಪರಾಭವಗೊಂಡಿದ್ದಾರೆ.

27 ವರ್ಷ ವಯಸ್ಸಿನ ಪಾಲ್ ಅವರು 80–72, 79–73, 79-73ರಿಂದ ಹೆವಿವೇಯ್ಟ್ ಐಕಾನ್ ಟೈಸನ್ ವಿರುದ್ಧ ಗೆಲುವು ಸಾಧಿಸಿದ್ದಾರೆ. 2024ರ ಅತಿದೊಡ್ಡ ಬಾಕ್ಸಿಂಗ್ ಫೈಟ್ ಎಂದು ಬಿಂಬಿಸಲಾಗಿದ್ದ ಈ ಹಣಾಹಣಿಯನ್ನು ಕಣ್ತುಂಬಿ ಕೊಳ್ಳಲು ಟೈಸನ್ ಅಭಿಮಾನಿಗಳು ತುದಿಗಾಲಿನಲ್ಲಿ ನಿಂತಿದ್ದರು.

ಟೆಕ್ಸಾಸ್‌ನ ಆರ್ಲಿಂಗ್ಟನ್‌ನಲ್ಲಿರುವ ಎಟಿ ಅಂಡ್ ಟಿ ಕ್ರೀಡಾಂಗಣ ಈ ಐತಿಹಾಸಿಕ ಪಂದ್ಯಕ್ಕೆ ಸಾಕ್ಷಿಯಾಯಿತು. 2005ರ ನಂತರ ಅಖಾಡಕ್ಕೆ ಇಳಿದ 58 ವರ್ಷ ವಯಸ್ಸಿನ ಟೈಸನ್ ಅವರ ಪಂಚ್‌ಗಳು ಲಯ ಕಳೆದುಕೊಂಡ ಕಾರಣ ಪಾಲ್ ಮೇಲುಗೈ ಸಾಧಿಸಿದರು.

ಹೆವಿವೇಯ್ಟ್ ಮಾಜಿ ಚಾಂಪಿಯನ್ ಟೈಸನ್ ಎಂಟು ಸುತ್ತಿನ ಬೌಟ್‌ನ ಮೊದಲೆರಡು ಸುತ್ತುಗಳಲ್ಲಿ ಕಷ್ಟಪಟ್ಟು ಪಂಚ್ ಮಾಡಿದರು. ಆದರೆ, ಪಾಲ್ ಅವರು ಚುರುಕಿನ ಪಾದಚಲನೆಯ ಮೂಲಕ ಮೂರನೇ ಸುತ್ತಿನಲ್ಲೇ ಮೇಲುಗೈ ಸಾಧಿಸಿದರು. ಎಲ್ಲಾ ಮೂರು ಕಾರ್ಡ್‌ಗಳಲ್ಲಿ ಪಾಲ್ ದೊಡ್ಡ ಅಂತರದಿಂದ ಜಯ ಸಾಧಿಸಿದರು. ಪಂದ್ಯದ ಮುಕ್ತಾಯದ ಬಳಿಕ ಪಾಲ್ ಅವರು ಬಾಕ್ಸಿಂಗ್ ದಂತಕತೆ ಟೈಸನ್ ಅವರಿಗೆ ನಮಸ್ಕರಿಸಿದರು.

19 ವರ್ಷಗಳ ಬಳಿಕ ಸ್ಪರ್ಧೆಗೆ ಮರಳಿದ್ದ ಟೈಸನ್ ಅವರು ಗುರುವಾರ ತೂಕ ಪರೀಕ್ಷೆ ವೇಳೆ ಪಾಲ್ ಅವರಿಗೆ ಕಪಾಳಮೋಕ್ಷ ಮಾಡಿದ್ದು ಚರ್ಚೆಗೆ ಗ್ರಾಸವಾಗಿತ್ತು. ಈ ಸ್ಪರ್ಧೆಗಾಗಿ ಟೈಸನ್ ಅವರಿಗೆ ₹169 ಕೋಟಿ ($20 ಮಿಲಿಯನ್) ಪಾವತಿಸಲಾಗಿದೆ ಎಂದು ವರದಿಯಾಗಿದೆ.

ತಲೈವಾಸ್‌ಗೆ ಮಣಿದ ವಾರಿಯರ್ಸ್

ನೊಯ್ಡಾ (ಪಿಟಿಐ): ಸಾಂಘಿಕ ಆಟ ಪ್ರದರ್ಶಿಸಿದ ತಮಿಳು ತಲೈವಾಸ್ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 46–31ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿತು.

ನೊಯ್ಡಾ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಈ ಪಂದ್ಯದಲ್ಲಿ ವಿರಾಮದ ವೇಳೆ 2 (18–16) ಪಾಯಿಂಟ್ಸ್‌ಗಳಿಂದ ಮುನ್ನಡೆಯಲ್ಲಿದ್ದ ತಲೈವಾಸ್ ತಂಡವು ಉತ್ತರಾರ್ಧದಲ್ಲಿ ಪಾರಮ್ಯ ಮೆರೆದು, 15 ಅಂಕಗಳ ಅಂತರದ ಜಯ ಸಾಧಿಸಿತು. ರೇಡರ್ ವಿಶಾಲ್ ಚಾಹಲ್ ಸೂಪರ್ ಟೆನ್ (12) ಸಾಧನೆ ಮೆರೆದರು. ಅವರಿಗೆ ಮೊಯಿನ್ ಶಾಫಾಫಿ (6) ಸಾಥ್ ನೀಡಿದರು. ಟ್ಯಾಕಲ್‌ನಲ್ಲಿ ಅಮೀರ್ ಹುಸೇನ್ ಬಸ್ತಾಮಿ (7) ಮತ್ತು ನಿತೇಶ್ ಕುಮಾರ್ (6) ಗಮನ ಸೆಳೆದರು.

ದಿನದ ಮತ್ತೊಂದು ಪಂದ್ಯದಲ್ಲಿ ಡೆಲ್ಲಿ ದಬಾಂಗ್ ತಂಡವು 35–25ರಿಂದ ಬೆಂಗಳೂರು ಬುಲ್ಸ್ ತಂಡವನ್ನು ಮಣಿಸಿತು. ಬುಲ್ಸ್ ತಂಡಕ್ಕೆ ಇದು ಎಂಟನೇ ಸೋಲು.

ಕೋಚ್ ವಿವಿಎಸ್ ಲಕ್ಷ್ಮಣ್ ಸಂತಸ • ಸಂಜು, ವರ್ಮಾ ಆಟಕ್ಕೆ ಮೆಚ್ಚುಗೆ

ಆಫ್ರಿಕಾದಲ್ಲಿ ಸರಣಿ ಜಯ ವಿಶೇಷ ಸಾಧನೆ

ತಿಲಕ್ ವರ್ಮಾ

ಜೊಹಾನೆಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾದಲ್ಲಿ ಟಿ20 ಕ್ರಿಕೆಟ್ ಸರಣಿಯನ್ನು ಜಯಿಸುವುದು ವಿಶೇಷ ಸಾಧನೆ ಎಂದು ಭಾರತ ತಂಡದ ಹಂಗಾಮಿ ಕೋಚ್ ವಿವಿಎಸ್ ಲಕ್ಷ್ಮಣ್ ಸಂತಸ ವ್ಯಕ್ತಪಡಿಸಿದ್ದಾರೆ.

ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರು 3–1ರಿಂದ ಸರಣಿ ಜಯಿಸಿತು. ಶುಕ್ರವಾರ ನಡೆದ ಕೊನೆಯ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ಮತ್ತು ತಿಲಕ್ ವರ್ಮಾ ಅವರಿಬ್ಬರ ಅಬ್ಬರದ ಶತಕಗಳಿಂದಾಗಿ ತಂಡವು ಭಾರಿ ಅಂತರದ ಜಯ ಸಾಧಿಸಿತು.

‘ಆಟಗಾರರು ಆಡಿದ ರೀತಿ ಮತ್ತು ಅವರ ಹುಮ್ಮಸ್ಸು ನೋಡಿ ಹೆಮ್ಮೆಯೆನಿಸುತ್ತದೆ. ಇಡೀ ಸರಣಿಯಲ್ಲಿ ಭಾರತ ತಂಡವನ್ನು ಸೂರ್ಯಕುಮಾರ್ ಯಾದವ್ ಉತ್ತಮವಾಗಿ ಮುನ್ನಡೆಸಿದರು. ಸಂಜು ಸ್ಯಾಮ್ಸನ್, ವರ್ಮಾ ಅವರನ್ನು ತಡೆಯುವವರು ಯಾರೂ ಇರಲಿಲ್ಲ. ಸ್ಪಿನ್ನರ್ ವರುಣ್ ಚಕ್ರವರ್ತಿ ಅತ್ಯಮೋಘವಾಗಿ ಆಡಿದರು’ ಎಂದು ಲಕ್ಷ್ಮಣ್ ಎಕ್ಸ್‌ನಲ್ಲಿ ಸಂದೇಶ ಹಾಕಿ ಶ್ಲಾಘಿಸಿದರು.

‘ತಂಡದ ಎಲ್ಲರೂ ಪರಸ್ಪರ ಒಬ್ಬರಿನ್ನೊಬ್ಬರ ಯಶಸ್ಸನ್ನು ಸಂಭ್ರಮಿಸಿದರು. ಪ್ರತಿ ಹಂತದಲ್ಲಿಯೂ ತಂಡಸ್ಫೂರ್ತಿ ಮೆರೆದರು. ಎಲ್ಲರಿಗೂ ಅಭಿನಂದನೆಗಳು’ ಎಂದು ಉಲ್ಲೇಖಿಸಿದ್ದಾರೆ.

ವರ್ಮಾಗೆ ಮೆಚ್ಚುಗೆ ಮಳೆ: ದಕ್ಷಿಣ ಆಫ್ರಿಕಾ ಎದುರಿನ ಟಿ20 ಸರಣಿ ಜಯದಲ್ಲಿ ಮಹತ್ವದ ಪಾತ್ರ ವಹಿಸಿದ ಇಬ್ಬರು ಬ್ಯಾಟರ್‌ಗಳೆಂದರೆ ಸಂಜು ಸ್ಯಾಮ್ಸನ್ ಮತ್ತು ತಿಲಕ್ ವರ್ಮಾ.

ನಾಲ್ಕು ಪಂದ್ಯಗಳ ಈ ಸರಣಿಯಲ್ಲಿ ಇಬ್ಬರೂ ತಲಾ 2 ಶತಕ ಬಾರಿಸಿದರು. ಅದರಲ್ಲೂ ವರ್ಮಾ ಅವರ ನಿರ್ಭಿಡೆಯ ಬೀಸಾಟವು ಹೊಸ ಸಂಚಲನ ಮೂಡಿಸಿತು.

ಮೂರನೇ ಕ್ರಮಾಂಕದಲ್ಲಿ ಬ್ಯಾಟರ್ ಹುಡುಕಾಟದಲ್ಲಿದ್ದ ತಂಡಕ್ಕೆ ಉತ್ತರವಾಗಿ ತಿಲಕ್ ಲಭಿಸಿದ್ದಾರೆ. ತಮ್ಮ ಪ್ರಯೋಗ ಯಶಸ್ವಿಯಾಗಿದ್ದಕ್ಕೆ ನಾಯಕ ಸೂರ್ಯಕುಮಾರ್ ಸಂತಸಗೊಂಡಿದ್ದಾರೆ. ಸೂರ್ಯ ಅವರು ತಾವು ಆಡುತ್ತಿದ್ದ ಮೂರನೇ ಸ್ಥಾನವನ್ನು ವರ್ಮಾಗೆ ಬಿಟ್ಟಿದ್ದರು.

‘ಯುವ ಆಟಗಾರನಿಗೆ ತನ್ನ ಸಾಮರ್ಥ್ಯ ತೋರಿಸಲು ಇದು ಉತ್ತಮ ಅವಕಾಶವಾಗಿತ್ತು. ಅದನ್ನು ಅವರು ಸಮರ್ಥವಾಗಿ ನಿಭಾಯಿಸಿದರು. ತಮ್ಮ ಹೊಣೆಯನ್ನು ಅರಿತು ಆಡಿದ ಅವರ ನಿರ್ಭಯವಾದ ಸ್ವಭಾವವು ಅಮೋಘವಾಗಿದೆ. ಸೂಪರ್‌ಸ್ಪೋರ್ಟ್ಸ್ ಕ್ರೀಡಾಂಗಣದಲ್ಲಿ ಅವರ ಬ್ಯಾಟಿಂಗ್ ಅದ್ಭುತವಾಗಿತ್ತು. ಇದೇ ಲಯವನ್ನು ಅವರು ಮುಂದಿನ ಎಲ್ಲ ಮಾದರಿಗಳಲ್ಲಿಯೂ ನಿರಂತರವಾಗಿ ಮುಂದುವರಿಸುತ್ತಾರೆಂಬ ಭರವಸೆ ಇದೆ’ ಎಂದರು.

ಶುಕ್ರವಾರದ ಪಂದ್ಯದಲ್ಲಿ ವರ್ಮಾ ಅವರು 47 ಎಸೆತಗಳಲ್ಲಿ ಅಜೇಯ 120 ರನ್ ಗಳಿಸಿದ್ದರು. ಸಂಜು ಸರಣಿಯ ಮೊದಲ ಪಂದ್ಯದಲ್ಲಿ ಶತಕ ಗಳಿಸಿದ್ದರು. ನಂತರ ಎರಡು ಪಂದ್ಯಗಳಲ್ಲಿ ಸೊನ್ನೆ ಸುತ್ತಿದ್ದರು. ಆದರೆ ಕೊನೆಯ ಪಂದ್ಯದಲ್ಲಿ ಶತಕ ಬಾರಿಸಿದರು. ವರ್ಮಾ ಮತ್ತು ಸಂಜು ಎರಡನೇ ವಿಕೆಟ್ ಜೊತೆಯಾಟದಲ್ಲಿ 210 ರನ್ (86ಎಸೆತ) ಸೇರಿಸಿದರು. ತಂಡವು 20 ಓವರ್‌ಗಳಲ್ಲಿ 1 ವಿಕೆಟ್‌ಗೆ 283 ರನ್ ಗಳಿಸಿತ್ತು. ಸೂರ್ಯ ಬಳಗವು 135 ರನ್‌ಗಳ ಅಂತರದಿಂದ ಪಂದ್ಯ ಗೆದ್ದಿತು.

ಸಂಕ್ಷಿಪ್ತ ಸುದ್ದಿ

ರೋಹಿತ್ ಶರ್ಮಾ ದಂಪತಿಗೆ ಗಂಡುಮಗು

ರೋಹಿತ್ ಶರ್ಮಾ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರ ಪತ್ನಿ ರಿತೀಕಾ ಸಜದೇ ಅವರು ಶುಕ್ರವಾರ ರಾತ್ರಿ ಸ್ಥಳೀಯ ಆಸ್ಪತ್ರೆಯಲ್ಲಿ ಗಂಡುಮಗುವಿಗೆ ಜನ್ಮ ನೀಡಿದ್ದಾರೆ.

ಈ ಕಾರಣದಿಂದಾಗಿ ರೋಹಿತ್ ಅವರು ಆಸ್ಟ್ರೇಲಿಯಾ ಪ್ರವಾಸಕ್ಕೆ ಭಾರತ ತಂಡದೊಂದಿಗೆ ಹೋಗಿಲ್ಲ. ಪರ್ತ್‌ನಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಅವರು ಆಡುವುದಿಲ್ಲವೆಂದೂ ಹೇಳಲಾಗಿತ್ತು. ಆದರೆ ಈಗ ಅವರು ಪರ್ತ್‌ಗೆ ತೆರಳುವ ಸಾಧ್ಯತೆ ಇದೆ ಎಂದೂ ಮೂಲಗಳು ತಿಳಿಸಿವೆ.

ಶರ್ಮಾ ದಂಪತಿಗೆ ಇದು ಎರಡನೇ ಮಗು. 2018ರಲ್ಲಿ ಪುತ್ರಿ ಸಮೈರಾ ಜನಿಸಿದ್ದಳು.

ರೋಹಿತ್ ಅವರು ಮೊದಲ ಟೆಸ್ಟ್‌ನಲ್ಲಿ ಆಡಲು ಸಾಧ್ಯವಾಗದಿದ್ದರೆ ಜಸ್‌ಪ್ರೀತ್ ಬೂಮ್ರಾ ತಂಡವನ್ನು ಮುನ್ನಡೆಸುವ ನಿರೀಕ್ಷೆ ಇದೆ. ಯಶಸ್ವಿ ಜೈಸ್ವಾಲ್ ಅವರೊಂದಿಗೆ ಕೆ.ಎಲ್. ರಾಹುಲ್ ಅವರು ಇನಿಂಗ್ಸ್ ಆರಂಭಿಸಬಹುದು.

ದಕ್ಷಿಣ ಅಫ್ರಿಕಾದಲ್ಲಿ ಶುಕ್ರವಾರ ಟಿ20 ಕ್ರಿಕೆಟ್ ಸರಣಿ ಜಯಿಸಿದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ರೋಹಿತ್ ದಂಪತಿಗೆ ಶುಭ ಹಾರೈಸಿದ್ದಾರೆ.

ಪ್ರಜ್ವಲ್- ಆದಿಲ್ ಜೋಡಿಗೆ ಪ್ರಶಸ್ತಿ

ಪ್ರಜ್ವಲ್ ದೇವ್

ಬೆಂಗಳೂರು: ಕರ್ನಾಟಕದ ಎಸ್.ಡಿ. ಪ್ರಜ್ವಲ್ ದೇವ್ ಮತ್ತು ಆದಿಲ್ ಕಲ್ಯಾಣಪುರ್ ಜೋಡಿಯು ಶನಿವಾರ ಐಟಿಎಫ್ ಮುಂಬೈ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ.

ಎರಡನೇ ಶ್ರೇಯಾಂಕದ ಪ್ರಜ್ವಲ್ ಮತ್ತು ಆದಿಲ್ ಜೋಡಿ 6–4, 4–6,1–7 ಸೆಟ್‌ಗಳಿಂದ ಆದಿತ್ಯ ಗಣೇಶನ್ (ಅಮೆರಿಕ) ಮತ್ತು ಆರ್ಯನ್ ಶಾ ವಿರುದ್ಧ ಗೆಲುವು ಸಾಧಿಸಿತು. ಈ ಜೋಡಿಗೆ ಋತುವಿನಲ್ಲಿ ನಾಲ್ಕನೇ ಪ್ರಶಸ್ತಿ ಇದಾಗಿದೆ.

‘ತೊಗರಿ ಕಣಜ’ದಲ್ಲಿ ಟೆನಿಸ್ ಹಬ್ಬ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮಾನ್ ಕೆಸರ್ವಾನಿ ಶನಿವಾರ ಅಭ್ಯಾಸ ನಡೆಸಿದರು –ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿ: ‘ತೊಗರಿಯ ಕಣಜ’ ಕಲಬುರಗಿಯು ಐಟಿಎಫ್ ಪುರುಷರ ಟೆನಿಸ್ ಟೂರ್ನಿಗೆ ಸಜ್ಜಾಗಿದೆ. ನಗರದ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಇದೇ 17ರಿಂದ 24ರ ವರೆಗೆ ನಡೆಯುವ ಟೆನಿಸ್ ಹಬ್ಬದಲ್ಲಿ ದೇಶ–ವಿದೇಶಗಳ ಆಟಗಾರರು ಕ್ರೀಡಾ ಪ್ರೇಮಿಗಳಿಗೆ ರಸದೌತಣ ಉಣಬಡಿಸಲಿದ್ದಾರೆ.

ಭಾರತದ ಕರಣ್ ಸಿಂಗ್, ಆರ್ಯನ್ ಷಾ ಹಾಗೂ ಟೂರ್ನಿಯ ಅಗ್ರ ಶ್ರೇಯಾಂಕದ ಆಟಗಾರ ಉಜ್ಬೇಕಿಸ್ತಾನದ ಖುಮೋಯುನ್ ಸುಲ್ತಾನೋವ್, ರಷ್ಯಾದ ಬಾಗ್ದಾನ್ ಬಾಬ್‌ರೋವ್ ಅವರು ಟೂರ್ನಿಯ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಕಳೆದ ವರ್ಷ ಇಲ್ಲಿ ನಡೆದ ಟೂರ್ನಿಯ ಸಿಂಗಲ್ಸ್‌ನಲ್ಲಿ ಭಾರತದ ರಾಮಕುಮಾರ್ ರಾಮನಾಥನ್ ಪ್ರಶಸ್ತಿ ಗೆದ್ದುಕೊಂಡಿದ್ದರು. ವೈಯಕ್ತಿಕ ಕಾರಣಗಳಿಂದಾಗಿ ಅವರು ಈ ಬಾರಿ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿಲ್ಲ.

ಕರ್ನಾಟಕದ ರಿಷಿ ರೆಡ್ಡಿ ಮತ್ತು ಮನೀಷ್ ಜಿ. ಹಾಗೂ ಭಾರತದ ಆದಿತ್ಯ ಬಾಲಶೇಖರ, ಯುವಾನ್ ನಂದ್ಯಾಳ ಅವರು ಟೂರ್ನಿಯ ಮುಖ್ಯ ಸುತ್ತಿಗೆ ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದಾರೆ. ಅರ್ಹತಾ ಸುತ್ತಿನ ಪಂದ್ಯಗಳಿಗೆ ಕರ್ನಾಟಕದ ದೀಪಕ ಎ. ಮತ್ತು ಜೇಸನ್ ಮೈಕೆಲ್ ಡೇವಿಡ್ ಹಾಗೂ ಒ. ಜಯಪ್ರಕಾಶ, ರಾಜೇಶ್ವರ ರೆಡ್ಡಿ ಪಟ್ಲೋಲ್ಲ ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದಾರೆ.

ಒಂಬತ್ತು ದೇಶಗಳಿಂದ 11 ವಿದೇಶಿ ಆಟಗಾರರು ಕಣಕ್ಕೆ ಇಳಿಯುವರು.

ಒಡಿಶಾಗೆ ಕಿರೀಟ

ಚೆನ್ನೈ (ಪಿಟಿಐ): ಶಿಲಾನಂದ್ ಲಾಕ್ರಾ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಒಡಿಶಾ ಶನಿವಾರ ಸೀನಿಯರ್ ಪುರುಷರ ರಾಷ್ಟ್ರೀಯ ಹಾಕಿ ಟೂರ್ನಿಯ ಫೈನಲ್‌ನಲ್ಲಿ 5–1ರಿಂದ ಹರಿಯಾಣ ತಂಡವನ್ನು ಮಣಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಉತ್ತರ ಪ್ರದೇಶ 2–1ರಿಂದ ಮಣಿಪುರ ತಂಡವನ್ನು ಮಣಿಸಿ ಮೂರನೇ ಸ್ಥಾನ ಪಡೆಯಿತು.

ಮಿನಿ ಒಲಿಂಪಿಕ್ಸ್ ಕ್ರೀಡಾಕೂಟ: ಆರ್ಚರಿಯಲ್ಲಿ ದಕ್ಷ, ಮಕೂಲಿಕಾಗೆ ಚಿನ್ನ

ಸೈಕ್ಲಿಂಗ್: ಸಂಗಮೇಶ್, ನಂದಿನಿ ಮಿಂಚು

ಪ್ರಜಾವಾಣಿ ವಾರ್ತೆ

ಮಿನಿ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಶನಿವಾರ ಬಾಲಕಿಯರ ಈಜು ಸ್ಪರ್ಧೆಯ ದೃಶ್ಯ

ಬೆಂಗಳೂರು: ಬಾಗಲಕೋಟೆಯ ಸಂಗಮೇಶ್ ತೋಳಮಟ್ಟಿ ಅವರು ಇಲ್ಲಿ ನಡೆಯುತ್ತಿರುವ ಮಿನಿ ಒಲಿಂಪಿಕ್ ಕ್ರೀಡಾಕೂಟದ ಬಾಲಕರ ಸೈಕ್ಲಿಂಗ್‌ನಲ್ಲಿ 20 ಕಿ.ಮೀ ರೋಡ್ ಮಾಸ್ ಸ್ಟಾರ್ಟ್ ವಿಭಾಗದಲ್ಲಿ ಮೊದಲ ಸ್ಥಾನ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ನಂದಿನಿ ಲಮಾಣಿ ಪ್ರಥಮರಾದರು.

ಬಾಲಕರ ಆರ್ಚರಿ ವಿಭಾಗದಲ್ಲಿ ಬೆಂಗಳೂರಿನ ಎಸ್.ಪಿ ದಕ್ಷ ಹಾಗೂ ಬಾಲಕಿಯರ ವಿಭಾಗದಲ್ಲಿ ಮಕೂಲಿಕಾ ಚಟರ್ಜಿ ಅವರು ಚಿನ್ನದ ಪದಕ ಗೆದ್ದರು.

ಫಲಿತಾಂಶಗಳು: ಬಾಲಕರು: ಆರ್ಚರಿ: ಇಂಡಿಯನ್ ರೌಂಡ್ -20 ಮೀ: ಎಸ್.ಪಿ. ದಕ್ಷ-1, ನಮನ್ ಚಿನ್ನಪ್ಪ-2, ಆರ್. ಜಿ. ತಿರಿಸ್ -3 (ಎಲ್ಲರೂ ಬೆಂಗಳೂರು). ಇಂಡಿಯನ್ ಓವರ್‌ಆಲ್: ಎಸ್.ಪಿ. ದಕ್ಷ-1, ಆರ್ಯವ್ ತೇಜಸ್-2, ನವೀನ್-3 (ಎಲ್ಲರೂ ಬೆಂಗಳೂರು). ಇಂಡಿಯನ್ ಎಲಿಮಿನೇಷನ್: ನಮನ್ ಚಿನ್ನಪ್ಪ-1, ಆದಿರಾಜು (ಬೆಂಗಳೂರು)-1, ಉದಯ ವಿಹಾನ (ಬೆಂಗಳೂರು ಅರ್ಬನ್)-2, ಆರ್. ಜಿ. ತಿರಿಸ್ (ಬೆಂಗಳೂರು)-3. ಕಂಪೌಂಡ್ ರ‍್ಯಾಂಕಿಂಗ್: ಭುವಾಸ್ ಶರ್ಮಾ (ಬೆಂಗಳೂರು)-1, ಶ್ರೀ ಸುಧನ್ವ ಗೌಡ (ಬೆಂಗಳೂರು ನಗರ)-2, ಬಿ.ಎ. ಗೌರವ್ (ಬೆಂಗಳೂರು)-3. **ಸೈಕ್ಲಿಂಗ್:** 20 ಕಿ.ಮೀ. ರೋಡ್ ಮಾಸ್ ಸ್ಟಾರ್ಟ್: ಸಂಗಮೇಶ್ ತೋಳಮಟ್ಟಿ (ಬಾಗಲಕೋಟೆ)-1, ನಿಖಿಲ್‌ರಾಡೊಯ್ ತೆರಿನಗಡ್ಡಿ (ಗದಗ)-2, ವಿ. ವಾಗೀಶ್ ಗೌಡ (ಮೈಸೂರು)-3. **ಜಿಮ್ನಾಸ್ಟಿಕ್ಸ್:** ಆರ್ಟಿಸ್ಟಿಕ್ ಟೀಮ್: ಬೆಂಗಳೂರು -1, ತುಮಕೂರು-2, ಧಾರವಾಡ-3. ಆಲ್‌ರೌಂಡ್ ವೈಯಕ್ತಿಕ: ರಿಯಾ ಬಾಫಣಾ (ಬೆಂಗಳೂರು)-1, ತುಮಕೂರು-2, ಧಾರವಾಡ-3. **ಆಲ್‌ರೌಂಡ್ ವೈಯಕ್ತಿಕ:** ಉತ್ಕರ್ಷ ಬೊಕಾರಿಯಾ (ಬೆಂಗಳೂರು)-1, ಕ್ಯಾಲ್ವಿನ್ ಆ್ಯಷ್ಲೆ ಚಾರ್ಲ್ಸ್ (ಬೆಂಗಳೂರು)-2, ಸಂಕೇತ್ ಮಾನೆ (ಧಾರವಾಡ)-3. **ಈಜು:** 50 ಮೀಟರ್ ಫ್ರೀಸ್ಟೈಲ್: ಆಡ್ರಿಯನ್ ನೀಲ್ ಸೆರಾ (ಬೆಂಗಳೂರು)-1, ಅರ್ಣವ್ ರಾವ್ (ಬನಶಂಕರಿ)-2, ದಕ್ಷಿತ್ ಎಂ. (ಬೆಂಗಳೂರು)-3; 200 ಮೀ. ಫ್ರೀಸ್ಟೈಲ್: ಶರಣ್ ಎಸ್. (ಬೆಂಗಳೂರು ನಗರ)-1, ರಿಷಿತ್ ರಂಗನ್ (ಬೆಂಗಳೂರು)-2, ಧ್ರುಪದ್ ರಾಮಕೃಷ್ಣ (ಬೆಂಗಳೂರು)-3; 800 ಮೀಟರ್ ಫ್ರೀಸ್ಟೈಲ್: ಅಕ್ಷಜ್ ಪಿ (ಬೆಂಗಳೂರು)-1, ದಕ್ಷ್ ಪ್ರಸಾದ್ (ಬೆಂಗಳೂರು)-2, ಕನಿಷ್ಕ್ ಎಸ್.ಎ. (ಬೆಂಗಳೂರು ದಕ್ಷಿಣ)-3; 200 ಮೀ. ಬ್ರೆಸ್ಟ್ ಸ್ಟ್ರೋಕ್: ಯಶ್ ಎಚ್.ಪಾಲ್ (ಬೆಂಗಳೂರು ನಗರ)-1, ಆಡ್ರಿಯನ್ ನೀಲ್ ಸೆರಾವೊ (ಬೆಂಗಳೂರು)-2, ಧ್ರುಪದ್ ರಾಮಕೃಷ್ಣ (ಬೆಂಗಳೂರು)-3; 200 ಮೀ. ಬಟರ್‌ಫ್ಲೈ: ಅಕ್ಷಜ್ ಪಿ. (ಬೆಂಗಳೂರು)-1, ಧ್ರುಪದ್ ರಾಮಕೃಷ್ಣ (ಬೆಂಗಳೂರು)-2, ಸಾಯಿ ರಂಜನ್ (ಬೆಂಗಳೂರು ದಕ್ಷಿಣ)-3; 200 ಮೀ. ವೈಯಕ್ತಿಕ ಮೆಡ್ಲೆ: ಆರವ್ ಜೆ -1, ಜೇಡನ್ ಫಿಲಿಪ್ ಥಾಮಸ್-2, ದಕ್ಷ್ ಪ್ರಸಾದ್ (ಎಲ್ಲರೂ ಬೆಂಗಳೂರು)-3

ಬಾಲಕಿಯರು: ಆರ್ಚರಿ: ರಿಕರ್ವ್ ರೌಂಡ್ (70ಮೀ) -ಮಕೂಲಿಕಾ ಚಟರ್ಜಿ -1, ಶ್ರೀಯಾ ಶರಣ್ -2, ಭೂಮಿಕುಮಾರಿ -3 (ಎಲ್ಲರೂ ಬೆಂಗಳೂರು). ಇಂಡಿಯನ್: ಅನ್ನಪೂರ್ಣ (ಯಾದಗಿರಿ)-1, ಆರ್. ಸ್ಪಂದನಾ (ಬೆಂಗಳೂರು)-2, ವಿ. ಐಶ್ವರ್ಯಾ (ಬೆಂಗಳೂರು)-3. ರಿಕರ್ವ್ ಎಲಿಮಿನೇಷನ್: ಮಕೂಲಿಕಾ ಚಟರ್ಜಿ (ಬೆಂಗಳೂರು)-1, ಭೂಮಿಕುಮಾರಿ (ಬೆಂಗಳೂರು)-2, ಶ್ರಿಯಾ ಶರಣ್ (ಬೆಂಗಳೂರು)-3, ಇಂಡಿಯನ್ ರೌಂಡ್ ಓವರ್ ಆಲ್: ಆರ್. ಸ್ಪಂದನಾ (ಬೆಂಗಳೂರು)-1, ಅನ್ನಪೂರ್ಣಾ (ಯಾದಗಿರ)-2, ವಿ. ಐಶ್ವರ್ಯಾ (ಬೆಂಗಳೂರು)-3. ಇಂಡಿಯನ್ ರೌಂಡ್ ಎಲಿಮಿನೇಷನ್: ಆರ್. ಸ್ಪಂದನಾ (ಬೆಂಗಳೂರು)-1, ಬದ್ದೆಲಾ ಕೋವಿದಾಶ್ರೀ (ಬೆಂಗಳೂರು)-2, ಅನ್ನಪೂರ್ಣಾ (ಯಾದಗೀರ)-3.

ಸೈಕ್ಲಿಂಗ್: 20 ಕಿ.ಮೀ ರಸ್ತೆ ಮಾಸ್‌ಸ್ಟಾರ್ಟ್: ನಂದಿನಿ ಲಮಾಣಿ (ಬಾಗಲಕೋಟೆ)-1, ನಿತಿಲಾ ದಾಸ್ (ಬೆಂಗಳೂರು)-2, ಕೌಶಲ್ಯಾ ಬಿ ರಾಮಗೊಂಡ (ಧಾರವಾಡ)-3 **ಜಿಮ್ನಾಸ್ಟಿಕ್ಸ್:** ರಿಧಮಿಕ್ (ಕ್ಲಬ್ಸ್): ರಿಯಾ ಬಾಫಣಾ (ಬೆಂಗಳೂರು)-1, ದಿತ್ಯಾ ಕೆ. ಮುರಳೀಧರ್ (ಬೆಂಗಳೂರು)-2, ಪೂರ್ವಿ ರವಿ ದೊಡ್ಡಮನಿ (ಧಾರವಾಡ)-3. ರಿಧಮಿಕ್ ಹೂಪ್: ರಿಯಾ ಬಾಫಣಾ (ಬೆಂಗಳೂರು)-1, ದಿತ್ಯಾ ಮುರಳೀಧರ್ (ಬೆಂಗಳೂರು)-2, ಅನನ್ಯಾ ಬಿ ಮೆಣಸಿನಕಾಯಿ (ಧಾರವಾಡ)-3. ರಿಧಮಿಕ್ ಕಬಾಲ್: ದಿತ್ಯಾ ಮುರಳೀಧರ್ -1, ರಿಯಾ ಬಾಫಣಾ -2, ಅನನ್ಯಾ ಮೆಣಸಿನಕಾಯಿ-3. ರಿಬ್ಬನ್: ರಿಯಾ ಬಾಫಣಾ-1, ದಿತ್ಯಾ ಮುರಳೀಧರ್-2, ಅನನ್ಯಾ ಮೆಣಸಿನಕಾಯಿ-3 ಆಲ್‌ರೌಂಡ್ ವೈಯಕ್ತಿಕ: ರಿಯಾ ಬಾಫಣಾ-1, ದಿತ್ಯಾ ಮುರಳೀಧರ-2, ಪೂರ್ವಿ ರವಿ ದೊಡ್ಡಮನಿ (ಧಾರವಾಡ)-3. ಟೀಮ್ ಚಾಂಪಿಯನ್‌ಷಿಪ್: ಬೆಂಗಳೂರು -1, ಮೈಸೂರು-2, ಧಾರವಾಡ-3. ವೇಟ್‌ಲಿಫ್ಟಿಂಗ್: 45 ಕೆಜಿ: ನಿಶಾ -1, ಶಾನಿಕಾ -2 (ಇಬ್ಬರೂ ದಕ್ಷಿಣ ಕನ್ನಡ ಜಿಲ್ಲೆ), ವತ್ಸಲಾ ಶ್ರೀ ವಿಷ್ಣು (ಮೈಸೂರು)-3. **ಫೆನ್ಸಿಂಗ್:** ಫಾಯಲ್: ಅದಿತಿ ಜಿ ಗೌತಮ್ -1, ಶ್ರೇಯಾ ಎಲ್ ಗೌಡ-2, ಆರ್. ಕೆ. ಮನ್ವಿತಾ-3(ಎಲ್ಲರೂ ಬೆಂಗಳೂರು). ಈಪೀ: ಶ್ರೀದೇವಿ ತೇಜಸ್ವಿನಿ (ಬೆಂಗಳೂರು)-1, ಟಿ. ಪಾವನಿ (ಬೆಂಗಳೂರು)-2, ಎನ್. ಕೃತಿಕಾ (ಚಾಮರಾಜನಗರ)-3. ಸೆಬ್ರೆ: ದೀಕ್ಷಾ ಎಲ್ ಗೌಡ(ಬೆಂಗಳೂರು)-1, ಆರ್. ಕನಿಷ್ಕಾ (ಬೆಂಗಳೂರು)-2, ಅನಿಕಾ ತೆಜಪುಷ್ಪಲ್, ಎಸ್. ಸ್ಫೂರ್ತಿ (ಬೆಂಗಳೂರು-3 **ಟೇಬಲ್ ಟೆನಿಸ್:** ಸಿಂಗಲ್ಸ್: ಮಿಹಿಕಾ ಉಡುಪಾ -1, ರಾಶಿ ವಿ ರಾವ್ -2, ಐರಿನ್ ಅನಾ ಸುಭಾಶ್ -3 (ಎಲ್ಲರೂ ಬೆಂಗಳೂರು). ಡಬಲ್ಸ್: ಐರಿನ್ ಅನಾ ಸುಭಾಷ್-ಮಿಹಿಕಾ ಉಡುಪಾ-1, ದೀಕ್ಷಾ ನಾಯಕ್-ರಾಶಿ ರಾವ್ -2, ಜ್ಯೋತಿ ಮನೋಹರ್ ಮುಗಟಿ-ಸಾನ್ವಿ ಭಸ್ಮೆ (ಬೆಂಗಳೂರು-3. ಲಕ್ಷಿತಾ-ಸಂಜನಾ ಭುವನೇಶ್ವರ್ (ಮಂಡ್ಯ)-3. **ಜುಡೊ:** 28 ಕೆಜಿ: ಸ್ವರೂಪಾ ನಿಂಗುರೆ (ಬೆಳಗಾವಿ)-1, ಎಸ್. ತನ್ವಿತಾ (ಚಿಕ್ಕಮಗಳೂರು)-2, ಎ.ಆರ್. ಅನನ್ಯಾ (ದ.ಕ)-3, ಅನುಷ್ಕಾ (ತುಮಕೂರು)-3. 32 ಕೆಜಿ: ಕಾವೇರಿ ಸೂರ್ಯವಂಶಿ (ಬೆಳಗಾವಿ)-1, ಬಿ. ಅಮೃತಾ (ಚಿಕ್ಕಮಗಳೂರು)-2, ಆರ್. ಧನ್ಯಶ್ರೀ (ಬೆಂಗಳೂರು)-3, ದರ್ಶಿನಿ ಬಾರಂಗಿ (ಬೆಳಗಾವಿ)-3. 36 ಕೆ.ಜಿ: ಆರ್. ನವಿರಾ (ಬೆಂಗಳೂರು)-1, ಎನ್. ತೇಜು (ಶಿವಮೊಗ್ಗ)-2, ಅರ್ಪಿತಾ ಕಾಮತ್ (ಬೆಳಗಾವಿ)-3. ಕೆ.ಬಿ. ಮಿಲನಾ (ತುಮಕೂರು)-3. 40 ಕೆಜಿ: ಶ್ರಾವಂತಿ ಸಿಂಗ್ (ಚಿಕ್ಕಮಗಳೂರು)-1, ಸೃಷ್ಟಿ ಸೊಂಟಕ್ಕಿ (ಬೆಳಗಾವಿ)-2, ಹಂಸಿಕಾ (ದ.ಕ)-3. ಡಿ.ಆರ್. ಸಂಗೀತಾ (ಶಿವಮೊಗ್ಗ)-3.

ಈಜು: : 50 ಮೀ. ಫ್ರೀಸ್ಟೈಲ್: ಚರಿತಾ ಫಣೀಂದ್ರನಾಥ್ (ಬೆಂಗಳೂರು ಉತ್ತರ)-1, ತ್ರಿಶಾ ಸಿಂಧು ಎಸ್ (ಬೆಂಗಳೂರು)-2, ತಿಸ್ಯಾ ಸೋನಾರ್ (ಬೆಂಗಳೂರು)-3; 200 ಮೀ. ಫ್ರೀಸ್ಟೈಲ್: ತಿಸ್ಯಾ ಸೋನಾರ್-1, ನೈಶಾ-2, ತ್ರಿಶಾ ಸಿಂಧು ಎಸ್ (ಎಲ್ಲರೂ ಬೆಂಗಳೂರು)-3; 800 ಮೀಟರ್ ಫ್ರೀಸ್ಟೈಲ್: ಅದಿತಿ ವಿನಾಯಕ ರೇಳೇಕರ್ (ಬೆಂಗಳೂರು ದಕ್ಷಿಣ)-1, ಪ್ರತೀಕ್ಷಾ ಎನ್. ಗೌಡ (ಬೆಂಗಳೂರು)-2, ಸುಮನ್ವಿ ವೆನಿಗಲ್ಲ (ಬೆಂಗಳೂರು)-3; 200 ಮೀ. ಬ್ರೆಸ್ಟ್ ಸ್ಟ್ರೋಕ್: ತಿಸ್ಯಾ ಸೋನಾರ್ (ಬೆಂಗಳೂರು)-1, ಮೃದುಲಾ ಪಿ (ಬೆಂಗಳೂರು ನಗರ)-2, ಗಗನ ಸಿ.ಎಂ. (ಬೆಂಗಳೂರು ಉತ್ತರ)-3; 200 ಮೀ. ಬಟರ್‌ಫ್ಲೈ: ಸಾನ್ವಿ ತ್ರಿಪಾಠಿ (ಬೆಂಗಳೂರು)-1, ಆದ್ಯ ಭಾರದ್ವಾಜ್ (ಬೆಂಗಳೂರು)-2, ವರ್ಷಾ ಎಸ್ ರೂಲಿ (ಬೆಂಗಳೂರು ನಗರ)-3; 200 ಮೀ. ವೈಯಕ್ತಿಕ ಮೆಡ್ಲೆ: ತ್ರಿಶಾ ಸಿಂಧು (ಬೆಂಗಳೂರು)-1, ಅದಿತಿ ವಿನಾಯಕ್ ರೇಳೇಕರ (ಬೆಂಗಳೂರು ದಕ್ಷಿಣ)-2, ಇದಿಕಾ ಭಟ್ (ಬೆಂಗಳೂರು)-3; 400 ಮೀ. ವೈಯಕ್ತಿಕ ಮೆಡ್ಲೆ: ಸುಮನ್ವಿ ವೇಣಿಗಲ್ಲ-1, ಸುಮೇಧಾ ವಿ.-2, ಸಾನಿಕಾ ವೇಣುಪ್ರಕಾಶ್ (ಎಲ್ಲರೂ ಬೆಂಗಳೂರು)-3.